ಕಸ್ತೂರಿ



ಮಾರ್ಚ್, ೧೯೬೧

ಬೆಲೆ: ೭೫ ನ.ಪೈ.

ಜ್ಞಾನ ಮತ್ತು ಮನೋರಂಜನ

ಪ್ರತಿವಾರವೂ ಹೊಸತರಲ್ಲಿ ಹೊಸದು

ಮನೋರಂಜಕ ಲೇಖನಗಳು

ವಿಷಯವೈವಿಧ್ಯ

ಸಚಿತ್ರ ರಾಷ್ಟ್ರೀಯ ಸಾಪ್ತಾಹಿಕ

ಕರ್ಮವೀರ

ಶ್ರೀ ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ 'ಮಂದಾರ ಮಂದಾಕಿನಿ'

ಕೆಲ ವೈಶಿಷ್ಟ್ಯಗಳು :

- ಫ್ಯಾಂಟಮನ ಸಾಹಸ
- ಎಳೆಯರಿಗಾಗಿ ಬಾಲಪ್ರಪಂಚ
- ಮುಂಬಯಿ-ಮದ್ರಾಸದ ತಾಜಾ ಸಿನೆಮಾ ಸುದ್ದಿಗಳು
- ವ್ಯಕ್ತಿವಿಶೇಷಗಳು
- ಸಚಿತ್ರ ಲೇಖನಗಳು

ಇಪ್ಪತ್ನಾಲ್ಕು ಪುಟಗಳು ಬೆಲೆ ೨೦ ನಯೆ ಪೈಸೆ

ಪ್ರತಿ ಬುಧವಾರ ನಿಮ್ಮ ಕೈ ಸೇರುವುದು

ಲೋಕಶಿಕ್ಷಣ ಟ್ರಸ್ಟಿನ ಪ್ರಕಟನೆ

Statement about ownership and other particulars about newspaper **Kasturi,** *a Kannada Monthly Digest to be published in the first issue every year after the last day of February,*

FORM IV

(See Rule 8)

1.	Place of Publication	..	HUBLI
2.	Periodicity of its publication		Monthly (1st of every month)
3.	Printer's Name	..	H. R. Purohit, M. A.
	Nationality	..	Indian
	Address :	..	Post Box No. 30, Hubli
4.	Publisher's Name	..	H. R. Purohit, M. A.
	Nationality	..	Indian
	Address :	..	Post Box No. 30, Hubli
5.	Editor's Name	..	R. R. Diwakar, M. A., LL. B.
	Nationality	..	Indian
	Address :	..	Post Box No. 30, Hubli
6.	Names and addresses of individuals who own the newspaper and partners or share-holders holding more than one per cent of the total capital.	..	Loka Shikshana Trust, Hubli Sole Trustee— R. R. Diwakar, M. A., LL. B.

I, H. R. Purohit, hereby declare that the particulars given above are true to the best of my knowledge and belief.

Dated 1–3–1961.

H. R. Purohit
Signature of Publisher

ಸಿಂಡಿಕೇಟ್ ಬೇಂಕ್

ಮಾನವನನ್ನು ಅಭ್ಯಾಸದ ಶಿಶುವೆಂದು ಸಹಾ ಹೇಳುವದುಂಟು. ಪದೇ ಪದೇ ಆಚರಿಸಿ ರೂಢಿಯಾಗಿ, ಚಟವಾಗಿ, ಅಭ್ಯಾಸವಾಗಿ ಬಲಿತು ನಿಂತ ಕ್ರಿಯೆಯನ್ನು ಹಠಾತ್ತಾಗಿ ಕಿತ್ತೊಗೆಯುವುದು, ನಿಲ್ಲಿಸಿಬಿಡುವುದು ಅಸಾಧ್ಯವಾದ ಕೆಲಸ. ಹೀಗೆ ಮಾಡುವುದರಿಂದ ದೇಹ ಮನಸ್ಸುಗಳಿಗೆ ಆಘಾತ ಕೂಡಾ ಸಂಭವಿಸಬಹುದು. ಈ ಅನುಭವ "ಮಾನವನು ಅಭ್ಯಾಸದ ಕೈಗೂಸು" ಎಂಬ ಮಾತನ್ನು ಪುಷ್ಟೀಕರಿಸುತ್ತದೆ.

ಒಳ್ಳೆಯ ಯೋಚನೆ, ಒಳ್ಳೆಯ ಕೆಲಸಗಳನ್ನು ತಿರುಗಿ ತಿರುಗಿ ನಡೆಸುವುದರಿಂದ ಅವು ಒಳ್ಳೆಯ ಅಭ್ಯಾಸಗಳಾಗಿ ಪರಿಣಮಿಸುತ್ತವೆ. ಕೈಗೆ ಬಂದ ಪುಡಿಕಾಸುಗಳನ್ನು ತಾತ್ಸಾರದಿಂದ ಕಂಡು ಮನಬಂದಂತೆ ವೆಚ್ಚ ಮಾಡುತ್ತಾ ಹೋದರೆ ಅನಾವಶ್ಯಕವಾಗಿ ಹಣವನ್ನು ಪೋಲು ಮಾಡುವ ಚಟವು ಪ್ರಬಲಿಸುತ್ತದೆ. ಬದಲಾಗಿ ಚಿಲ್ಲರೆ ಪುಡಿಕಾಸುಗಳನ್ನು ಸಹಾ ವ್ಯವಸ್ಥಿತವಾಗಿ ಕೂಡಿಡುತ್ತಾ ಹೋದರೆ ಉಳಿತಾಯದ ಅಭ್ಯಾಸ ನೆಲೆಯೂರುತ್ತದೆ. ಇದು ಒಂದು ಒಳ್ಳೆಯ ಅಭ್ಯಾಸವನ್ನು ಮಾತ್ರವಲ್ಲ ಒಂದು ಪುಟ್ಟ ನಿಧಿಯನ್ನು ದೊರಕಿಸಿಕೊಡುತ್ತದೆ.

ದಿನಕ್ಕೆ ೨೫ ನಯೆಪೈಸೆಗಳಷ್ಟನ್ನು ಸಹಾ ವ್ಯವಸ್ಥಿತವಾಗಿ ಕೂಡಿಡಲು ಪಿಗ್ಮಿ

ದಿ ಕೆನರಾ ಇಂಡಸ್ಟ್ರಿಯಲ್ & ಬೇಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೆ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ವಸಂತ ಕೆ. ಅವರಾದಿ

ಚಂದಾ ದರ :

ವಾರ್ಷಿಕ (ಅಂಚೆಸೇರಿ).		ರೂ.೮.೦೦
ಅರ್ಧ ವರ್ಷ	—	ರೂ.೪.೫೦
ಬಿಡಿಸಂಚಿಕೆ	—	ರೂ.೦.೭೫

Kasturi March 1961

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಕಸ್ತೂರಿ

ಸಂಚಿಕೆ ೩ ಮಾರ್ಚ್ ೧೯೬೧ ವರ್ಷ ೫

ಅಹಂಕಾರವೇ ಪತನದ ಮೂಲ

ಗರ್ವಭಂಗ

ದಿವಂಗತ ಡಾ. ಅರ್. ಡಿ. ರಾನಡೆ
ಅವರ ಒಂದು ಪ್ರವಚನದಿಂದ

ಪ್ರಾಯಶ್ಚಿತ್ತವೆಂದರೆ ಆತ್ಮದ ಗಂಗೆಯಿದ್ದಂತೆ. ಅದರಲ್ಲಿ ಮುಳುಗುಹಾಕುವ ಮನುಷ್ಯರು ಮಾತ್ರವಲ್ಲ, ದೇವತೆಗಳ ಪಾಪವೂ ತೊಳೆದು ಹೋಗುತ್ತದೆ.

ದೇವಾಸುರರ ನಡುವಿನ ಸಂಗ್ರಾಮ ಸಮಾಪ್ತವಾದ ಕಾಲದ ಮಾತಿದು. ವಿಜಯೋಲ್ಲಾಸದಲ್ಲಿ ದೇವಗಣವು ಬುದ್ಧಿಯನ್ನು ಕಳೆದುಕೊಂಡಿತ್ತು. ಅಸುರರನ್ನು ತಾವು ಗೆದ್ದಿರುವುದು ಸತ್ಯದ ಪರಮ ಶಕ್ತಿಯಿಂದ ಎಂಬುದನ್ನು ಅವರು ಮರೆತಿದ್ದರು. ವಿಜಯದ ಮದವು ಅವರ ಬುದ್ಧಿಯನ್ನು ಭ್ರಷ್ಟಗೊಳಿಸಿತ್ತು. ಸಮಸ್ತ ಸೃಷ್ಟಿಯ ವ್ಯಾಪಾರಕ್ಕೆ ಕಾರಣವಾದ ಆದಿಶಕ್ತಿಯ ಇಚ್ಛೆಯ ಮೂಲಕವೇ ತಮಗೆ ಈ ವೈಭವ ಸುಖ ದೊರೆತಿದೆ ಎನ್ನುವುದನ್ನು ದೇವತೆಗಳು ಮರೆತಿದ್ದರು. "ನಾವೇ ವಿಜಯವನ್ನು ಸಂಪಾದಿಸಿದ್ದೇವೆ. ವಿಜಯಕ್ಕೆ ಕಾರಣರು ನಾವೇ" ಎಂಬ ಭ್ರಮೆ ಅವರ ಮೇಲೆ ಅಮಾವಾಸ್ಯೆಯ ಅಂಧಕಾರದಂತೆ ವ್ಯಾಪಿಸಿತ್ತು.

ವಿಜಯದ ಉನ್ಮಾದದಲ್ಲಿ ಇಂತು ಭ್ರಮಿಷ್ಠರಾದ ದೇವತೆಗಳನ್ನು ಕಂಡು ಸರ್ವಶಕ್ತ ಪರಮೇಶ್ವರಿಗೆ ಮರುಕವುಂಟಾಯಿತು. ದೇವತೆಗಳ ಈ ಒಣ ಜಂಭವನ್ನು ಕರಗಿಸಿ ಅವರ ಕಣ್ಣು ತೆರೆಯಲು ಅವಳು ನಿಶ್ಚಯಿಸಿದಳು.

ಈ ವಿಚಾರ ಮೂಡಿದೊಡನೆ ಅವಳು ಒಬ್ಬ ಯಕ್ಷನ ರೂಪ ಧರಿಸಿ ದೇವತೆಗಳ ಬಳಿಗೆ ಹೋದಳು. ಈ ಅಲೌಕಿಕ ತೇಜಸ್ವಿ ಯಕ್ಷನನ್ನು

ಕಂಡು ಮದಾಂಧ ದೇವಸಮೂಹವು ಆಶ್ಚರ್ಯ ಚಕಿತವಾಗಿ ಹೋಯಿತು. "ಯಾರೀತ? ಎಲ್ಲಿಂದ ಬಂದ? ಏಕೆ ಬಂದ?" ಎಂಬ ಪ್ರಶ್ನೆ ಎಲ್ಲರ ಬಾಯಲ್ಲೂ ಬಂತು.

ಮದವು ಹೇಡಿತನದ್ದೇ ಅಂಕುರ. ಯಕ್ಷನ ಸಮೀಪ ಹೋಗಲು ಅವರಲ್ಲಿ ಒಬ್ಬರಿಗೂ ಆಗ ಲಿಲ್ಲ.

ಆದರೆ ಕುತೂಹಲವನ್ನು ತಣಿಸಿಕೊಳ್ಳುವುದು ಹೇಗೆ? ತುಂಬ ತರ್ಕವಿತರ್ಕಗಳ ನಂತರ ದೇವ ಲೋಕದಲ್ಲಿ ಪರಮ ಬಲಿಷ್ಠನೆನಿಸಿದ ಅಗ್ನಿಯನ್ನೇ ಈ ತೇಜೋದೀಪ್ತ ಆಗಂತುಕನ ಪರೀಕ್ಷೆಗಾಗಿ ಕಳಿಸಬೇಕೆಂದು ನಿಶ್ಚಯಿಸಿದರು.

ತನಗೆ ದೊರೆತ ಈ ಸನ್ಮಾನವನ್ನು ಕಂಡು ಅಗ್ನಿಗೆ ಮತ್ತಿಷ್ಟು ಮದವೇರಿತು. ಆತ ಭುಜ ಚಪ್ಪರಿಸಿಕೊಂಡು "ಎದುರಾಳಿ ಯಾವನೇ ಇರಲಿ, ಕ್ಷಣಾರ್ಧದಲ್ಲಿ ಅವನನ್ನು ನಿರ್ಬಲನನ್ನಾಗಿ ಮಾಡುವೆ" ಎಂದ.

ತನ್ನ ಸಮೀಪಕ್ಕೆ ಬಂದ ಅಗ್ನಿಯನ್ನು ಕಂಡು ಯಕ್ಷ ಕೇಳಿದ, "ಯಾರು ನೀನು?"

"ನಾನು ಪರಮಜ್ಞಾನಿ ಜಾತವೇದ ಅಗ್ನಿ."

"ದೇವಪುರುಷಾ, ನಿನ್ನ ಬಲದ ವರ್ಣನೆ ಯನ್ನಿಷ್ಟು ಮಾಡು. ನಿನ್ನ ಶಕ್ತಿ ಸಾಮರ್ಥ್ಯವನ್ನು ಅರಿಯಬಯಸುತ್ತೇನೆ."

ಬಲದ ಮಾತು ಬಂದೊಡನೆ ಉತ್ತೇಜಿತನಾದ ಅಗ್ನಿ ಹೇಳಿದ: "ಅಜ್ಞಾನದಿಂದ ಅಂಧನಾಗಿರುವ ರಾಜಪುರುಷಾ, ಎಂಥ ಪ್ರಶ್ನೆ ಕೇಳುತ್ತಿರುವೆ? ನಾನು ಸುಟ್ಟು ಭಸ್ಮ ಮಾಡಲಾಗದಂಥ ಒಂದೇ ಒಂದು ವಸ್ತು ಕೂಡ ಈ ಜಗತ್ತಿನಲ್ಲಿಲ್ಲ."

"ಅಯ್ಯೋ! ವೃಥಾಭಿಮಾನಿಯೆ!" ಎಂದು ಮನದಲ್ಲಿಯೆ ಅಂದುಕೊಂಡ ಯಕ್ಷನು ಎದುರು ಬಿದ್ದಿದ್ದ ಒಣ ಹುಲ್ಲಿನ ಒಂದು ಕಡ್ಡಿಯನ್ನೆತ್ತಿ ಕೊಡುತ್ತ, "ಒಳ್ಳೇದು, ಇದನ್ನಷ್ಟು ಸುಡು" ಎಂದ.

ಅಗ್ನಿ ಕ್ರೋಧದಿಂದ ಉರಿದೆದ್ದ. ಆ ಹುಲ್ಲು ಕಡ್ಡಿಯನ್ನು ಸುಡಲು ಆತ ಮಾಡಿದ ಪ್ರಯತ್ನ ವೆಲ್ಲ ವ್ಯರ್ಥವಾಯಿತು. ಆತ ಅತಿ ಲಜ್ಜಿತನಾಗಿ ದೇವಸಮೂಹವಿರುವಲ್ಲಿಗೆ ತಿರುಗಿ ಬಂದ.

ಆಗ ದೇವಗಣ ವಾಯುವಿಗೆ ಹೇಳಿತು: "ಅಗ್ನಿಯ ಪರಾಜಯದಿಂದ ನಾವೆಲ್ಲ ಬಲು ಲಜ್ಜಿತರಾಗಿದ್ದೇವೆ. ವಾಯುದೇವಾ, ನೀನಾ ಯಕ್ಷನ ಬಳಿಗೆ ಹೋಗಿ ಆತನಾರೆಂದು ತಿಳಿದು ಬಾ."

"ದೇವಸಮೂಹವೇ, ಕೇಳಿ, ನಾನು ಸೃಷ್ಟಿಯ ಮೂಲೆ ಮೂಲೆಯಲ್ಲೂ ಹೋಗಬಲ್ಲೆ. ನೀವು ನನಗೆ ಹೇಳಿರುವ ಕಾರ್ಯ ಅತಿ ತುಚ್ಛವಾದದ್ದು" ವಾಯು ಗರ್ವದಿಂದ ಗುಡುಗಿದ.

ಯಕ್ಷನೆದುರು ಹೋಗಿ ಆತ "ನಾನು ಶೂನ್ಯ ದಲ್ಲಿ ವಿಹರಿಸುವ ಮಹಾಪ್ರಾಣ ವಾಯು. ತಾವು ಬಂದಿರುವುದರ ಉದ್ದೇಶವನ್ನು ಹೇಳುವಿರಾ?" ಎಂದ.

"ಅಂ! ನನಗೆ ಸರಿಯಾಗಿ ತಿಳಿಯಲಿಲ್ಲ. ಸ್ವಲ್ಪ ವಿವರವಾಗಿ ಪರಿಚಯಮಾಡಿಕೊಡುವಿರಾ? ಮಹಾನುಭಾವಾ, ತಮ್ಮ ಪರಾಕ್ರಮದ..."

"ನನ್ನ ಪರಾಕ್ರಮ! ಅದನ್ನು ಕೇಳುವಿರಾ? ನಾನು ಪೃಥ್ವಿಯ ಮೇಲಿನ ಸಕಲ ವಸ್ತುಗಳನ್ನೂ ಆಕಾಶದಲ್ಲಿ ಹಾರಿಸಬಲ್ಲೆ."

"ಸರಿ. ಮಹಾಪ್ರತಾಪಿಯೆ, ಸ್ವಲ್ಪ ಈ ಹುಲ್ಲು ಕಡ್ಡಿಯನ್ನಷ್ಟು ಅತ್ತ ಸರಿಸುವಿರಾ?"

ಅಗ್ನಿಯಂತೆಯೆ ವಾಯುವಿನ ಮುಖಭಂಗವಾ ಯಿತು. ಎಷ್ಟು ಯತ್ನಿಸಿದರೂ ಆತನಿಂದ ಹುಲ್ಲು ಕಡ್ಡಿಯನ್ನು ಸರಿಸುವುದಾಗಲಿಲ್ಲ. ವಾಯುವೂ ಅಪಮಾನಿತನಾಗಿ ಹಿಂತಿರುಗಿದ.

ಎಲಾ! ಇದೇನಾದರೂ ಅಸುರರ ಮಾಯೆಯೇ ಎಂದು ದೇವತೆಗಳು ಗಾಬರಿಯಾದರು. ಇನ್ನೊಮ್ಮೆ ಅವರೊಡನೆ ಕಾಳಗ ಮಾಡುವ ಪ್ರಸಂಗ ಬರುವುದೋ ಏನೊ? ಓಡೋಡುತ್ತ ಅವರು ಇಂದ್ರನ ಬಳಿ ಬಂದು ಎಲ್ಲವನ್ನೂ ಅರಿಕೆ ಮಾಡಿಕೊಂಡರು.

ಇಂದ್ರ ಅವರಿಗೆ ಅಭಯವನ್ನಿತ್ತು, "ಒಳ್ಳೇದು, ಆ ಯಕ್ಷ ಯಾರು, ಅವನಿಗೇನು ಬೇಕು ಎಂದು ನಾನು ತಿಳಿದು ಬರುತ್ತೇನೆ" ಎಂದ.

ಅಭಿಮಾನದಿಂದಲೇ ಬಂದ ಇಂದ್ರನನ್ನು ಕಂಡು ಯಕ್ಷ ಅಂತರ್ಧಾನನಾದ.

ಯಕ್ಷನ ಈ ಮಾಯೆಯನ್ನರಿಯಲಾರದೆ ದೇವೇಂದ್ರನು ಆಶ್ಚರ್ಯದಿಂದ ಭ್ರಾಂತನಂತೆ ನಿಂತ. ಆತ ಹಲವಾರು ಬಾರಿ ಕಣ್ಣು ಜ್ಜಿ ಕೊಂಡು ಯೋಚಿಸತೊಡಗಿದ. ಅಷ್ಟರಲ್ಲಿ ಅವನಿಗೆ ಆ ಯಕ್ಷನ ಬದಲು ಅತ್ಯಂತ ಓಜಸ್ವಿನಿಯಾದ, ದಿವ್ಯಾಭರಣಭೂಷಿತಳಾದ ಹೇಮವತಿ ಬ್ರಹ್ಮ ವಿದ್ಯೆಯ ದರ್ಶನವಾಯಿತು.

ಇಂದ್ರ ಶ್ರದ್ಧೆಯಿಂದ ಅವಳ ಬಳಿಗೆ ಹೋಗಿ ನಮಸ್ಕರಿಸಿ, "ದೇವಿ, ಇದೇ ಈಗ ಇಲ್ಲಿ ಓರ್ವ ಮಹಾ ಪರಾಕ್ರಮಿ ಯಕ್ಷ ಅಂತರ್ಧಾನ ಹೊಂದಿದ. ತಮಗೆ ಆತ ಗೊತ್ತೆ?" ಎಂದು ಕೇಳಿದ.

ಆಗ ಕರುಣಾಮಯಿಯಾದ ದೇವಿ ಹೇಳಿದಳು: "ಈ ಸಮಸ್ತ ಪ್ರಪಂಚದ ಮೂಲಭೂತ ಪ್ರಾಣ ಚೇತನದ ಪ್ರತೀಕವೇ ಆ ಯಕ್ಷ. ಈ ಶಕ್ತಿ ಒಂದು ದೊಡ್ಡ ಹಗ್ಗದಂತಿದ್ದು ಅದರಲ್ಲಿ ಇಂಥದೇ ಹಲವಾರು ಜಗತ್ತುಗಳು ಬಂಧಿತವಾಗಿವೆ" ಇಷ್ಟಂದವಳೇ ಅವಳು ಕೂಡ ಮಾಯವಾದಳು.

ದೇವತೆಗಳ ಜೊತೆಯಲ್ಲಿ ಇಂದ್ರನಿಗೂ ಆತ್ಮಗ್ಲಾನಿಯಾಯಿತು. ಅವನ ಮನಸ್ಸು ಪದೇ ಪದೇ ಹೇಳಿತು: "ಮನುಷ್ಯನ ಪತನಕ್ಕೆ ಕಾರಣವಾಗುವ ಅಹಂಕಾರ ಮತ್ತು ಗರ್ವದಂಥ ಮದ್ಯ ಇನ್ನೊಂದಿಲ್ಲ. ಅಹಂಕಾರವು ವ್ಯಕ್ತಿಯನ್ನು ಸಂಕುಚಿತನನ್ನಾಗಿ ಮಾಡುತ್ತ ಮಾಡುತ್ತ ಒಂದು ಹುಲ್ಲು ಕಡ್ಡಿಗಿಂತಲೂ ತುಚ್ಛನನ್ನಾಗಿ ಮಾಡುತ್ತದೆ. ಬಲಿಷ್ಠರಲ್ಲಿ ಬಲಿಷ್ಠ, ಬುದ್ಧಿವಂತರಲ್ಲಿ ಬುದ್ಧಿವಂತನಾದವನು ಕೂಡ ಅಹಂಕಾರದ ಅಂಧಕಾರದಲ್ಲಿ ಎರಡನೆಯವರನ್ನಂತಿರಲಿ, ತನ್ನನ್ನು ಕೂಡ ತಾನು ನೋಡಿಕೊಳ್ಳಲು ಅಸಮರ್ಥನಾಗುತ್ತಾನೆ."

*

ಅಮೂಲ್ಯ ಆಸ್ತಿ

ಸಂನ್ಯಾಸಿಯಾಗುವ ಮುಂಚೆ ಒಮ್ಮೆ ಸ್ವಾಮಿ ವಿವೇಕಾನಂದರು ತಂದೆಯ ಖರ್ಚು ವೆಚ್ಚಗಳನ್ನು ಗಮನಿಸಿ "ಸಂಪಾದಿಸುವ ಹಣವನ್ನೆಲ್ಲಾ ಈ ರೀತಿ ಖರ್ಚು ಮಾಡಿದರೆ ನನಗೇನು ಉಳಿಸಿದಂತಾಯಿತು ?" ಎಂದು ಕೇಳಿದರು.

ಆಗ ಅವರ ತಂದೆಯವರು ನಸು ನಕ್ಕು ಆರಾಮ ಕೋಣೆಯಲ್ಲಿನ ನಿಲವು ಗನ್ನಡಿಯ ಮುಂದೆ ಮಗನನ್ನು ನಿಲ್ಲಿಸಿ ಅದರಲ್ಲಿನ ಪ್ರತಿಬಿಂಬವನ್ನು ತೋರಿಸಿ,

"ನರೇಂದ್ರ, ನಿನಗೆ ಇಷ್ಟು ಭವ್ಯವಾದ, ಪುಷ್ಟಿಯಾದ ದೇಹವನ್ನು ಕೊಟ್ಟಿದ್ದೇನೆ. ಇದರ ಸಹಾಯದಿಂದ ನೀನು ಏನು ಬೇಕಾದರೂ ಸಂಪಾದಿಸಬಹುದು. ಇದಕ್ಕಿಂತ ಹೆಚ್ಚಿನದು ನಾನು ಏನು ತಾನೆ ಕೊಡಬಲ್ಲೆ?" ಎಂದಾಗ ವಿವೇಕಾನಂದರ ಮುಖ ನಾಚಿಕೆಯಿಂದ ತುಂಬಿತ್ತು.

ಸಂಗ್ರಹ :— ರವೀಂದ್ರನಾಥ ಎಸ್. ಬಿ.



ಆಧುನಿಕ
ಭಾರತದ
ಪ್ರಮುಖ
ಚಿತ್ರಕಲಾವಿದ

ಪದ್ಮಶ್ರೀ ಕೆ. ಕೆ. ಹೆಬ್ಬಾರ್

ಅವರ ಹೆಸರನ್ನು ಕೆ.ಕೆ.ಹೇಬ್ಬರ್ ಎಂದು ಪರ ಪ್ರಾಂತೀಯರು ತಪ್ಪಾಗಿ ಬರೆಯುತ್ತಾರೆ. ಆದರೆ ಅವರು ಆಧುನಿಕ ಭಾರತದ ಶ್ರೇಷ್ಠ ಚಿತ್ರಕಲಾ ಪಟುಗಳಲ್ಲೊಬ್ಬರೆಂಬುದಕ್ಕೆ ಎರಡು ಮಾತಿಲ್ಲ. ಈ ಸಲ ರಾಷ್ಟ್ರಪತಿಗಳು ಪದ್ಮಶ್ರೀ ಪ್ರಶಸ್ತಿಯನ್ನು ಅವರಿಗೆ ದಯಪಾಲಿಸಿದರಾಗಿ ಅವರ ಕಲೆಗೆ ಅಧಿಕಾರಿಗಳ ಪ್ರಶಂಸಾಮುದ್ರೆಯೂ ದೊರಕಿದಂತಾಗಿದೆ.

ಅವರ ಹೆಸರು ಹೇಬ್ಬರ್ ಅಲ್ಲ ಹೆಬ್ಬಾರ ಎಂದು. ಕೃಷ್ಣ ಹೆಬ್ಬಾರರು ನಮ್ಮವರು— ಕನ್ನಡ ನಾಡಿನವರು ಎಂದು ಎಷ್ಟು ಜನ ಬಲ್ಲರೊ ಕಾಣೆ. ಎಂದಿನಂತೆ ಹುಟ್ಟುನಾಡಿನಲ್ಲಿ ಪ್ರೋತ್ಸಾಹ ಸಾಲದೆ ಪರಪ್ರಾಂತದಲ್ಲಿ ವಸತಿ ಹೂಡಬೇಕಾದ ಅನೇಕ ಕನ್ನಡ ಪ್ರತಿಭಾ ಕಣಗಳಲ್ಲಿ ಹೆಬ್ಬಾರರೂ ಒಬ್ಬರು. ಅವರು ಮುಂಬಯಿ ನಗರವನ್ನು ನೆಲೆಯಾಗಿ ಮಾಡಿಕೊಂಡಿದ್ದಾರೆ; ಕಲಾನ್ವೇಷಣೆಯಲ್ಲಿ ದೇಶವಿದೇಶಗಳನ್ನು ಸುತ್ತಿದ್ದಾರೆ ಮತ್ತು ಕಲೆಯ ಅಂತರ್ ರಾಷ್ಟ್ರೀಯ ಭಾಷೆಯಲ್ಲಿ ಮಾತಾಡುತ್ತಾರೆ.

ಹೆಬ್ಬಾರರಿಗೆ ಇನ್ನೂ ಐವತ್ತು ತುಂಬಿಲ್ಲ. ಮತ್ತು ನೋಡಲು ಅದಕ್ಕೂ ತರುಣರಾಗಿ ಕಾಣುತ್ತಾರೆ. ಅವರು ಹುಟ್ಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯ ಸಮೀಪದ ಕಟ್ಟಿಂಗೇರಿಯಲ್ಲಿ ೧೯೧೨ ರಲ್ಲಿ. ಕಟ್ಟಿಂಗೇರಿ ಪ್ರಸಿದ್ಧವಾಗಿರುವುದು ಕಲೆಗಲ್ಲ, ಬಲು ಬಲವಾದ ಬೀಗಗಳನ್ನು ತಯಾರಿಸುವ ಕಮ್ಮಾರರಿಗಾಗಿ! ಆದರೆ ಹೆಬ್ಬಾರ ಎಂಬ ಅಡ್ಡ ಹೆಸರಿನ ಮನೆತನಗಳು ಕಲಾದೃಷ್ಟಿಯನ್ನು ಪಡೆದವುಗಳೆಂದು ತೋರುತ್ತದೆ.



ಡೊಳ್ಳು ಬಾರಿಸುವವ

— ಕೆ. ಕೆ. ಹೆಬ್ಬಾರ್

ಗಟ್ಟದ ಮೇಲೂ ಕೆಳಗೂ ಅವುಗಳ ವ್ಯಾಪ್ತಿಯುಂಟು.

ಇವೆಲ್ಲ ಪಶ್ಚಾತ್ ವಿಚಾರಗಳಷ್ಟೇ. ಕೃಷ್ಣ ಹೆಬ್ಬಾರರು ಚಿಕ್ಕವರಿದ್ದಾಗ ಬಡತನದ ಆ ಮನೆತನ ಕಲೋಪಾಸನೆಗೆಆದರ್ಶವಾಗಿರಲಿಲ್ಲ. ಚಿಕ್ಕಂದಿನಲ್ಲೆ ಮನೆಯ ಹೊರಗೋಡೆಗಳ ಮೇಲೆ ಇದ್ದಲಿಯಿಂದ ಚಿತ್ರ ಬರೆದು "ರೂಪುಗೆಡಿಸಿದ್ದಕ್ಕಾಗಿ" ದೊಡ್ಡವರಿಂದ ಅವರಿಗೆ ಬೈಗಳ ಉಡುಗರೆಗಳೇ ದೊರೆಯುತ್ತಿದ್ದವು. ಬಡತನ ಅವರ ಶಾಲಾ ಶಿಕ್ಷಣಕ್ಕೂ ಅಡ್ಡ ಬಂತು. ಎಂಟನೇ ತರಗತಿಗೆ ಅದನ್ನು ಮುಗಿಸಿ ಅದೇ ತಾಲೂಕಿನಲ್ಲಿ ಜರ್ಮನ್ ಮಿಶನರಿಗಳು ನಡೆಸುತ್ತಿದ್ದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇರಿದರು.

ಕೃಷ್ಣ ಹೆಬ್ಬಾರರ ಪ್ರತಿಭೆಯನ್ನು ಗುರುತಿಸುವ ಕಣ್ಣು ಆ ಶಾಲೆಯ ಮಿಶನರಿ ಮೆನೇಜರನಿಗೆ ಇತ್ತು. ಮಕ್ಕಳಿಗೆ ಪಾಠ ಹೇಳುವುದಕ್ಕಾಗಿ ಹೆಬ್ಬಾರರು ಕರಿ ಹಲಗೆಯ ಮೇಲೆ ಬರೆಯುತ್ತಿದ್ದ ಚಿತ್ರಗಳ ರೇಖೆಯ ಕಸುವನ್ನು ಕಂಡ ಆತ ಇವರನ್ನು "ನಿನ್ನ ಕ್ಷೇತ್ರ ಮಾಸ್ತರಿಕೆಯಲ್ಲ ಕಲೆ" ಎಂದು ಹೇಳಿ ಅಕ್ಷರಶಃ ತನ್ನ ಶಾಲೆಯಿಂದ ಹೊರಗೇ ಹಾಕಿ ಕಲಾಸೇವೆಗೆ ಪೀಠಿಕೆಯಾಗಿ ಅಕ್ಷರ ವಿದ್ಯೆಯನ್ನು ಮುಂದುವರಿಸಲು ಉಡುಪಿಯ ಮಿಶನ್‌ಹೈಸ್ಕೂಲಿಗೆ ಕಳಿಸಿದ. ಹೈಸ್ಕೂಲು ಮುಗಿಸಿದ ಮೇಲೆ ಬಡತನವನ್ನು ಬೆನ್ನಿಗೆ ಕಟ್ಟಿಕೊಂಡೇ ಅವರು ಚಿತ್ರಕಲಾ ವ್ಯಾಸಂಗಕ್ಕಾಗಿ ಮೈಸೂರಿನ ಚಾಮರಾಜೇಂದ್ರ ಕಲಾಶಾಲೆಗೆ ಹೋದರು. ಆದರೆ ಅದು ಪ್ರತಿಭೆಯನ್ನು ಉತ್ತೇಜಿಸುವ ಸ್ಥಳವಾಗಿರಲಿಲ್ಲ. ಆರೇ ತಿಂಗಳಲ್ಲಿ ಅಲ್ಲಿನ ಯಾಂತ್ರಿಕ ಶಿಕ್ಷಣ ಕ್ರಮಕ್ಕೆ ಬೇಸತ್ತು ಅವರು ಮುಂಬಯಿಗೆ ಹೋದರು.

ಆಗಲೆ ಅವರಿಗೆ ೨೧ ವರ್ಷವಾಗಿ ಹೋಗಿತ್ತು. ಕಲಾಕಾರನಿಗೆ ತನ್ನ ಧ್ರುವ ನಕ್ಷತ್ರವನ್ನು ನಿರ್ಧರಿಸಿಕೊಳ್ಳಲು ತಡವೇ ಅದು. ಆದರೆ ಹೆಬ್ಬಾರರು ಅಂಜಲಿಲ್ಲ. ಅಲ್ಲಿ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ಗೆ ಸೇರಿ ವ್ಯಾಸಂಗವನ್ನು ಮುಂದುವರಿಸಿದರು. ೧೯೩೮ರಲ್ಲಿ ಅಲ್ಲಿಯೇ ಶಿಕ್ಷಕನ ಕೆಲಸವೂ ಸಿಕ್ಕಿತು.

ಹಣಕಾಸಿನ ಸಮಸ್ಯೆಗೆ ಇದು ತಾತ್ಕಾಲಿಕ ಉತ್ತರವಾದರೂ ಅವರ ಕಲಾವಿದನ ಆತ್ಮದ ಹಸಿವು ಅಲ್ಲಿ ತೀರುವಂತಿರಲಿಲ್ಲ. ನಾನಾ ಶೈಲಿಗಳ ಅನುಕರಣೆಯೊಂದೇ ಕಲಾವಿದನ ಆತ್ಮವನ್ನು ಅರಳಿಸಲಾರದು, ತೃಪ್ತಿಪಡಿಸಲೂ ಆರದು. ಪ್ರತಿಭೆಯ ಸ್ವಾತಂತ್ರ್ಯಕ್ಕೆ ಬೇಡಿ ತೊಡಿಸುವ ಈ ಸನ್ನಿವೇಶದಿಂದ ಮುಕ್ತರಾಗಲು ಅವರು ಈ ಕೆಲಸಕ್ಕೆ ಶರಣುಹೊಡೆದರು.

ಕೆಲ ಕಾಲ ಹೆಬ್ಬಾರರು ತೀವ್ರವಾದ ಹೃದಯದ ತೊಳಲಿಕೆಯಿಂದ ಪೀಡಿತರಾಗಿದ್ದರು.

ಅವರ ಪ್ರತಿಭೆ ಸ್ವಾತಂತ್ರ್ಯದತ್ತ ಹಾರಬಯಸು ತ್ತಿತ್ತು. ಆದರೆ ನಾನಾ ತರದ ಆಕರ್ಷಣೆಗಳೂ ವರ್ಚಸ್ಸುಗಳೂ ಅವರನ್ನು ಸೆಳೆದು ನಿಲ್ಲಿಸುತ್ತಿದ್ದವು. ಯುರೋಪಿನ ಆಧುನಿಕ ಕಲೆ ಅವರನ್ನು ಒತ್ತಟ್ಟಿಗೆ ಮೋಹಿಸಿದರೆ ಭಾರತದ ಪ್ರಾಚೀನ ಪರಂಪರೆಯ ಚಿತ್ರಗಳಲ್ಲಿನ ವರ್ಣ. ರೂಪ, ರೇಖೆಗಳ ವೈಶಿಷ್ಟ್ಯವೂ ಅವರನ್ನು ಮನಸೋಲಿಸದಿರಲಿಲ್ಲ. ಈ ಎಲ್ಲ ಸಿಕ್ಕುಗಳ ನಡುವೆ ತನ್ನತನವನ್ನು ತಾನು ಕಂಡುಕೊಳ್ಳುವುದು ಸುಲಭವಲ್ಲ. ಸ್ವತಂತ್ರ ಪ್ರತಿಭೆಯ ಊರ್ಧ್ವಜ್ವಲನ ಶಿಖೆಯಾರಲ್ಲುಂಟೋ ಅವನಿಗಷ್ಟೆ ಕೊನೆಗೆ ದಾರಿ ಸಿಕ್ಕೀತು.

೧೯೪೯ ರೊಳಗೆ ಹೆಬ್ಬಾರರ ಈ ಕಲಾನ್ವೇಷಣೆ ಒಂದು ಸಿದ್ಧಿಪರ್ವವನ್ನು ತಲುಪಿತ್ತು. ಅವರು ಉತ್ತಮ ಚಿತ್ರಕಾರರೆಂದು ಮನ್ನಣೆಯೂ ದೊರೆತಿತ್ತು. ಅವರ ಚಿತ್ರಪ್ರದರ್ಶನಗಳು ಸ್ವಲ್ಪ ಮಟ್ಟಿಗೆ ಧನವನ್ನೂ ದೊರಕಿಸಲು ಸಮರ್ಥವಾದವು. ಅವರು ಯುರೋಪ್ ಯಾತ್ರೆ ಮಾಡಿದರು. ಲಂಡನ್, ಪ್ಯಾರಿಸ್, ಬರ್ನ್‌ಗಳಲ್ಲಿ ಅವರ ಚಿತ್ರಗಳ ಪ್ರದರ್ಶನ ಏರ್ಪಟ್ಟಿತು. ಪ್ಯಾರಿಸ್ ಪ್ರದರ್ಶನದಲ್ಲಿ ಅವರ "ಸಾಧು" ಎಂಬ ಚಿತ್ರವನ್ನು ನೋಡಿ ವಿಮರ್ಶಕರು ಉತ್ಸಾಹದ ಭರದಲ್ಲಿ ಏಸಿಯದ ಚಿತ್ರಕಲೆಯ ಮಹಾ ಪರಂಪರೆಯ ವಾಹಕ ಮತ್ತು ಉತ್ತರಾಧಿಕಾರಿ ಇವರೆಂದು ಸಾರಿದರು. ಸೋವಿಯಟ್ ಬಣದ ರಾಷ್ಟ್ರಗಳನ್ನೊಳಗೊಂಡು ಅನೇಕ ಯುರೋಪೀಯ ದೇಶಗಳಲ್ಲಿ ಅವರ ಪ್ರದರ್ಶನಗಳಿಗೆ ಪ್ರಶಂಸಾಪೂರ್ವಕ ಸ್ವಾಗತ ದೊರೆಯಿತು. ಎರಡು ವರ್ಷ ಕಾಲ ಪ್ಯಾರೀಸಿನಂಥ ಕಲಾಕ್ಷೇತ್ರದಲ್ಲಿ ಅವರು ಸಾಧನೆಯನ್ನೂ ಮಾಡಿದರು. ಜಾಗತಿಕ ಕಲಾಪ್ರವಾಹದ ನೂತನ ಧಾರೆಗಳನ್ನು ಅರಿತುಕೊಂಡರು. ವಿಶ್ವಪ್ರಸಿದ್ಧ ಕಲಾ ಪ್ರವೀಣರಾದ ಪಿಕಾಸೋ, ಲೇಜರ್ ಮೊದಲಾದವರ ಸ್ನೇಹವನ್ನು ಸಂಪಾದಿಸಿದರು.

ಹೆಬ್ಬಾರರ ಕಲೆ ರವಿವರ್ಮ ಅಥವಾ ಬೇರೆ ಕೆಲೆಂಡರ್ ಕಲಾಕಾರರ ಕಲೆಯಂತೆ ತಾದ್ರೂಪಿಕವಲ್ಲ. ಅವರ ರೂಪಗಳು ರೇಖೆಗಳು, ವರ್ಣಗಳು ಕಲಾವಿದನು ತನ್ನ ಕಲಾವಸ್ತುವಿನಲ್ಲಿ ಕಂಡ ಅದರದೇ ಆದ ಆತ್ಮದ ಪ್ರತೀಕ. ಅವರು ಆಧುನಿಕ ಮತ್ತು ಪ್ರಾಚೀನ ಇವೆರಡೂ ಪದ್ಧತಿಗಳಿಂದ ಪ್ರಭಾವಿತರಾಗಿದ್ದಾರೆ. ಆದರೆ ಆ ಸಂಪ್ರದಾಯಗಳನ್ನು ಇದ್ದಕ್ಕಿದ್ದಂತೆ ಅನುಸರಿಸುವವರಲ್ಲ ಅವರು. ಎಲ್ಲವನ್ನೂ ಅರಗಿಸಿಕೊಂಡು ತಮ್ಮದೇ ಆದ ಹೊಸತನವೊಂದನ್ನು ಅವರ ಕಲೆ ಪ್ರದರ್ಶಿಸುತ್ತದೆ.

ಹೆಬ್ಬಾರರ ಕಲಾದೃಷ್ಟಿ ಅತಿ ಸೂಕ್ಷ್ಮವಾದದ್ದು ಮತ್ತು ಕಲಾಹೃದಯ ಅತಿ ಸೂಕ್ಷ್ಮ ಪ್ರತಿಸ್ಪಂದನವುಳ್ಳದು. ಒಂದು ದೃಶ್ಯದಲ್ಲಿ, ಒಂದು ರೂಪದಲ್ಲಿ ನಾವು ಕಾಣದ ಸೌಂದರ್ಯವನ್ನು, ವೈಶಿಷ್ಟ್ಯವನ್ನು ಅವರು ಕಾಣುವರು. ಶಿವರಾಮ ಕಾರಂತರು ಒಂದು ಉದಾಹರಣೆ ಕೊಟ್ಟಿದ್ದಾರೆ. ಒಂದು ಸಂಜೆ ಮುಂಬಯಿಯ ಮಾತುಂಗಾ ಭಾಗದಲ್ಲಿ ಹೆಬ್ಬಾರರೊಡನೆ ಅಲೆಯುತ್ತಿದ್ದಾಗ ಹೆಬ್ಬಾರರು ಕಾರಂತರನ್ನು ಸಹಸಾ ಜಗ್ಗಿ ನಿಲ್ಲಿಸಿ, ಒಂದು ತರಕಾರಿ ಅಂಗಡಿಯೆದುರು ನಿಂತಿದ್ದ ದಂಪತಿಗಳನ್ನು ತೋರಿಸಿದರು. ಮೊದಲ ನೋಟಕ್ಕೆ ಆ ದೃಶ್ಯದಲ್ಲಿ ಏನೂ ವಿಶೇಷ ಕಾಣುವಂತಿರಲಿಲ್ಲ. ಆದರೆ ಅಲ್ಲಿ ಸೇರಿದ ಇತರರಿಗಿಂತ ಭಿನ್ನವಾಗಿ ಎದ್ದು ಕಾಣುವ ಅವರ ಕಪ್ಪು ಮೈಬಣ್ಣ, ಅವರಲ್ಲಿಯೂ ಆ ಹೆಂಗಸಿನಲ್ಲಿದ್ದ ಒಂದು ಬಗೆಯ ಬೆಡಗು, ಸೊಬಗು, ಶೀಲಗಳನ್ನು ವ್ಯಕ್ತಪಡಿಸುವ ವ್ಯಕ್ತಿತ್ವಪೂರ್ಣ ಮುಖ ಮತ್ತು ಆಕಾರ ಇವು ತಮ್ಮದೇ ಆದ ಒಂದು ಹಿರಿಮೆಯನ್ನು ಬೀರುತ್ತಿದ್ದವು. ಕಾರಂತರೂ ಸಂವೇದನಶೀಲರೇ. ಆದರೆ ಅವರ ದೃಷ್ಟಿಗೂ ತಟ್ಟನೆ ಗೋಚರಿಸದ ಈ ಸೌಂದರ್ಯವನ್ನು ಹೆಬ್ಬಾರರು ಸಕೃದರ್ಶನದಲ್ಲೇ ಗ್ರಹಿಸಿದ್ದರು. ಇಂಥ ಸಾವಿರಾರು ದೃಶ್ಯಗಳ ರೇಖಾಂ

ಕನ ಅವರ ಸ್ಕೆಚ್ ಬುಕ್ಕಿನಲ್ಲಿದೆ. "ಕ್ಷಣಕ್ಷಣಕ್ಕೆ ಬದಲಿಸುವ ಗತಿವಿನ್ಯಾಸಗಳುಳ್ಳ ನೃತ್ಯಗಳನ್ನು ಕಾಣುವಾಗ, ಕ್ಷಣಾರ್ಧದಲ್ಲಿ ಮಿಂಚಿ ಮಾಯವಾಗುವ ಅದರ ಸಾರವತ್ತಾದ ರೇಖೆಗಳನ್ನು, ವೇಗ, ಆವೇಗಗಳನ್ನು ಅಷ್ಟೇ ತೀವ್ರ ಬರೆಯಬಲ್ಲ ಕೈ ಅವರಿಗಿದೆ."

ಹೃದ್ಯವಾದ ಇಂಥ ದೃಶ್ಯಗಳನ್ನು ಕಂಡು ಸೆರೆ ಹಿಡಿಯುವುದಕ್ಕಾಗಿ ಅವರು ದೇಶವನ್ನೆಲ್ಲ ಸುತ್ತಿದ್ದಾರೆ. ದಕ್ಷಿಣ ಕನ್ನಡದ ಬೈದ್ಯ ನೃತ್ಯಗಳನ್ನು, ಬಯಲಾಟಗಳನ್ನು ಜಾನಪದ ಕುಣಿತಗಳನ್ನು ಕಂಡಷ್ಟು ಅವರ ಮನ ತಣಿಯದು. ಆ ದೃಶ್ಯಗಳಲ್ಲಿ ಕಾಣಿಸುವ ವರ್ಣ, ರೇಖಾವಿನ್ಯಾಸ ವಿಲಾಸ, ಕಸುವು ಅವರನ್ನು ಮೋಹಿಸಿವೆ. ಮತ್ತು ಅವುಗಳನ್ನು ಕೆಲವೇ ರೇಖೆಗಳಲ್ಲಿ ಓಜಸ್ವಿಯಾಗಿ ಚಿತ್ರಿಸಿದ್ದಾರವರು.

ಹೆಬ್ಬಾರರ ಚಿತ್ರಕಲೆ ಅವರ ಸ್ವಂತ ಮನೋಧರ್ಮ, ಅನುಭವಗಳ ಫಲ. ಅವರನ್ನು ಅಮೃತಾ ಶೇರ್‌ಗಿಲ್‌ಗೆ ಹೋಲಿಸುವವರಿದ್ದಾರೆ. ಆದರೆ ಶೇರ್‌ಗಿಲ್ಲಳಿಗಿಂತ ಇವರ ವರ್ಣವಿನ್ಯಾಸದಲ್ಲಿ ಹೆಚ್ಚು ಮನೋಹರತೆಯಿದೆ, ಮಾನವಾಕೃತಿಗಳಲ್ಲಿ ಪರಿಪಕ್ವತೆ ಇದೆ. ವಾಸ್ತವಿಕವಾಗಿ ಹೆಬ್ಬಾರರು ಯಾರ ಅನುಕರಣೆಯನ್ನೂ ಮಾಡುವವರಲ್ಲ. ಎಲ್ಲ ಕಲಾ ಸಂಪ್ರದಾಯಗಳ ಮರ್ಮ, ಹಿರಿಮೆ, ದೌರ್ಬಲ್ಯಗಳನ್ನರಿತ ಅವರು ಅನುಕರಣೆಯಿಂದ ಜನಪ್ರಿಯತೆಯನ್ನು ಗಳಿಸುವ ಮಬ್ಬಿಗೆ ಬಿದ್ದಿಲ್ಲ. ಅವರು ಸದಾ ಪ್ರಯೋಗಶೀಲರು ; ತಮ್ಮನ್ನೇ ಅನುಕರಿಸಲು ಸಿದ್ಧರಿಲ್ಲದ ಸೃಷ್ಟ್ಯಾತ್ಮಕ ಮನೋಧರ್ಮ ಅವರದು. ಸೃಷ್ಟಿ ಹೇಗೆ ತನ್ನನ್ನು ತಾನೇ ತಾದ್ರೂಪಿಕವಾಗಿ ಅನುಕರಿಸದೋ ಹಾಗೆ ಹೆಬ್ಬಾರರು ಕೂಡ.

ಅವರ ಒಂದು ಹಿರಿಮೆಯೆಂದರೆ ಎಲ್ಲೇ ಇರಲಿ



ಕುಸ್ತಿ —ಕೆ. ಕೆ. ಹೆಬ್ಬಾರ್

ಜನ ಸಾಮಾನ್ಯರ ಜೀವನದ ಇರವುಗಳಲ್ಲಿ ಕಲಾವಸ್ತುಗಳನ್ನು ಅನ್ವೇಷಿಸಿ ಸಫಲವಾಗಿ ಪ್ರತಿಪಾದಿಸುವುದು. ಹೀಗಾಗಿ ಅವರು ಭಾರತದ ಪ್ರಚಲಿತ ಯುಗದ ಸಾಮೂಹಿಕ ಚೇತನೆಯ ಪ್ರತಿನಿಧಿಯಾಗಿದ್ದಾರೆ. ಅದ್ದರಿಂದಲೇ ಇರಬೇಕು, ಅವರ ಚಿತ್ರಗಳನ್ನು ಕಂಡ ಮಾಸ್ಕೋದ ವಿಮರ್ಶಕರು ಅವರನ್ನು ಇಂದಿನ ಭಾರತದ ಶ್ರೇಷ್ಠತಮ ಕಲಾಕಾರರು ಎಂದು ಹೊಗಳಿದ್ದು.

ಹೆಬ್ಬಾರರು ಇಂದು ಪ್ರಥಮವರ್ಗದ ಚಿತ್ರಕಲಾವಿದರೆಂದು ಹೆಸರಾಂತಿದ್ದಾರೆ. ಅವರ ಭಿತ್ತಿಚಿತ್ರಗಳು ಪಾರ್ಲಿಮೆಂಟ್ ಭವನದಲ್ಲಿ ಮೆರೆಯುತ್ತಿವೆ. ಚಿತ್ರ ಸಂಗ್ರಹವೊಂದು ಮುದ್ರಿತವಾಗಿದೆ. ಆದರೂ ಅವರ ವಿನಯಶೀಲತೆ ಆಶ್ಚರ್ಯಕರವಾಗಿದೆ. ತಮ್ಮ ಚಿತ್ರಗಳ ವಿಮರ್ಶೆ ಅವರನ್ನು ಕೆರಳಿಸುವುದಿಲ್ಲ. ಜನಪ್ರಿಯತೆಯನ್ನು ಗಳಿಸಬಲ್ಲ ಚಿತ್ರಗಳನ್ನು ಬರೆದು ಹಣ ಗಳಿಸಬಹುದಾಗಿತ್ತು. ಆದರೆ ಅವರು ಲೌಕಿಕ ಯಶಸ್ಸಿಗಾಗಿ ಕಲಾಧರ್ಮವನ್ನು ಮಾರಿಕೊಳ್ಳಲೊಪ್ಪುವವರಲ್ಲ. ಸಾಫಲ್ಯವನ್ನು ಮುಟ್ಟಿದ್ದರೂ ಇನ್ನೂ ಬೆಳೆಯುತ್ತಲೇ ಇರುವ ಅರಳುತ್ತಲೇ ಇರುವ ಚೇತನ, ಪ್ರತಿಭೆ ಅವರದು. *

ಬಿಂದುವಿನಲ್ಲಿ ಸಿಂಧು

ಕಾಯಿ ಒಡೆದ ದಿನವೇ ಕಾಯಿ ದೋಸೆ ಮಾಡು.

ಹತ್ತಿರದ ಹಸು ತಾ, ದೂರದ ಹೆಣ್ಣು ತಾ.

ಮುಪ್ಪಿನ ಸಾವು ಮದುವೆಗೆ ಸಮಾನ.

ಕಟ್ಟಿಹಾಕಿದ ನಾಯಿ ಮೊಲ ಹಿಡಿದೀತೆ?

ಕಸಬರಿಗೆ ಕೈಲಾಸಕ್ಕೆ ಹೋದರೆ ಕಸ ಗುಡಿಸುವ ಕೆಲಸ ತಪ್ಪಲಿಲ್ಲ.

ಅಂಕೆಯಲ್ಲಿದ್ದ ಹೆಣ್ಣು ಕೆಡುವುದಿಲ್ಲ, ಮಜ್ಜಿಗೆಯಲ್ಲಿದ್ದ ಬೆಣ್ಣೆ ಕೆಡುವುದಿಲ್ಲ.

ಮಾಣಿಕ್ಯ ಬಿದ್ದರೆ ಹೆಕ್ಕಬಹುದು, ಮಾತು ಬಿದ್ದರೆ ಹೆಕ್ಕಲಾದೀತೆ?

ಜಾತಿಹೀನನ ಮನೆಯ ಜ್ಯೋತಿ ಹೀನವೆ?

ಆನೆಗಳ ಜಗಳದಲ್ಲಿ ಗುಬ್ಬಿ ಸಂಧಾನಕ್ಕೆ ಹೋಯಿತಂತೆ.

ಬೆಟ್ಟಕ್ಕೆ ಚಳಿಯಾದರೆ ಹೊದಿಸಲಿಕ್ಕೆ ಸಾಧ್ಯವೆ?

ಕಬ್ಬು ತುದಿಯಿಂದ ತಿಂದರೂ ಅಷ್ಟೇ ಬುಡದಿಂದ ತಿಂದರೂ ಅಷ್ಟೇ.

ಹೆಣ್ಣು ಕೊಟ್ಟೆಯೋ ಬೆನ್ನು ಕೊಟ್ಟೆಯೊ.

ಈ ಕೈಲಿ ಕೊಡದಾತ ಆ ಕೈಲಿ ಕೊಟ್ಟಾನೆ?

ಮೇಟಿ ಬಲವಿದ್ದರೆ ಕೋಟೆ ಗೆಲ್ಲಬಹುದು.

ಕುರುಡೀ ಕುಣಿತಕ್ಕೆ ತಪರಗಣ್ಣಿಯ ತಾಳ.

ಕಂಡ ಕಂಡ ದೇವರಿಗೆ ಕೈ ಮುಗಿದರೂ ಗಂಡನಿಲ್ಲದೆ ಮಕ್ಕಳಾಗುವುದಿಲ್ಲ.

ಒಬ್ಬಾಕೆ ಇದ್ದರೆ ಒಕ್ಕಟ್ಟು, ಇಬ್ಬರಿದ್ದರೆ ಇಗ್ಗೆಲಸ, ಮೂವರಿದ್ದರೆ ಮುಗ್ಗೇಡು, ನಾಲ್ವರಿದ್ದರೆ ನಗೆಗೇಡು.

ದೊರೇನ್ನೂ ಗುರೂನ್ನೂ ಮುಂದೆ ಹೊಗಳು, ಮಗನ್ನೂ ಶಿಷ್ಯನ್ನೂ ಹಿಂದೆ ಹೊಗಳು.

ಅಲ್ಲಿ ರಾಷ್ಟ್ರಪಿತನ ಬಗ್ಗೆ ತುಂಬ
ಆಸಕ್ತಿ ಇದೆ!

ಅಮೇರಿಕೆಯಲ್ಲಿ ಗಾಂಧೀಜಿ

ರಂಗನಾಥ ದಿವಾಕರ

ಅಮೇರಿಕೆಯ (ಯು. ಎಸ್. ಎ.) ಹಲವು ಪ್ರಸಿದ್ಧ ಸಂಘಸಂಸ್ಥೆಗಳು ಹಾಗೂ ವ್ಯಕ್ತಿಗಳು ಆಗಾಗ್ಗೆ ಗಾಂಧೀಜಿಯವರನ್ನು ತಮ್ಮ ದೇಶಕ್ಕೆ ಬರಲು ಆಮಂತ್ರಿಸುತ್ತಿದ್ದರು. ಆದರೆ ಅವರು ಎಲ್ಲರಿಗೂ ಒಂದೇ ಉತ್ತರವನ್ನು ಕೊಡುತ್ತಿದ್ದರು. ಅದೇನಂದರೆ, ಭಾರತದಲ್ಲಿಯ ನನ್ನ ಕಾರ್ಯದಲ್ಲಿ ಯಶಸ್ಸು ಬರುವ ತನಕ ನಾನು ಪರದೇಶಗಳಿಗೆ ಹೋಗಿ ಮಾಡುವುದೇನು? ನಾನು ಇಲ್ಲಿ ಮಾಡುತ್ತಿರುವ ಕೆಲಸ ಇಡೀ ಮಾನವ ಕುಲಕ್ಕಾಗಿಯೇ ಇದೆ.

ಈ ಅವರ ಉತ್ತರಕ್ಕೆ ನಾವು ಇನ್ನೊಂದು ಮಾತನ್ನು ಜೋಡಿಸಬಹುದು— ಇಲ್ಲಿ ಯಶಸ್ಸು ದೊರೆತರೆ ಮುಂದೆ ನಾನು ಪರದೇಶಗಳಿಗೆ ಹೋಗುವ ಅವಶ್ಯಕತೆಯೇ ಇಲ್ಲ! ಯಾಕಂದರೆ ಆ ಯಶಸ್ಸಿನ ಮೂಲಕವೆ ನನ್ನ ಸಂದೇಶವು ಜಗತ್ತಿನಲ್ಲೆಲ್ಲ ಹಬ್ಬುವುದು!! ಈಗ ಆದದ್ದಾದರೂ ಹಾಗೆಯೇ ಆಗಿದೆ. ಗಾಂಧೀಜಿಯವರು ದಕ್ಷಿಣ ಆಫ್ರಿಕೆಯ ಟ್ರಾನ್ಸವಾಲ್‌ದಲ್ಲಿ ಸತ್ಯಾಗ್ರಹ ಸಮರವನ್ನು ನಡೆಸಿದಾಗ ರಶಿಯದ ಪ್ರಸಿದ್ಧ ಲೇಖಕನಾದ ಟಾಲ್‌ಸ್ಟಾಯ್‌ನು ಅವರಿಗೆ ಒಂದು ಪತ್ರ ಬರೆದಿದ್ದನು. ಅದರಲ್ಲಿ ಅವನು, ಗಾಂಧೀಜಿಯವರ ಕಾರ್ಯವನ್ನುದ್ದೇಶಿಸಿ, ನೀವು ಮಾಡುತ್ತಿರುವ ಕಾರ್ಯ ಇಡೀ ಮಾನವಕುಲದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ ಎಂದು ಬರೆದಿರುವನು. ಆ ಭವಿಷ್ಯವಾಣಿ ಈಗ ನಿಜವಾಗುತ್ತಿದೆ.

ನಾನು ಅಮೇರಿಕೆಯಲ್ಲಿ ೨॥ ತಿಂಗಳು ಪ್ರವಾಸ ಮಾಡಿದೆನು. ಗಾಂಧೀಜಿಯವರ ವಿಚಾರಹಾಗೂ ಸಂದೇಶ ಇವು ಎಷ್ಟರ ಮಟ್ಟಿಗೆ ಅಲ್ಲಿ ಪಸರಿಸಿವೆ ಇದನ್ನು ನೋಡುವುದು ನನ್ನ ಉದ್ದೇಶಗಳಲ್ಲಿ ಒಂದಾಗಿತ್ತು. ಗಾಂಧೀಜಿಯವರ ಹೆಸರು ಗೊತ್ತಿಲ್ಲದ ಸುಶಿಕ್ಷಿತರು ಅಲ್ಲಿ ವಿರಳ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಭಾರತದ ಅಲ್ಪ ಸ್ವಲ್ಪ ಜ್ಞಾನವಿದ್ದವನಿಗೆ ಕೂಡ ಗಾಂಧೀಜಿಯವರ ಹೆಸರು ಮತ್ತು ಅವರು ಒಬ್ಬ ಮಹಾಪುರುಷರು, ಎಂಬ ಮಾತು ಗೊತ್ತಿದೆ. ಗಾಂಧೀಸ್ಮಾರಕ ನಿಧಿ, ಗಾಂಧೀ ಶಾಂತಿ ಪ್ರತಿಷ್ಠಾನ (ಪೀಸ್ ಫೌಂಡೇಶನ್), ಗಾಂಧೀ ಚಲಚ್ಚಿತ್ರ, ಮುಂತಾದ ವಿಷಯಗಳನ್ನು ಕುರಿತು ನಾನು ಹೇಳತೊಡಗಿದೊಡನೆ ಕೇಳುವವರೆಲ್ಲರೂ ಏಕಚಿತ್ತರಾಗಿ ಒಳ್ಳೇ ಆಸ್ಥೆಯಿಂದ ಕೇಳುತ್ತಿದ್ದರು. ಇವೆಲ್ಲವುಗಳ ಬಗ್ಗೆ ಕುತೂಹಲದಿಂದ ವಿವಿಧ ಪ್ರಶ್ನೆಗಳನ್ನು ಕೇಳುತ್ತಿದ್ದರು. ನಾನು ಕೊಟ್ಟ ಉತ್ತರಗಳಿಂದ ಸಂತುಷ್ಟರಾಗಿ ಸಮಾಧಾನವನ್ನು ವ್ಯಕ್ತಗೊಳಿಸುತ್ತಿದ್ದರು. ಅವರು ಕೇಳುವ ಪ್ರಶ್ನೆಗಳಲ್ಲಿ ಅವರ ದೃಷ್ಟಿ ಹಾಗೂ ಮನೋಭಾವಗಳು ವ್ಯಕ್ತ

ವಾಗುವುದರಿಂದ ಅವುಗಳಲ್ಲಿ ಹಲವನ್ನು ಇಲ್ಲಿ ಕೊಟ್ಟು ಅವುಗಳ ಉತ್ತರಗಳನ್ನು ಕೊಡುವುದು ರಂಜಕವಾಗಬಲ್ಲದು.

ಸುಮಾರು ಇಪ್ಪತ್ತು ಮಿಲಿಯ ಡಾಲರು (ಹತ್ತು ಕೋಟಿ ರೂಪಾಯಿ) ಗಾಂಧೀ ನಿಧಿ ಕೂಡಿಸಲಾಯಿತು, ಎಂದು ಹೇಳಿದೊಡನೆ ಅವರು ಬಹಳ ಆಶ್ಚರ್ಯವನ್ನು ವ್ಯಕ್ತಮಾಡುತ್ತಿದ್ದರು. ಇದಕ್ಕೆ ಸರಕಾರದವರು ಏನಾದರೂ ಹಣ ಕೊಟ್ಟರೇ, ಪರದೇಶದಿಂದೇನಾದರೂ ಹಣವು ಬಂತೇ, ಎಂದು ಅವರು ಕೇಳುತ್ತಿದ್ದರು. ಸರಕಾರದವರಿಂದ ಹಣ ಬಂದರೆ ಅದನ್ನು ವೆಚ್ಚ ಮಾಡುವಲ್ಲಿ ಸರಕಾರದ ಹಸ್ತಕ್ಷೇಪ ಇದ್ದೇ ತೀರುವುದು, ಅದು ಕೂಡದು, ಎಂಬುದೇ ಅವರ ಪ್ರಶ್ನೆಯ ಕಾರಣ! ಸರಕಾರದವರಿಂದ ಒಂದು ಪೈ ಸಹ ಕೊಂಡಿಲ್ಲ, ಪರದೇಶದವರೆದುರೂ ಗಾಂಧೀ ನಿಧಿಯವರು ಕೈ ಚಾಚಿಲ್ಲ, ಎಂದು ನಾನು ಉತ್ತರವಿತ್ತಾಗ ಅಮೇರಿಕನ್ನರು ಬಹಳ ಸಮಾಧಾನವನ್ನು ವ್ಯಕ್ತಮಾಡುತ್ತಿದ್ದರು.

ಗಾಂಧೀ ನಿಧಿಯವರು ಗಾಂಧೀಜಿಯವರ ಇಡೀ ಜೀವನದ ವಾಸ್ತವ ಚಲಚ್ಚಿತ್ರ ಮಾಡುವುದನ್ನು ಕೈಕೊಂಡಿದ್ದೇವೆ, ಎಂದು ನಾನು ಹೇಳಿದೊಡನೆ, ಆ ಬಗ್ಗೆ ಅಲ್ಲಿಯ ಜನರು ಅತ್ಯಂತ ಉತ್ಸುಕತೆಯನ್ನು ತೋರುತ್ತಿದ್ದರು. ಅದು ಎಷ್ಟು ಅಡಿ ಆಗುವುದು, ಯಾವಾಗ ಸಿದ್ಧವಾಗುವುದು, ಅದನ್ನು ಇಲ್ಲಿಗೆ ಕಳಿಸುವಿರೋ ಇಲ್ಲವೋ, ಅದರಲ್ಲಿ ಯಾರಾದರೂ ಪಾತ್ರ ವಹಿಸುವರೋ ಹೇಗೆ, ಈ ರೀತಿ ನಾನಾ ಪ್ರಶ್ನೆಗಳನ್ನು ಕೇಳಲನುವಾಗುತಿದ್ದರು. ಇಲ್ಲ, ಇದರಲ್ಲಿ ಯಾರೂ ಪಾತ್ರವಹಿಸಲಾರರು, ಯಾಕಂದರೆ ಇದು ವಾಸ್ತವ ಚಲಚ್ಚಿತ್ರ; ನಿಧಿಯ ಹತ್ತರ ಸುಮಾರು ಎಪ್ಪತ್ತು ಸಾವಿರ ಅಡಿಯಷ್ಟು ಚಲಚ್ಚಿತ್ರವಿದೆ, ಅದನ್ನು ಸುಸಂಗತವಾದ ಜೀವನ ಚರಿತ್ರೆಗೆ ಹೊಂದಿಸಿ ಸುಮಾರು ೧೦-೧೨ ಸಾವಿರ ಅಡಿಗೆ ಇಳಿಸಬಹುದಾಗಿದೆ; ಅಲ್ಲದೆ ೧೫,೦೦೦ ಭಾವಚಿತ್ರಗಳು, ೨೫,೦೦೦ ಪತ್ರಗಳು, ೫೦ ಘಂಟೆಯ ಧ್ವನಿಮುದ್ರಣ ಇತ್ಯಾದಿ ಇವೆ; ಇವೆಲ್ಲವುಗಳ ಸಹಾಯದಿಂದ ಈ ಚಿತ್ರವು ತಯಾರಾಗುವುದಿದೆ, ಎಂದು ನಾನು ಹೇಳಿದೊಡನೆ ಅವರು, ಇದು ಬಹಳ ದೊಡ್ಡ ಕೆಲಸ, ನಾವು ಅದನ್ನು ಆಶಾಭಾವದಿಂದ ಅಪೇಕ್ಷಿಸುತ್ತ ಇರುವೆವು, ಎಂದು ಉದ್ಗರಿಸುತ್ತಿದ್ದರು.

ಗಾಂಧೀ ಶಾಂತಿಪ್ರತಿಷ್ಠಾನದ ವಿಷಯವನ್ನು ಗಾಂಧೀಜಿಯವರ ಬಗ್ಗೆ ವಿಶೇಷ ಆಸ್ಥೆಯುಳ್ಳವರ ಮುಂದೆ ನಾನು ಪ್ರಸ್ತಾಪಿಸುತ್ತಿದ್ದೆನು. ಇದೊಂದು ಅಂತಾರಾಷ್ಟ್ರೀಯ ಸಂಸ್ಥೆಯಾಗಬೇಕು, ವಿಶ್ವದಲ್ಲಿ ಗಾಂಧೀ ವಿಚಾರಪ್ರಣಾಲಿಯವರಲ್ಲಿ ಅಥವಾ ತತ್ಸದೃಶ ವಿಚಾರವುಳ್ಳವರಲ್ಲಿ ಒಂದು ವೈಚಾರಿಕ ಬಾಂಧವ್ಯವು ಉಂಟಾಗಬೇಕು, ಅಲ್ಲದೆ ಆ ದೃಷ್ಟಿಯಿಂದ ಎಲ್ಲೆಲ್ಲಿ ಏನೇನು ನಡೆದಿದೆ ಎಂಬುದು ಎಲ್ಲರಿಗೂ ಗೊತ್ತಾಗಬೇಕು. ಗಾಂಧೀಜಿಯವರ ವಿಚಾರ-ಉಚ್ಚಾರ-ಆಚಾರ ಪ್ರಚಾರಗಳ ಆಳವಾದ ಅಭ್ಯಾಸವು ನಡೆಯಬೇಕು, ಈ ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ಈ ಪ್ರತಿಷ್ಠಾನವು ಸ್ಥಾಪಿತವಾಗಿದೆ, ಎಂದು ನಾನು ಹೇಳುತ್ತಿದ್ದೆನು. ಆಗ ಅವರು, ಭಾರತವೇ ಈ ಬಗ್ಗೆಯ ಸಂಸ್ಥೆಯನ್ನು ಸ್ಥಾಪಿಸಿದ್ದು ಬಹಳ ಯೋಗ್ಯ ಎಂದು ಹೇಳಿ ಈ ಉದ್ದೇಶಗಳನ್ನು ಪುಷ್ಟೀಕರಿಸುತ್ತಿದ್ದರು.

ಗಾಂಧೀಜಿಯವರು ತೀರಿಕೊಂಡ ನಂತರ ಅವರು ಪ್ರಾರಂಭಿಸಿದ ಕೆಲಸವೆಲ್ಲ ನಿಂತು ಹೋಗಿದೆ, ಅವರ ಪರಂಪರೆ ಯಾವ ರೂಪದಲ್ಲಿಯೂ ಉಳಿದಿಲ್ಲ, ಎಂದು ಅನೇಕರು ಭಾರತದಲ್ಲಿ ತಪ್ಪು ತಿಳಿವಳಿಕೆ ಮಾಡಿಕೊಂಡಿರುವಂತೆ ಅಮೇರಿಕೆಯಲ್ಲಿಯ ಜನರೂ ಮಾಡಿಕೊಂಡಿದ್ದರೆ ಅದು ಆಶ್ಚರ್ಯವಲ್ಲ. ಆದರೆ ಆ ಬಗ್ಗೆ ಹೇಳುವ ಪ್ರಸಂಗ ಬಂದಾಗ ನಾನು ಹಲವು ಮಾತುಗಳನ್ನು ಅವರ ಮುಂದಿಟ್ಟೊಡನೆ ಅವರಿಗೆ ಸಮಾಧಾನವಾಗುತ್ತಿತ್ತು. ಭಾರತದ ವಿದೇಶ ನೀತಿ

ಹಾಗೂ ಅಂತಾರಾಷ್ಟ್ರೀಯ ರಾಜಕಾರಣದಲ್ಲಿ 'ಪಂಚಶೀಲ'ದ ಪ್ರವೇಶ ಇವು ಗಾಂಧೀಜಿಯವರ ನೀತಿಯ ಪ್ರತಿಬಿಂಬ ಎಂದು ನಾನು ಹೇಳಿದಾಗ ಅವರು ತಲೆದೂಗಬೇಕಾಗುತ್ತಿತ್ತು. ಅದೇ ರೀತಿ ಖಾದೀ ಕಮೀಶನ್, ಹರಿಜನ ಸಂಘ, ಆದಿಮ ಜಾತಿ ಸೇವಾ ಸಂಘ, ಹಸ್ತಕೈಗಾರಿಕೆ ಬೋರ್ಡ್ ಇತ್ಯಾದಿ ಅನೇಕ ಸಂಘ ಸಂಸ್ಥೆಗಳು ಗಾಂಧೀಜಿಯವರ ಕಾರ್ಯವನ್ನು ಮುಂದೆ ಸಾಗಿಸಿವೆ; ಅಲ್ಲದೆ ಗಾಂಧೀನಿಧಿ ಮುಖಾಂತರ ಸಹ ಕುಷ್ಠನಿವಾರಣೆ, ಗ್ರಾಮಸೇವೆ, ತತ್ವಪ್ರಚಾರ, ಇತ್ಯಾದಿ ಕಾರ್ಯಗಳು ನಡೆದಿವೆ; ಎಲ್ಲಕ್ಕೂ ಹೆಚ್ಚಾಗಿ ವಿನೋಬಾಜಿಯವರು ಗಾಂಧೀ ಪರಂಪರೆಯನ್ನೆ ನಡೆಸಿದ್ದಾರೆ; ಎಂದು ಮುಂತಾದ್ದನ್ನು ಹೇಳಿದಾಗ ಅವರು ಹೊಸ ಮಾತುಗಳನ್ನೆ ತಿಳಿದುಕೊಂಡವರಂತೆ ತಮ್ಮ ಸದ್ಭಾವವನ್ನು ವ್ಯಕ್ತಮಾಡುತ್ತಿದ್ದರು.

ಒಟ್ಟಿಗೆ ನೋಡಲಾಗಿ, ಗಾಂಧೀಜಿಯವರು ಕೇವಲ ಒಂದೇ ಒಂದು ಏಶಿಯಾಖಂಡದ, ಭಾರತವೆಂಬ ದೇಶದ ಸಮಸ್ಯೆಗಳನ್ನಷ್ಟೆ ಬಿಡಿಸಲು ಹುಟ್ಟಿ ಬಂದ ವ್ಯಕ್ತಿಯಲ್ಲ; ಅಖಿಲ ಮಾನವ ಕುಲದ ವಿವಿಧ ಸಮಸ್ಯೆಗಳನ್ನು ಶಾಂತಿಮಯ ಮಾರ್ಗದಿಂದ ಹೇಗೆ ಬಿಡಿಸಬೇಕು, ಎಂಬ ಅತ್ಯುನ್ನತ ಉದ್ದೇಶದಿಂದ ಪ್ರೇರಿತರಾಗಿ ತಮ್ಮ ಜೀವನ ಸರ್ವಸ್ವವನ್ನು ಮೀಸಲಿಟ್ಟ ಮಹಾವ್ಯಕ್ತಿ ಅದು; ಅವರ ಮರಣ ದುರ್ಮರಣವಲ್ಲ, ಅದು ಧರ್ಮಾತ್ಮನು ಹುತಾತ್ಮನಾಗುವ ದಿವ್ಯಭಾವ; ಅವರು ಆ ರೀತಿ ತೀರಿಹೋದುದು ಅವರ ತ್ಯಾಗಜೀವನಕ್ಕೆ: ಕಲಶವನ್ನೇರಿಸಿದಂತೆ; ಅವರು ಆಡಿದ್ದು ಮಾಡಿದ್ದು, ನೋಡಿದ್ದು ಹೇಳಿದ್ದು ಎಲ್ಲವೂ ಮಾನವೀಯ ಹಿತದ ದೃಷ್ಟಿಯಿಂದ, ಪ್ರಗತಿಯ ದೃಷ್ಟಿಯಿಂದ ವಿಚಾರಣೀಯ, ಅಭ್ಯಸನೀಯ; ಈ ಮುಂತಾದ ಮಾತುಗಳು ಈಗ ಅಲ್ಲಿಯ ವಿಚಾರವಂತರಿಗೆ ದಿನೇದಿನೇ ಹೆಚ್ಚೆಚ್ಚು ಹೊಳೆಯುತ್ತಿವೆ.

ಜನಸಾಮಾನ್ಯರು, ಪತ್ರಿಕಾಕರ್ತರು ಬುದ್ಧಿಪ್ರಧಾನರು, ತತ್ವಜ್ಞಾನಿಗಳು, ಸಮಾಜಸುಧಾರಕರು, ಸಾಧಕರು ಮುಂತಾದವರು ಗಾಂಧೀಜಿಯವರತ್ತ ಯಾವ ದೃಷ್ಟಿಯಿಂದ ನೋಡುತ್ತಿರುವರು ಇದನ್ನು ಮತ್ತೆ ನೋಡುವಾ. ★

ಜೀವಂತ ರಿಕಾರ್ಡು

ಚಿಕ್ಕ ಹುಡುಗಿ ತಾರಾ ಅಂಗಾತ ಮಲಗಿ ತನ್ನದೇ ಆದ ಚಿಕ್ಕ ಸ್ವರದಲ್ಲಿ ಹಾಡುತ್ತಿದ್ದವಳು, ಏನೂ ಕಾರಣವಿಲ್ಲದೆ ದೇಹವನ್ನು ಹೊರಳಿಸಿ ಮುಖವನ್ನು ನೆಲಕ್ಕೆ ತಾಕಿಸಿಕೊಂಡು ಕಿರುಚಿಕೊಳ್ಳಲು ಪ್ರಾರಂಭಿಸಿದಳು. ಎರಡು ನಿಮಿಷ ಹಾಗೆಯೆ ಕಿರುಚಿಕೊಳ್ಳುತ್ತಿದ್ದು ಮತ್ತೆ ಪುನಃ ಅಂಗಾತ ಬಿದ್ದು ಇನ್ನೊಂದು ರೀತಿಯ ಹಾಡುಗಾರಿಕೆಗೆ ಪ್ರಾರಂಭಿಸಿದಳು!

ಪಕ್ಕದಲ್ಲಿ ಕುಳಿತು ಕಸೂತಿ ಕೆಲಸಮಾಡುತ್ತಿದ್ದ ತಾಯಿಗೆ ಇದೇನೆಂದು ಅರ್ಥವಾಗದೆ: "ಏನೇ ತಾರೂ, ಇದೇನು ಹೊಸ ತರಹದ ಆಟವೋ?" ಎಂದು ಕೇಳಿದಾಗ ಮಗಳು ಹೇಳಿದಳು: "ನೋಡುತ್ತಿರಮ್ಮಾ, ನಾನೀಗ ಗ್ರಾಮಾಫೋನ್ ರಿಕಾರ್ಡು ಆಗುತ್ತೀನಿ. ಈ ಹಾಡು ಮುಗಿಯುತ್ತಲೇ ಆಚೆ ಬದಿಯಲ್ಲಿರುವ ಇನ್ನೊಂದು ಹಾಡನ್ನು ಕೇಳುವೆಯಂತೆ" ಎಂದು ಸ್ವಲ್ಪ ಸಮಯ ದಾಟದೊಡನೆ ಮತ್ತೊಂದು ಮಗ್ಗುಲಿಗೆ ಹೊರಳಿ ಇನ್ನೊಂದು ರೀತಿಯಲ್ಲಿ ಹಾಡಲು ಪ್ರಾರಂಭಿಸಿದಳು!


— ಶಾಂತಾಕುಮಾರಿ

ಸಕ್ಕರೆಯ ದ್ವೀಪ

ಮುರಲೀಧರ

೧೫೯೮ ರ ವರೆಗೂ ಅಲ್ಲಿ ಮಾನವ ವಸತಿ ಇದ್ದಿಲ್ಲ. ವಿಶಾಲ ಸಾಗರದಿಂದ ಪರಿವೃತವಾದ ಒಂದು ಅರಣ್ಯಪೂರಿತ ನಿರ್ಜನ ದ್ವೀಪವಾಗಿತ್ತದು. ಭಾರತದಿಂದ ಸಾವಿರಾರು ಮೈಲು ನೈಋತ್ಯಕ್ಕಿರುವ ಈ ದ್ವೀಪದಲ್ಲಿ ಭಾರತೀಯರು ಹೋಗಿ ನೆಲಸತೊಡಗಿ ಒಂದೂ ಕಾಲು ಶತಮಾನ ಕಳೆದಿದೆಯಷ್ಟೇ. ಆದರೆ ಅದೇ ಇಂದು ಹಿಂದೂ ಜನ, ಪವಿತ್ರ ಹಿಂದೂ ಕ್ಷೇತ್ರಗಳು, ಹಿಂದೂ ಸಂಸ್ಕೃತಿಗಳಿಂದ ಪೂರ್ಣವಾದ ಒಂದು ಪುಟ್ಟ "ಹಿಂದೂ" ದೇಶವಾಗಿದೆ. ಶತಮಾನ ಕಾಲದಲ್ಲಿ ಹಿಂದೂತ್ವ ಸಂಪಾದಿಸಿದ ಈ ದ್ವೀಪದ ಹೆಸರು ಮಾರಿಶಸ್.

ಮಾರಿಶಸ್ ಎಷ್ಟು ಚಿಕ್ಕ ದ್ವೀಪವೆಂದರೆ ಸಾಧಾರಣ ನಕಾಶೆಗಳಲ್ಲಿ ಅದೊಂದು ಬಿಂದುರೂಪದಲ್ಲಿ ಕಾಣಿಸುತ್ತದಷ್ಟೇ. ಹಿಂದೂ



ಸಾಗರದಲ್ಲಿ ನೈಋತ್ಯ ಮಡಗಾಸ್ಕರ್ ದ್ವೀಪದ ಬಳಿ ಆನೆಯ ಹತ್ತಿರ ನಿಂತ ಇರುವೆಯಂತಿರುವ ಮಾರಿಶಸ್‌ನ ಹೆಸರು ಈಗ ನಲುವತ್ತು ಮೀರಿರುವ ಭಾರತೀಯರಿಗೆ ಸಕ್ಕರೆಯ ದ್ವೀಪವೆಂದು ಪರಿಚಿತವಾಗಿತ್ತು. ಅಲ್ಲಿನ "ಮಾರಿಸ್" ಸಕ್ಕರೆ ಆಗ ಇಲ್ಲಿ ಜನಪ್ರಿಯವಾಗಿತ್ತು. ಇಂದಿಗೂ ಅದು ಸಕ್ಕರೆಯ ದ್ವೀಪವಾಗಿಯೆ ಉಳಿದಿದೆ ಮತ್ತು ಸಕ್ಕರೆಯ ದೆಸೆಯಿಂದಲೇ ಅದು ಹಿಂದೂದ್ವೀಪವಾಗಿ ಮಾರ್ಪಟ್ಟದ್ದು ಕೂಡ.

೩೯ ಮೈಲುದ್ದ, ೨೯ ಮೈಲು ಅಗಲವುಳ್ಳ ಹೆಚ್ಚು ಕಡಿಮೆ ತ್ರಿಕೋಣಾಕೃತಿಯ ಮಾರಿಶಸ್ ದ್ವೀಪ ಸಾವಿರ ವರ್ಷಗಳಿಂದಲೂ ಅರಬರಿಗೆ ಪರಿಚಿತವಾಗಿರಬೇಕು. ಅದರ ಮೊದಲ ಹೆಸರು ಅರಬೀ ಭಾಷೆಯದೇ ಆಗಿತ್ತು. ಹದಿನಾರನೇ ಶತಮಾನದಲ್ಲಿ ಪೋರ್ತುಗೀಸರು ಅದಕ್ಕೆ ಚರ್ವೆ ಎಂದು ಹೆಸರಿಟ್ಟರು. ಆದರೆ ಯಾರೂ ಅಲ್ಲಿ ವಸತಿ ಹೂಡಲಿಲ್ಲ. ೧೬ ನೇ ಶತಮಾನದ ಕೊನೆಯಲ್ಲಿ ಅದನ್ನು ಹಿಡಿದುಕೊಂಡ ಡಚ್ಚರು ತಮ್ಮೊಬ್ಬ ರಾಜಕುಮಾರನ ಹೆಸರನ್ನನುಸರಿಸಿ ಅದಕ್ಕೆ ಮಾರಿಶಸ್ ಎಂದು ನಾಮಕರಣ ಮಾಡಿದರು. ೧೭೧೫ ರಲ್ಲಿ ಅದನ್ನು ಆಕ್ರಮಿಸಿಕೊಂಡ ಫ್ರೆಂಚರು ಅದಕ್ಕೆ ಐಲ್‌ದ ಫ್ರಾನ್ಸ್- ಫ್ರೆಂಚ್ ದೀಪ— ಎಂದು ಹೆಸರು ಬದಲಾಯಿಸಿದರು. ನೂರು ವರ್ಷಗಳ ನಂತರ ಬ್ರಿಟಿಶರು ಅದನ್ನು ಆಕ್ರಮಿಸಿಕೊಂಡು ಡಚ್ಚರಿಟ್ಟ ಹೆಸರನ್ನೇ ಪುನಃ ಇಟ್ಟರು. ಇಂದಿಗೂ ಅದು ಬ್ರಿಟಿಶರ ಕೈಯಲ್ಲೇ ಇದೆ.

ಸಾವಿರಾರು ಶತಮಾನಗಳಿಂದ ದಟ್ಟವಾದ ಅರಣ್ಯಗಳ ಮುಸುಕಿನಲ್ಲಿ ನಿದ್ದೆ ಮಾಡಿದ್ದ ಈ ಜ್ವಾಲಾಮುಖಿನಿರ್ಮಿತ ದ್ವೀಪಗಳನ್ನು ಪ್ರಥಮತಃ ಉಪಯೋಗಕ್ಕೆ ತಂದವರು ಡಚ್ಚರು. ಅವರು ಇಲ್ಲಿನ ಅಡವಿಗಳನ್ನು ಕಡಿದು ಜಾವಾದಿಂದ ಕಬ್ಬನ್ನು ತಂದು ನಟ್ಟರು. ಹತ್ತಿಯನ್ನೂ ಅವರೇ ಇಲ್ಲಿ ಬೆಳೆಸಿದವರು. ನೂರಾರು ಪಕ್ಷಿಜಾತಿಗಳು ಮತ್ತು ಕೆಲವೇ ಉರಗಗಳಿದ್ದ ಈ ದ್ವೀಪದಲ್ಲಿ ಆಡು, ಹಂದಿ, ಆಕಳು ಮೊದಲಾದ ಗ್ರಾಮಪಶುಗಳೂ ಮಂಗ, ಹುಲ್ಲೆ ಮೊದಲಾದ ವನ್ಯಮೃಗಗಳೂ ತರಲ್ಪಟ್ಟವು.

ಆದರೆ ಈ ದ್ವೀಪದ ಇಂದಿನ ರೂಪಕ್ಕೆ ಮುಖ್ಯ ಕಾರಣವಾದವರು ಫ್ರೆಂಚರೇ. ಅನಾವೃಷ್ಟಿ ಮತ್ತು ಪೋರ್ತುಗೀಸರು ತಮಗರಿಯದೇನೆ ಇಲ್ಲಿ ತಂದು ಬಿಟ್ಟಿದ್ದ ಬೃಹದಾಕಾರದ ಹೆಗ್ಗಣಗಳು ಸೇರಿ ಜೀವನ ಅಸಹ್ಯವೆನಿಸಿ ಡಚ್ಚರು ದ್ವೀಪವನ್ನು ತ್ಯಜಿಸಿ ಹೋದ ಮೇಲೆ ಫ್ರೆಂಚರು ಇಲ್ಲಿ ಪುನರ್ನಿರ್ಮಾಣ ಕಾರ್ಯವನ್ನಾರಂಭಿಸಿದರು. ಫ್ರೆಂಚ್ ಗವರ್ನರನಾದ ಮಾಯೆ ದ ಲಾಬುರ್ದಾ ಇಲ್ಲಿಗೆ ಭಾರತೀಯ ಶಿಲ್ಪಿಗಳನ್ನು ಕರೆಸಿ ಕಟ್ಟಡಗಳನ್ನು ರಚಿಸಿದ. ಹತ್ತಿ, ನೀಲಿ, ಧಾನ್ಯ, ಪುಷ್ಪಗಳ ಕೃಷಿ ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾಯಿತು. ಲವಂಗ ಮೊದಲಾದ ಮಸಾಲೆಗಳ ತೋಟಗಳೆದ್ದ ಮೇಲಂತೂ ದ್ವೀಪದ ಆರ್ಥಿಕ ಅಭಿವೃದ್ಧಿ ಉತ್ಕೃಷ್ಟವಾಯಿತು.

ಈ ಸಮೃದ್ಧಿಯೆಲ್ಲ ಆಫ್ರಿಕಾ ಮತ್ತು ಮದಗಾಸ್ಕರಿನಿಂದ ತಂದ ಗುಲಾಮರ ದುಡಿಮೆಯಿಂದ ಸಾಧಿಸಿದ್ದಾಗಿತ್ತು. ಬ್ರಿಟಿಶರು ಇದನ್ನು ವಶಪಡಿಸಿಕೊಂಡ ನಂತರ ೧೮೩೪ ರಲ್ಲಿ ಗುಲಾಮರ ವಿಮೋಚನೆಯಾಯಿತು. ಅವರೇ ಭಾರತದಿಂದ ಇಲ್ಲಿನ ತೋಟಗಳಲ್ಲಿ ದುಡಿಯಲು ಆಳುಗಳನ್ನು ತಂದವರು. ಆ ವರೆಗೆ ಯುರೋಪಿಯನ್ ಒಡೆಯರು ಮತ್ತು ನಿಗ್ರೋ ಗುಲಾಮ ಸಂತತಿಯವರಷ್ಟೇ ಇದ್ದ ದ್ವೀಪದಲ್ಲಿ ಭಾರತೀಯರ ಪ್ರವೇಶವಾಗಿ ಇಂದು ದ್ವೀಪದ ಜನಸಂಖ್ಯೆಯಲ್ಲಿ ಸೇಕಡಾ ೬೭ ರಷ್ಟು ಭಾರತೀಯರು; ಅವರಲ್ಲಿ ಸೇಕಡಾ ೭೭ ರಷ್ಟು ಹಿಂದುಗಳಾಗಿದ್ದಾರೆ. ೫-೬ ತಲೆಮಾರುಗಳಿಂದ ಅಲ್ಲಿಯೇ ಇರುವ ಇವರು ಮಾರಿಶಸ್‌ನದೇ ವೈಶಿಷ್ಟ್ಯಗಳನ್ನು ಪಡೆದಿದ್ದರೂ ಇಡೀ ದ್ವೀಪಕ್ಕೊಂದು ಭಾರತೀಯ ಕಳೆಯನ್ನು

ತಂದುಕೊಟ್ಟಿದ್ದಾರೆ. ಹೆಜ್ಜೆಹೆಜ್ಜೆಯ ನೆಲಕ್ಕೂ ಇಲ್ಲಿ ಭಾರತೀಯ ರೂಪದ ದಂತಕಥೆಗಳು ರೂಪುಗೊಂಡಿವೆ.

ಮಾರಿಶಸ್ ದ್ವೀಪದ ಕ್ಷೇತ್ರಫಲ ಕೇವಲ ೭೨೦ ಚದುರ ಮೈಲುಗಳು. ಆದರೆ ಅದು ಜಗತ್ತಿನ ಅತ್ಯಂತ ಜನನಿಬಿಡ ಪ್ರದೇಶಗಳಲ್ಲಿ ಒಂದಾಗಿದೆ. ಇಲ್ಲಿನ ಜನ ಸಂಖ್ಯೆ ಚದುರ ಮೈಲಿಗೆ ೬೯೬ ಇದೆ. ಇಡೀ ದ್ವೀಪ ಐದು ಲಕ್ಷ ಜನರಿಗೆ ಆಶ್ರಯವಾಗಿದೆ.

ಮಾರಿಶಸ್‌ನ ಭೂಮಿ ಅತ್ಯಂತ ಫಲವತ್ತಾದುದು ಮಾತ್ರವಲ್ಲ, ನಂದನವನದ ಒಂದು ತುಣುಕೋ ಎಂಬಷ್ಟು ಸುಂದರವಾದದ್ದು. "ಶತ ನಾಸ್ತಿಕನು ಕೂಡ ಮಾರಿಶಸ್‌ನ ಸೃಷ್ಟಿ ಸೌಂದರ್ಯವನ್ನು ಕಂಡರೆ ಅವನ ನಂಬಿಕೆ ಸಡಿಲಾದೀತು. ಏಕೆಂದರೆ ಇಂಥದನ್ನು ದೈವೀ ಮಾಯೆಯಲ್ಲದೆ ಮತ್ತಾವ ಶಕ್ತಿಯೂ ಸೃಷ್ಟಿಸಿರಬಹುದೆಂದು ನಂಬಲಸದಳ" ಎಂದು ಶ್ರೀಮತಿ ಕವಿತಾ ಸರಕಾರ ಈಚೆಗೆ ಬರೆದಿದ್ದಾರೆ. ಇಲ್ಲಿ ಪರ್ವತಗಳಿವೆ, ನದಿಗಳಿವೆ, ಸರೋವರಗಳಿವೆ. ಶಾಂತವಾದ ಜ್ವಾಲಾಮುಖಿ ಪರ್ವತ ಶ್ರೇಣಿಯ ನೆತ್ತಿಯಲ್ಲಿ ಸ್ಫಟಿಕ ಶುಭ್ರ ಸರೋವರಗಳಿವೆ. ಅವುಗಳಿಗೆ ಮೃಗ ಕುಂಡ, ಅಪ್ಸರ ಸರಸ್, ಧವಲ ಸರೋವರ ಇತ್ಯಾದಿ ಮುದ್ದಾದ ಹೆಸರುಗಳಿವೆ. ರಿವಿಯರ್ ಗ್ರಾಂಡೆ— ಮಹಾನದಿ— ಎಂದು ಫ್ರೆಂಚರು ಹೆಸರಿಸಿದ ಇಲ್ಲಿನ ಅತಿ ದೊಡ್ಡ ನದಿ ಕೇವಲ ಹತ್ತು ಮೈಲುದ್ದವಾಗಿದೆ. ಪರ್ವತ ಪರ್ವತಗಳಿಂದ ಹರಿಯುವ ಈ ನದಿಗಳು ಬೇಸಗೆಯಲ್ಲಿ ಬಹುಮಟ್ಟಿಗೆ ಬತ್ತಿಹೋದರೂ ನವೆಂಬರದಿಂದ ಏಪ್ರಿಲ್ ವರೆಗಿನ ಮಳೆಗಾಲದ ಅವಧಿಯಲ್ಲಿ ಅವುಗಳ ಜಲಪಾತಗಳ ರಭಸ ನೋಡಿ ಬೆರಗಾಗಬೇಕು.

ವರ್ಷವೆಲ್ಲ ಅಲ್ಪ ಸ್ವಲ್ಪ ಮಳೆ ಬಿದ್ದೇ ಇರುತ್ತದೆ. ಬಿರುಗಾಳಿ ಮಳೆಗಳು (ಗಾಳಿ ಇಲ್ಲಿ ತಾಸಿಗೆ ೧೩೦ ಮೈಲು ಧಾವಿಸಬಹುದು.) ಆಗಾಗ್ಗೆ ರಣತಾಂಡವವಾಡಿ ಇಲ್ಲಿನ ನಿವಾಸಿಗಳ ಜೀವನವನ್ನು ಕಲಮಲಗೊಳಿಸಿ ಹೋಗುತ್ತವೆ. ಆದರೂ ಇದು ನಂದನವನದಲ್ಲಿಯೂ ಕೋಲಾಹಲವಿರಬಹುದೆಂದು ತೋರಿಸಲು ಮಾತ್ರ. ಹೆಸರಿಗೇನೋ ಇಲ್ಲಿ ಚಳಿಗಾಲ ವಸಂತಕಾಲ ಎಂಬೆರಡು ಕಾಲ ವಿಭಾಗಗಳಿದ್ದರೂ ಕರಾವಳಿಯಲ್ಲಿ ಹೊರತು ಒಳನಾಡಿನಲ್ಲೆಲ್ಲ ಅಷ್ಟು ಉಷ್ಣವೂ ಅಲ್ಲ, ಶೀತವೂ ಅಲ್ಲ ಎಂಬಂತೆ ಶಾಶ್ವತ ವಸಂತ ಕಾಲದ ಹವೆಯೇ ಇರುತ್ತದೆ. ವರ್ಷವೆಲ್ಲ ಜನ ಕೋಟ್-ಪ್ಯಾಂಟ್ ನೆಕ್ ಟೈ ಹಾಕಿಕೊಂಡು ಸಜ್ಜಾಗಿಯೇ ಇರುತ್ತಾರೆ.

ವರ್ಷವೆಲ್ಲ ಹಸಿರೆಲೆ, ಹೂ, ಹಣ್ಣು, ಮಾವು, ಹುಣಿಸೆ, ಬಾಳೆ, ಅನಾನಸ್, ಅಂಜೂರ, ಸೇಬು ಮತ್ತೇನೇನೋ; ಲವಂಗ, ಸುಂಟಿ, ಮೆಣಸು ಮತ್ತೇನೇನೋ; ಕಬ್ಬು, ಜವೆಗೋದಿ, ಜೋಳ, ಭತ್ತ, ಕಡಲೆ, ತೊಗರಿ, ಗೆಣಸು, ತರಕಾರಿ. ಈಚೆಗಿನ ವರೆಗೆ ಇಲ್ಲಿನ ೨೬ ಕಾರಖಾನೆಗಳಲ್ಲಿ ಸಿದ್ಧವಾದ ಸಕ್ಕರೆಯ ನಿರ್ಯಾತ ಮಾಡಿಯೇ ದ್ವೀಪ ಬದುಕಬೇಕಾಗಿತ್ತು. ಆದರೆ ಕಳೆದ ಯುದ್ಧ ಕಾಲದಲ್ಲಿ ಸಕ್ಕರೆಯ ನಿರ್ಯಾತಕ್ಕೆ ಆಸ್ಪದ ಕಡಿಮೆಯಾದುದರಿಂದ ಸಾವಿರಾರು ಎಕರೆ ಕಬ್ಬಿನ ಕ್ಷೇತ್ರವನ್ನು ಧಾನ್ಯ ಬೆಳೆಯಲು ನಿಯೋಗಿಸತೊಡಗಿದ್ದರಿಂದ ಇಂದು ಆಹಾರ ಧಾನ್ಯಗಳಲ್ಲಿ ಸಂಪೂರ್ಣ ಸ್ವಾವಲಂಬಿಯಾಗಿದೆ. ಮಾರಿಶಸ್ ಇಂದು ಜಗತ್ತಿನ ಅತ್ಯುಚ್ಚ ಜೀವನಮಟ್ಟವುಳ್ಳ ಪ್ರದೇಶಗಳಲ್ಲೊಂದಾಗಿದೆ.

ಅರಣ್ಯಗಳಲ್ಲಿ ಮುಖ್ಯವಾದ ಜೀವ ಸಂಪತ್ತೆಂದರೆ ಪಕ್ಷಿಗಳು. ನೂರಕ್ಕೂ ಮಿಕ್ಕಿದ ಜಾತಿಯ ಪಕ್ಷಿಗಳು ಇಲ್ಲಿವೆ. ಅವುಗಳಲ್ಲಿ ಹಲವು ಅತಿ ಮಧುರವಾಗಿ ಹಾಡುತ್ತವೆ. ಕೋಗಿಲೆ, ಮೈನಾಗಿಳಿ, ಮೊದಲಾದವುಗಳಲ್ಲದೆ ಕೆಂಪು ಪಾರಿವಾಳ ಮೊದಲಾದ ಹಲ ಅಪರೂಪ ಪಕ್ಷಿಗಳನ್ನು ಕಾಣಲು ನಿಸರ್ಗಪ್ರಿಯರು ಇಲ್ಲಿಗೆ ಬರುತ್ತಾರೆ. ಇಲ್ಲಿರತಕ್ಕ ಪಶುಗಳು ಕೂಡ ಹಿಂಸ್ರವಾಗಿಲ್ಲ.

ಮಾರಿಶಸ್‌ನ ಪ್ರಾಣಿಲೋಕ ಎಷ್ಟು ಅಹಿಂಸಕವಾಗಿತ್ತೆಂದರೆ ಅದೇ ಕಾರಣದಿಂದ ಇಲ್ಲಿನ ಹಲವು ಬಗೆಯ ಪ್ರಾಣಿಗಳು ಮಾನವನ ಆಗಮನದ ನಂತರ ನಿಸ್ಸಂತಾನವಾಗಿ ಹೋಗಿವೆ. ಡೋಡೋ ಪಕ್ಷಿಯ ಕಥೆ ಯಾರು ಕೇಳಿಲ್ಲ? ಇದು ಮಾರಿಶಸ್‌ನಲ್ಲಿ ಮಾತ್ರವೇ ಇದ್ದ ಪಕ್ಷಿ. ದ್ವೀಪದ ಶತ್ರು ರಹಿತ ವಾತಾವರಣದಲ್ಲಿ ಅದು ಹಾರುವುದನ್ನೇ ಮರೆತುಬಿಟ್ಟಿತ್ತು, ಸಂಶಯದೃಷ್ಟಿಯನ್ನೇ ಕಳೆದುಕೊಂಡಿತ್ತು. ಮಾನವ ಇಲ್ಲಿ ವಸತಿ ಹೂಡಿದ ಮೇಲೆ ಮಾಂಸಕ್ಕಾಗಿ ಆತ ಬಂದೂಕು, ನಾಯಿಗಳ ಸಹಿತ ಹೊರಟಾಗ ಡೋಡೋ ಅವನಿಗೆ ಬಲು ಸುಲಭವಾಗಿ ಬಲಿಯಾಯಿತು. ಒಂದೇ ಶತಮಾನದಲ್ಲಿ—೧೬೮೧ರೊಳಗೆ—ಡೋಡೋ ನಿರ್ನಾಮವಾಗಿ ಹೋಯಿತು. ಈಗ ಅದು ಇತ್ತೆಂಬುದಕ್ಕೆ ಹಳೆಯ ಬರೆಹಗಳಷ್ಟೇ ಸಾಕ್ಷಿಯಾಗಿ ಉಳಿದಿವೆ.

ಮಾರಿಶಸ್‌ನ ಫ್ರೆಂಚ್ ಆಳಿಕೆ ಅಲ್ಲಿನ ಜೀವನದ ಮೇಲೆ ಶಾಶ್ವತವಾದ ಅಚ್ಚೊತ್ತಿ ಹೋಗಿದೆ. ಅಲ್ಲಿ ಇಂಗ್ಲೀಷಿಗಿಂತ ಫ್ರೆಂಚ್ ಭಾಷೆಯ ಬಳಕೆ ಹೆಚ್ಚು. ಜನಭಾಷೆ ಕ್ರಿಯೋಲ್. ಅದರ ಶಬ್ದ ಸಂಪತ್ತಿ ಫ್ರೆಂಚ್, ಆದರೆ ವ್ಯಾಕರಣ ಆಫ್ರಿಕದ ಬಾಂಟು ಭಾಷೆಯದು. ಅದಿನ್ನೂ ಅಲಿಖಿತ ಭಾಷೆ. ಕಾಯದೆ ಕಾನೂನುಗಳು, ನಡವಳಿಕೆ ಕೂಡ ಫ್ರೆಂಚ್ ಮುದ್ರೆಯಿಂದ ಕೂಡಿದವೇ. ಅಲ್ಲಿನ ಏಳು ದಿನ ಪತ್ರಿಕೆಗಳಲ್ಲಿ ನಾಲ್ಕು ಇಂಗ್ಲೀಷ್-ಫ್ರೆಂಚ್ ಉಭಯಭಾಷೆಗಳಲ್ಲಿದ್ದು, ಉಳಿದ ಮೂರು ಚೀನಿ ಭಾಷೆಯಲ್ಲಿವೆ. ೧೯ ಚುನಾಯಿತ ಮತ್ತು ೧೨ ನಾಮಕರಣ ಸದಸ್ಯರಿಂದ ಕೂಡಿದ ಕೌನ್ಸಿಲ್ಲು ಗವರ್ನರರಿಗೆ ಆಳಿಕೆಯಲ್ಲಿ ನೆರವಾಗುತ್ತಿದೆ.

ಮಾರಿಶಸ್‌ನ ೧೩೦ ಮೈಲುದ್ದದ ಕರಾವಳಿಯ ಗುಂಟವೆಲ್ಲ ಅಲ್ಲಲ್ಲಿ ಬೆಳೆದ ತಾಳೆ ಮತ್ತು ಹುಣಿಸೆಯ ನೆರಳಿನಿಂದ ಚಿತ್ರಿತವಾದ ಬೆಳುದಿಂಗಳಿನಂಥ ಮಳಲ ದಿನ್ನೆ. ಇಲ್ಲಿ ತಂಪು ಹವೆಯಲ್ಲಿ ಅಲೆದಾಡುವುದೇ ಒಂದು ಅನುಭವ. ಈ ಸಾಗರ ತೀರದ ಕೆಲವೆಡೆ ಹಿಂದೂ ಕ್ಷೇತ್ರಗಳೇ ಆಗಿವೆ. ಹಬ್ಬದ ದಿನಗಳಲ್ಲಿ ಇಲ್ಲಿ ಭಾರಿ ಜಾತ್ರೆಗಳು ಸೇರುತ್ತವೆ.

ಇಷ್ಟು ಚಿಕ್ಕ ಪ್ರದೇಶದಲ್ಲಿ ಇಷ್ಟು ನಿಸರ್ಗ ವಿಸ್ಮಯಗಳು ಮತ್ತೆಲ್ಲಾದರೂ ದೊರೆತಾವೇ ಎಂಬುದು ಸಂಶಯ. ಉದಾಹರಣೆಗೆ ದ್ವೀಪದ ನೈಋತ್ಯದಲ್ಲಿರುವ ಶಾಮರೆಲ್‌ನ "ಶತವರ್ಣಿ" ಭೂಮಿ. ಇದೊಂದು ಜ್ವಾಲಾಮುಖಿಯ ಪವಾಡ ಅಡವಿಯಿಂದ ಸುತ್ತುವರಿದ ಈ ಎಡೆಯಲ್ಲಿ ಏನಿಲ್ಲೆಂದರೂ ನಲವತ್ತು ಬಣ್ಣಗಳ ಮಣ್ಣು ರಾಶಿಗಳು ಕಾಣಸಿಗುತ್ತವೆ. ನೆಲದಲ್ಲಿ ಹುಟ್ಟಿದ ಕಾಮನಬಿಲ್ಲೋ ಎಂಬಂತೆ ತೋರುವ ಶಾಮರೆಲ್ ಪ್ರದೇಶದ ಮಣ್ಣು ಬೆಣ್ಣೆಯಂತೆ ಮೃದು. ಅದನ್ನು ಬರಿಗೈಯಿಂದ ತೋಡಿಕೊಂಡು ಹೊಂಡ ಮಾಡಬಹುದು. ಕೆಲವೇ ಕ್ಷಣಗಳಲ್ಲಿ ಅಲ್ಲಿ ನೀರು ತುಂಬಿಕೊಳ್ಳುತ್ತದೆ. ಗಟ್ಟದ ಸುತ್ತು ಸುತ್ತು ದಾರಿಯಿಂದ ಏರಿ ಈ ಸ್ಥಳವನ್ನು ತಲುಪಬೇಕು. ಅಲ್ಲಿ ನೊಣ, ಸೊಳ್ಳೆಗಳ ಹೆಸರೂ ಇಲ್ಲ. ಅಷ್ಟು ಸ್ವಚ್ಛ ಸ್ಥಳ. ಸೂರ್ಯೋದಯ ಮತ್ತು ತಿಂಗಳು ಬೆಳಕಿನ ರಾತ್ರಿಗಳಲ್ಲಿ ಇದೊಂದು ನಿಸರ್ಗದ ವರ್ಣಮಯ ಸ್ವಪ್ನದಂತೆ ಭಾಸವಾಗುತ್ತದೆ. ಮಾರಿಶಸ್‌ಗೆ ಬಂದವರಾರೂ ಈ ಶಾಮರೆಲ್ ನೋಡದೆ ಮರಳುವಂತಿಲ್ಲ. ಅಲ್ಲಿನ ಬಣ್ಣದ ಮಣ್ಣನ್ನು ಬಾಟಲಿಗಳಲ್ಲಿ ತುಂಬಿಕೊಂಡೊಯ್ಯುವವರೂ ಇದ್ದಾರೆ. ಇದು ಜಗತ್ತಿನ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ ಒಂದಾಗುವ ದಿನ ದೂರವಿಲ್ಲ.

ಮಾರಿಶಸ್‌ನ ಅತಿ ಎತ್ತರದ ಪರ್ವತ ಶಿಖರ "ಪೀಟರ್ ಬೋತ್"—ಹಿಂದೂ ಹೆಸರು ಮುಡಿಯಾ (ತಲೆ ಬೋಳಿಸಿದ) ಪಹಾಡ್. ೨೬೯೦ ಅಡಿ ಎತ್ತರದ ಈ ಶಿಖರವೇ ಒಂದು ಅದ್ಭುತವಾಗಿದೆ. ದೂರದಿಂದ ನೋಡುವಾಗಲೇ ಯಾವನೋ ಸೇತಜಿ ಅಲ್ಲಿ ಕುಳಿತಂತೆ ಕಾಣು

ತ್ತದೆ. ಮೂಗು, ಬಾಯಿ, ಕಣ್ಣು, ಹೊಟ್ಟೆ-ಸೇಠಜಿ ಸರ್ವಾಂಗ ಸಂಪೂರ್ಣನಾಗಿದ್ದಾನೆ.

ಈ ವಿಚಿತ್ರ ಗುಡ್ಡದ ಬಗ್ಗೆ ಒಂದು ದಂತ ಕಥೆ ಇದೆ. ಒಮ್ಮೆ ಒಬ್ಬ ಬ್ರಾಹ್ಮಣ, ಒಬ್ಬ ಕ್ಷೌರಿಕ ಮತ್ತು ಒಬ್ಬ ಸೇಠಜಿ ಆ ಕಡೆ ಹೊರಟರಂತೆ. ಅಲ್ಲೇ ಸಮೀಪದಲ್ಲಿ ವಿದೇಶೀಯರು ಕಾಶ್ಮೀರಕ್ಕೆ ಹೋಲಿಸುವ ಘುಲವಾಮೋತಾಯಿ ಗ್ರಾಮವಿದೆ. ಇಲ್ಲಿ ಹೂಗಳು ಬೆಳೆಯುವಂತೆ ಬೇರೆಲ್ಲೂ ಬೆಳೆಯವು. ಅದರ ಸೌಂದರ್ಯಕ್ಕೆ ತಲೆದೂಗುತ್ತ ಮುಂದೆ ಅಡವಿಯಲ್ಲಿ ಸಾಗಿದ ಈ ಯಾತ್ರಿಕರು ಒಂದು ಸರೋವರದ ಬಳಿ ವಿಶ್ರಮಿಸಿದರು. ಅಲ್ಲೇ ಅವರಿಗೆ ನಿದ್ದೆ ಬಂದು ಹೋಯಿತು.

ಸ್ವಲ್ಪ ಸಮಯದಲ್ಲೇ ನೃತ್ಯ ಸಂಗೀತಗಳ ದನಿ ಕೇಳಿ ಎಚ್ಚೆತ್ತ ಆ ಮೂವರು ಅತುಲ ಸುಂದರಿಯರಾದ ಅಪ್ಸರೆಯರನ್ನು ಕಂಡರು. ಅವರೂ ಇವರನ್ನು ನೋಡಿದರು. ಒಬ್ಬಾಕೆ ಬಂದು ಇಲ್ಲಿ ನೀವು ಹೇಗೆ ಬಂದಿರೆಂದು ವಿಚಾರಿಸಿದಳು. ಅವರ ಕಥೆ ಕೇಳಿಕೊಂಡು ಪ್ರಸನ್ನರಾಗಿ ನಿಮಗೇನು ಬೇಕು ಎಂದು ಕೇಳಿದಳು.

ಬ್ರಾಹ್ಮಣ ವಿದ್ಯೆ ಬೇಡಿದ; ಕೊಟ್ಟಳು.

ಕ್ಷೌರಿಕ ಹಣ ಬೇಡಿದ; ಕೊಟ್ಟಳು.

ಸೇಠನಿಗೆ ಮನೆ ಮಾರು ಸಂಪತ್ತು ಬೇಕಾದಷ್ಟಿತ್ತು. ವಿದ್ಯೆ ಬೇಕಿರಲಿಲ್ಲ. ಆತ ಅಪ್ಸರೆಯೊಬ್ಬಳನ್ನು ನನಗೆ ಮದುವೆ ಮಾಡಿಕೊಡಿರೆಂದ.

ಅಪ್ಸರೆಯರ ರಾಣಿ ನಕ್ಕು "ಹಾಗೇ ಆಗಲಿ. ನೀನು ಇಲ್ಲೇ ಪೂರ್ವಕ್ಕೆ ಮುಖಹಾಕಿ ಕಾಯುತ್ತಿರು. ನಾನು ಇವರಿಬ್ಬರನ್ನು ಕಳಿಸಿ ಬರುತ್ತೇನೆ" ಎಂದು ಹೊರಟಳು. ಹೋಗಿಬಿಟ್ಟಳು.

ಸೇಠಜಿ ಕಲ್ಲಾಗಿ ಇಂದಿಗೂ ಹಾಗೇ ಕಾಯುತ್ತಿದ್ದಾನೆ!

ಗಂಟಲಿಂದ ನೆತ್ತಿಯ ವರೆಗೆ ೫೦ ಅಡಿ ಎತ್ತರವುಳ್ಳ ಈ ಸೇಠಜಿಯ ತಲೆಯ ಮೇಲೇರಲು ಹಗ್ಗ, ಮೊಳೆಗಳ ನೆರವು ಬೇಕು. ಅಲ್ಲಿ ನಿಂತು ನೋಡಿದರೆ ಇಡೀ ದ್ವೀಪ ಒಂದು ಹೂವಿನ ಕುಂಡದಂತೆ ಕಂಗೊಳಿಸುತ್ತದೆ.

ಮಾರಿಶಸ್‌ನ ಅಸಂಖ್ಯ ತೊರೆ - ಸರೋವರಗಳಲ್ಲಿ ಕನಕಾ ಎಂಬ ಸರೋವರವನ್ನು ಹಿಂದುಗಳು ಮಾನಸ ಸರೋವರದಂತೆ ಪವಿತ್ರವೆಂದು ಭಾವಿಸುತ್ತಾರೆ. ಇದರ ಪೂರ್ವಕ್ಕಿರುವ ದ್ವೀಪದಲ್ಲಿ ಗತಯುಗದಲ್ಲಿ ದೇವರಮಣಿಯರು ವಿಹರಿಸುತ್ತಿದ್ದರೆಂದು ಕಥೆ ಹುಟ್ಟಿದೆ. ಇದು ಶಿವಭಕ್ತರಿಗೆ ಮಹಾ ಕ್ಷೇತ್ರ. ಶಿವರಾತ್ರಿಗೆ ಇಲ್ಲಿ ಭಾರಿ ಜಾತ್ರೆ ಸೇರುತ್ತದೆ. ಜಾತ್ರೆಗೆ ಒಂದೆರಡು ದಿನ ಮುಂಚಿತವಾಗಿಯೆ ಶ್ವೇತ ವಸನಧಾರಿಗಳಾದ ಯಾತ್ರಿಕರು ಭಕ್ತಿ-ಗೀತಗಳನ್ನು ಹಾಡುತ್ತಾ ಕನಕಾದತ್ತ ಯಾತ್ರೆ ಹೊರಡುತ್ತಾರೆ. ಮರಳುವಾಗ ಈ ಸರೋವರದ ತೀರ್ಥವನ್ನು ಗಿಂಡಿ, ಥಾಲಿ, ಬಾಟಲಿಗಳಲ್ಲಿ ತುಂಬಿಕೊಂಡು ಬರುತ್ತಾರೆ.

ಮಾರಿಶಸ್‌ನಲ್ಲಿ ನೂರಕ್ಕೆ ೫೦ ಕ್ಕೂ ಹೆಚ್ಚು ಇರುವ ಹಿಂದುಗಳು ಸಾವಿರಾರು ಮೈಲು ದೂರವಿರುವ ತಮ್ಮ ಮೂಲ ದೇಶದೊಡನೆ ವಿಶೇಷ ಸಂಪರ್ಕ ಇಟ್ಟುಕೊಳ್ಳಲಾರರಾದರೂ ಅವರ ದೀಪಾವಳಿ, ಶಿವರಾತ್ರಿ ಮತ್ತು ಹೋಳಿ ಹಬ್ಬಗಳು ಭಾರತದಲ್ಲಿರುವಷ್ಟೇ ಉತ್ಸಾಹಮಯವಾಗಿವೆ. ಪ್ರತಿ ಹಳ್ಳಿಯಲ್ಲೂ ಒಂದು ಹಿಂದೂ ದೇವಾಲಯವಿದ್ದೇ ಇದೆ. ಅವುಗಳ ಶಿಲ್ಪಕಲೆಯಲ್ಲಿ ಇಗರ್ಜಿ ಮತ್ತು ಚೀನಿ ಪಗೋಡಾಗಳ ಪ್ರಭಾವ ಕಂಡೀತು. ಮಾರಿಶಸ್‌ನಲ್ಲಿ ಹಿಂದೂ ಧರ್ಮ ತನ್ನದೇ ರೂಪದಲ್ಲಿ ಬೆಳೆದಿದೆಯೆನ್ನುವುದು ಅದಕ್ಕೇ. *

ಈ ಅಮೇರಿಕನ್ ಮನುಷ್ಯ
ಭಾರತದ ಸ್ವಾತಂತ್ರ್ಯಕ್ಕಾಗಿ
ಹೋರಾಡಿದ

ಸ್ಟೋಕ್ಸ್ 'ಸತ್ಯಾನಂದ'ರಾದ ಕಥೆ

ಸಿ. ಎಂ. ಕಶ್ಯಪ ಮತ್ತು ಎಡ್ವರ್ಡ ಫೋಸ್ಟ

ಆಗಿನ್ನೂ ಭಾರತದ ವಿಭಜನೆಯಾಗಿರಲಿಲ್ಲ, ಬ್ರಿಟಿಶ್ ಪ್ರಭುತ್ವದ ಭರಭರಾಟಿಯ ಕಾಲವದು. ಭಾರತವನ್ನು ಸ್ವತಂತ್ರವನ್ನಾಗಿ ಮಾಡಲು ಗಾಂಧೀಜಿಯವರು ಅಸಹಕಾರ ಚಳವಳಿಯನ್ನಾರಂಭಿಸಿದ್ದರು. ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ್ದಾನೆನ್ನುವ ಸಂಶಯ ಬಂದರೂ ಸಾಕು, ಅಂಥವನನ್ನು ಸರಕಾರ ಕಠೋರ ಶಿಕ್ಷೆಗೆ ಗುರಿಮಾಡುತ್ತಿತ್ತು.

೧೯೨೧, ಡಿಸೆಂಬರ ೧೨ ರಂದು ಲಾಹೋರಿನ ನ್ಯಾಯಾಲಯದಲ್ಲಿ ವಾತಾವರಣ ಅತ್ಯಂತ ಗಂಭೀರವಾಗಿತ್ತು.

"ನನ್ನ ಭಾಷಣ ಮತ್ತು ಬರವಣಿಗೆಗಳು ಶಾಂತಿಭಂಗಕ್ಕೆ ಕಾರಣವಾಗುತ್ತವೆಂಬ ಆರೋಪದಿಂದ ನನ್ನನ್ನು ಬಂಧಿಸಿದ್ದಾರೆ."

ಪಂಜರದಲ್ಲಿದ್ದ ಆರೋಪಿ ಕೈಮಗ್ಗದ ಬಟ್ಟೆಯ ಕೋಟನ್ನು ತೊಟ್ಟಿದ್ದ. ಆತನ ಮುಖಚರ್ಯೆ ಸೌಮ್ಯವಾಗಿತ್ತು, ಸುಂದರವಾಗಿತ್ತು. ಆತನ ಚಿಕ್ಕ ಮೀಶೆ ಅವನ ಪ್ರೌಢ ವಯಸ್ಸನ್ನು ಸೂಚಿಸುವ ಬದಲು ಆತನ ತಾರುಣ್ಯವನ್ನೇ ಎತ್ತಿ ಪ್ರದರ್ಶಿಸುವಂತಿತ್ತು. ಜಿಲ್ಲಾ ಮ್ಯಾಜಿಸ್ಟ್ರೇಟ್ ಮೇಜರ್ ಎಂ. ಸಿ. ಫೆರಾರರು ಆರೋಪಿಯ ಲಿಖಿತ ಹೇಳಿಕೆಯ ಮೇಲೆ ತುಂಬ ಅಸ್ವಸ್ಥ ಚಿತ್ತದಿಂದಲೇ ಕಣ್ಣುಹಾಯಿಸಿದರು.

"ಭಾರತದ ಜನರು ಸದ್ಯದ ಸರಕಾರವನ್ನು ದ್ವೇಷಿಸುವಂತೆ ನನ್ನ ಭಾಷಣ ಮತ್ತು ಬರಹಗಳು ಪ್ರಚೋದಿಸುತ್ತವೆ ಎಂಬ ಆರೋಪ ನನ್ನ ಮೇಲಿದೆ."

ಮೇಜರ್ ಫೆರಾರರಿಗೆ ಸ್ಯಾಮುವೆಲ್ ಇವಾನ್ಸ್ ಸ್ಟೋಕ್ಸ್ ಗೊತ್ತು. ತಮ್ಮ ದತ್ತಕ ಮಾತೃದೇಶದ ಬಗ್ಗೆ ಸ್ಟೋಕ್ಸ್‌ರಿಗಿರುವ ಪ್ರೇಮವನ್ನು ಫೆರಾರರು ಬಲ್ಲವರಾಗಿದ್ದರು. ಪ್ರಥಮ ಜಾಗತಿಕ ಯುದ್ಧದ ಕಾಲದಲ್ಲಿ ಸ್ಟೋಕ್ಸರು ಹಿಂದೀ ಸೈನ್ಯವನ್ನು ಸೇರಿ ಕ್ಯಾಪ್ಟನ್ನರಾಗಿದ್ದುದೂ ಅವರು ಕೋಟಗಡದಲ್ಲಿರುವ ತಮ್ಮ ಆಸ್ತಿಯ ಉಪಯೋಗವನ್ನು ಮಾಡಿಕೊಳ್ಳಲು ಸರಕಾರಕ್ಕೆ ಕೊಟ್ಟಿದ್ದುದೂ ಫೆರಾರರ ನೆನಪಿಗೆ ಬಂತು.

ಆರೋಪಿಯ ಹೇಳಿಕೆ ಇನ್ನೂ ಹೀಗಿತ್ತು:

"ಸತ್ಯವನ್ನು ನನಗೆ ತಿಳಿದಂತೆ ಹೇಳಲು ನಾನೆಂದೂ ಹಿಂಜರಿದಿಲ್ಲ. ಇಂದಿನ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತಕ್ಕೆ ಲಭಿಸಿರುವ ಮಹಾ ಧುರೀಣನಿಗೆ ಸಹಾಯ ಮಾಡಲು, ಅವರ ಆದೇಶವನ್ನು ಪಾಲಿಸಲು ಈ ನಾಡಿನ ಜನರ ಮನಸ್ಸನ್ನು ಒಲಿಸಲು ನಾನು ನನ್ನಿಂದಾಗಬಹುದಾದ ಸಕಲ ಪ್ರಯತ್ನಗಳನ್ನೂ ಮಾಡಿದ್ದೇನೆ. ಮತ್ತು ಅದೇ

"ಸ್ಪಾನ್" ನಿಂದ



ಸ್ಟೋಕ್ಸ್

ಕಾಲಕ್ಕೆ ದ್ವೇಷ ಮತ್ತು ಹಿಂಸೆಗಳನ್ನು ತೊಡೆದು ಹಾಕಿ ತಮ್ಮ ಹೃದಯವನ್ನು ಶುದ್ಧೀಕರಿಸಿಕೊಳ್ಳುವ ಕಾರ್ಯವನ್ನು ಆರಂಭಿಸುವುದು ಅವರ ಕರ್ತವ್ಯವೆಂದು ಜನರಿಗೆ ಹೇಳಲು ನಾನೆಂದೂ ಮರೆತಿಲ್ಲ.

"೧೯೨೦ ರಲ್ಲಿ ನಾನು ಬರೆದ 'ನ್ಯಾಶನಲ್ ಸೆಲ್ಫ್-ರಿಯಲ್ಯಾಝೇಶನ್' ಎಂಬ ಪುಸ್ತಕದ ಕೊನೆಯ ಪ್ಯಾರಾ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದೆ:

"ನಮ್ಮ ಧ್ಯೇಯ ಶುದ್ಧವಾದದ್ದಾದರೆ ಅದನ್ನು ನಾವು ದ್ವೇಷ-ಕೋಪಗಳಿಂದ ಸಾಧಿಸಲಾರೆವು. ದ್ವೇಷ ಮತ್ತು ಕೋಪಗಳು ಅಹಂಕಾರದ ದ್ಯೋತಕಗಳಾಗಿದ್ದು ಅವು ನಮ್ಮನ್ನು ದಾರಿ ತಪ್ಪಿಸಿ ಅಪಯಶದ ಅಂಧಕಾರದಲ್ಲಿ ನೂಕುವವು.

"ನಿಜ ವಾದಸತಾಗ್ರಹಿ ಮತ್ತು ಎದುರಾಳಿಗಳ ವಿಚಾರದಲ್ಲಿ ಅವನ ವರ್ತನೆ— ಇವುಗಳನ್ನು ಕುರಿತು ನಾನು ಬರೆದಿರುವುದು ಹೀಗೆ:

"ನಿಜವಾದ ಸ್ವರಾಜ್ಯವನ್ನು ನಾವು ಕೀಳು ವಿಚಾರ- ಮಾರ್ಗಗಳಿಂದ ಗೆದ್ದುಕೊಳ್ಳಲಾರೆವು. ನಾವು ಅಹಂಕಾರ, ದ್ವೇಷ, ಮತ್ಸರಗಳೆಂಬ ಕೀಳು ಅಸ್ತ್ರಗಳಿಂದ ಹೋರಾಡಿದೆವಾದರೆ ನಾವು ಅನ್ಯಾಯದ ಜಯವನ್ನು ಸಂಪಾದಿಸಿದರೂ ವಿನಾಶವನ್ನು ತಂದು ಕೊಂಡಂತೆಯೆ ಆಗುವುದು. ನಾವು ಸತ್ಯಮಾರ್ಗದಿಂದ ಹೋರಾಡಿದೆವಾದರೆ ದೇವರು ಮತ್ತು ನ್ಯಾಯ ನಮ್ಮ ಬೆಂಬಲಕ್ಕೆ ಬಂದು ನಮ್ಮ ವಿಜಯ ಕಟ್ಟಿಟ್ಟ ಮಾತಾಗುವುದು.

"ನಾನು ನನ್ನ ಭಾಷಣಗಳಲ್ಲಿ ಜನರಿಗೆ ಹೇಳುತ್ತ ಬಂದಿರುವುದು ಇವೇ ಮಾತುಗಳು ಎಂದು. ನಾನು ಆತ್ಮವಿಶ್ವಾಸದಿಂದ ಹೇಳುವೆ."

ಇಂಥ ವಿಚಾರಗಳ ಬಗ್ಗೆ ವಾದದ ಮಾತೇ ಇಲ್ಲ ಎಂದು ಫೆರಾರರ ಅಂತರಂಗ ಹೇಳುತ್ತಿತ್ತು. ಸ್ಯಾಮುವೆಲ್ ಸ್ಟೋಕ್ಸರ ಲೇಖನಗಳನ್ನು ಅವರು ಗಾಂಧೀಜಿಯ 'ಯಂಗ್ ಇಂಡಿಯ' ಮತ್ತು ಇತರ ಅನೇಕ ಪತ್ರಿಕೆಗಳಲ್ಲಿ ಓದಿದ್ದರು. ಆದರೆ ಡಿಸ್ಟ್ರಿಕ್ಟ್ 'ಇನಸ್ಪೆಕ್ಟರ್ ಜನರಲ್ ಆಫ್ ಪೋಲೀಸ'ರು ಸ್ಟೋಕ್ಸರ ಮೇಲೆ ಹೊರಿಸಿದ ಆರೋಪವನ್ನು ಕಂಡು ಫೆರಾರರು ವಿವಂಚಿತರಾಗಿದ್ದರು.

"ಡಿಸೆಂಬರ್ ೨ ರಂದು, ಶುಕ್ರವಾರ ರಾತ್ರಿ ಸ್ಟೋಕ್ಸರು ಲಾಹೋರಕ್ಕೆ ಹೊರಟಿದ್ದಾರೆಂದೂ ಅವರು ಸೆಂಟ್ರಲ್ ಕಾಂಗ್ರೆಸ್ ಕಮಿಟಿಯು ಕಾಯದೆ ಭಂಗ ಚಳವಳಿಯ ವಿಚಾರದಲ್ಲಿ ಇತ್ತ ಆದೇಶಗಳನ್ನು ಲಾಲಾ ಲಜಪತರಾಯರಿಗೆ ಮುಟ್ಟಿಸಲಿದ್ದಾರೆಂದೂ ಲಾಲಾ ಲಜಪತರಾಯರು ಕಾಯದೆ ಭಂಗ ಚಳವಳಿಯನ್ನು ಆರಂಭಿಸಿ ರಾಜದ್ರೋಹಾತ್ಮಕ ಸಭೆಗಳನ್ನು ಪ್ರತಿಬಂಧಿಸುವ ಕಾಯದೆಯನ್ನು ಭಂಗಿಸಿ ಲಾಹೋರಿನಲ್ಲಿ ಸಭೆ ಸೇರಿಸಬೇಕೆಂದು ಆ ಆದೇಶಗಳಲ್ಲಿ ಹೇಳಲಾಗಿದೆಯೆಂದೂ ನನಗೆ ಒಬ್ಬ ವಿಶೇಷ ದೂತ ತಂದುಕೊಟ್ಟ ಪತ್ರದಿಂದ ತಿಳಿಯಿತು. ಡಿಸೆಂಬರ ೩ ರಂದು ಮುಂಜಾನೆ ಸ್ಟೋಕ್ಸರನ್ನು

ಬಾಯಿಯ ದುರ್ಗಂಧವನ್ನು ಕಾಲ್ಗೇಟಿನಿಂದ ತೊಲಗಿಸಿರಿ

ಅದರೊಂದಿಗೆ ದಿನವಿಡೀ

ದಂತಕ್ಷಯವನ್ನು ಇದಿರಿಸಿರಿ !



ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್‌ನೊಂದಿಗೆ ಒಮ್ಮೆ ಹಲ್ಲುಜ್ಜುವುದರಿಂದ ಬಾಯಿಯಲ್ಲಿ ದುರ್ಗಂಧವನ್ನುಂಟು ಮಾಡುವ ಹಾಗೂ ಹಲ್ಲುಗಳನ್ನು ಕ್ಷಯಿಸುವ ಶೇಕಡ 85ರಷ್ಟು ಕ್ರಿಮಿಗಳು ನಾಶವಾಗುತ್ತವೆ.

ಊಟವಾದೊಡನೆ ಕಾಲ್ಗೇಟನಿಂದ ಹಲ್ಲುಜ್ಜುವುದರಿಂದ ದಂತ-ಮಂಜನಗಳ ಇತಿಹಾಸದಲ್ಲೇ ಹಿಂದೆಂದೂ ಆಗದಷ್ಟು ಅಧಿಕ ಜನರ ದಂತಕ್ಷಯವನ್ನು ಅಧಿಕ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗುತ್ತದೆ. ಇದಲ್ಲದೆ,ಕಾಲ್ಗೇಟನಿಂದ 10ರಲ್ಲಿ 7 ಸಂದರ್ಭಗಳಲ್ಲಿ ಬಾಯಿಯ ದುರ್ಗಂಧವು ಕೂಡಲೇ ನಿವಾರಿಸಲ್ಪಡುತ್ತದೆ. ಈ ಎರಡು ಪ್ರಮಾಣಗಳನ್ನು ಕಾಲ್ಗೇಟ್ ವೈಜ್ಞಾನಿಕ ಪರೀಕ್ಷೆಗಳ ಮುಖೇನ ಸಿದ್ಧಗೊಳಿಸಿರುತ್ತದೆ. ಕಾಲ್ಗೇಟಿಗೆ ಮಾತ್ರ ಈ ಪ್ರಮಾಣವಿದೆ !

ಊಟವಾದ ಮೇಲೆ ಬರೀ ಬಾಯಿ ಮುಕ್ಕಳಿಸುವುದರಿಂದ ಪ್ರಯೋಜನವಾಗಲಾರದು–ಪ್ರತಿ ಊಟದ ಮೇಲೆ ತಪ್ಪದೆ ನಿಮ್ಮ ಹಲ್ಲುಗಳನ್ನು ಕಾಲ್ಗೇಟನಿಂದ ಉಜ್ಜಿರಿ. ಇದರ ಪ್ರಬಲವಾದ ಸಂದು ಸಂದುಗಳಿಗೆ ಒಳನುಗ್ಗುವ ನೊರೆಯು ಅಗೋಚರವಾದ ಹಲ್ಲುಗಳ ನಡುವಿನ ಸಂದುಗಳಿಗೆ ಹೊಕ್ಕು, ನಿಮ್ಮ ಬಾಯಿಯ ದುರ್ಗಂಧಕ್ಕೂ, ಹಲ್ಲುಗಳ ಕ್ಷಯಿಸುವಿಕೆಗೂ ಕಾರಣವಾದ ಕೊಳೆಯುತ್ತಿರುವ ಆಹಾರ ಕಣಗಳನ್ನು ನಿವಾರಿಸಿ ಸ್ವಚ್ಛಗೊಳಿಸುವುದು.

ಮಕ್ಕಳಿಗೆ ಕಾಲ್ಗೇಟನಿಂದ ಹಲ್ಲುಜ್ಜುವುದೆಂದರೆ ತುಂಬಾ ಪ್ರೀತಿ, ದೀರ್ಘಕಾಲ ಉಳಿಯುವ ಅದರ ನೆಚ್ಚಿನ ಪೆಪರ್‌ಮಿಂಟ್ ಸ್ವಾದವು ಇದರಲ್ಲಿ ಕೂಡಿರುತ್ತದೆ.

ನಿಮಗೆ ಹಲ್ಲುಪುಡಿ ಹೆಚ್ಚು ಇಷ್ಟವಾಗಿದ್ದರೆ ಈ ಎಲ್ಲಾ ಪ್ರಯೋಜನಗಳನ್ನು ಕಾಲ್ಗೇಟ್ ಟೂತ್ ಪೌಡರ್‌ನಿಂದಲೂ ಪಡೆಯಿರಿ...ಒಂದು ಡಬ್ಬಿ ಹಲವು ತಿಂಗಳುಗಳವರೆಗೆ ಸಾಕಾಗುವುದು.

ಕಾಲ್ಗೇಟನಿಂದ ತಪ್ಪದೆ ಹಲ್ಲುಜ್ಜುವುದರಿಂದ

- ✓ ಬಾಯಿಯ ದುರ್ಗಂಧವು ನಿವಾರಿಸಲ್ಪಡುತ್ತದೆ
- ✓ ದಂತಕ್ಷಯವನ್ನು ವಿರೋಧಿಸಲಾಗುವುದು
- ✓ ಹಲ್ಲುಗಳು ಪರಿಶುಭ್ರವಾಗಿ ಉಳಿಯುವವು



DCG.31 K


ಬಾಯಿಯ ದುರ್ಗಂಧವನ್ನು ನಿವಾರಿಸಲು ಮತ್ತು ಹಲ್ಲುಗಳು ಶುಭ್ರವಾಗಿರಲು...ಹೆಚ್ಚಿಗೆ ಜನರು ಪ್ರಪಂಚದ ಇನ್ನಿತರ ಡೆಂಟಲ್ ಕ್ರೀಮ್‌ಗಳಿಗಿಂತ ಅಧಿಕವಾಗಿ ಕಾಲ್ಗೇಟನ್ನೇ ಕೊಂಡುಕೊಳ್ಳುತ್ತಾರೆ

ಬಂಧಿಸಿ ಡಿಸ್ಟ್ರಿಕ್ಟ್ ಪೋಲೀಸ್ ಲೈನ್ಸಿಗೆ ಒಯ್ಯಲಾಯಿತು" ಎಂದು ಇನಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಹೇಳಿದ್ದರು.

ಆರೋಪಿ ಸ್ಟೋಕ್ಸರು ತಾವು ತಮ್ಮ ಬಚಾವು ಮಾಡಿಕೊಳ್ಳುವುದಿಲ್ಲವೆಂದು ಮೊದಲಿಗೇ ಹೇಳಿದ್ದರು. "ಕಾರಾಗೃಹವಾಸವನ್ನು ತಪ್ಪಿಸಿಕೊಳ್ಳುವ ಉದ್ದೇಶ ನನಗಿಲ್ಲ. ಸತ್ಯಾಗ್ರಹಿಯಾದ ನಾನು ಅದಕ್ಕೆ ಸಿದ್ಧನಿದ್ದೇನೆ. ನಾನು ಹೇಳಿಕೆಯಿತ್ತಿರುವುದರ ಉದ್ದೇಶವೇನೆಂದರೆ ಓದುವವರ ಅಥವಾ ಕೇಳುವವರ ಮನಸ್ಸಿನಲ್ಲಿ ದ್ವೇಷ ಉತ್ಪನ್ನ ಮಾಡುವಂಥ ಭಾಷಣಗಳನ್ನು ನಾನು ಮಾಡಿದ್ದೇನೆ ಮತ್ತು ಲೇಖಗಳನ್ನು ಬರೆದಿದ್ದೇನೆ ಎಂದು ನನ್ನ ಮೇಲೆ ಹೊರಿಸಿರುವ ಆರೋಪವನ್ನು ಸ್ಪಷ್ಟವಾಗಿ ನಿರಾಕರಿಸುವುದೇ ಆಗಿದೆ" ಎಂದು ಅವರು ಹೇಳಿಕೆಯಿತ್ತಿದ್ದರು.

ಮೇಜರ್ ಫೆರಾರರು ಸಂದಿಗ್ಧದಲ್ಲಿ ಸಿಲುಕಿದ್ದರು. ಸ್ಟೋಕ್ಸರ ಘನತೆಯನ್ನು ಸಂದೇಹಿಸುವಂತಿರಲಿಲ್ಲ. ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸುವಂತಿರಲಿಲ್ಲ. ಆದರೆ ಸದ್ಯದಲ್ಲಿಯೇ ಮದ್ರಾಸಿನಲ್ಲಿ ಪ್ರಕಟವಾಗಲಿದ್ದ ತಮ್ಮ ಒಂದು ಪುಸ್ತಕದ ಮುನ್ನುಡಿಯಲ್ಲಿ ಸ್ಟೋಕ್ಸರು ಕಾಂಗ್ರೆಸ್ಸಿನ ಕಾರ್ಯಕ್ರಮಗಳನ್ನು ನಡೆಸುತ್ತಿರುವವರು ಯಾವ ಕ್ಷಣದಲ್ಲಿಯಾದರೂ ಸೆರೆಮನೆ ಕಾಣಬಹುದು ಎಂದಿದ್ದರು. ಸ್ಟೋಕ್ಸರ "ಟು ಅವೇಕನಿಂಗ್ ಇಂಡಿಯ" ಎಂಬ ಚಿಕ್ಕಪುಸ್ತಕಕ್ಕೆ ಬರೆದಿದ್ದ ಮುನ್ನುಡಿಯಲ್ಲಿ ಮಹಾತ್ಮಾ ಗಾಂಧಿಯವರು "ಸ್ಟೋಕ್ಸರು ವಿದೇಶಿ ಬಟ್ಟೆಗಳನ್ನು ಸುಡುವ ವಿಚಾರಕ್ಕೆ ಬೆಂಬಲವಿತ್ತಿರುವುದಲ್ಲದೆ ಸ್ವದೇಶಿಯ ಆರ್ಥಿಕ ಮಹತ್ವವನ್ನು ಚುಟುಕಿನಲ್ಲಿ ವಿವರಿಸಿದ್ದಾರೆ" ಎಂದಿದ್ದರು.

ಮೇಜರ್ ಫೆರಾರರು ತಮ್ಮ ವಿಚಾರಗಳ ಗೊಂದಲದಿಂದ ಮುಕ್ತರಾಗಲೊ ಎಂಬಂತೆ ತಲೆ ಕೊಡಹಿದರು. ಸ್ಟೋಕ್ಸರು ತಮ್ಮ ಮೇಲೆ ಇನ್ಸ್ಪೆಕ್ಟರ್ ಜನರಲ್ಲರು ಹೊರಿಸಿದ ಆರೋಪವನ್ನು



ಶ್ರೀಮತಿ ಸ್ಟೋಕ್ಸ್

ಅಲ್ಲಗಳೆಯುತ್ತ ಅದೆಷ್ಟು ಅಸಂಬದ್ಧವಾಗಿದೆಯೆಂದು ತಮ್ಮ ಹೇಳಿಕೆಯಲ್ಲಿ ವಿವರಿಸಿದ್ದರು. "ಲಾಲಾಲಜಪತರಾಯರಿಗೆ ಆದೇಶ ಕಳಿಸುವ ಈ ಸೆಂಟ್ರಲ್ ಕಾಂಗ್ರೆಸ್ ಕಮಿಟಿಯೆಂದರೇನು? ನಾನು ಸಿಮ್ಲಾದಿಂದ ಆಚೆ ಐವತ್ತು ಮೈಲು ದೂರದಲ್ಲಿದ್ದವನು. ಆಗ ತಾನೇ ದಕ್ಷಿಣ ಭಾರತದಿಂದ ಹಿಂತಿರುಗಿದ್ದ ಲಜಪತರಾಯರಿಗೆ ಸಂದೇಶವೊಯ್ಯುವುದೆಂದರೇನು?" ಎಂಬ ಅವರ ವಾದ ಗಟ್ಟಿಮುಟ್ಟಾಗಿತ್ತು.

ಮತ್ತು ಅವರು "ಸರಕಾರದ ಲೋಪದೋಷಗಳನ್ನು ಬಹಿರಂಗಪಡಿಸುವುದರಿಂದ ನಾವು ಸರಕಾರದ ವಿರುದ್ಧ ಜನತೆಯಲ್ಲಿ ದ್ವೇಷ ಹುಟ್ಟಿಸುತ್ತೇವೆ ಎಂದು ಹೇಳುವುದಾದರೆ ನಾನು ಅಪರಾಧಿ. ಆ ಸಂದರ್ಭದಲ್ಲಿ ಮೌನವಾಗಿರಬೇಕು ಇಲ್ಲವೆ ರಾಜದ್ರೋಹಿಯಾಗಬೇಕು. ಸತ್ತ ಮನುಷ್ಯನಷ್ಟು ಶಾಂತಿರಕ್ಷಕನೂ ಕಾಯದೆ ಬದ್ಧನಾಗಿ ನಡೆಯುವವನೂ ಇನ್ನೊಬ್ಬನಿಲ್ಲ" ಎಂದು ತಮ್ಮ ಹೇಳಿಕೆಯಲ್ಲಿ ನುಡಿದಿದ್ದರು.

ಈ ಅಸಾಧಾರಣ ವ್ಯಕ್ತಿಯನ್ನು ಉಳಿಸಬೇಕು,

ಇಂಥ ಮನುಷ್ಯನಿಗೆ ಶಿಕ್ಷೆ ವಿಧಿಸುವ ಅಪ್ರಿಯ ಕಾರ್ಯ ತನ್ನಿಂದಾಗಬಾರದು ಎಂದು ಫೆರಾರರು, "ನಿಮಗೆ ನಾನೇ ಜಾಮೀನಾಗುತ್ತೇನೆ. ಇನ್ನು ಮುಂದೆ ಸರಕಾರದ ವಿರುದ್ಧ ಬರೆಯುವುದಿಲ್ಲ ಅಥವಾ ಭಾಷಣ ಮಾಡುವುದಿಲ್ಲ ಎಂದು ವಚನ ಕೊಡಿ" ಎಂದು ಸ್ಟೋಕ್ಸರಿಗೆ ಹೇಳಿದರು.

ಸ್ಟೋಕ್ಸರು ಒಪ್ಪಲಿಲ್ಲ. ಅವರಿಗೆ ಆರು ತಿಂಗಳ ಕಾರಾಗೃಹವಾಸದ ಶಿಕ್ಷೆ ವಿಧಿಸಲ್ಪಟ್ಟಿತು.

*

ಈ ಶಿಕ್ಷೆಯಾದಾಗ ಸ್ಯಾಮುವೆಲ್ ಇವಾನ್ಸ್ ಸ್ಟೋಕ್ಸ್ ಭಾರತದಲ್ಲಿ ನೆಲೆಸಿ ಸುಮಾರು ಹದಿನೆಂಟು ವರ್ಷಗಳಾಗಿದ್ದವು. ಅಮೇರಿಕೆಯ ಪೆನ್ಸಿಲ್ವಾನಿಯದಲ್ಲಿ ಒಂದು ಪ್ರಖ್ಯಾತ ಕುಟುಂಬದಲ್ಲಿ ಅವರು ಜನಿಸಿದ್ದರು. ಸ್ವಾತಂತ್ರ್ಯ ಪ್ರೇಮ ಅವರ ವಂಶಗುಣವಾಗಿತ್ತು. ಇವರ ಪೂರ್ವಜರಲ್ಲಿ ಒಬ್ಬನಾದ ಥಾಮಸ್ ಎಂಬಾತ ೧೬೭೭ ರಲ್ಲಿ ಅಮೇರಿಕೆಗೆ ಪತ್ನೀ ಸಮೇತನಾಗಿ ಬಂದಿದ್ದ. ಸ್ಟೋಕ್ಸ್ ಕುಟುಂಬ ಕ್ವೇಕರ್ ಪಂಥದ್ದು. ಬ್ರಿಟನ್ನಿನಲ್ಲಿ ಆಗಬಹುದಾಗಿದ್ದ ಶಿಕ್ಷೆಯಿಂದ ಪಾರಾಗಲು ಥಾಮಸ್ ಅಮೇರಿಕೆಗೆ ಬಂದಿದ್ದ. ಪೆನ್ಸಿಲ್ವಾನಿಯದಲ್ಲಿ ಸ್ಟೋಕ್ಸ್ ಕುಟುಂಬ ಆಸ್ತಿಯನ್ನು ಗಳಿಸಿತು. ಸ್ಯಾಮುವೆಲ್ ಇವಾನ್ಸ್ ಸ್ಟೋಕ್ಸ್ ಈ ವಂಶದಲ್ಲಿ ಆ ಹೆಸರಿನ ಮೂರನೆಯವ. ಮೇಜರ್ ಫೆರಾರರ ಕೋರ್ಟಿನಲ್ಲಿ ಶಿಕ್ಷೆಗೆ ಗುರಿಯಾದ ಈತ ೧೮೮೨ ರ ಅಗಸ್ಟ ೧೬ ರಂದು ಪೆನ್ಸಿಲ್ವಾನಿಯದಲ್ಲಿ ಹುಟ್ಟಿದ.

ಪರಂಪರಾಗತ ಉದ್ಯೋಗದಲ್ಲಿ ತರುಣ ಸ್ಯಾಮುವೆಲ್‌ನಿಗೆ ಆಸಕ್ತಿಯಿರಲಿಲ್ಲ. ಉದ್ಯೋಗವನ್ನಾರಂಭಿಸಲು ತಂದೆ ಹಣ ಕೊಟ್ಟಾಗ ಈತ ಫಿಲೆಡಲ್ಫಿಯಾದಲ್ಲಿ ಒಂದು ಅನಾಥಾಶ್ರಮವನ್ನು ತೆರೆದ.

ಭಾರತದ ಬಗ್ಗೆ ಆತ ಓದಿದ್ದ. ಪೌರ್ವಾತ್ಯ ದೇಶಗಳಲ್ಲಿ ವಾಸಿಸಿದ್ದ ತನ್ನ ತಂದೆಯ ಮಿತ್ರರಿಂದ ಭಾರತದ ಬಗ್ಗೆ ಕೇಳಿಯೂ ಇದ್ದ. ಸಿಮ್ಲಾ ಗುಡ್ಡಗಾಡು ಪ್ರದೇಶದಲ್ಲಿ ಸಬಾತು ಎಂಬಲ್ಲಿಯ ಕುಷ್ಠರೋಗ ವಸಾಹತಿನ ಡಾಕ್ಟರರಾಗಿದ್ದ ಕಾರ್ಲ್ಟನ್ನರ ಅನುಭವವನ್ನು ಕೇಳಿದ ಮೇಲೆ ಈ ತರುಣನಿಗೆ ತಡೆಯದಾಗಿ ಈತ ಅವರೊಡನೆ ಸಬಾತುವಿಗೆ ಹೋಗಲು ನಿರ್ಧರಿಸಿದ. ತುಂಬ ವಾದವಿವಾದವಾದ ಮೇಲೆ ತಂದೆಯೂ ಒಪ್ಪಿದ.

ಇಪ್ಪತ್ತೆರಡು ವಯಸ್ಸಿನ ಸ್ಯಾಮುವೆಲ್ ಸ್ಟೋಕ್ಸ್ ೧೯೦೪, ಜನವರಿ ತಿಂಗಳಲ್ಲಿ ಡಾ. ಕಾರ್ಲ್ಟನ್ನರೊಂದಿಗೆ ಭಾರತಕ್ಕೆ ಬಂದ. ಅಂದಿನಿಂದ ಸಾಯುವ ವರೆಗೆ ಅಂದರೆ ೧೯೪೬ ರ ವರೆಗೆ ಭಾರತವೇ ಅವರ ಮನೆಯಾಯಿತು.

ಸ್ಟೋಕ್ಸರ ಭಾರತದ ಸೇವೆ ಸಬಾತುವಿನ ಕುಷ್ಠರೋಗಿಗಳ ವಸಾಹತಿನಲ್ಲಿ ಆರಂಭವಾಯಿತು. ಅಲ್ಲಿ ಕಾರ್ಲಟನ್ನರೊಂದಿಗೆ ಕೆಲಸ ಮಾಡುತ್ತಿದ್ದಾಗ ಅವರು ವಿಷಮಜ್ವರದಿಂದ ಬಳಲಿದರು. ಅವರಿಗೆ ಗುಣವಾಯಿತು ಎನ್ನುವಾಗ ಕಂಗ್ರಾದಲ್ಲಿ ಭೂಕಂಪದ ಹಾವಳಿಯೆಬ್ಬಿಸಿತು. ಅಶಕ್ತರಾಗಿದ್ದರೂ ಸ್ಟೋಕ್ಸರು ಪರಿಹಾರ ಕಾರ್ಯದಲ್ಲಿ ತೊಡಗಿದರು.

ಸ್ಟೋಕ್ಸರು ಸಂತ್ರಸ್ತರಿಗೆ ಹಣ ಹಂಚಿದರೇನೋ ನಿಜ. ಆದರೆ ಆ ಕೆಲಸ ಅವರಿಗೆ ಪ್ರಿಯವೆನಿಸಲಿಲ್ಲ. "ಆ ಬಡಪಾಯಿಗಳು ನನಗೆ ಸಲಾಮು ಮಾಡಿ ಜೀ ಜೀ ಎಂದರು. ದಿನಕ್ಕೆ ಸಾವಿರ ಡಾಲರುಗಳು ಸಿಕ್ಕರೂ ನಾನು ಅಂಥ ದೈನ್ಯವನ್ನು ಇನ್ನೊಮ್ಮೆ ಎದುರಿಸಲಾರೆ" ಎಂದು ಅವರು ಆ ಮೇಲೆ ಹೇಳಿದರು.

ಸಬಾತುವನ್ನು ಬಿಟ್ಟ ಮೇಲೆ ಸ್ಟೋಕ್ಸರು ಏಳು ವರ್ಷಗಳ ವರೆಗೆ ಭಾರತದಲ್ಲೆಲ್ಲ ಸುತ್ತಾಡಿದರು. ಪಟ್ಟಣಗಳಲ್ಲಿ, ತೀರ ಮೂಲೆಯ ಹಳ್ಳಿಗಳಲ್ಲಿ ವಾಸಿಸಿದರು. ಪ್ರತಿಷ್ಠಿತರ ಜೊತೆಯಲ್ಲಿ ಅದರಂತೆ ಹಳ್ಳಿಯ ತೀರ ಬಡ ರೈತನ ಜೊತೆಯಲ್ಲಿ ಓಡಾಡಿದರು. ತನಗೆ ಸಾಧ್ಯವಾದ ಸೇವೆ

ಯನ್ನು ಸಲ್ಲಿಸುತ್ತ, ಊರಿಂದೂರಿಗೆ ಅಲೆದರು.

೧೯೦೪ ರಲ್ಲಿ ಈ ಅಮೇರಿಕನ್ ತರುಣ ಕೋಟಗಡಕ್ಕೆ ಬಂದರು. ಸಿಮ್ಲಾದಿಂದ ಇಲ್ಲಿಗೆ ೫೨ ಮೈಲು ದೂರದ ರಸ್ತೆಯನ್ನು ನಡೆದುಕೊಂಡೇ ಬರಬೇಕಾಗಿತ್ತು. ಈ ಸುಂದರವಾದ, ಕಾಡು ಕೊಳ್ಳದಲ್ಲಿ ಹಿಂಸ್ರ ಪಶುಗಳ ಹಾವಳಿಯಿತ್ತು. ಕೋಟಗಡದ ಹಳ್ಳಿಗರು ತೀರ ಬಡವರಾಗಿದ್ದರು. ಅವರ ದಾರಿದ್ರ್ಯ, ದೈನ್ಯ, ಅಸಹಾಯಕತೆಗಳ ಪ್ರಭಾವಕ್ಕೊಳಗಾದ ಸ್ಟೋಕ್ಸರು ಪುನಃ ಪುನಃ ಅಲ್ಲಿಗೆ ಹೋದರು. ತನ್ನ ಜೀವನವನ್ನೆಲ್ಲ ಭಾರತದಲ್ಲೆ ಕಳೆಯಲು ಅವರು ೧೯೧೨ ರಲ್ಲಿ ನಿರ್ಧರಿಸಿದ್ದಾಗ ಅವರು ಕೋಟಗಡಕ್ಕೆ ಬಂದು ನೆಲೆಸಿದರು. ಅಲ್ಲಿ ಶ್ರೀಮತಿ ಬೇಟ್ಸ್ ಎಂಬವರ ಆಸ್ತಿಯನ್ನು ಕೊಂಡು ಒಂದು ಮನೆಯನ್ನು ಕಟ್ಟಿ ಅದಕ್ಕೆ ತಮ್ಮ ಅಮೇರಿಕದ ಮನೆಯ ಹೆಸರಾದ "ಹಾರ್ಮನಿ ಹಾಲ್" ಎಂಬ ಹೆಸರನ್ನಿಟ್ಟರು. ಅದೇ ವರ್ಷ ಏಗ್ನಸ್ ಬೆಂಜಾಮಿನ್ ಎಂಬ ಸುಂದರ ರಾಜಪೂತ ಹುಡುಗಿಯನ್ನು ಲಗ್ನವಾಗಬಯಸಿದರು. ಈ ಹುಡುಗಿಯ ತಂದೆ ಸಿಮ್ಲಾದಲ್ಲಿಯ ಸರಕಾರೀ ಛಾಪಖಾನೆಯಲ್ಲಿ ನೌಕರರಾಗಿದ್ದರು.

ಆಗ ತಮ್ಮ ತಾಯಿಗೆ ಬರೆದ ಪತ್ರದಲ್ಲಿ ಸ್ಟೋಕ್ಸರು "ನಾನು ಭಾರತೀಯನಾಗಬಯಸಿದ್ದು ಭಾರತೀಯ ಹುಡುಗಿಯನ್ನು ಲಗ್ನವಾಗುವವನಿದ್ದೇನೆ. ಪರಮಾತ್ಮನ ಕೃಪೆಯಿಂದ ನನಗೆ ಮಕ್ಕಳು ಹುಟ್ಟಿದರೆ ಅವರನ್ನು ಭಾಷೆ, ನಡತೆ, ಪೋಷಾಕು, ಶಿಕ್ಷಣ ಎಲ್ಲವುಗಳಲ್ಲಿ ಭಾರತೀಯರಂತೆಯೆ ಬೆಳೆಸುವೆ" ಎಂದು ಬರೆದಿದ್ದರು. ಕೋಟಗಡಕ್ಕೆ ಬಂದು ಅವರನ್ನೂ ಅವರ ವಾಗ್ದತ್ತ ವಧುವನ್ನೂ ಕಂಡುಹೋದ ಅವರ ತಾಯಿ ಏಗ್ನಸ್ ಬೆಂಜಾಮಿನ್ನಳಿಗೆ ಬರೆದ ಪತ್ರದಲ್ಲಿ ತನ್ನ ಸಮಾಧಾನವನ್ನು ವ್ಯಕ್ತಪಡಿಸಿ ಆಶೀರ್ವಾದವನ್ನಿತ್ತಿದ್ದಳು.

ಸ್ಟೋಕ್ಸರಿಗೆ ನಾಲ್ಕು ಜನ ಗಂಡುಮಕ್ಕಳು ಮೂರು ಹೆಣ್ಣು ಮಕ್ಕಳು ಹುಟ್ಟಿದರು. ಅವರ ಮೂರನೆಯ ಮಗ ತಾರಾಚಂದ ಎಂಟು ವರ್ಷದವನಿದ್ದಾಗ ಸಾಯಲು ಅವನ ಹೆಸರಿನಲ್ಲಿ ಕೋಟಗಡದ ಮಕ್ಕಳಿಗಾಗಿ ಸ್ಟೋಕ್ಸರು ಒಂದು ಶಾಲೆಯನ್ನು ಸ್ಥಾಪಿಸಿದರು. ಅವರ ಇತರ ಮಕ್ಕಳಾದ ಪ್ರೇಮಚಂದ, ಪ್ರೀತಮಚಂದ, ಚಂಪಾವತಿ, ಸಾವಿತ್ರಿ, ಸತ್ಯವತಿ, ಮತ್ತು ಲಾಲಚಂದ್ರರು—ಎಲ್ಲರೂ ಈಗ ಲಗ್ನವಾಗಿ ಕೋಟಗಡದ ನೆರೆಹೊರೆಯಲ್ಲಿ ಸಂಸಾರ ಹೂಡಿಕೊಂಡಿದ್ದಾರೆ. ಅವರಲ್ಲಿ ಯಾರಾದರೊಬ್ಬರು ಆಗೊಮ್ಮೆ ಈಗೊಮ್ಮೆ ಪೆನ್‌ಸಿಲ್ವಾನಿಯಕ್ಕೆ ಹೋಗಿ ತಮ್ಮ ಬಳಗದವರನ್ನು ಕಂಡು ಬರುತ್ತಾರೆ.

*

ಎಲ್ಲ ಧರ್ಮಗಳಲ್ಲಿಯೂ ಒಂದು ಐಕಮತ್ಯವನ್ನು ಸ್ಟೋಕ್ಸರು ಕಾಣುತ್ತಿದ್ದರು. ಹಾರ್ಮನಿ ಹಾಲ್‌ನ ಬಳಿಯಲ್ಲಿ ಅವರು ಸ್ವತಃ ಒಂದು ದೇವಾಲಯವನ್ನು ತಮಗಾಗಿ ಮತ್ತು ತಮ್ಮ ಕುಟುಂಬಕ್ಕಾಗಿ ಕಟ್ಟಿಕೊಂಡರು. ಅದರ ಶಿಖರಕ್ಕೆ ಭಾರತದ ಸಂಪ್ರದಾಯದಂತೆ ಬಂಗಾರದ ಕಳಸ ಏರಿಸಬೇಕೆಂದು ಅವರು ಹಣವನ್ನು ಕೂಡಿಸಿಟ್ಟುಕೊಂಡಿದ್ದರು. ಆದರೆ ಕಾಂಗ್ರಾ, ಮತ್ತು ಕುಲುಗಳಲ್ಲಿ ಬರಗಾಲ ಬೀಳಲು ಆ ಹಣವನ್ನು ಬರಗಾಲ ಪೀಡಿತರಿಗೆ ಹಂಚಿದರು. "ದೇವರಿಗೆ ಕಳಸಕ್ಕಿಂತ ಇದೇ ಹೆಚ್ಚು ಪ್ರಿಯವಾದೀತು" ಎಂದರವರು.

ದೇವಾಲಯದ ದೇವಪೀಠದ ಮೇಲೆ ಅವರು ಗೀತೆಯ ಶ್ಲೋಕಗಳನ್ನು ಬರೆದ ಐದು ಹಲಗೆಗಳನ್ನು ಜೋಡಿಸಿದ್ದರು. "ಕೋಟಗಡದ ಕ್ರಿಶ್ಚನ್ ರೈತನಾದ ನಾನು ಇಲ್ಲಿಯ ಸಮಾಜ ಜೀವನದಭಿವೃದ್ಧಿಗಾಗಿ ನನ್ನ ದೇಹವನ್ನು ಸವೆಯಿಸುವೆ" ಎಂದು ಹೇಳಿದ್ದ ಅವರು ಸಾಯುವವರೆಗೂ ಅದರಂತೆ ನಡೆದುಕೊಂಡರು.

"ಬಿಟ್ಟೀ ಆಳಿ" ನ ಪದ್ಧತಿಯ ವಿರುದ್ಧ ಹೋರಾಡಿ ಅದನ್ನು ಸ್ಟೋಕ್ಸರು ನಿಲ್ಲಿಸಿದರು.

ಸ್ವತಃ ರೈತರ ಸಾಲವನ್ನು ತೀರಿಸಿ ಎಷ್ಟೋ ಕುಟುಂಬಗಳನ್ನು ಶಾಶ್ವತ ಸಾಲದ ಜಾಲದಿಂದ ಉಳಿಸಿದರು. ಸಾಲ ಕೊಟ್ಟು ರೈತರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವ ಪದ್ಧತಿಯನ್ನು ಅಳಿಸಿದರು.

ಸ್ಟೋಕ್ಸರು ಭಾರತೀಯ ಹೆಸರನ್ನಿಟ್ಟುಕೊಂಡು 'ಸತ್ಯಾನಂದ' ರಾದರು. ತಮ್ಮಲ್ಲಿರುವುದನ್ನು ಸದಾ ಅಗತ್ಯವಿರುವವರಿಗೆ ಕೊಡುತ್ತಿದ್ದ ಅವರ ಹತ್ತರ ಯಾವಾಗಲೂ ಹಣವಿರುತ್ತಿರಲಿಲ್ಲ. ಆಗಾಗ ತಮ್ಮ ಸ್ನೇಹಿತರಿಂದ ಸಾಲ ಪಡೆಯುತ್ತಿದ್ದರು. ಒಮ್ಮೆ ಅವರ ಮಗ ಲಾಲಚಂದ ಮಿಠಾಯಿಗಾಗಿ ಹಣ ಕೇಳಿದಾಗ ಸತ್ಯಾನಂದರ ಬಳಿ ಏನೂ ಇರಲಿಲ್ಲ. ಅವರು ಅದೇ ಆಗ ಬಂಗಾಲ ಕ್ಷಾಮ ಪರಿಹಾರ ನಿಧಿಗೆ ೨೫,೦೦೦ ರೂಪಾಯಿಗಳನ್ನು ಕಳಿಸಿ ಬರಿಗೈಯವರಾಗಿದ್ದರು.

ಅನ್ನವಿಲ್ಲದವರಿಗೆ ಅನ್ನ, ಬಟ್ಟೆಯಿಲ್ಲದವರಿಗೆ ಬಟ್ಟೆ, ರೋಗಿಗಳಿಗೆ ಔಷಧಗಳನ್ನು ಸತ್ಯಾನಂದರು ಒದಗಿಸುತ್ತಿದ್ದರು. ಮನೆಮನೆಗೆ ಹೋಗಿ ರೋಗಿಗಳ ಆರೈಕೆ ಮಾಡುತ್ತಿದ್ದರು. ಬೆಳೆ ಬಾರದಿದ್ದಾಗ ಅವರ ಧಾನ್ಯದ ಉಗ್ರಾಣ ಸಕಲರಿಗೂ ತೆರೆದಿರುತ್ತಿತ್ತು. ಮನೆಯಲ್ಲಿ ಅವರು ಹನ್ನೆರಡು ಅನಾಥ ಮಕ್ಕಳನ್ನು ಸಾಕುತ್ತಿದ್ದರು.

ಕುಟುಂಬ ಬೆಳೆದಂತೆ ಹಳ್ಳಿಗರಿಗೆ ಸಹಾಯ ಮಾಡುವುದು ಅವರಿಗೆ ಕಠಿಣವಾಗತೊಡಗಲು ಹಳ್ಳಿಗರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಹೇಗೆ ಎಂದು ಯೋಚಿಸತೊಡಗಿದರು.

'ತಾರಾ' ಶಾಲೆಯಲ್ಲಿ ಹುಡುಗರಿಗೆ ಪುಸ್ತಕ ಜ್ಞಾನದೊಡನೆ ಔದ್ಯೋಗಿಕ ಶಿಕ್ಷಣವೂ ಸಿಗುವಂತೆ ಮಾಡಿದರು. ವಿದ್ಯಾರ್ಥಿಗಳು ನಿತ್ಯ ಹೊಲ-ತೋಟಗಳಲ್ಲಿ ಎರಡು ತಾಸು ದುಡಿಯುವಂತೆ ಮಾಡಿದರು.

ಕೋಟಗಡದಲ್ಲಿ ಸೇಬು ಹಣ್ಣಿನ ತೋಟ ಮಾಡುವ ವಿಚಾರ ಅವರಿಗೆ ಹೊಳೆಯಿತು. ಆ ವಿಷಯ ಅವರಿಗೆ ಏನೂ ಗೊತ್ತಿರಲಿಲ್ಲ. ಅಮೇರಿಕದ ತಮ್ಮ ಸ್ನೇಹಿತರಿಂದ ಆ ಬಗ್ಗೆ ಪುಸ್ತಕಗಳನ್ನು ತರಿಸಿಕೊಂಡು ಅಭ್ಯಾಸ ಮಾಡಿದರು. ಎರಡು ವರ್ಷಗಳಲ್ಲಿ ಸಾಕಷ್ಟು ಓದಿಕೊಂಡು ಆತ್ಮ ವಿಶ್ವಾಸದಿಂದ ಅವರು ಅಮೇರಿಕದಿಂದ ಬೀಜಗಳನ್ನು ತರಿಸಿ ಸೇಬು ಹಣ್ಣಿನ ತೋಟದ ರಚನೆಗೆ ಕೈಹಾಕಿದರು. ಹಳ್ಳಿಗರಿಗೆ ಪುಕ್ಕಟೆಯಾಗಿ ಬೀಜ ಕೊಟ್ಟಿದ್ದಲ್ಲದೆ ಸ್ವತಃ ಅವರ ಮನೆಗೆ ಹೋಗಿ ಅವನ್ನು ನೆಟ್ಟುಕೊಟ್ಟು ಬಂದರು.

ಬಡವರಾದರೂ ಕೋಟಗಡದ ಜನರಿಗೆ ಎರಡು ಹೊತ್ತು ಗಂಜಿ ಸಿಗುತ್ತಿತ್ತು. ಮುಂದೆ ಎಂದೋ ಫಲಕಾರಿಯಾಗಬಹುದಾದ ಸೇಬು ತೋಟದ ವಿಚಾರ ಅವರಿಗೆ ಅಷ್ಟಾಗಿ ಉತ್ಸಾಹ ತುಂಬಲಿಲ್ಲ. ಅವರ ಈ ಸ್ವಾಭಾವಿಕ ನಿರುತ್ಸಾಹವನ್ನು ಅರಿತು ಸತ್ಯಾನಂದರು ಅವರಲ್ಲಿ ಉತ್ಸಾಹ ತುಂಬುತ್ತ ಅವರೊಂದಿಗೆ ದುಡಿಯತೊಡಗಿದರು.

ಗಿಡಗಳು ಫಲ ಬಿಡತೊಡಗಿದಾಗ ಹಳ್ಳಿಗರ ಸಂದೇಹ ದೂರವಾಯಿತು. ಕೋಟಗಡ ಭೂಮಿ ಸೇಬು ಗಿಡಗಳಿಂದ ತುಂಬಿ ಹೋಯಿತು. ಇಂದು ೪೦ ವರ್ಷಗಳ ನಂತರ ಒಮ್ಮೆ ದರಿದ್ರ ಪ್ರದೇಶವಾಗಿದ್ದ ಕೋಟಗಡವು ವರ್ಷಕ್ಕೆ ಲಕ್ಷಗಟ್ಟಲೆ ರೂಪಾಯಿ ಬೆಲೆಯ ಸೇಬು ಹಣ್ಣನ್ನು ಬೆಳೆಯುವ ಪ್ರದೇಶವಾಗಿ ಪರಿಣಮಿಸಿದೆ. ಅಲ್ಲೀಗ ಬಡತನವೆಂಬುದಿಲ್ಲವೇ ಇಲ್ಲ.

*

ಕೋಟಗಡದ ದಾರಿದ್ರ್ಯ ನಿವಾರಣೆಗೆ ಯತ್ನಿಸುತ್ತಿರುವಾಗ ಸತ್ಯಾನಂದರು ಭಾರತದ ಸ್ವಾತಂತ್ರ್ಯ ಹೋರಾಟದತ್ತವೂ ಗಮನವಿತ್ತರು. ಅವರು ಅಖಿಲ ಭಾರತ ಕಾಂಗ್ರೆಸ್ಸಿನ ಸದಸ್ಯರಾದದ್ದಲ್ಲದೆ ಗಾಂಧೀಜಿಯ ಶ್ರದ್ಧಾವಂತ ಅನುಯಾಯಿಗಳಾದರು. ಸ್ವಾತಂತ್ರ್ಯ ಚಳವಳಿಯ ವಿಷಯವಾಗಿ ಭಾಷಣಗಳನ್ನಿತ್ತರು, ಲೇಖಗಳನ್ನು ಬರೆದರು, ಪಂಡಿತ ಮದನ ಮೋಹನ ಮಾಲವೀಯ, ರೆವರಂಡ್ ಸಿ. ಎಫ್.

ಅಂಡ್ರ್ಯೂಸರೊಂದಿಗೆ ಪೈಸರಾಯರೆದುರು ಕಾಂಗ್ರೆಸ್ಸಿನ ಅಭಿಪ್ರಾಯವನ್ನು ಮಂಡಿಸಿದರು. ಜೇಲಿನಲ್ಲಿ ತಮಗೆ ಕೊಡಮಾಡಿದ ಸವಲತ್ತುಗಳನ್ನು ನಿರಾಕರಿಸಿದರು.

ತಮ್ಮ ಗುರು ಗಾಂಧೀಜಿಯಂತೆ, ಕೋಟಗಡದಲ್ಲಿ ಭಾರತಿಯರಾಗಿ ಬಾಳುತ್ತಿದ್ದ ಈ ಅಮೇರಿಕನ್ ಮನುಷ್ಯ, ನುಡಿದಂತೆ ನಡೆಯುತ್ತಿದ್ದರು. ಖಾದಿವಾದಿಗಳಾದ ಅವರು ತಮ್ಮ ಪತ್ನಿ ಏಗ್ನಸ್ ನೂತ ನೂಲಿನ ಬಟ್ಟೆಗಳನ್ನೆ ಧರಿಸುತ್ತಿದ್ದರು. ಅವರ ತೇಪೆ ಹಚ್ಚಿದ ಕೋಟು ಪ್ಯಾಂಟುಗಳನ್ನು ಕಂಡ ಜನರು "ಏನು? ಒಂದೇ ಜತೆ ಇದೆಯೆ?" ಎಂದು ಕೇಳಿದಾಗ ಸ್ಟೋಕ್ಸರು ನಕ್ಕು "ನನಗೆ ಇರುವವಳು ಒಬ್ಬಳೇ ಒಬ್ಬ ಹೆಂಡತಿ. ಒಂದು ಸಲಕ್ಕೆ ಒಂದೇ ಕೋಟಿಗೆ ಸಾಲುವಷ್ಟು ನೂಲನ್ನು ಮಾತ್ರ ಅವಳು ತೆಗೆಯಬಲ್ಲಳು" ಎನ್ನುತ್ತಿದ್ದರು.

ತಮ್ಮ ಧ್ಯೇಯಸಿದ್ಧಿಯಾದ ಕಾಲವನ್ನು ನೋಡಲು ಸತ್ಯಾನಂದರು ಬದುಕುಳಿಯಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ದೊರೆಯಲು ಕೆಲವೇ ದಿನಗಳಿರುವಾಗ ಅವರು ನಿಧನ ಹೊಂದಿದರು. "ಸ್ಯಾಮ್ ಸ್ಟೋಕ್ಸ್ ಈಗ ಇದ್ದಿದ್ದರೆ ಮಂತ್ರಿಗಳಾಗುತ್ತಿದ್ದರು" ಎಂದು ಕೋಟಗಡದ ಜನ ಅನ್ನುವಾಗ ಆಶ್ಚರ್ಯವೇನಾಗುವುದಿಲ್ಲ.

ಆದರೆ ಸತ್ಯಾನಂದರು ಅತ್ಯಂತ ಸರಳ ಜೀವಿಯಾಗಿದ್ದರು. "ಜನ ನನ್ನನ್ನು ಹೊಗಳುವುದು ತಪ್ಪು. ರೇಡಿಯೊ ಎಂದರೆ ಧ್ವನಿಯ ಮೂಲಸ್ಥಾನ ಎಂದು ಹೇಳುವಂತೆಯೆ ಇದು. ರೇಡಿಯೊ ಕೇವಲ ಒಂದು ಮಾಧ್ಯಮ ಮಾತ್ರ. ನಿಜವಾದ ಮಹತ್ವವಿರುವುದು ಟ್ರಾನ್ಸ್‌ಮೀಟರಿಗೆ" ಎನ್ನುತ್ತಿದ್ದರವರು. ✶



ನಿರುಪಯುಕ್ತ ಮಾಹಿತಿ

✶ ವಿಶ್ವದಲ್ಲಿ ಹೆಚ್ಚು-ಕಡಿಮೆ ೩,೯೦೦ ಭಾಷೆಗಳಿದ್ದು, ಕೇವಲ ಯುರೋಪಿನಲ್ಲೇ ೬೦೦ ಭಾಷೆಗಳಿವೆ.

✶ ನೀಲ ತಿಮಿಂಗಲವು ಹುಟ್ಟುವಾಗಲೇ ೨೪ ಅಡಿ ಉದ್ದವಾಗಿರುತ್ತದೆ.

✶ ಸಿಂಹಕ್ಕೆ ಐದು ಮನುಷ್ಯರಷ್ಟು ಶಕ್ತಿಯಿದ್ದರೆ, ಹುಲಿಗೆ ಒಂಭತ್ತು ಮನುಷ್ಯರಷ್ಟು ಶಕ್ತಿಯಿದೆ.

✶ ಓರ್ವ ವ್ಯಕ್ತಿ ಹಗಲು-ರಾತ್ರಿ ಒಟ್ಟಿಗೆ ೨೦,೬೦೦ ಬಾರಿ ಶ್ವಾಸ ತೆಗೆದುಕೊಳ್ಳುತ್ತಾನೆ.

✶ ಕಲಿಯುಗದ ಆರಂಭವು ಇಂದಿಗಿಂತ ೫,೦೬೦ ವರ್ಷಗಳ ಮೊದಲು—ಅಂದರೆ ಭಾ. ಕ್ಯ. ೧೩ ಕ್ಕೆ ಪ್ರಾರಂಭವಾಯಿತು.

✶ ಟಿಬೆಟ್ಟಿನ ಜನರು ಪ್ರತಿದಿನ ಸರಾಸರಿ ೪೦ ಬಟ್ಟಲು ಚಹಾ ಕುಡಿಯುತ್ತಾರೆ.

—ಚಕ್ರಧಾರಿ

ಸಂಬಳ ಪಡೆಯುವ ಬೆಕ್ಕುಗಳು

ಮೂಲ: ಪೀಟರ್ ಲಾಯಿನ್
ಅನುವಾದ: ಬಳ್ಕೂರು ಸುಬ್ರಾಯ ಅಡಿಗ

ಬ್ರಿಟಿಶ್ ಮಂತ್ರಿಮಂಡಳದಲ್ಲಿ ಯಾವ ಮಂತ್ರಿಯೂ ತನ್ನ ವಿಭಾಗದಲ್ಲಿ ಯಾವುದೊಂದು ಗಲಭೆಗೂ ಸಾಮಾನ್ಯವಾಗಿ ಎಡೆಗೊಡುವುದಿಲ್ಲ. ಎಲ್ಲವೂ ಸ್ಪಷ್ಟವಾಗಿರುತ್ತದೆ; ಅಲ್ಲದೆ ಲಘು ಚರ್ಚೆಗೆ ಪಾರ್ಲಿಮೆಂಟಿನ ಗಂಭೀರ ವಾತಾವರಣದಲ್ಲಿ ಆಸ್ಪದ ಕಡಿಮೆ.

ಆದರೆ ಆರೇಳು ವರ್ಷಗಳ ಹಿಂದೆ ಒಮ್ಮೆ ಮಾತ್ರ ಅಸಿಸ್ಟೆಂಟ್ ಪೋಸ್ಟ್ ಮಾಸ್ಟರ್ ಜನರಲ್ ಡೇವಿಡ್ ಗುಮಾನ್ಸರು ಅಂತಹದೊಂದು ಪರಿಸ್ಥಿತಿಯನ್ನು ಎದುರಿಸಬೇಕಾಯಿತು.

ಮಂತ್ರಿಗಳು ರಾಜ್ಯದ ಅಂಚೆಶಾಖೆಯಲ್ಲಿ ಸಂಬಳ ಪಡೆಯುತ್ತಿರುವ ಬೆಕ್ಕುಗಳ ಕುರಿತು ಕೇಳಲ್ಪಟ್ಟ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತಿದ್ದರು. ಪ್ರಾಚೀನ ಕಾಲದಲ್ಲಿ ಪೋಸ್ಟ್ ಆಫೀಸುಗಳಲ್ಲಿ ಇಲಿ ಹೆಗ್ಗಣಗಳ ವಿಶೇಷ ಉಪಟಳವಿರುತ್ತಿತ್ತು. ಆಗ ಪ್ರತಿಯೊಂದು ಪೋಸ್ಟ್ ಆಫೀಸಿನಲ್ಲೂ ಬೆಕ್ಕುಗಳನ್ನು ಸಾಕಲು ಎಡೆಮಾಡಿಕೊಟ್ಟು ಇಲಿ ಹೆಗ್ಗಣಗಳ ಕಿರುಕುಳವನ್ನು ಹೋಗಲಾಡಿಸಲಾಯಿತು. ಆ ಬೆಕ್ಕುಗಳಿಗೆ ಒಂದು ರೀತಿಯ ವೇತನ ಕೂಡ ಸಿಗತೊಡಗಿತು. ಮುಂದೆ ಅಂಚೆಮನೆಗಳಲ್ಲಿ ಹೊಸ ವ್ಯವಸ್ಥೆಯನ್ನೇರ್ಪಡಿಸಿದುದರಿಂದ ಇಲಿಗಳ ತೊಂದರೆ ತಪ್ಪಿದರೂ ಪ್ರಾಚೀನ ಪರಂಪರೆಯೊಂದನ್ನು ಕಾಯ್ದಿರಿಸುವುದಕ್ಕಾಗಿಯೇ ಬೆಕ್ಕುಗಳನ್ನು ಸಾಕಿ

'ಗುಲದಸ್ತಾ' ದಿಂದ



ಅವಕ್ಕೆ ವೇತನ ಕೊಡುತ್ತ ಬಂದರು. ಅಂಚೆ ಮನೆಗಳು ಅಲ್ಲಿಯ ಕೆಲಸಗಾರರ ಸಂಬಳದೊಂದಿಗೆ ಬೆಕ್ಕುಗಳ ಭತ್ತೆಯನ್ನೂ ಪಡೆಯುತ್ತ ಬಂದವು.

ಈ ರೀತಿ ಬೆಕ್ಕುಗಳು ಸರಕಾರೀ ನೌಕರರೆಂದಾದುದರಿಂದ ಪಾರ್ಲಿಮೆಂಟ್ ಸದಸ್ಯರಿಗೆ ಆ ಬಗ್ಗೆ ಪ್ರಶ್ನೆ ಕೇಳುವ ಅಧಿಕಾರವಿದೆಯೆಂದಾಯಿತು. 'ಆ ಬೆಕ್ಕುಗಳು ತಾವು ಪಡೆಯುವ ಸಂಬಳಕ್ಕೆ ತಕ್ಕಂತೆ ಕೆಲಸ ಮಾಡುತ್ತಿವೆಯೆ? ಅವುಗಳ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತದೆಯೆ? ಅವುಗಳ ಸುಖಸೌಕರ್ಯಗಳ ಕಡೆ ಸರಕಾರದ ಗಮನವಿದೆಯೆ? ಆ ಬೆಕ್ಕುಗಳು ನಿರುಪಯೋಗಿಯೆಂದಾದರೆ ಈ ರೀತಿ ಸರಕಾರೀ ಹಣವನ್ನು ಪೋಲು ಮಾಡುವುದು ಸರಿಯೆ?'— ಎಂದೆಲ್ಲ ಪ್ರಶ್ನೆ ಕೇಳಲಾಯಿತು.

ಈ ಬೆಕ್ಕುಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಶ್ರೀ ಗುಮಾನ್ಸರು ನಿಸ್ಸಂಕೋಚವಾಗಿ ಒಪ್ಪಿಕೊಂಡರು. ಅವುಗಳಿಗೆ ಸಿಗುವ ಸಂಬಳದ ಪ್ರಮಾಣದಲ್ಲಿ ಸಾಕಷ್ಟು ಅಂತರವಿದೆಯೆಂದೂ ಬಹುಶಃ ಈ ಅಂತರವು ಅವುಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಮೊದಲೇ ನಿರ್ಧರಿಸಲ್ಪಟ್ಟಿರಬೇಕೆಂದೂ ಅವರು ತಿಳಿಸಿದರು.

'ಈಗ, ಬೆಕ್ಕುಗಳ ಕೆಲಸಕ್ಕೆ ಅನುಗುಣವಾಗಿ ವೇತನವನ್ನು ನಿರ್ಧರಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಅಸಂಭವ. ರಾಜ್ಯದ ಈ ಕೆಲಸಗಾರರು ತಮ್ಮ ಕರ್ತವ್ಯವನ್ನು ಕಡೆಗಣಿಸುತ್ತಿದ್ದಾರೆ. ಮತ್ತು ಕೆಲವೊಮ್ಮೆ ಬಹು ದಿನಗಳವರೆಗೆ ಆಫೀಸಿಗೇ ಹಾಜರಾಗುವುದಿಲ್ಲ'— ಎಂದು ಶ್ರೀ ಗುಮಾನ್ಸರು ಉತ್ತರಿಸಿದರು.

ಸರಕಾರೀ ಬೆಕ್ಕುಗಳಿಗೆ ಕೊಡುತ್ತಿರುವ ಸಂಬಳದ ವಿವರವನ್ನು ನೀಡುತ್ತ ಅವರು ಹೀಗೆಂದರು— '೧೯೧೮ ರಿಂದ ಅವುಗಳ ಭಡ್ತಿಯನ್ನು ತಡೆಹಿಡಿಯಲಾಗಿದೆ. ಅಂದಿನಿಂದ ಇದು ತನಕ ಅಷ್ಟೇ ಸಂಬಳವನ್ನು ಕೊಡಲಾಗುತ್ತಿದೆ. ಆದರೆ ಈ ವರೆಗೆ ಅಂದರೆ ಸುಮಾರು ೪೩ ವರ್ಷಗಳ ಈ ದೀರ್ಘಾವಧಿಯಲ್ಲಿ ಯಾರೊಬ್ಬರೂ ಈ ಕುರಿತು ಪ್ರಶ್ನೆ ಕೇಳಿದುದಿಲ್ಲ; ಆಕ್ಷೇಪವೆತ್ತಿದುದೂ ಇಲ್ಲ. ಲಂಡನ್ನಿನ ಹೆಡ್ ಪೋಸ್ಟ್ ಆಫೀಸಿನ ಬೆಕ್ಕುಗಳಿಗೆ ಮಾತ್ರ ವರ್ಷ ವರ್ಷವೂ ಭಡ್ತಿ ಕೊಡಲಾಗುತ್ತಿದೆ. ಅಲ್ಲಿಯ ಬೆಕ್ಕುಗಳು ಇತರ ಸಾಮಾನ್ಯ ಆಫೀಸುಗಳ ಬೆಕ್ಕುಗಳಿಗಿಂತ ಮೇಲ್ಮಟ್ಟದವೆಂಬ ಗೌರವದ್ಯೋತಕವಾಗಿ ಇದನ್ನು ಮಂಜೂರು ಮಾಡಲಾಗಿದೆ.'

ಈ ಮನೋರಂಜಕ ಪ್ರಶ್ನೋತ್ತರದಿಂದ ಪಾರ್ಲಿಮೆಂಟಿನ ವಾತಾವರಣವು ಸಾಕಷ್ಟು ವಿನೋದಕರವಾಯಿತು. ಮತ್ತು ಸಂಬಳದ ಭಡ್ತಿಯನ್ನು ನಿಲ್ಲಿಸಿದುದಕ್ಕಾಗಿ ಕೃತ್ರಿಮ ಕೋಪ ಪ್ರದರ್ಶಿಸುತ್ತಾ ಸದಸ್ಯರೆಲ್ಲ ಪ್ರಶ್ನಿಸತೊಡಗಿದರು. . . .

'ಬೆಕ್ಕುಗಳ ಕುಟುಂಬ ಪೋಷಣೆಗಾಗಿಯೂ ಭತ್ತೆ ಕೊಡಲಾಗುತ್ತದೆಯೆ?'— ಎಂದೊಬ್ಬರು ಪ್ರಶ್ನಿಸಿದರೆ 'ಅವುಗಳಿಗೆ ಹೆರಿಗೆ ಕಾಲದಲ್ಲಿ ಏನಾದರೂ ವಿಶೇಷ ಸೌಕರ್ಯವೊದಗಿಸಲಾಗುತ್ತದೆಯೆ?' ಎಂದು ಮತ್ತೊಬ್ಬರು ಪ್ರಶ್ನಿಸಿದರು. ಮಹಿಳೆಯರ ಹಿತಸಂರಕ್ಷಣೆಯ ಹೊಣೆ ಹೊತ್ತುಕೊಂಡ ಸದಸ್ಯೆ ಇರೆನೀ ವಾರ್ಡಳು 'ಗಂಡು ಹೆಣ್ಣು ಬೆಕ್ಕುಗಳಿಗೆ ಸಮಾನ ವೇತನ ಕೊಡಲಾಗುತ್ತಿದೆಯೆ? ಅಥವಾ ಅಲ್ಲಿಯೂ ಅಂತರವಿದೆಯೆ?' ಎಂಬುದನ್ನು ತಿಳಿಯಲಿಚ್ಛಿಸಿದಳು.

ಇವೆಲ್ಲವನ್ನೂ ಉತ್ತರಿಸುತ್ತ ಗುಮಾನ್ಸರೆಂದರು— 'ಸಿದ್ಧಾಂತ ರೂಪದಲ್ಲಷ್ಟೇ ಅಲ್ಲ-ವ್ಯಾವಹಾರಿಕವಾಗಿಯೂ ಹೆಣ್ಣು ಗಂಡುಗಳಿಗೆ ಸಮಾನ ವೇತನವನ್ನೇ ಕೊಡಲಾಗುತ್ತದೆ. ಸರಕಾರೀ ಬೆಕ್ಕುಗಳನ್ನು ಸರಿಯಾಗಿಯೇ ಸಾಕಲಾ

ಗುತ್ತಿದೆ. ಅವುಗಳಿಗೆ ಎಲ್ಲ ರೀತಿಯ ಸೌಕರ್ಯ ಗಳನ್ನೊದಗಿಸಲಾಗುತ್ತಿದೆ. ಈ ಕುರಿತು ಇನ್ನೂ ಹೆಚ್ಚು ಹೆಚ್ಚು ವಿಮರ್ಶಿಸುವುದು ಆ ಬೆಕ್ಕುಗಳ ಬಗೆಗಾಗಲೀ ಅವುಗಳ ಕುರಿತು ವಿಶ್ವಾಸಾದರ ಗಳನ್ನು ಪ್ರದರ್ಶಿಸುವ ಜನತೆಯ ಬಗೆಗಾಗಲೀ ಹಿತಕಾರಿಯಲ್ಲ. ಅವುಗಳಿಗಾಗಿ ಆಗುವ ವೆಚ್ಚ ವೂ ಅತ್ಯಲ್ಪ. ಅದನ್ನು ಅಂಚೆ ಖಾತೆಯ ಆಕ ಸ್ಮಿಕ ಖರ್ಚಿನ ವಿಭಾಗಕ್ಕೆ ಸೇರಿಸಲಾಗು ತ್ತಿದೆ.'

ಆಂಗ್ಲರು ಬೆಕ್ಕುಗಳನ್ನು ತುಂಬ ಪ್ರೀತಿಸು ತ್ತಾರೆ. ಅವರಲ್ಲಿ ಸುಮಾರು ೬೦ ಲಕ್ಷಕ್ಕೂ ಮೇಲ್ಪಟ್ಟು ಬೆಕ್ಕುಗಳಿವೆ. ಸರಕಾರದ ಕಡೆಯಿಂದ ಬೆಕ್ಕುಗಳನ್ನು ಸಾಕುವ ಪರಂಪರೆ ಸುಮಾರು ಒಂದು ಸಾವಿರ ವರ್ಷಗಳಿಗಿಂತಲೂ ಪುರಾತನ ವಾದುದು. ಹಾವೆಲ್ ದಿ ಗುಡ್ ಎಂಬ ವೇಲ್ಸ್ ಮುಖಂಡನೊಬ್ಬನು ಬೆಕ್ಕುಗಳ ರಕ್ಷಣೆಗಾಗಿ ಒಂದು ಕಾಯದೆಯನ್ನು ಮಾಡಿದಂದಿನಿಂದ ಇದು ಬಳಕೆಗೆ ಬಂತು.

ಬ್ರಿಟನ್ನಿನ ಮೇಲೆ ನಾಜಿಗಳು ದಾಳಿಯಿಟ್ಟಾಗ ಈ ಬೆಕ್ಕುಗಳು ಮನುಷ್ಯರ ಉಪಕಾರವನ್ನು ಸ್ವಲ್ಪ ಮಟ್ಟಿಗೆ ತೀರಿಸಿದವು. ಬಾಂಬಿನ ದಾಳಿ ಯಿಂದ ನೆಲಸಮ ಹೊಂದಿದ ಮನೆಗಳಿಂದ ಅಸಂಖ್ಯಾತ ಇಲಿಗಳು ಬೇರೆಡೆಗೆ ಹೋಗಿ ಸೇರಿ ಕೊಳ್ಳತೊಡಗಿದವು. ಅವು ಹಾಗೆಯೇ ಸೇರಿ ಕೊಂಡಿದ್ದರೆ ಜನತೆಗೆ ಅಪಾರ ಹಾನಿ ಉಂಟಾ ಗುತ್ತಿತ್ತು. ಅಂಥ ವೇಳೆಯಲ್ಲಿ ಈ ಬೆಕ್ಕುಗಳು ಅವನ್ನೆಲ್ಲ ನಿರ್ನಾಮ ಮಾಡಿ ಜನತೆಗೆ ಉಪ ಕಾರವೆಸಗಿದವು.

ಬೆಕ್ಕುಗಳಿಗೆ ಈ ಮೊದಲಿನ ಗೌರವಾದರಗಳು ದೊರೆಯುತ್ತಿಲ್ಲವಾದರೂ ಬ್ರಿಟನಿನ ಪುರಾತನ ಪರಂಪರೆಗನುಸಾರವಾಗಿ ಬೆಕ್ಕುಗಳ ಸ್ಥಾನ ಇಂದಿಗೂ ಸುರಕ್ಷಿತವಾಗಿದೆ. ಹಿಂದಿನ ಕಾಲದಲ್ಲಿ ಅವುಗಳ ಅಗತ್ಯವಿದ್ದಷ್ಟು ಈಗಿಲ್ಲವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ವೆಸ್ಟ್‌ಮಿನಿಸ್ಟರ್ ಅರಮನೆಯನ್ನು ಕಾಯುವ ಪೋಲೀಸ್ ತಂಡವು ಇಂದಿಗೂ ಅಲ್ಲಿನ ಅಳಿದುಳಿದ ಬೆಕ್ಕುಗಳ ಬಗ್ಗೆ ವಿಶೇಷ ಭಕ್ತಿ ಆದರಗಳನ್ನು ಪ್ರದರ್ಶಿಸುತ್ತಿದೆ. 'ಮೊದಲನೇ ಮಿನ್ನಿ' ಎಂಬ ಬೆಕ್ಕಿನ ಮಗಳಾದ 'ಎರಡನೇ ಮಿನ್ನಿ' ಯ ಕಥೆಯನ್ನು ನಾನು ಕೇಳಿ ದ್ದೇನೆ. ವೆಸ್ಟ್‌ಮಿನಿಸ್ಟರ್ ಅರಮನೆಗೆ ಬಂದ ಬೆಕ್ಕುಗಳಲ್ಲಿ ಎರಡನೇ ಮಿನ್ನಿಯೇ ಹೆಚ್ಚು ಆಶ್ಚರ್ಯಕರವಾದುದೆಂದು ತೋರುತ್ತದೆ. ಲಾರ್ಡ್ಸ್ ಸಭೆಯ ಅಧಿವೇಶನ ಜರುಗುತ್ತಿದ್ದಾ ಗೆಲ್ಲ ಅದು ತಪ್ಪದೆ ಅಧಿವೇಶನದ ಕಾರ್ಯ ಕಲಾಪಗಳನ್ನೀಕ್ಷಿಸಲು ಓಡೋಡಿ ಬರುತ್ತಿತ್ತಂತೆ! ಆದರೆ ತನ್ನ ಮರಿಗಳಿಗೆ ಇಲಿಗಳನ್ನು ಹಿಡಿಯುವ ಕಲೆ ಕಲಿಸುವುದರಲ್ಲೇ ಅದರ ಸಂಪೂರ್ಣ ಕೌಶಲ್ಯ ವ್ಯಕ್ತವಾಗುತ್ತಿತ್ತೆಂದು ಪ್ರತ್ಯಕ್ಷದರ್ಶಿ ಗಳ ಹೇಳಿಕೆ. ಎರಡನೇ ಮಿನ್ನಿಯ ಮರಿಗಳು ಇಲಿ ಬೇಟೆಯಲ್ಲಿ ಅದೆಷ್ಟು ಕುಶಲವಾಗಿದ್ದ ವೆಂದರೆ ಪ್ರಪಂಚದ ಮೂಲೆ ಮೂಲೆಯಿಂದಲೂ ಅವಕ್ಕೆ ಬೇಡಿಕೆ ಬರತೊಡಗಿತು.

ಆದರೆ ಪತ್ರಿಕೆಗಳ ಸುದ್ದಿಗಾರರು ವೆಸ್ಟ್‌ ಮಿನಿಸ್ಟರ್ ಅರಮನೆಯ ಪೋಲೀಸರೊಡನೆ ಏನಾದರೂ ವಿವರಣೆ ಕೇಳಿದರೆ, ಅವರು ವಿಶೇಷ ಜಾಗರೂಕರಾಗುತ್ತಾರೆ. ಈ ಬೆಕ್ಕುಗಳನ್ನು ಯಾರಾದರೂ ಒಯ್ದಾರೆಂಬ ಭಯದಿಂದ ಅವನ್ನು ಅವರು ಬಹು ಎಚ್ಚರದಿಂದ ಅಡಗಿಸಿಡು ತ್ತಾರಂತೆ!

*



ಎಲ್ಲ ಚಿಕಿತ್ಸಾ ಪದ್ಧತಿಗಳ ತತ್ತ್ವ ಇದರಲ್ಲಿದೆ

ಆಯುರ್ವೇದದಲ್ಲಿ ಗುಣವಿಲ್ಲವೆ?

ಪಂಡಿತ ಶಿವಶರ್ಮ

೩೦ ದಿನ ಸುಧಾರಿಸಿದ ವೈದ್ಯಕೀಯ ಚಿಕಿತ್ಸೆಯ ಎಲ್ಲ ಸಾಧನೆಗಳು ವಿಫಲವಾದ ಮೇಲೆ ನಿರಾಶಳಾದ ಯುರೋಪಿಯನ್ ಶ್ರೀಮಂತ ರೋಗಗ್ರಸ್ತ ಮಹಿಳೆಯೊಬ್ಬಳು ಭಾರತಕ್ಕೆ ಬಂದು ಆಯುರ್ವೇದಿಕ್ ಚಿಕಿತ್ಸೆ ಪಡೆದು ಪೂರ್ಣ ಗುಣವಾಗಿ ಮರಳಿ ತನ್ನ ತಾಯ್ನಾಡಿಗೆ ಹೋದ ವೃತ್ತಾಂತ ಓದುಗರಿಗೆ ನಿಸ್ಸಂದೇಹವಾಗಿ ಹಿಡಿಸೀತು. ಶ್ರೀಮತಿ ವಿ. ಓ. ಅವರು ಇದೇ ವರ್ಷ ಕೆಳಗೆ ಕಾಣಿಸಿಡ ರೋಗ ಲಕ್ಷಣಗಳುಳ್ಳವರಾಗಿ ಭಾರತಕ್ಕೆ ಬಂದರು. ಮೂರು ವರ್ಷಗಳಿಂದ ಅವರ ನರಗಳು ದುರ್ಬಲವಾಗಿದ್ದವು. ನಿದ್ದೆ ಹತ್ತುತ್ತಿರಲಿಲ್ಲ. ಶಾರೀರಿಕ ವ್ಯಥೆಯಿಂದ ಬಳಲಿ ಅವರು ಚಿಂತೆಗೊಳಗಾಗಿದ್ದರು. ಅವರು ಯುರೋಪಿನ ಪ್ರಸಿದ್ಧ ಡಾಕ್ಟರರಿಂದ ಪರೀಕ್ಷಿಸಿಕೊಂಡರು. ಡಾಕ್ಟರರು ಅವರಿಗೆ "ಸೆರೆಟ್ರ್ಯೂಜಿವ್ ಟ್ರ್ಯಾಂಕ್ಯುಲ್ಯಾಜರ್ಸ" ಔಷಧಿಗಳನ್ನು ಕೊಡತೊಡಗಿದರು. ಮೊದಮೊದಲು ಸ್ವಲ್ಪ ಗುಣವಾದಂತೆನಿಸಿತು. ಆದರೆ ಬರಬರುತ್ತಾ ನರಗಳನ್ನು ಸಾಂತ್ವನಗೊಳಿಸುವ ಮತ್ತು ನಿದ್ದೆ ಬರಿಸುವ ಗುಳಿಗೆಗಳನ್ನು ನುಂಗುವ ಅಭ್ಯಾಸ ಬಿದ್ದುಬಿಟ್ಟಿತು. ಮುಂದೆ ಮುಂದಂತೂ ಔಷಧಗಳ ಪ್ರಭಾವವು ಮಂದವಾಗತೊಡಗಲು ಶ್ರೀಮತಿಯವರು ಮನೋವಿಜ್ಞಾನಿಗಳಲ್ಲಿ ಚಿಕಿತ್ಸೆ ಹೊಂದಲಾರಂಭಿಸಿದರು. ಹಣ ಹೋಯಿತೇ ವಿನಾ ಮನಸ್ಸಿಗೆ ಸ್ವಾಸ್ಥ್ಯ ಬರಲಿಲ್ಲ. ಔಷಧಿಯ ಪ್ರಮಾಣ ಹೆಚ್ಚಿಸಿದರೂ ಉಪಯೋಗವಾಗದಂತಾಯಿತು. ನಿದ್ದೆ ಬರುತ್ತಿರಲಿಲ್ಲ; ಆದರೆ ಗುಳಿಗೆಗಳನ್ನು ಮಾತ್ರ ಸೇವಿಸಬೇಕಾಗುತ್ತಿತ್ತು. ಒತ್ತಟ್ಟಿಗೆ ಬೇಸರ, ಒತ್ತಟ್ಟಿಗೆ ಭಯ ಹೀಗಾಗಿ ಅವರ ಮಿದುಳಿನ ಮೇಲೆ ಪರಿಣಾಮವಾಗತೊಡಗಿತು. ತಾನು ಹುಚ್ಚಿಯಾಗಬಹುದೆಂಬ ಭೀತಿ ತಲೆದೋರಿತು.

ಇಂಥ ಅವಸ್ಥೆಯಲ್ಲಿ ಅವರು ಆಯುರ್ವೇದಿಕ್ ಚಿಕಿತ್ಸೆಯನ್ನು ಪ್ರಾರಂಭಿಸಿದರು. ಆಗ ಮೊದಲಿನ ಔಷಧಿಗಳನ್ನು ಪೂರ್ತಿ ನಿಲ್ಲಿಸಲಾಯಿತು. ಉತ್ತೇಜಕ ಮತ್ತು ತಾಮಸಿಕವಾದ ಆಹಾರ ಸೇವನೆಯನ್ನೂ ನಿಲ್ಲಿಸಿಬಿಟ್ಟರು. ರಸಾಯನ ಚಿಕಿತ್ಸೆಯನ್ನು ಪ್ರಾರಂಭಿಸಲಾಯಿತು. ನೆತ್ತಿಯ ಮೇಲೆ ಮಜ್ಜಿಗೆಯನ್ನು ಸುರಿಯುವ ಕ್ರಮ ಪ್ರಾರಂಭಿಸಿದ್ದಾಯಿತು. ಇಪ್ಪತ್ತೇ ದಿನಗಳಲ್ಲಿ ಶ್ರೀಮತಿಯವರು ತಾಯ್ನಾಡಿಗೆ ತೆರಳಲು ಯೋಗ್ಯರಾದರು. ಅಲ್ಲಿ ಹೋಗಿ ಒಂದು-ಒಂದೂವರೆ ತಿಂಗಳ ತರುವಾಯ ಭಾರತೀಯ ಆಯುರ್ವೇದ ಪದ್ಧತಿ ತಮಗೆ ಮಾಡಿದ ಉಪಕಾರಕ್ಕಾಗಿ ಕೃತಜ್ಞತಾಪೂರ್ಣವಾದ ಒಂದು ಪತ್ರವನ್ನು ಬರೆದರು. ಪರಕೀಯರನ್ನು ಈ ರೀತಿ

"ಧರ್ಮಯುಗ" ದಿಂದ

ಆಕರ್ಷಿಸಿ ಗುಣಪಡಿಸಿ ಕಳಿಸುವ ಬೇರಾವ ಪದ್ಧತಿ ಭಾರತದಲ್ಲಿ ಇಲ್ಲವೆಂದರೆ ಅತಿಶಯೋಕ್ತಿಯಲ್ಲ.

ರೋಗದಿಂದ ಮುಕ್ತರಾಗಿರಬೇಕೆಂಬುದೇ ಪ್ರತಿಯೊಬ್ಬರ ಇಚ್ಛೆ. ಯತ್ನ. ಈ ದಾರಿಯಲ್ಲಿ ಯಾವ ಚಿಕಿತ್ಸಾ ಪದ್ಧತಿಯನ್ನು ಅನುಸರಿಸಬೇಕು ಎಂಬ ಪ್ರಶ್ನೆ ಪ್ರತಿಯೊಬ್ಬರ ಮುಂದೂ ಇದ್ದೇ ಇದೆ. ಹೋಮಿಯೋಪಥಿ (ಸಮಾನ ಔಷಧಿಯಿಂದ ಗುಣಪಡಿಸುವುದು), ಎಲೊಪಥಿ (ವಿರುದ್ಧ ಔಷಧಗಳಿಂದ ಗುಣಪಡಿಸುವುದು) ನ್ಯಾಚುರೋಪಥಿ (ನೈಸರ್ಗಿಕ ಚಿಕಿತ್ಸೆ) ಮುಂತಾದ ಕೆಲವು ಚಿಕಿತ್ಸಾ ಪದ್ಧತಿಗಳು ರೋಗಿಗೆ ಎಳ್ಳಷ್ಟೂ ಹಾನಿ ತಗಲದಂತೆ ಅಥವಾ ತುಲನಾತ್ಮಕವಾಗಿ ಕಡಿಮೆ ಹಾನಿ ತಗಲುವಂತೆ ಗುಣಪಡಿಸುವಂಥವೆಂದರೆ ತಾವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತವೆ. ಈ ಪ್ರಣಾಲಿಗಳ ಸಾಹಿತ್ಯ (ಮಾಸಪತ್ರಿಕೆ, ಅಧ್ಯಕ್ಷೀಯ ಭಾಷಣ, ಬೇರೆ ಪತ್ರಿಕೆಗಳಲ್ಲಿ ಬರುವ ತತ್ಸಂಬಂಧದ ಲೇಖನಗಳು ಇತ್ಯಾದಿ) ಗಳಲ್ಲಿ ಬೇರೆ ಪದ್ಧತಿಗಳ ದೋಷಗಳನ್ನೂ ತಮ್ಮ ಉತ್ಕೃಷ್ಟತೆಯನ್ನೂ ಸಾರುವ ಪ್ರಯತ್ನವಿರುತ್ತದೆ. ಹೋಮಿಯೋಪಥಿ ಇಲ್ಲವೆ ನ್ಯಾಚುರೋಪಥಿಯ ಯಾವುದೇ ಮಾಸಪತ್ರಿಕೆಯನ್ನೆತ್ತಿ ನೋಡಿದರೆ ಅದರಲ್ಲಿ ಎಲೊಪಥಿಯು ಎಷ್ಟು ಹಾನಿಕರವಾಗಿದೆ ಎಂಬ ವರ್ಣನೆಯ ಇರುತ್ತದೆ. ಎಲೋಪಥಿಯವರಂತೂ ಎಲ್ಲರಿಗಿಂತ ಒಂದು ಕೈ ಮೇಲು. ಅವರೆಲ್ಲ ತಮ್ಮ ಪದ್ಧತಿಯೆ ಶ್ರೇಷ್ಠ; ಉಳಿದವು ಕನಿಷ್ಠ; ಆದ್ದರಿಂದ ಅವಕ್ಕೆ ಎಲ್ಲೆಲ್ಲಿಯೂ ಸ್ಥಾನವಿರಕೂಡದು; ಭಾರತ ಸರಕಾರ ಉಳಿದ ಚಿಕಿತ್ಸಾ ಪ್ರಣಾಲಿಗಳನ್ನು ಕಾನೂನಿಂದ ತಡೆಗಟ್ಟಬೇಕೆಂದು ಬರೆಯುತ್ತಾರೆ. "ಇಂಡಿಯನ್ ಮೆಡಿಕಲ್ ಕೌನ್ಸಿಲ್" ಮತ್ತು "ಆಲ್ ಇಂಡಿಯಾ ಮೆಡಿಕಲ್ ಕಾನ್ಫರನ್ಸ್" ಗಳು ಭಾರತ ಸರಕಾರದ ಕಡೆಗೆ ಈ ಬಗೆಯ ವಿಜ್ಞಾಪನಾಪತ್ರಗಳನ್ನು ಹಲವಾರು ಬಾರಿ ಕಳಿಸಿವೆ. ಆದರೆ ಈ ವರ್ಷದ "ಆಲ್ ಇಂಡಿಯಾ ಮೆಡಿಕಲ್ ಕಾನ್ಫರನ್ಸಿ"ನ ಅಧ್ಯಕ್ಷೀಯ ಭಾಷಣವಂತೂ ತೀರ ವಿಚಿತ್ರವಾಗಿತ್ತು. "ಯಾವುದೇ ಬೇರೆ ಚಿಕಿತ್ಸಾ ಪದ್ಧತಿಯನ್ನು ಅನುಸರಿಸುವ ಯಾವ ಮರಣೋನ್ಮುಖ ವ್ಯಕ್ತಿಗೂ ಎಲೊಪಥಿಕ್ ಚಿಕಿತ್ಸೆ ಸಿಗಕೂಡದು" ಎಂದು ಅದರಲ್ಲಿ ಹೇಳಲಾಗಿತ್ತು.

ಎಲ್ಲಕ್ಕೂ ಶ್ರೇಷ್ಠವಾದ ಚಿಕಿತ್ಸಾ ಪ್ರಣಾಲಿ ಇದೇ ಎಂದು ಹೇಳುವುದು ಯಾರಿಂದಲೂ ಸಾಧ್ಯವಿಲ್ಲ. ಆದರೂ ಆಯುರ್ವೇದ ಪ್ರಣಾಲಿಯ ಅನುಯಾಯಿಗಳನ್ನು ಉಳಿದವರು ಗೌರವದಿಂದೇ ಕಾಣಬೇಕಾಗುವುದು. ಒಬ್ಬರನ್ನೊಬ್ಬರು ತೆಗಳುವಾಗ ಭಿನ್ನ ಭಿನ್ನ ಪ್ರಣಾಲಿಯವರು ಒಂದು ಬಗೆಯಲ್ಲಿ ಆಯುರ್ವೇದವನ್ನೇ ತೆಗಳಿದಂತಾಗುವುದು. ಏಕೆಂದರೆ ಉಳಿದೆಲ್ಲ ಪ್ರಣಾಲಿಗಳ ವೈಶಿಷ್ಟ್ಯಗಳು ಆಯುರ್ವೇದದಲ್ಲಿ ಮೊದಲೇ ಸಂಗ್ರಹಿತವಾಗಿವೆ. ಆದ್ದರಿಂದ ತೆಗಳುವುದೆಂದರೆ ಶಾಸ್ತ್ರವನ್ನೇ ನಂಬದಿದ್ದಂತೆ! ಉಳಿದವುಗಳಿಗಿಂತ ಆಯುರ್ವೇದ ಯಾಕೆ ಶ್ರೇಷ್ಠವೆಂದರೆ ಇದು ಚಿಕಿತ್ಸಾ ಸಿದ್ಧಾಂತಗಳನ್ನೊಳಗೊಂಡು ತುಂಬ ವ್ಯಾಪಕವಾಗಿದೆ.

"ಹೇತುವ್ಯಾಧಿವಿಪರ್ಯಸ್ತ ವಿಪರ್ಯಸ್ತಾರ್ಥಕಾರಿಣಾಮ್। ಔಷಧಾನ್ನ ವಿಹಾರಾಣಾಮುಪಯೋಗೇ ಸುಖಾವಹಂ॥ ವಿದ್ಯಾದುಪಶಯಂ ವ್ಯಾಧೇಃ।"

ಮೇಲಿನ ವಿವರದ ತಥ್ಯ ಈ ಶ್ಲೋಕದಲ್ಲಿದೆ. ಎಲ್ಲ ಸಿದ್ಧಾಂತಗಳ ಸಮನ್ವಯದಿಂದ ರೋಗದ ಉಪಶಯ (ಚಿಕಿತ್ಸೆ) ಸಾಧ್ಯವೆಂದು ಇದು ಹೇಳುತ್ತದೆ. ಇದನ್ನು ಮೀರಿ ನಿಲ್ಲುವ ಚಿಕಿತ್ಸೆ ಹಿಂದೂ ಇರಲಿಲ್ಲ, ಮುಂದೂ ಇರಲಾರದು. ಎಂದೇ ಚರಕನು ಹೇಳುವುದೇನೆಂದರೆ "ಯದಿ

ಹಾಸ್ತಿತದನ್ಯತ್ರ ಯನ್ನೇಹಾಸ್ತಿ ನ ತತ್ಕ್ವಚಿತ್" (ಇಲ್ಲಿ ಇದ್ದುದು ಎಲ್ಲೆಡೆ ಇದೆ ಇಲ್ಲಿ ಇಲ್ಲದ್ದು ಎಲ್ಲಿಯೂ ಇಲ್ಲ) ಎಂದು.

ಪ್ರಾಚೀನ ಆಯುರ್ವೇದಾಚಾರ್ಯರು ತಾವು ಪರಿಪೂರ್ಣರು ಎಂದು ಎಂದಿಗೂ ಗರ್ವಿತರಾಗಿರಲಿಲ್ಲ. ಮೇಲೆ ಚರಕನು ಹೇಳಿರುವ ಮಾತು ಚಿಕಿತ್ಸೆಯ ಮೂಲ ಸಿದ್ಧಾಂತಗಳ ಮಟ್ಟಿಗೆ ಮಾತ್ರ ಸೀಮಿತವಾಗಿದೆ. ಪ್ರತಿ ಸಿದ್ಧಾಂತವೂ ಈ ಸೀಮೆಯನ್ನು ಮೀರಿ ತನ್ನ ವಿಕಾಸವನ್ನು ಮಾಡಬಹುದು; ಮತ್ತು ಮಾಡುತ್ತದೆ ಎಂದು ಚರಕನೇ ಇನ್ನೊಂದು ಕಡೆ ಹೇಳಿದ್ದಾನೆ. ಉದಾಹರಣೆಗೆ, ರೋಗೋತ್ಪಾದಕ ಕ್ರಿಮಿಗಳ ಬಗ್ಗೆ ಹೇಳಿದ ಮಾತು "ಸೌಕ್ಷ್ಮ್ಯಾದ್ ಭವಂತ್ಯದೃಶ್ಯಾಃ" (ಸೂಕ್ಷ್ಮವಾದದ್ದರಿಂದ ಕಣ್ಣಿಗೆ ಕಾಣದು) ಎಂದು ಸಾಂಕ್ರಾಮಿಕ ರೋಗಾಣುಗಳ ಕಾರ್ಯವನ್ನು ಸುಶ್ರುತನು (ಕ್ರಿ. ಶ. ಪೂ. ೧೦೦೦) ಸ್ಪಷ್ಟವಾಗಿ ವಿವರಿಸಿದ್ದಾನೆ:

" ಪ್ರಸಂಗಾತ್ ಗಾತ್ರ ಸಂಸ್ಪರ್ಶಾತ್ ಸಂಯೋಗಾತ್ ಸಹಭೋಜನಾತ್ ।
ಸಹಶೈಯಾಸನಾಚ್ಚಾಪಿ ವಸ್ತ್ರಮಾಲ್ಯಾನುಲೇಪನಾತ್ ॥
ಕುಷ್ಠಂ ಜ್ವರಶ್ಚ ಶೋಷಶ್ಚ ನೇತ್ರಾಭಿಷ್ಯಂದ ಏವ ಚ ।
ಔಪಸರ್ಗಿಕ ರೋಗಾಶ್ಚ ಸಂಜಾಯಂತೇ ನರಾನ್ನರಂ ॥

(ಸಂಸರ್ಗ, ಗಾತ್ರಸ್ಪರ್ಶ, ಸಂಯೋಗ, ಸಹಭೋಜನ, ಒತ್ತಟ್ಟಿಗೆ ಮಲಗುವುದು, ಕೂಡವುದು, ಪರಸ್ಪರ ವಸ್ತ್ರ, ಮಾಲ್ಯ, ಅನುಲೇಪನಗಳನ್ನು ಉಪಯೋಗಿಸುವುದು—ಇವುಗಳಿಂದ ಚರ್ಮರೋಗ, ಜ್ವರ, ಯಕ್ಷ್ಮ, ಕಣ್ಣುಬೇನೆ ಮತ್ತು ಬೇರೆ ಔಪಸರ್ಗಿಕ ಬೇನೆಗಳು ಒಬ್ಬರಿಂದ ಇನ್ನೊಬ್ಬರಿಗೆ ಹಬ್ಬುತ್ತವೆ.)

ಆಧುನಿಕ ವಿಜ್ಞಾನವು ಮೇಲಿನ ಸಿದ್ಧಾಂತದ ವಿಸ್ತಾರ ಮಾಡಿತು. ರೋಗಾಣುಗಳ ವರ್ಗೀಕರಣವನ್ನೂ ನಿವಾರಣೋಪಾಯವನ್ನೂ ಕಂಡು ಹಿಡಿಯಲು ಯತ್ನಿಸಿತು. ರೋಗಾಣುನಾಶಕ ಸಿದ್ಧಾಂತದವಿಕಾಸವನ್ನು ಎಲೋಪಥಿಯು ಪೂರ್ವಸಂಚಿತಜ್ಞಾನವನ್ನು ಮೀರುವಷ್ಟು ಮಾಡಿದೆ. ಒಂದು ಧಾತುವನ್ನು ಮೇಲಿಂದ ಮೇಲೆ ಭಸ್ಮಮಾಡಿ ಅದರ ಗುಣವೃದ್ಧಿ (ಪುಟೈಃ ಸಂಜಾಯತೇ ಗುಣಃ) ಮಾಡುವುದು ಆಯುರ್ವೇದದ ಇನ್ನೊಂದು ಸಿದ್ದಾಂತ. ಇದು ಹೋಮಿಯೋಪಥಿಯ ಔಷಧಗಳನ್ನು ರುಬ್ಬಿ ರುಬ್ಬಿ ಭೌತಿಕ ಗುಣಗಳನ್ನು ಕುಗ್ಗಿಸಿ ಆಂತರಿಕಶಕ್ತಿ ಹೆಚ್ಚಿಸುವುದರಂತೇ ಇದ್ದರೂ ಹೋಮಿಯೋಪಥಿಯ ಈ ವಿಷಯದ ಹೆಚ್ಚಿನ ಸುಧಾರಣೆ ಎಲೊಪಥಿಯ ರೋಗಾಣುವಿಜ್ಞಾನದ ಪ್ರಗತಿಗೆ ಸಮಾನವೆಂದೇ ತಿಳಿಯಬೇಕು. ಆದರೆ ಒಂದೊಂದೇ ಸಿದ್ಧಾಂತಗಳನ್ನೆತ್ತಿ ಪ್ರಗತಿಯನ್ನು ಸಾಧಿಸಿರುವ ಚಿಕಿತ್ಸಾವಿಜ್ಞಾನಗಳಲ್ಲಿ ಈ ಬಗೆಯ ಸಮನ್ವಯವು ಆಯುರ್ವೇದದಲ್ಲಿ ಸಿಗುವಂತೆ ಸಿಗಲಾರದು.

ಹೋಮಿಯೋಪಥಿಯಲ್ಲಿ ಶಸ್ತ್ರಚಿಕಿತ್ಸೆಗೆ ಸ್ಥಾನವೇ ಇಲ್ಲ. ಆಯುರ್ವೇದದ ಚಿಕಿತ್ಸಕರು ಸರ್ಜನರಲ್ಲದಿದ್ದರೂ ಆಯುರ್ವೇದದ ಒಂದು ಶಾಸ್ತ್ರೀಯ ಗ್ರಂಥವಾದ ಸುಶ್ರುತ ಸಂಹಿತೆ ಸಂಪೂರ್ಣವಾಗಿ ಶಲ್ಯಚಿಕಿತ್ಸೆಗೇ ಮೀಸಲಾಗಿದೆ. ಕಾಶಿಯ ಆಯುರ್ವೇದಿಕ್ ಕಾಲೇಜಿನ ಪ್ರಿನ್ಸಿಪಾಲ ಡಾ. ಉಡುಪ ಮತ್ತು ಪುಣೆಯ ಆಯುರ್ವೇದ ವಿದ್ಯಾಲಯದ ಪ್ರಿನ್ಸಿಪಾಲ ವೈದ್ಯ ಕುಲಕರ್ಣಿ ಆಯುರ್ವೇದದ ಸ್ನಾತಕರಾದರೂ ಮೇಲುಮಟ್ಟದ ಸರ್ಜನರಾಗಿದ್ದಾರೆ. ಆಯುರ್ವೇದಕ್ಕೆ ಎಲ್ಲೆಲ್ಲಿ ಮಾನದ ಸ್ಥಾನ ದೊರಕಿತೊ ಅಲ್ಲಲ್ಲಿ ಆಯುರ್ವೇದಿಕ್ ಶಸ್ತ್ರಚಿಕಿತ್ಸೆಗೂ ಆಧುನಿಕ ಔಷಧಿಶಾಸ್ತ್ರದಲ್ಲಿ ಸ್ಥಾನ ಸಿಕ್ಕಿದೆ. ಮೂರು ಸಾವಿರ ವರ್ಷದ ಹಿಂದಿನ ಮಹಿಮೆಯಿಂದ ಅದು ಇಂದಿಗೂ ಮೆರೆ

ಯಲು ಸಮರ್ಥವಾಗುತ್ತಿದೆ.

ಎಲೋಪಥಿ ತನ್ನ ಸಿದ್ಧಾಂತಗಳಲ್ಲಿ ಪ್ರಗತಿ ಸಾಧಿಸಿದರೂ ಉಳಿದ ಸಿದ್ಧಾಂತಗಳ ದೃಷ್ಟಿಯಿಂದ ಅವೈಜ್ಞಾನಿಕವಾಗಿಯೇ ಉಳಿದಿದೆ. ೧೯೫೧ ರ ಸಪ್ಟೆಂಬರ ತಿಂಗಳ ಮೆಡಿಕಲ್ ಡೈಜೆಸ್ಟಿನಲ್ಲಿ ಹೃದ್ರೋಗದ ಒಬ್ಬ ರೋಗಿಯ ಬಗ್ಗೆ ಒಂದು ಲೇಖನ ಪ್ರಕಟವಾಗಿತ್ತು. ಅದರ ಸಾರಾಂಶ : ಎಂಟಿಬಾಯೊಟಿಕ್ಸ್ ಯುಗದಲ್ಲಿ ಹುಟ್ಟಿದ್ದು ಆ ರೋಗಿಯ ಭಾಗ್ಯ. ಹೃದ್ರೋಗ ವಿಜ್ಞಾನದ ಪ್ರಗತಿಯಾಗಿರದಿದ್ದರೆ ಮತ್ತು ಪೆನಿಸಿಲಿನ್ ಮೊದಲಾದ ಎಂಟಿಬಾಯೊಟಿಕ್‌ಗಳು ಹುಟ್ಟಿರದಿದ್ದರೆ ರೋಗಿ ಬದುಕುತ್ತಿದ್ದಿಲ್ಲ.

ಇದರ ಪ್ರಚಾರ ಸಾಕಷ್ಟಾಯಿತು. ಮುಂದೆ ಐದು ತಿಂಗಳು ಬಿಟ್ಟು ರೋಗಿ ಮತ್ತೆ ರೋಗ ಪೀಡಿತನಾದ. ಈ ಸಾರೆ ಎಂಟಿಬಾಯೊಟಿಕ್ ಮತ್ತು ಬೇರೆ ಔಷಧಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡಲಾಯಿತು. ಆದರೂ ಪ್ರಯೋಜನವಾಗಲಿಲ್ಲ. ತಜ್ಞರು "ರೋಗಾಣುಗಳು ಎಂಟಿಬಾಯೊಟಿಕ್‌ಗಳನ್ನು ಮೀರುವ ಶಕ್ತಿ ಸಂಪಾದಿಸಿವೆ" ಎಂದು ಕಂಡುಹಿಡಿದರು. ರೋಗ ಅವರ ಸಂಶೋಧನೆಗಳನ್ನು ಮೀರಿ ನಿಂತಿತು. ಆಗ ರೋಗಿ ಆಯುರ್ವೇದಕ್ಕೆ ಶರಣಾದ. ಆಯುರ್ವೇದಿಕ್ ಚಿಕಿತ್ಸೆ ಅವನನ್ನು ಹದಿನೈದು ದಿನಗಳಲ್ಲೇ ಗುಣಪಡಿಸಿತು.

ಇದೇ ಪ್ರಕಾರ ನೋಡಲಾಗಿ, ಆಧುನಿಕ ನೈಸರ್ಗಿಕ ಚಿಕಿತ್ಸಾಪ್ರಣಾಲಿಯಾದರೂ ಪೂರ್ತಿ ನಿರ್ದೋಷವಾಗಿಲ್ಲವೆಂದೇ ಸ್ಪಷ್ಟವಾಗುವುದು. ಎಲ್ಲ ನೈಸರ್ಗಿಕ ಚಿಕಿತ್ಸೆ ಆಯುರ್ವೇದದ ಪಂಚಕರ್ಮಚಿಕಿತ್ಸೆಯ ಒಂದು ಅಂಶ ಮಾತ್ರ. ಆಯುರ್ವೇದಿಕ ಚಿಕಿತ್ಸೆಯಲ್ಲಿ ವಸತಿ, ಅಭ್ಯಂಗ, ಸ್ವೇದ, ಅವಗಾಹನ ಮುಂತಾದ ಕೆಲ ಕ್ಷೇತ್ರಗಳು ಹೆಚ್ಚು ವಿಸ್ತೃತವಾಗಿವೆ. ಆದರೆ ಅವೆಲ್ಲ ಕೆಲ ಆವಶ್ಯಕ ಶಲ್ಯ ಮತ್ತು ಔಷಧ ಶಾಸ್ತ್ರದ ಕೊರತೆಯುಳ್ಳವಾಗಿವೆ.

ಆಯುರ್ವೇದದ ಸರ್ವಗುಣಗ್ರಾಹಿತ್ವವೆ ಅದನ್ನು ಪ್ರಾಚೀನ ವೈದ್ಯಕೀಯ ಚಿಕಿತ್ಸಾ ಪದ್ಧತಿಗಳ ಮಾತೆಯೆಂದಷ್ಟೇ ಅಲ್ಲ. ಭವಿಷ್ಯತ್ತಿನ ಸರ್ವೋತ್ಕೃಷ್ಟ ಚಿಕಿತ್ಸೆಯನ್ನಾಗಿ ಮಾಡಿದೆ. ಇದಕ್ಕೆ ಪುಷ್ಟಿ ಕೊಡುವ ಕೆಲ ಉದಾಹರಣೆಗಳು ಕೆಳಗಿವೆ:—

ಇಂಗ್ಲೆಂಡಿನ ಒಂದು ಔಷಧ ತಯಾರಕ ಕಂಪನಿಯ ಒಡೆಯನ ಪತ್ನಿ ೪೮ ವರ್ಷದವಳಿದ್ದಳು. ಅವಳಿಗೆ ೮ ಮಕ್ಕಳಾದವು. ಒಂದು ಕೂಸು ಪೂರ್ಣ ದಿನ ತುಂಬುವ ಮೊದಲೇ ಪ್ರಸೂತಿಯಾದ್ದರಿಂದ ಹುಟ್ಟಿದೊಡನೆಯೆ ಸತ್ತಿತು. ೧೦ ವರ್ಷದಿಂದಲೆ ಅವಳಿಗೆ ಮಧುಮೇಹದ ವಿಕಾರವಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ಆಕೆ ಲ್ಯಾಂಟ್ ಇನ್‌ಸ್ಯೂಲಿನ ತಕ್ಕೊಳ್ಳುತ್ತಿದ್ದಳು. ಪ್ರತಿ ದಿನ ೨೦ ಯುನಿಟ್ಟುಗಳಿಂದ ಪ್ರಾರಂಭಿಸಿ ಮುಂದೆ ಮುಂದೆ ೪೦ ಯುನಿಟ್ಟುಗಳವರೆಗೆ ಪ್ರತಿ ದಿನ ತಕ್ಕೊಳ್ಳಲಾರಂಭಿಸಿದಳು. ಪಾಶ್ಚಾತ್ಯ ಚಿಕಿತ್ಸೆಯಲ್ಲಿ ಮಧುಮೇಹವನ್ನು ತಡೆಯುವ ಔಷಧಿ ಇಲ್ಲದ್ದರಿಂದ ಆಕೆ ಆಯುರ್ವೇದವನ್ನೇ ಮೊರೆಹೊಕ್ಕಳು. ಕೆಲ ತಿಂಗಳಲ್ಲಿಯೆ ಅವಳು ಇನ್‌ಸ್ಯೂಲಿನ್ ಕಡಿಮೆ ಮಾಡಿದರೂ ಶರ್ಕರೆಯ ಅಂಶ ಹೆಚ್ಚಲಿಲ್ಲ. ಮಧುಮೇಹದ ಲಕ್ಷಣಗಳು ಪೂರ್ಣ ಇಲ್ಲದಂತಾದವು. ಕಾಲ ಉಗುರುಗಳು ಸುಕ್ಕಿ ಹೋಗಿದ್ದವು; ಈಗ ಅವು ರಕ್ತದಿಂದ ಸತೇಜವಾದವು. ಆಗ ಆಕೆ ತಮ್ಮ ಮಿತ್ರರಿಗೆಲ್ಲ ಆಯುರ್ವೇದದ ಮಹತಿಯನ್ನು ಹೇಳತೊಡಗಿದಳು.

ದುಸ್ಸಾಧ್ಯ ಅವಸ್ಥೆಗೆ ಮುಟ್ಟಿದ ರೋಗಿಯೊಬ್ಬನ ಇತಿವೃತ್ತವನ್ನು ಸ್ವಲ್ಪದರಲ್ಲಿ ನಾನಿನ್ನು ಇಲ್ಲಿ ಕೊಡಬಯಸುತ್ತೇನೆ. ರೋಗಿ ಆಯುರ್ವೇದದ ಹೆಸರನ್ನೂ ಕೇಳದ ಕ್ರಿಶ್ಚನ್ ಡಾಕ್ಟರನೊಬ್ಬನ ಮಗನು. ಆಸ್ಟಿನ್ ಫೀ.... ಮುಂಬಯಿಯ ಅತಿ ಫ್ಯಾಶನೇಬಲ್ ಸ್ಥಾನದಲ್ಲಿ ದವಾಖಾನೆ ನಡೆಸುತ್ತಿದ್ದ ಲೋಕಪ್ರಿಯ ಡಾಕ್ಟರರ

೧೫ ವರ್ಷದ ಹುಡುಗ. ಅವನಿಗೆ—

೧) ಶ್ವಾಸರೋಗದ ಪುನರಾವೃತ್ತಿಯಾಗುತ್ತಿತ್ತು. ಅವುಗಳ ಮೇಲೆ ಎಡ್ರಿನಲೀನ್ ಮತ್ತು ಎಫಿಡ್ರಿನ್‌ಗಳು ಏನೂ ಪರಿಣಾಮ ಮಾಡದಂತಾಗಿದ್ದವು.

೨) ಜ್ವರಬಾಧೆ ಹೆಚ್ಚುತ್ತಿತ್ತು. ಅದನ್ನು ತಡೆಯಲು ಪೆನಿಸಿಲಿನ್ ಅಸಮರ್ಥವಾಗಿತ್ತು.

೩) ತೀವ್ರ ಪಾಂಡುರೋಗವಿತ್ತು. ರಕ್ತದಾನವೂ ಅಯಶಸ್ವಿಯಾಗಿ ಶೀಘ್ರವೆ ರಕ್ತಕಣಗಳ ಸಂಖ್ಯೆ ೨೦ ಲಕ್ಷಕ್ಕಿಂತ ಕಡಿಮೆಯಾಗುತ್ತಿತ್ತು.

೪) ಎಕ್ಜಿಮಾ ಹೆಚ್ಚಿ ಒಂದು ಸೂಜಿಯಷ್ಟೂ ಸ್ಥಳ ಉಳಿಯದಂತೆ ತಲೆ, ಮುಂಡ, ತೊಡೆ, ಗಳನ್ನು ವ್ಯಾಪಿಸಿತ್ತು. ವ್ರಣಗಳಿಂದ ಒಂದೇ ಸವನೆ ಸ್ರಾವವಾಗುತ್ತಿತ್ತು. ಅವನ ಸ್ಥಿತಿಯನ್ನು ನೋಡಿ ಎದೆಗರಗದ ಡಾಕ್ಟರನಿರಲಿಲ್ಲ. ಏಕಸಮಯಾವಚ್ಛೇದವಾಗಿ ಇಷ್ಟೆಲ್ಲ ಬೇನೆಗಳು ಮೈತಾಳಿರುವಾಗ ಈ ಹುಡುಗ ಆಯುರ್ವೇದಿಕ ಪದ್ಧತಿಯತ್ತ ಹೊರಳಿದ. ಆಯುರ್ವೇದ ವಿಜ್ಞಾನ ಎಷ್ಟು ಪ್ರತ್ಯುತ್ಪನ್ನಮತಿಯಾಗಿದೆ ಎಂದರೆ ಆತ ಕ್ರಮಶಃ ಎಲ್ಲ ರೋಗಗಳಿಂದ ಮುಕ್ತನಾಗತೊಡಗಿದಾಗ “ಹೆಮೊಲೆಟಿಕ್ ಎನೀಮಿಯಾ” ಎಂಬ ಪಾಂಡುರೋಗವಾಯಿತು; ಆಯುರ್ವೇದಕ್ಕೆ ಇದು ತೀರ ಅಪರಿಚಿತ ರೋಗ; (ಏಕೆಂದರೆ ರಕ್ತದಾನದ ಪದ್ಧತಿ ಪ್ರಾಚೀನ ಭಾರತದಲ್ಲಿ ಇರಲಿಲ್ಲ. ಒಬ್ಬ ರಾಜ ರಕ್ತದಾನ ಮಾಡಿದ ಒಂದು ವೃತ್ತ ಬೌದ್ಧ ಕಾಲೀನ ಇತಿಹಾಸದಲ್ಲಿ ಇದೆಯಷ್ಟೆ!) ಆದರೂ ಎದೆಗುಂದದೆ ಆಯುರ್ವೇದಿಕ ಆರೈಕೆಯನ್ನೇ ಮುಂದುವರಿಸಲಾಯಿತು. ರೋಗದ ಬೆಳವಣಿಗೆಯನ್ನು ತಡೆಯಲಾಯಿತು. ಆಮೇಲೆ ತ್ರಿದೋಷ ಸಿದ್ಧಾಂತದ ಮೇರೆಗೆ ಉಪಚರಿಸಲಾಗಿ ರೋಗಿ ಸಂಪೂರ್ಣ ಆರೋಗ್ಯಕಾಯನಾದನು.

ಈಗ ಆತ ಹ್ಯಾಸ್ಕೂಲಿನಲ್ಲಿ ಸ್ವಚ್ಛಂದವಾಗಿ ಓದುತ್ತಾನೆ. *

ಮೂವರು ತಾಯಂದಿರು ಮೂರು ಮಕ್ಕಳನ್ನು ಪಡೆದರು.

ಒಬ್ಬಳು ತನ್ನ ಮಗನಿಗೆ ಹೇಳಿದಳು: “ಮಗೂ, ಹೊನ್ನ ರಾಶಿಯ ಮೇಲೆ ತುಪ್ಪದ ದೀಪ ಉರಿಸುವವನಾಗು.”

ಎರಡನೆಯವಳು ತನ್ನ ಮಗನಿಗೆ ಹೇಳಿದಳು: “ಕುಲದ ಕೀರ್ತಿ ದಶ ದಿಕ್ಕಿನಲ್ಲಿ ವ್ಯಾಪಿಸುವ ಹಾಗೆ ಮಾಡು ಕಂದಾ!”

ಮೂರನೆಯವಳು ಹೇಳಿದಳು: “ನನ್ನ ಕೂಸೆ, ಮತ್ತೇನೂ ನಿನ್ನಿಂದ ಅಪೇಕ್ಷೆ ಮಾಡುವುದಿಲ್ಲ; ಯಾವನೆಲದಲ್ಲಿ ಹುಟ್ಟಿದೆಯೋ ಆ ನೆಲದ ಸೇವೆಗೆ ಪರಾಙ್ಮುಖನಾಗಬೇಡ.”

ಕೆಲವರ್ಷಗಳ ತರುವಾಯ—

ಮೊದಲನೆಯವಳ ಮಗ ಹೊನ್ನರಾಶಿಯ ಮೇಲೆ ದೀಪ ಉರಿಸುವ ಬದಲು ಹೊನ್ನರಾಶಿಯನ್ನೇ ಹಾಳುಮಾಡಿಬಿಟ್ಟ.

ಎರಡನೆಯವಳ ಮಗ ತಮ್ಮ ಸುತ್ತಮುತ್ತಿನ ಪರಿಸರದಲ್ಲಿ ಮನೆತನದ ಕೀರ್ತಿ ಹೆಚ್ಚಿಸಿದ.

ಮೂರನೆಯವಳ ಮಗನೂ ತಾಯಿಯ ಅಭೀಷ್ಟ ಪೂರ್ತಿಮಾಡಿದ. ಚಳಿ, ಮಳೆ, ಗಾಳಿ ಯಾವುದಕ್ಕೂ ಅಳುಕದೆ ತನ್ನ ಜನ್ಮಭೂಮಿಯ ಸೇವೆ ನಡೆಸಿದ್ದ.



ಊರಿನಲ್ಲಿ ರಂಗ,
ಪರಊರಿನಲ್ಲಿ ಮಂಗ

ರಾಯಭಾರಿ ಚೀನಕ್ಕೆ ಹೋದ

ಕೆನೆಥ್ ಹಾಪ್‌ಕಿನ್ಸ್

೧೭೯೩, ಸೆಪ್ಟೆಂಬರ ೧೪ನೆಯ ತಾರೀಖಿನ ದಿನ ಬೆಳಗಿನ ಜಾವದಲ್ಲಿ ನಾಲ್ಕು ಗಂಟೆಗೇ ಜಾರ್ಜ್ ಅರ್ಲ್ ಮೆಕಾರ್ಟನಿ ಎದ್ದು ಸರದಾರೋಚಿತವಾದ ಉಡುಪನ್ನು ಅತ್ಯಂತ ದಕ್ಷತೆಯಿಂದ ಧರಿಸಿಕೊಳ್ಳತೊಡಗಿದ್ದ. ಸಮೀಪದ ಇನ್ನೊಂದು ಡೇರೆಯಲ್ಲಿ ಅವನ ಪ್ರಮುಖ ಸಹಕಾರಿಯಾಗಿದ್ದ ಸರ್ ಜಾರ್ಜ್ ಸ್ಟಾಂಟನ್ ಕೂಡ ಅದೇ ಕಾರ್ಯದಲ್ಲಿ ಮಗ್ನನಾಗಿದ್ದ. ಅರ್ಲ್ ಮೆಕಾರ್ಟನಿಯ ಅನುಚರರೆಲ್ಲರೂ ತಮ್ಮ ತಮ್ಮ ಸ್ಥಾನಮಾನಕ್ಕನುಗುಣವಾದ ಪೋಷಾಕನ್ನು ಧರಿಸಿಕೊಳ್ಳುವುದರಲ್ಲಿ ಮಗ್ನರಾಗಿದ್ದರು.

ಇಷ್ಟು ನಸುಕಿನಲ್ಲಿ ಈ ದೊಡ್ಡ ಮನುಷ್ಯರು ಎದ್ದು ಪೋಷಾಕು ಧರಿಸಿಕೊಳ್ಳುವುದಕ್ಕೆ ಒಂದು ಪ್ರಬಲ ಕಾರಣವಿತ್ತು. ಸ್ವರ್ಗಪುತ್ರ ಇತ್ಯಾದಿ ಅಸಂಖ್ಯ ಬಿರುದಾಂಕಿತ ಚೀನದ ಚಕ್ರವರ್ತಿ ಚಿಯೆನ್ ಲುಂಗರ ಸನ್ನಿಧಾನಕ್ಕೆ ಇವರು ಇಂದು ಗ್ರೇಟ್‌ಬ್ರಿಟನ್ ಮತ್ತು ಜಗತ್ತಿನ ಇತರ ಅನೇಕ ಪ್ರದೇಶಗಳ ಅರಸನಾದ ಮೂರನೆಯ ಜಾರ್ಜನ

ಲಂಡನ್ನಿನ "ಫೊನಿಕ್ಸ್ ಹೌಸ್ ಲಿಮಿಟೆಡ್" ನವರಿಂದ ಪ್ರಕಟಿತವಾದ "ಗ್ರೇಟ್ ಮೊಮೆಂಟ್ಸ್ ಇನ್ ಎಕ್ಸ್‌ಪ್ಲೊರೇಶನ್" ಎಂಬ ಪುಸ್ತಕದಿಂದ

ಪ್ರತಿನಿಧಿಯಾಗಿ ಹೋಗಲಿದ್ದರು. ಆದರೆ ದುರ್ದೈವದಿಂದ ಚೀನದ ಚಕ್ರವರ್ತಿಗೆ ಮೂರನೆಯ ಜಾರ್ಜನ ಮಹತ್ವ ಎಳ್ಳಷ್ಟೂ ಅನಿಸಿರಲಿಲ್ಲ. ಜಗತ್ತಿನಲ್ಲಿ ಎಲ್ಲೋ ಮೂಲೆಯಲ್ಲಿರುವ ಒಂದೆರಡು ಚಿಕ್ಕ ಪುಟ್ಟ ಅನಾಗರಿಕ ಜನರ ಪ್ರದೇಶಗಳನ್ನು ಬಿಟ್ಟರೆ ಉಳಿದೆಲ್ಲ ಪ್ರದೇಶದ ಒಡೆಯ ತಾನೇ ಎಂಬ ನಂಬಿಕೆ ಚೀನದ ಚಕ್ರವರ್ತಿಯದು. ಮೂರನೆಯ ಜಾರ್ಜ ಎಂಬಾತ ಇದ್ದದ್ದೇ ನಿಜವಾದರೆ ಆತ ಎಲ್ಲಿಯೊ ಒಂದಿಷ್ಟು ಕಾಡು ಜನರ ಪ್ರಮುಖನಾಗಿರಬೇಕು ಎಂದು ಚೀನದ ಚಕ್ರವರ್ತಿ ತಿಳಿದಿದ್ದ. ಬಹು ದೂರದಿಂದ, ಬಹು ಕಷ್ಟಪಟ್ಟು ಚೀನಕ್ಕೆ ಒಂದು ಕಾರ್ಯೋದ್ದೇಶದಿಂದ ಬಂದಿದ್ದ ಅರ್ಲ್ ಮೆಕಾರ್ಟನಿಗೆ ಚೀನದ ಚಕ್ರವರ್ತಿಯ ತಿಳಿವಳಿಕೆಯಿಂದ ತುಂಬ ಪೇಚಿಗಿಟ್ಟುಕೊಂಡಿತ್ತು.

ಚೀನದ ಚಕ್ರವರ್ತಿಯನ್ನು ಬ್ರಿಟಿಶ್ ರಾಜನ ರಾಯಭಾರಿ ಭೇಟಿಯಾಗಬೇಕೆಂಬ ನಿರ್ಧಾರವನ್ನು ಬ್ರಿಟಿಶ್ ಸರಕಾರ ಹದಿನೆಂಟು ತಿಂಗಳ ಹಿಂದೆ ಮಾಡಿತ್ತು. ಬ್ರಿಟನ್ನಿನ ವಿದೇಶ ವ್ಯಾಪಾರ ಪ್ರಮಾಣ ಮೀರಿ ಹೆಚ್ಚುತ್ತಲಿತ್ತು. ಬ್ರಿಟನ್ನಿಗೆ ಪ್ರತಿ ವರ್ಷ ಬೇಕಾಗುವ ೧ ಕೋಟಿ ೩೦ ಲಕ್ಷ ಪೌಂಡು ಚಹದ ಪುಡಿ ಚೀನದಿಂದಲೇ ಬರುತ್ತಿತ್ತು. ಬ್ರಿಟನ್ ಮತ್ತು ಚೀನಗಳ ವ್ಯಾಪಾರ ಸಂಬಂಧವನ್ನು ವಿಸ್ತರಿಸಬೇಕು, ಪರಸ್ಪರ ಸಹಕಾರವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಬ್ರಿಟಿಶರು ಬಯಸಿದರೂ ಚೀನೀಯರು ಬಯಸುತ್ತಿರಲಿಲ್ಲ. ಚೀನದಲ್ಲಿ ಪ್ರವಾಸ ಮಾಡಲು ವಿದೇಶೀಯರಿಗೆ ಅವಕಾಶ ದೊರೆಯುತ್ತಿರಲಿಲ್ಲ. ಚೀನದಲ್ಲಿಯ ಒಂದೆರಡು ಬಂದರಗಳಿಗೆ ಮಾತ್ರ ಹಡಗುಗಳನ್ನು ಕಳಿಸಲು ವಿದೇಶೀ ವ್ಯಾಪಾರಿಗಳಿಗೆ ಅನುಮತಿ ಸಿಕ್ಕಿತ್ತು. ಚೀನದಲ್ಲಿ ಯಾವುದಕ್ಕೂ ಕೊರತೆಯಿರಲಿಲ್ಲವಾದ್ದರಿಂದ ಅವರಿಗೆ ಇತರ ದೇಶಗಳೊಡನೆ ವ್ಯಾಪಾರ ನಡೆಸುವುದರಲ್ಲಿ ಆಸಕ್ತಿಯಿರಲಿಲ್ಲ. ವಿದೇಶೀಯರೆಲ್ಲ ಅಸಂಸ್ಕೃತ ಹುಂಬರು ಎಂದೇ ಚೀನೀಯರು ತಿಳಿಯುತ್ತಿದ್ದರು. ಅದಕ್ಕೂ ಕಾರಣವಿತ್ತು. ಆ ಕಾಲದಲ್ಲಿ ಚೀನಕ್ಕೆ ಹೋಗುತ್ತಿದ್ದ ಬಿಳಿಯರಲ್ಲಿ ಹೆಚ್ಚಿನವರು ಕ್ಷುಲ್ಲಕ ಕಾರಣಗಳಿಗಾಗಿ ಎದುರಿದ್ದವನಿಗೆ ಗುಂಡು ಹಾಕಲು ಹಿಂದು ಮುಂದು ನೋಡುತ್ತಿರಲಿಲ್ಲ.

ಆದ್ದರಿಂದ ರಶಿಯ ಮತ್ತು ಭಾರತಗಳಲ್ಲಿ ರಾಯಭಾರಿಯಾಗಿ ಹೋಗಿ ಯಶಸ್ವಿಯಾಗಿದ್ದ ಲಾರ್ಡ್ ಮೆಕಾರ್ಟನಿಯನ್ನು ಚೀನಕ್ಕೆ ಕಳಿಸಲು ಬ್ರಿಟಿಶ್ ಸರಕಾರ ನಿರ್ಧರಿಸಿತ್ತು.

ಚೀನಕ್ಕೆ ರಾಯಭಾರಿಯಾಗಿ ಹೊರಟ ಮೆಕಾರ್ಟನಿ ತನಗೆ ಮುಖ್ಯ ಸಹಾಯಕನಾಗಿ ಸರ್ ಜಾರ್ಜ್ ಸ್ಟಾಂಟನ್ ಬರಬೇಕು ಎಂದ. ತನ್ನ ೧೧ ವರ್ಷ ವಯಸ್ಸಿನ ಮಗನಿಗೆ ತನ್ನೊಂದಿಗೆ ಬರಲು ಅವಕಾಶವಿತ್ತರೆ ಮಾತ್ರ ತಾನು ಬರುವುದಾಗಿ ಸ್ಟಾಂಟನ್ ಹೇಳಲು ಹುಡುಗ ಜಾರ್ಜನಿಗೂ ಅಪ್ಪಣೆ ಸಿಕ್ಕಿತು. ಈ ಬಾಲಕನಿಗೆ ಆರು ಭಾಷೆಗಳ ಜ್ಞಾನವಿತ್ತಲ್ಲದೆ ಹರಕು ಮುರುಕಾದ ಚೀನೀ ಭಾಷೆಯೂ ಬರುತ್ತಿದ್ದುದರಿಂದ ಅವನಿಂದ ಈ ಪ್ರವಾಸದಲ್ಲಿ ಲಾಭವಾದೀತು ಎಂದು ಎಲ್ಲರೂ ಎಣಿಸಿದರು.

೧೭೯೩, ಸೆಪ್ಟೆಂಬರ್ ೨೬ ರಂದು ಈ ರಾಯಭಾರಿಯನ್ನೂ ಅವನ ಪರಿವಾರವನ್ನೂ ಕರೆದುಕೊಂಡು "ಲಾಯನ್" ಎಂಬ ಯುದ್ಧ ಹಡಗ ಹೊರಟಿತು. ನಿಧಾನವಾಗಿ ಸಾಗುತ್ತ ಈ ಹಡಗ ಒಂದು ವರ್ಷದ ನಂತರ ಚೀನದ ಸಮುದ್ರ ಪ್ರದೇಶವನ್ನು ಕಂಡಿತು. ಈ ಹಡಗ ತಂಗುವ ಬಂದರದಿಂದ ಅನೇಕ ವಾರಗಳ ವರೆಗೆ ಪ್ರವಾಸ ಮಾಡಿ ಚೀನದ ರಾಜಧಾನಿ ಪೆಕಿಂಗನ್ನು ಮುಟ್ಟಬೇಕಾಗಿತ್ತು.

"ಲಾಯನ್" ಬಂದರವನ್ನು ಸಮೀಪಿಸಿದೊಡನೆ ಒಬ್ಬ ಚೀನೀ ಅಧಿಕಾರಿ ರಾಯಭಾರಿ ಮೆಕಾರ್ಟನಿಯ ಸ್ವಾಗತಕ್ಕಾಗಿ ಎಂದು ಬಂದು ಅವನಿಗೆ ಅನೇಕ ಪ್ರಶ್ನೆಗಳನ್ನು ಕೇಳಿದ. ಚೀನದ

ಭೂಪ್ರದೇಶದ ಮೇಲೆ ಕಾಲಿಡುವ ಮೊದಲೇ ಎಲ್ಲವನ್ನೂ ಹೇಳಲು ಮೆಕಾರ್ಟನಿ ಸಿದ್ಧನಿರಲಿಲ್ಲ. ಚೀನದ ಚಕ್ರವರ್ತಿಗಾಗಿ ಕಾಣಿಕೆಯೆಂದು ಆತ ತನ್ನೊಡನೆ ಗಡಿಯಾರಗಳು, ದೂರದರ್ಶಕ ಯಂತ್ರಗಳು, ಬ್ರಿಟಿಶ್ ಸರದಾರರ ಭಾವಚಿತ್ರಗಳೇ ಮೊದಲಾದ ಸುಮಾರು ೧೩,೦೦೦ ಪೌಂಡು ಬೆಲೆಯ ಸಾಮಾನುಗಳನ್ನು ತಂದಿದ್ದನು. ಆದರೆ ಚೀನೀ ಅಧಿಕಾರಿ ಏನು ಕಾಣಿಕೆ ತಂದಿರಬಹುದು ಎಂದು ಊಹಿಸುತ್ತಲೇ ಮರಳಬೇಕಾಯಿತು.

ಆತ ಮರಳಿದವನೇ ರಾಯಭಾರಿಗೆಂದು ಸೀದಾ ಸಾಮಗ್ರಿಗಳನ್ನು ಕಳಿಸಿಕೊಟ್ಟ. ಆತ ೨೦ ಹೋರಿಗಳು, ೧೨೦ ಕುರಿಗಳು, ೧೨೦ ಹಂದಿಗಳು, ೬೦ ಚೀಲ ಹಿಟ್ಟು, ೧,೦೦೦ ಕಲ್ಲಂಗಡಿ ಹಣ್ಣುಗಳು, ೩,೦೦೦ ಕರಬೂಜಗಳು, ೧೦ ಮೇಣಬತ್ತಿ ಪೆಟ್ಟಿಗೆಗಳು ಮತ್ತು ಪಾತ್ರೆಪಗಡೆಗಳ ಮೂರು ಪೆಟ್ಟಿಗೆಗಳನ್ನು ಕಳಿಸಿಕೊಟ್ಟಿದ್ದ. ಮೆಕಾರ್ಟನಿಯ ಹಡಗದಲ್ಲಿ ಈ ಸಾಮಗ್ರಿಯೆಲ್ಲ ಹಿಡಿಯುವಂತಿಲ್ಲವಾದ್ದರಿಂದ ಆತ ಅದರಲ್ಲಿ ಹೆಚ್ಚಿನ ಭಾಗವನ್ನು ತಿರುಗಿ ಕಳಿಸಬೇಕಾಯಿತು. ಆದರೆ ಚೀನದ ಚಕ್ರವರ್ತಿ ಬ್ರಿಟನ್ನಿನ ಚಕ್ರವರ್ತಿಯ ರಾಯಭಾರಿಯ ಆಗಮನದಿಂದ ಸಂತುಷ್ಟನಾಗಿದ್ದಾನೆ ಎನ್ನುವುದಕ್ಕೆ ಈ ಆದರಾತಿಥ್ಯ ಒಂದು ಸೂಚನೆ ಎಂದು ಭಾವಿಸಿ ಮೆಕಾರ್ಟನಿ ಸಂತುಷ್ಟನಾದ.

ಸೀದಾ ಸಾಮಗ್ರಿಯ ಬೆನ್ನ ಹಿಂದೆಯೆ ವಾನ್ ಮತ್ತು ಚೌ ಎಂಬ ಇಬ್ಬರು ಹಿರಿ ಅಧಿಕಾರಿಗಳು (ಒಬ್ಬ ನಾಗರಿಕ ಮತ್ತು ಇನ್ನೊಬ್ಬ ಸೈನಿಕ) ಬಂದರು. ಚೀನದಲ್ಲಿ ಮೆಕಾರ್ಟನಿ ಇರುವವರೆಗೆ ಅವನ ಯೋಗಕ್ಷೇಮ ನೋಡಿಕೊಳ್ಳುವುದಕ್ಕಾಗಿ ತಾವು ನೇಮಿಸಲ್ಪಟ್ಟಿರುವುದಾಗಿ ತಿಳಿಸಿ ಅವರು ಮೆಕಾರ್ಟನಿಗೆ ಚೀನಿಯರ ರೀತಿನೀತಿಗಳನ್ನು ಕಲಿಸತೊಡಗಿದರು. ಚೀನದಲ್ಲಿ ಕಾಣಿಕೆ ಮತ್ತೊಬ್ಬರಿಗಾಗಿಯೆ ಇರಲೊಲ್ಲದೇಕೆ ಅದರ ಬಗ್ಗೆ ಜನರಲ್ಲಿ ತುಂಬ ಕುತೂಹಲವಿರುತ್ತಿದ್ದದರಿಂದ ವಾನ್ ಮತ್ತು ಚೌ ಕೂಡ ಮೆಕಾರ್ಟನಿ ತಂದಿದ್ದ ಕಾಣಿಕೆಗಳ ಸ್ವರೂಪವನ್ನು ಅರಿಯಲು ತುಂಬ ಕುತೂಹಲದಿಂದ ಅಪ್ರತ್ಯಕ್ಷವಾಗಿ ಪ್ರಶ್ನೆಗಳನ್ನು ಕೇಳದೆ ಬಿಡಲಿಲ್ಲ.

ಪೆಕಿಂಗಿಗೆ ಹೊರಡುವ ಅವಸರವನ್ನು ಯಾರೂ ತೋರಲಿಲ್ಲ. ಮೆಕಾರ್ಟನಿ ಜೂನ್ ತಿಂಗಳ ಮಧ್ಯದಲ್ಲಿ ಬಂದಿದ್ದರೂ ಪೆಕಿಂಗ್‌ಗೆ ಪ್ರಯಾಣ ಬೆಳೆಸಿದ್ದು ಅಗಸ್ಟ್ ತಿಂಗಳ ಮೊದಲನೆಯ ವಾರದಲ್ಲಿ. ಪೆಕಿಂಗ್‌ಗೆ ಜಲಮಾರ್ಗವಾಗಿ (ನದಿ ಕಾಲುವೆಗಳ ಮೂಲಕ) ಹೋಗುವದೆಂದಾದ್ದರಿಂದ ಮೆಕಾರ್ಟನಿ ಮತ್ತು ಅವನ ಪರಿವಾರಕ್ಕಾಗಿ ಅನೇಕ ದೋಣಿಗಳನ್ನು ಚೀನೀ ಸರಕಾರ ಒದಗಿಸಿತ್ತು. ಹಾದಿಯಲ್ಲೆಲ್ಲ ಬ್ರಿಟನ್ನಿನ ಈ ಪ್ರತಿನಿಧಿಗಳನ್ನು ತುಂಬ ಗೌರವದಿಂದ ಕಾಣಲಾಯಿತು. ಅಲ್ಲಲ್ಲಿ ಗೌರವ ರಕ್ಷೆಗಳು ಅರ್ಪಿಸಲ್ಪಟ್ಟವು. ಹಳ್ಳಿ ಪಟ್ಟಣಗಳ ಹಿರಿ ಅಧಿಕಾರಿಗಳು ಬಂದು ಆದರಪೂರ್ವಕವಾಗಿ ಯೋಗಕ್ಷೇಮ ವಿಚಾರಿಸಿಕೊಂಡರು. ಅರ್ಲ್ ಮೆಕಾರ್ಟನಿ ಏರಿದ್ದ ದೋಣಿಯಲ್ಲಿ ಹಾರುತ್ತಿದ್ದ ದೊಡ್ಡ ರೇಶಿಮೆಯ ಧ್ವಜದ ಮೇಲೆ ಚೀನೀ ಭಾಷೆಯಲ್ಲಿ ದೊಡ್ಡ ಅಕ್ಷರಗಳಲ್ಲಿ ಏನನ್ನೋ ಬರೆದಿದ್ದರು. ಒಮ್ಮೆ ಮೆಕಾರ್ಟನಿ ಕುತೂಹಲದಿಂದ "ಅಲ್ಲೇನು ಬರೆದಿದೆ?" ಎಂದು ಕೇಳಿದಾಗ ಅವನ ಮುಖಭಂಗವಾದಂತಾಯಿತು. ಏಕೆಂದರೆ "ಕೆಂಪು ಕಾಡು ಜನರ ರಾಯಭಾರಿ" ಎಂದು ಚೀನಿಯರು ಆ ಧ್ವಜದ ಮೇಲೆ ಬರೆದಿದ್ದರು.

ಮೆಕಾರ್ಟನಿಗೆ ಇದರಿಂದ ದೊಡ್ಡ ಆಘಾತವಾದಂತಾಯಿತು. ಆತನ ಮತ್ತು ಆತನ ದೇಶದವರ ಅಭಿಪ್ರಾಯದಲ್ಲಿ ಅವರ ರಾಯಭಾರಿತ್ವವೆಂದರೆ ಒಂದು ದೊಡ್ಡ ಪ್ರಬಲ ರಾಜನ ಪ್ರತಿನಿಧಿ ಇನ್ನೊಬ್ಬ ತುಸು ಕಡಿಮೆ ಅಂತಸ್ತಿನ ರಾಜನಲ್ಲಿಗೆ ಹೋಗುವುದಾಗಿತ್ತು. ಆದರೆ ಚೀನೀಯರ ಅಭಿಪ್ರಾಯ ಬೇರೆಯೇ ಆಗಿತ್ತು. ಚೀನೀ

ಯರ ಲೆಕ್ಕದಲ್ಲಿ ತಮ್ಮ ರಾಜನೊಬ್ಬನೇ ರಾಜನಾಗಿಪ್ಪ. ಜಗತ್ತಿನ ಸಾರ್ವಭೌಮನಾದ ಅವನಿಗೆ ಸಲ್ಲಬೇಕಾದ ಗೌರವವನ್ನರ್ಪಿಸಲು ಈ ಜನ ಬಂದಿದ್ದರು.

ಪ್ರವಾಸ ಸುಖಕರವಾಗಿ ಸಾಗಿತ್ತು. ಆಗ ಒಂದು ದೊಡ್ಡ ಪೇಚಿನ ಪ್ರಸಂಗ ಉದ್ಭವಿಸಿತು. ಮೆಕಾರ್ಟನಿಗೆ ಚೀನೀ ರಾಜದರ್ಬಾರಿನ ನೀತಿ ನಡಾವಳಿಕೆಗಳನ್ನು ಕಲಿಸಲೆಂದು ಅಧಿಕಾರಿಯೊಬ್ಬ ಬಂದ. ಚೀನದ ಚಕ್ರವರ್ತಿಯ ಸಮ್ಮುಖದಲ್ಲಿ ನಿಲ್ಲುವುದೆಂದರೆ ಒಂದು ಮಹಾ ಗೌರವದ ಮಾತಾಗಿತ್ತು. ಆಗ ದರ್ಶನಾಭಿಲಾಷಿಯಾಗಿ ಬಂದಾತ ಚಕ್ರವರ್ತಿಯ ಎದುರು ಸಾಷ್ಟಾಂಗ ಹಾಕಬೇಕಾಗುತ್ತಿತ್ತು. ಆದರೆ ಮೆಕಾರ್ಟನಿ ಸಾಷ್ಟಾಂಗ ಹಾಕುವುದೇ? ಛೆ! ಛೆ! ತನ್ನ ರಾಜನಾದ ಜಾರ್ಜ್ ಕೂಡ ತನ್ನ ಪ್ರಜೆಗಳಿಂದ ಇಂಥ ಸ್ವಾಭಿಮಾನಶೂನ್ಯ ಕೃತಿಯನ್ನು ಬಯಸುವುದಿಲ್ಲ. ತಾನು ಬಹಳವೆಂದರೆ ಒಂದು ಮೊಣಕಾಲೂರಿ ಕುಳಿತು ಚಕ್ರವರ್ತಿಯ ಕೈ ಚುಂಬಿಸುವೆ ಎಂದ ಮೆಕಾರ್ಟನಿ. "ನಮ್ಮ ರಾಜರಿಗೆ ನಾವು ಗೌರವವನ್ನರ್ಪಿಸುವುದು ಹೀಗೆಯೆ" ಎಂದನಾತ.

ಚಕ್ರವರ್ತಿಯ ಕೈಯ ಚುಂಬನ! ಶಾಂತಂ ಪಾಪಂ! ಆ ಪವಿತ್ರಾತ್ಮನನ್ನು ಸ್ಪರ್ಶಿಸುವುದೆಂದರೆ ಸಾಕ್ಷಾತ್ ಮೃತ್ಯುವನ್ನು ಸ್ಪರ್ಶಿಸಿದಂತೆಯೆ. ಆದರೆ ಮೆಕಾರ್ಟನಿ ತಾನು ಹಣೆಯನ್ನು ನೆಲಕ್ಕೆ ಮುಟ್ಟಿಸುವುದಿಲ್ಲ ಎಂದು ಪಟ್ಟುಹಿಡಿದ. ಒಂದು ಮೊಣಕಾಲನ್ನೂರಿದ ಮೇಲೆ ಇನ್ನೊಂದನ್ನೂ ಊರಿದರೆಗಂಟೇನು ಹೋಯಿತು ಎಂದು ಚೀನೀ ಅಧಿಕಾರಿ ವಾದಿಸಿದ. ವಾದವಿವಾದದಲ್ಲಿಯೇ ಪೆಕಿಂಗ್ ಸಮೀಪಿಸಿತು.

ಆದರೆ ಅಷ್ಟರಲ್ಲಿ ಚೀನೀ ಚಕ್ರವರ್ತಿ ಪೆಕಿಂಗ್‌ನಿಂದ ನೂರು ಮೈಲು ದೂರಕ್ಕೆ ಬೇಟೆಗಾಗಿ ತೆರಳಿಬಿಟ್ಟಿದ್ದ. ಅಲ್ಲಿಯೆ ಅನುಕೂಲವಾದಾಗ ಬ್ರಿಟಿಶ್ ರಾಯಭಾರಿಗಳನ್ನು ಕಾಣುವುದಾಗಿ ತಿಳಿಸಿದ್ದ. ಅದು ವರೆಗೆ ಮೆಕಾರ್ಟನಿ ಮತ್ತು ಅವನ ಪರಿವಾರಕ್ಕೆ ಕೆಲ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸುವ ಏರ್ಪಾಡಾಗಿತ್ತು. ಪೆಕಿಂಗಿನ ಉತ್ತರಕ್ಕೆ ಕೆಲ ಮೈಲು ದೂರದಲ್ಲಿದ್ದ ಚಕ್ರವರ್ತಿಯ ಬೇಸಿಗೆಯ ಅರಮನೆ ೬೦,೦೦೦ ಎಕರೆ ವಿಸ್ತೀರ್ಣದ ಉದ್ಯಾನದಲ್ಲಿತ್ತು. ಉದ್ಯಾನ ನಿಜವಾಗಿಯೂ ಕಣ್ಣಿಗೊಂದು ಹಬ್ಬವಾಗಿತ್ತು. ಅರಮನೆಯ ವೈಭವವನ್ನು ಕಂಡಾಗ ಮೆಕಾರ್ಟನಿಯ ಎದೆ ಝಲ್ಲೆಂದಿತು. ಆ ವೈಭವದ ಎದುರಿನಲ್ಲಿ ಈತ ತಂದ ೧೩,೦೦೦ ಪೌಂಡ್ ಬೆಲೆಯ ಕಾಣಿಕೆಯ ಪಾಡೇನು? ಆದರೆ ಈಗ ಏನೂ ಮಾಡಬರುವಂತಿರಲಿಲ್ಲ. ಇಷ್ಟೆಲ್ಲ ಸಂಪತ್ತಿದ್ದರೂ ವಾಯು ಮಾಪನ ಯಂತ್ರವನ್ನು ಈ ಸ್ವರ್ಗಪುತ್ರನಾದ ಚಕ್ರವರ್ತಿ ಕಂಡಿರಲಿಕ್ಕಿಲ್ಲ ಎಂದು ಮೆಕಾರ್ಟನಿ ತನಗೆ ತಾನೇ ಸಮಾಧಾನ ಹೇಳಿಕೊಂಡ.

ಕೆಲ ದಿನಗಳಲ್ಲಿ ಚಕ್ರವರ್ತಿಯಿದ್ದ ಜೆಹೋಲಕ್ಕೆ ಮೆಕಾರ್ಟನಿ ಬರಬಹುದು ಎಂದು ವರ್ತಮಾನ ಬಂತು. ಈ ವಿಲಂಬ ಒಟ್ಟಿನಲ್ಲಿ ಎಲ್ಲರಿಗೂ ಒಂದು ಉಪಕಾರವನ್ನೆ ಮಾಡಿತ್ತು. ಏಕೆಂದರೆ ಉಭಯ ಪಕ್ಷದವರೂ ಸಾಷ್ಟಾಂಗ ನಮಸ್ಕಾರದ ವಿಷಯದಲ್ಲಿ ಒಂದು ಒಪ್ಪಂದಕ್ಕೆ ಬಂದಿದ್ದರು. ಮೂರನೆಯ ಜಾರ್ಜನ ಚಿತ್ರಕ್ಕೆ ಚೀನೀ ಸರದಾರನೊಬ್ಬ ಸಾಷ್ಟಾಂಗ ಹಾಕಿದರೆ ತಾನು ಚಕ್ರವರ್ತಿಗೆ ಸಾಷ್ಟಾಂಗ ಹಾಕಲು ಸಿದ್ಧ ಎಂದು ಮೆಕಾರ್ಟನಿ ತಿಳಿಸಿದ್ದ. ಆದರೆ ಇಂಥ ಸೂಚನೆಗೆ ಒಪ್ಪಿಗೆ ಕೊಡುವ ಅಥವಾ ಬಿಡುವ ಅಧಿಕಾರ ಚಕ್ರವರ್ತಿಯ ನಂತರ ಚೀನೀ ಸಾಮ್ರಾಜ್ಯಕ್ಕೇ ಹಿರಿಯ ಅಧಿಕಾರಿಯಾಗಿದ್ದ ಹೊಶೆನ್‌ಗೆ ಮಾತ್ರ ಇತ್ತು. ಹೊ ಶೆನ್ ತುಂಬ ಲಂಚಗುಳಿಯಾಗಿದ್ದ. ಚಕ್ರವರ್ತಿ ಚಿಯೆನ್‌ನಾನ ನಂತರ ಬಂದ ಚಕ್ರವರ್ತಿಯ ಕಾಲದಲ್ಲಿ ಹೊಶೆನ್ ಪದಚ್ಯುತನಾದಾಗ ಅವನು ೩೦ ಕೋಟಿ ಪೌಂಡುಗಳಷ್ಟು ಆಸ್ತಿಯನ್ನು ಕೂಡಿ

ಹಾಕಿದ್ದನೆಂಬುದು ತಿಳಿಯಿತು.

ತನ್ನನ್ನು ಅರಸನೆಂದು ಕರೆದುಕೊಂಡರೂ ಮೂರನೆಯ ಜಾರ್ಜನು ಕೆಂಪು ಕಾಡು ಮನುಷ್ಯನೇ ಆದ್ದರಿಂದ ಯಾವ ಚೀನೀ ಅಧಿಕಾರಿಯೂ ಅವನಿಗೆ ಸಾಷ್ಟಾಂಗ ಹಾಕಲಾರ ಎಂದು ಹೊಶೆನ್ ಹೇಳಿದ. ಮತ್ತೆ ಮೊದಲಿನ ಬಿಕ್ಕಟ್ಟೇ ಉದ್ಭವಿಸಿತು. ಆದರೆ ಅದು ಹೇಗೋ ಒಮ್ಮಿಂದೊಮ್ಮೆ ಮುಖ್ಯ ಮಂತ್ರಿ ಹೊಶೆನ್ ಸಡಿಲಾದ. ಸಾಷ್ಟಾಂಗಹಾಕುವ ವಿಧಿಯನ್ನುಬಿಟ್ಟರೂ ನಡೆದೀತು ಎಂದಾತ ಮೆಕಾರ್ಟನಿಗೆ ತಿಳಿಸಿದ. ಆದರೆ ಆದಷ್ಟು ಬೇಗ ಮೆಕಾರ್ಟನಿಯನ್ನು ಚೀನದಿಂದ ಹೊರಹಾಕಲು ಚಕ್ರವರ್ತಿ ನಿಶ್ಚಯಿಸಿರುವುದನ್ನು ಮಾತ್ರ ಹೇಳಲಿಲ್ಲ. ಛೆ! ಇವರ ಕಾಣಿಕೆಯ ಮನೆ ಹಾಳಾಗ! ಈ ಕೆಂಪು ಕಾಡು ಜನ ತುಂಬ ಉಪದ್ರವಕಾರಿಗಳಾಗಿದ್ದರು. ಚೀನದ ಚಕ್ರವರ್ತಿಗೆ ಒಂದು ಹತ್ತಿಪ್ಪತ್ತು ಬಂಗಾರದ ಗಿಲೀಟಿನ ಗಡಿಯಾರಗಳಿಂದ ಆಗಬೇಕಾದ್ದೇನು?

ಅಂತೂ ಸೆಪ್ಟೆಂಬರ ೧೪ ರಂದು ನಸುಕಿನಲ್ಲಿ ಚಕ್ರವರ್ತಿಯ ದರ್ಶನ ಪಡೆಯತಕ್ಕದ್ದೆಂದು ನಿರ್ಧಾರವಾಯಿತು. ಅಂತೇ ಆ ದಿನ ಬೆಳಗಿನ ಝಾವದಲ್ಲಿ ನಾಲ್ಕು ಗಂಟೆಗೇ ಮೆಕಾರ್ಟನಿ ಮತ್ತು ಅವನ ಪರಿವಾರ ಬಹು ಜೋಕೆಯಿಂದ ಬಟ್ಟೆ ಹಾಕಿಕೊಳ್ಳತೊಡಗಿತ್ತು. ಇಷ್ಟು ಬೇಗನೆ ಎಬ್ಬಿಸಿದ ಇವರೆಂಥ ಕಾಡು ಜನ ಎಂದು ಮೆಕಾರ್ಟನಿ ಬಾಯಿ ಬಿಟ್ಟಿಲ್ಲದಿದ್ದರೂ ಮನದಲ್ಲಿಯೆ ಅಂದುಕೊಂಡ. ಸಾಷ್ಟಾಂಗ ಹಾಕಲು ಒಪ್ಪದ ರಾಯಭಾರಿಗೆ ಸಂದರ್ಶನವೀಯುವುದರಲ್ಲಿ ಇರುವ ಮಹತ್ವವಾದರೂ ಏನು ಎಂದು ಚಕ್ರವರ್ತಿ ಅವನನ್ನು ಒಂದು ಡೇರೆಯಲ್ಲಿ ಕಾಣುವುದಾಗಿ ತಿಳಿಸಿದ್ದ. ಅರಮನೆಯ ಸಂದರ್ಶನ ಕೋಣೆಗಳನ್ನು ಇಂಥ ಕ್ಷುಲ್ಲಕ ಪ್ರಸಂಗಕ್ಕಾಗಿ ಉಪಯೋಗಿಸುವುದರಲ್ಲಿ ಅರ್ಥವಿರಲಿಲ್ಲ.

ಸೂರ್ಯೋದಯಕ್ಕೆ ಸರಿಯಾಗಿ, ಸೂರ್ಯನ ಕೆಂಪು ಕಿರಣಗಳು ಉದ್ಯಾನದ ವೃಕ್ಷಾದಿಗಳ ಮೇಲೆ ಬೀಳುತ್ತಿದ್ದಂತೆ ಮಹಾವೈಭವದೊಂದಿಗೆ ದೂರದ ಕಾಡೊಂದರಿಂದ ಚಕ್ರವರ್ತಿ ಮೆರವಣಿಗೆಯಲ್ಲಿ ಬಂದ. ನಗಾರಿ ನೌಬತ್ತುಗಳನ್ನು ಬಾರಿಸುತ್ತ, ನಾನಾ ವಾದ್ಯಗಳನ್ನೂದುತ್ತ ದೊಡ್ಡ ಗುಂಪೊಂದು ಅವನ ಜೊತೆ ಇತ್ತು. ಅವನ ಸುತ್ತ ಧ್ವಜಗಳು ಹಾರಾಡುತ್ತಿದ್ದವು. ಅನೇಕಾನೇಕ ಛತ್ರಚಾಮರಗಳ ಸೇವೆ ಸ್ವೀಕರಿಸುತ್ತ, ವಂದಿ-ಮಾಗಧರ ಹೊಗಳಿಕೆಯ ನಡುವೆ ಆತ ಬಹು ಠೀವಿಯಲ್ಲಿ ಬಂದ. ಚಕ್ರವರ್ತಿ ಸಾದಾ ಕಪ್ಪು ಬಣ್ಣದ ರೇಶಿಮೆ ಬಟ್ಟೆಯನ್ನು ತೊಟ್ಟಿದ್ದ. ಆತನ ತಲೆಯ ಮೇಲಿನ ಕುಲಾವಿಯಲ್ಲಿರುವ ಮುತ್ತು ಒಂದೇ ಅವನು ತೊಟ್ಟ ಆಭರಣವಾಗಿತ್ತು. (ಹೊಶೆನ್ ಮುಂದೆ ಪದಚ್ಯುತನಾದಾಗ ಚಕ್ರವರ್ತಿಯ ಬಳಿ ಇದ್ದ ಈ ಮುತ್ತಿಗಿಂತಲೂ ದೊಡ್ಡದಾದ ಮುತ್ತು ಅವನ ಹತ್ತಿರ ಇತ್ತು ಎಂಬ ಆರೋಪವೂ ಅವನ ಮೇಲೆ ಬಂದಿತ್ತು.)

ಚಕ್ರವರ್ತಿ ಬಂದು ಆಸನಾರೂಢನಾದ ಮೇಲೆ ಮೆಕಾರ್ಟನಿಗೆ ಪ್ರವೇಶ ಮಾಡಲು ಹೇಳಲಾಯಿತು. ದರಬಾರಿನ ಸಂಪ್ರದಾಯಗಳನ್ನು ರಾಜಸಂಪ್ರದಾಯ ರಕ್ಷಣಾಮಂಡಳದ ಅಧ್ಯಕ್ಷ ಮೆಕಾರ್ಟನಿಗೆ ತಿಳಿಸಿಟ್ಟಿದ್ದ. ಮೆಕಾರ್ಟನಿ ಜಾರ್ಜ್ ದೊರೆಯ ಪತ್ರವನ್ನಿಟ್ಟಿದ್ದ ರತ್ನಾಲಂಕೃತವಾದ ಬಂಗಾರದ ಪೆಟ್ಟಿಗೆಯನ್ನು ಎರಡೂ ಕೈಲಿ ತಲೆಯ ಮೇಲೆ ಎತ್ತಿ ಹಿಡಿದುಕೊಂಡು ಸಾಗಿ ಸಿಂಹಾಸನದ ಬಳಿ ಮೊಳಕಾಲೂರಿ ಚಕ್ರವರ್ತಿಗೆ ಅರ್ಪಿಸಿ ಒಂದು ನಾಲ್ಕು ಮಾತುಗಳನ್ನು ಬಿನ್ನವಿಸಿಕೊಂಡ.

ಇದು ಅಧಿಕೃತವಾದ ಬ್ರಿಟಿಶ್ ವರದಿ. ಆದರೆ ಚೀನೀ ವರದಿಗಳ ಹೇಳಿಕೆ ಬೇರೆಯೆ ಇದೆ. ಸಾಷ್ಟಾಂಗ ಹಾಕಲು ನಿರಾಕರಿಸಿದ್ದರೂ ಮೆಕಾರ್ಟನಿ ಚಕ್ರವರ್ತಿಯ ಸಮ್ಮುಖದಲ್ಲಿ ನಿಂತಾಗ ಚಕ್ರವರ್ತಿಯ ದಿವ್ಯಪ್ರಭೆಯಿಂದ ಹತ

ಬುದ್ಧನಾದನೆಂದೂ ತನಗರಿಯದೆಯೆ ಸಾಷ್ಟಾಂಗ ಹಾಕಿದನೆಂದೂ ಚೀನೀ ವರದಿಗಳು ಹೇಳಿವೆ. ಇವೆರಡರಲ್ಲಿ ಯಾವುದು ಸತ್ಯ ಎಂದು ಇದು ವರೆಗೂ ಗೊತ್ತಾಗಿಲ್ಲ. ಮೆಕಾರ್ಟನಿಯ ಖಾಸಗಿ ದಿನಚರಿಯಿಂದ ಇದರ ಮೇಲೆ ಬೆಳಕು ಬಿದ್ದಿಲ್ಲ.

ಚಕ್ರವರ್ತಿ ರಾಜಠೀವಿಯಲ್ಲಿ ಅರಸು ಜಾರ್ಜನ ಪತ್ರವನ್ನು ಸ್ವೀಕರಿಸಿದ. ಈ ಸಂದರ್ಶನದ ಮುಖ್ಯ ಕಾರ್ಯ ಇಲ್ಲಿಗೆ ಮುಗಿದಂತಾಯಿತು. ಇನ್ನುಳಿದದ್ದು ಚಕ್ರವರ್ತಿ ಕೊಡಬೇಕಾದ ಉತ್ತರದ ವಿಚಾರ. ಅದಿನ್ನೂ ಬರೆದು ಸಿದ್ಧವಾಗಬೇಕಷ್ಟೆ. ಈ ನಡುವಿನ ಅವಧಿಯಲ್ಲಿ ಭೋಜನ ಕೂಟದ ಏರ್ಪಾಡಾಯಿತು. ಚಕ್ರವರ್ತಿ ತನ್ನ ಸ್ವಂತ ಕೈಯಿಂದ ಲಾರ್ಡ್ ಮೆಕಾರ್ಟನಿ ಮತ್ತು ಸರ್ ಜಾರ್ಜ್ ಸ್ಟಾಂಟನ್ನರಿಗೆ ಬಿಸಿ ಮದ್ಯದ ಪೇಲೆಗಳನ್ನು ಕೊಟ್ಟ. ಇಂಥ ನಸುಕಿನಲ್ಲಿ ಒಂದೇ ಮೊಣಕಾಲೂರಿ ನಮಸ್ಕರಿಸುವುದಾದರೂ ಬಿಗಿಯಾದ ಕೆಲಸವಾದ್ದರಿಂದ ಮೆಕಾರ್ಟನಿಗೆ ಈ ಮದ್ಯ ಆ ಸಮಯದಲ್ಲಿ ಬಲು ಇಷ್ಟವಾಗಿ ಕಂಡಿರಬೇಕು.

ಚಕ್ರವರ್ತಿ "ನಿಮ್ಮ ಜಾರ್ಜ್ ಅರಸನಿಗೆ ವಯಸ್ಸೆಷ್ಟು?" ಎಂದು ಮುಂತಾಗಿ ಅನೇಕ ಪ್ರಶ್ನೆಗಳನ್ನು ಕೇಳಿದ. ಬ್ರಿಟಿಶ್ ಚಕ್ರವರ್ತಿ ಇನ್ನೂ ೫೫ ವರ್ಷದ ಹುಡುಗ ಎಂದು ಕೇಳಿದಾಗ ಆತ ೮೩ ವರ್ಷದ ವರೆಗೆ ಬದುಕುವನೆಂದು ತಾನು ಹಾರೈಸುವದಾಗಿ ಚಕ್ರವರ್ತಿ ಹೇಳಿದ. ೮೩ ರಾಜಯೋಗ್ಯವಾದ ವಯಸ್ಸು ಎಂಬ ಭಾವನೆ ಆಗ ಅಲ್ಲಿತ್ತು. ಏಕೆಂದರೆ ಚೀನೀ ಚಕ್ರವರ್ತಿಗೆ ಆ ಸಮಯದಲ್ಲಿ ೮೩ ವರ್ಷಗಳಾಗಿದ್ದವು. ಆತ ನೋಡಲು ಅರುವತ್ತರ ಪ್ರಾಯದವನಂತೆ ಕಾಣುತ್ತಿದ್ದ ಎಂಬ ಮಾತು ಬೇರೆ.

ತನ್ನ ಹುಡುಗ ಕೈಯಾಳು ಚೀನೀ ಮಾತಾಡಬಲ್ಲ ಎಂದು ಮೆಕಾರ್ಟನಿ ಹೇಳಲು ಚಕ್ರವರ್ತಿ ಸ್ಟಾಂಟನ್ನನ ಮಗನನ್ನು ಕರೆಸಿ ಮಾತನಾಡಿಸಿದ. ಅವನಿಗೆ ತನ್ನ ಸೊಂಟ ಪಟ್ಟಿಯಲ್ಲಿದ್ದ ಪುಟ್ಟ ಹಣದ ಚೀಲವೊಂದನ್ನು ಬಹುಮಾನವಾಗಿ ಕೊಟ್ಟ. ಸಾಮಾನ್ಯರಿಗೆ ಇದಕ್ಕಿಂತ ಹೆಚ್ಚಿನ ಗೌರವ ಬೇರೊಂದಿರಲಿಲ್ಲವಾದ್ದರಿಂದ ಚೀನೀ ಸರದಾರರನೇಕರು ಆ ಹುಡುಗನೊಂದಿಗೆ ಮಾತನಾಡಲು ತವಕಿಸಿದರು. ಮುಂದೆ ಈ ಹುಡುಗ ಚೀನದ ಮೇಲೆ ಅಧಿಕೃತ ರೀತಿಯಲ್ಲಿ ಮಾತನಾಡುವ ಯೋಗ್ಯತೆಯನ್ನು ಪಡೆದ. ಮೇಲಾಗಿ ಚೀನದ ಚಕ್ರವರ್ತಿಯೊಡನೆ ಸಂಭಾಷಣೆ ಗೈದ ಬ್ರಿಟಿಶ್ ಬಾಲಕ ಇವನೊಬ್ಬನೇ ಆಗಿದ್ದ.

ಮೇಜವಾನಿ ಮುಗಿದ ನಂತರ ಐದು ತಾಸುಗಳ ವರೆಗೆ ಮನೋರಂಜನೆಯ ಕಾರ್ಯಕ್ರಮಗಳು ಜರುಗಿದವು. ಕುಸ್ತಿ, ತಂತಿಯ ಮೇಲೆ ಕಸರತ್ತು, ನೃತ್ಯ, ಸಂಗೀತ ಎಲ್ಲ ನಡೆದವು. ಮೇಜವಾನಿಗಿಂತಲೂ ಇದೇ ಸೊಗಸಾಗಿತ್ತು. ಮೇಜವಾನಿಯ ಕಾಲದಲ್ಲಿ ಸಂಪ್ರದಾಯದಂತೆ ಪ್ರತಿಯೊಬ್ಬನೂ ಗಂಭೀರ ಮುಖದಿಂದ ಕುಳಿತು ತಿನ್ನಬೇಕಾಗಿತ್ತು. ಮಾತಿಲ್ಲ, ಕತೆಯಿಲ್ಲ, ನಗುವಿಲ್ಲ, ಹರಟೆಯಿಲ್ಲ.

ಜಾರ್ಜ್ ಅರಸನ ಪತ್ರದ ವಿಷಯ ತಿಳಿದಾಗ ಚಕ್ರವರ್ತಿ ಮತ್ತು ಅವನ ದರಬಾರಿನವರಿಗೆ ಆಶ್ಚರ್ಯಾಘಾತವಾಯಿತು. ಉಭಯ ರಾಷ್ಟ್ರಗಳಲ್ಲಿ ಸ್ನೇಹವನ್ನೂ ವ್ಯಾಪಾರವನ್ನೂ ಹೆಚ್ಚಿಸುವ ಉದ್ದೇಶದಿಂದ ಲಾರ್ಡ್ ಮೆಕಾರ್ಟನಿ ತನ್ನ ರಾಯಭಾರಿಯಾಗಿ ಚೀನದಲ್ಲಿರಬೇಕು ಎಂದು ಜಾರ್ಜ್ ಅರಸು ಸೂಚಿಸಿದ್ದ. "ಛೆ! ಛೆ! ಅಸಾಧ್ಯ. ಅಶಕ್ಯ. ಚೀನದಲ್ಲಿ ವಿದೇಶೀಯರು ಇರಲಾರರು. ರಾಜ ದರ್ಬಾರಿನಲ್ಲಿಯಂತೂ ಅದು ಸಾಧ್ಯವೇ ಇಲ್ಲ. ಒಂದು ವೇಳೆ ಇರಲು ಅಪ್ಪಣೆ ಕೊಟ್ಟರೂ ಚೀನೀ ಪದ್ಧತಿಗಳನ್ನನುಸರಿಸಬೇಕಾದ ಬ್ರಿಟಿಶ್ ರಾಯಭಾರಿ ಚೀನೀಯನೇ ಆಗಿ ಹೋಗಿ ತಿರುಗಿ ಎಂದೂ ತನ್ನ ನಾಡಿಗೆ ಹೋಗಲಿಕ್ಕಿಲ್ಲ. ಅರಸು

ಜಾರ್ಜನೊಡನೆ ಪತ್ರವ್ಯವಹಾರವನ್ನೂ ನಡೆಸಲಿಕ್ಕಿಲ್ಲ. ಛಿ! ಛೆ! ಇದು ಅಸಾಧ್ಯವಾದ ಮಾತು" ಎಂದು ಹೊ ಶೆನ್ ಮಂತ್ರಾಲೋಚನೆ ಹೇಳಿದ. ನಿರಾಕರಣೆಯ ಪತ್ರವನ್ನೀಗ ಚಕ್ರವರ್ತಿ ಬರೆಸತೊಡಗಿದ್ದ.

ಚಕ್ರವರ್ತಿ ಮತ್ತು ಅವನ ಪ್ರಜೆಗಳನ್ನು ಕ್ರಿಶ್ಚನ್ ಧರ್ಮಕ್ಕೆ ಮತಾಂತರಿಸಬೇಕೆನ್ನುವ ತಮ್ಮ ಆಶೆಗೆ ತಿಲಾಂಜಲಿಯನ್ನೀಯಬೇಕಾಗಿ ಬಂದಿದ್ದರೂ ಕೆಲ ಪಾದ್ರಿಗಳು ಇನ್ನೂ ಚೀನದಲ್ಲಿದ್ದರು. ಅವರಲ್ಲೊಬ್ಬನಿಂದ ಚಕ್ರವರ್ತಿ ತನ್ನ ಉತ್ತರವನ್ನು ಬರೆಸಿದ.

"ಚೀನದ ಚಕ್ರವರ್ತಿಯ ಬಳಿ ಐಹಿಕ ಸಂಪತ್ತೆಲ್ಲವೂ ಇದೆ. ಆದರೂ ಮೆಕಾರ್ಟನಿ ತಂದಿರುವ ಕಾಣಿಕೆಗಳನ್ನು ಅರಸು ಜಾರ್ಜನ ಸಮಾಧಾನಕ್ಕಾಗಿ ಸ್ವೀಕರಿಸಿದೆ. ಚೀನದ ನಾಗರಿಕತೆಯ ಲಾಭ ಪಡೆಯಬೇಕೆಂಬ ಜಾರ್ಜನ ಇಚ್ಛೆ ಯೋಗ್ಯವಾಗಿದ್ದರೂ ಚೀನೀಯರು ಮತ್ತು ಕೆಂಪು ಕಾಡು ಜನರಲ್ಲಿರುವ ಅಪಾರ ತಾರತಮ್ಯವನ್ನು ಗಮನಿಸಿದಾಗ ಈ ಇಚ್ಛೆ ಅಸಾಧುವೂ ಅಸಾಧ್ಯವೂ ಎಂದೇ ಹೇಳಬೇಕಾಗುವುದು. ವ್ಯಾಪಾರವನ್ನು ಬೆಳೆಸಬೇಕು, ತನ್ನ ಜನರು ಚಕ್ರವರ್ತಿಯ ದರಬಾರಿನಲ್ಲಿರಬೇಕು— ಮತ್ತೂ ಯಾವ ಬಯಕೆಗಳಿವೆಯೊ . . . . ? ಇಂಥ ಬಯಕೆಗಳನ್ನು ಇನ್ನುಮುಂದೆ ಇಟ್ಟುಕೊಳ್ಳದಿರುವುದೇ ಲೇಸು. ಈ ಸ್ಪಷ್ಟ ಉತ್ತರವನ್ನು ಅಲಕ್ಷಿಸಿ ನಿನ್ನ ಕೈಕೆಳಗಿನವರ ದುರ್ಬೋಧನೆಗೆ ಕಿವಿಗೊಟ್ಟು ನಿನ್ನ ಕಾಡು ವ್ಯಾಪಾರಿಗಳು ವ್ಯಾಪಾರೋದ್ದೇಶದಿಂದ ಪೆಕಿಂಗ್ ಮತ್ತು ಟಿಯೆನ್‌ಸ್ಟೀನಕ್ಕೆ ಬಂದದ್ದಾದರೆ ಖಂಡಿತವಾಗಿಯೂ ಅವರಿಗೆ ಅಲ್ಲಿ ಪ್ರವೇಶ ದೊರೆಯದು. ಅವರನ್ನು ತತ್‌ಕ್ಷಣ ಗಡೀಪಾರು ಮಾಡಲಾಗುವುದು. ನಿನ್ನವರ ದೀರ್ಘ ಪ್ರವಾಸ ವ್ಯರ್ಥವಾಗುವುದು. ಮುನ್ನೆಚ್ಚರಿಕೆ ಸಿಗಲಿಲ್ಲ ಎಂಬ ಆಕ್ಷೇಪ ಬೇಡ. ಈ ಎಚ್ಚರಿಕೆಯನ್ನು ಗಮನಿಸು. ದುರ್ಲಕ್ಷ್ಯ ಮಾಡಬೇಡ. ಇದು ಚಕ್ರವರ್ತಿಯ ವಿಶೇಷಾಜ್ಞೆ." ಇದು ಚೀನದ ಚಕ್ರವರ್ತಿ ಬರೆಸಿದ ಪತ್ರದ ಸಾರಾಂಶವಾಗಿತ್ತು.

ಇಂಥ ಪತ್ರವನ್ನೇನೂ ಮೆಕಾರ್ಟನಿ ಬಯಸಿರಲಿಲ್ಲ. ಆದರೆ ಚಕ್ರವರ್ತಿ ಕೊಟ್ಟಿದ್ದನ್ನು ಒಯ್ಯದೆ ಗತ್ಯಂತರವಿರಲಿಲ್ಲ. ತುಂಬ ಆದರದಿಂದ ಆದರೆ ಅಷ್ಟೇ ದೃಢ ನಿರ್ಧಾರದಿಂದ ಮೆಕಾರ್ಟನಿಯ ಪರಿವಾರವನ್ನು ಅವರ ಹಡಗಗಳಿಗೆ ಮುಟ್ಟಿಸಲಾಯಿತು. ಅವರಿಗೆ ವಿಪುಲ ಕಾಣಿಕೆಗಳೂ ಸಿಕ್ಕವು. (ಅರಸನಿಗಾಗಿ ಎಂದು ಕೊಟ್ಟಿದ್ದ ಕಾಣಿಕೆಗಳ ಪೆಟ್ಟಿಗೆಗಳ ಮೇಲೆ ಮೆಕಾರ್ಟನಿ "ಜಾರ್ಜ್ ರೆಕ್ಸ್" ಎಂದು ಬರೆಸಿದ್ದ. ಚೀನದಲ್ಲಿಯಂತೆ ಇಂಗ್ಲಂಡಿನಲ್ಲಿಯೂ ಬೆಲೆಯುಳ್ಳವಸ್ತುಗಳು ಮಾಯವಾಗುವ ಅಥವಾ ಅನ್ಯರ ಕೈಸೇರುವ ಸಂಭವವಿತ್ತೆಂದೇ ಆತ ಈ ಮುಂಜಾಗ್ರತೆ ವಹಿಸಿದ್ದ.) ಈ ಪರಿವಾರಕ್ಕೆ ರಾಜೋಪಚಾರವನ್ನು ಚಕ್ರವರ್ತಿ ಒದಗಿಸಿದ. ಮೊದಲು ಈ ಪರಿವಾರಕ್ಕಾಗಿ ದಿನವೊಂದಕ್ಕೆ ೫೦೦ ಪೌಂಡು ವೆಚ್ಚವಾದರೆ ಮುಂದೆ ಆ ವೆಚ್ಚ ೩,೬೬೬ ಪೌಂಡುಗಳ ವರೆಗೂ ಮುಟ್ಟಿತು ಎಂದರೆ ಈ ಉಪಚಾರದ ವೈಭವದ ಕಲ್ಪನೆ ಬಂದೀತು. ಚೀನದಿಂದ ಹೊರಡುವ ಪೂರ್ವದಲ್ಲಿ ಅವರಿಗೆ ಮತ್ತೊಮ್ಮೆ ಚಕ್ರವರ್ತಿಯ ದರ್ಶನಲಾಭ ದೊರಕಿತು. ಚೀನದ ಪ್ರೇಕ್ಷಣೀಯ ಸ್ಥಳಗಳನ್ನೂ ವಸ್ತುಗಳನ್ನೂ ನೋಡುವ ಅವಕಾಶ ದೊರೆಯಿತು. ಆದರೆ ಬಂದ ಹಾದಿಗೆ ಸುಂಕವಿಲ್ಲವೆಂಬಂತೆ ಅವರು ತಿರುಗಬೇಕಾಯಿತು.

೧೭೯೪, ಜನವರಿ ೯ ರಂದು ಮೆಕಾರ್ಟನಿಯ ಪರಿವಾರ ತಿರುಗಿ ಇಂಗ್ಲಂಡಿಗೆ ಹೊರಟಿತು. ಚೀನಕ್ಕೆ ಹೋದ ಪ್ರಥಮ ಬ್ರಿಟಿಶ್ ರಾಯಭಾರಿ ಇಂತು ಅಯಶಸ್ವಿಯಾಗಿ ಮರಳಿದ. ★



ಸೆರೆಮನೆಯಿಂದ
ಪಾರಾಗುವ
ಹಂಬಲ
ಅಪೂರ್ವ
ಶೋಧದಲ್ಲಿ
ಪರಿಣಮಿಸಿತು

ಪ್ಯಾರಾಚೂಟ್ ಪಿತಾಮಹ ಆಂದ್ರೆ ಗಾರ್ನರೀನ್

ಎಂ. ಸಿದ್ಧರಾಮೇಶ

ಆಂದ್ರೆ ಗಾರ್ನರೀನನಿಗೆ ಸೆರೆಮನೆಯಿಂದ ಬಿಡುಗಡೆ ಪಡೆಯಬೇಕಾಗಿತ್ತು. ಆದರೆ ಶಿಕ್ಷೆ ಮುಗಿಸಿ ಹೊರಬೀಳುವ ಆಸೆ ಈ ಜನ್ಮದಲ್ಲಿರಲಿಲ್ಲ. ಅವನಿಗಾದ ಶಿಕ್ಷೆ ಆಜೀವವಾಗಿತ್ತು. ಅವನು ದೊಡ್ಡ ಮೊತ್ತವೊಂದನ್ನು ದಂಡ ತೆತ್ತು ಹೊರಬೀಳಲು ಸಾಧ್ಯವಿತ್ತಾದರೂ ಅದಕ್ಕೆ ಬೇಕಾದ ಹಣ ಇರಲಿಲ್ಲ.

ಪಾರಾಗಲು ಸೆರೆಮನೆಯನ್ನು ಒಡೆದೋ ಹಾರಿಯೋ ಓಡಿಹೋಗುವುದೊಂದೇ ಉಪಾಯವೆಂದು ಯೋಚಿಸಿದಂತೆ ಅವನಿಗೆ ಖಚಿತವಾಗುತ್ತ ಬಂದಿತ್ತು. ಆದರೆ ಬುಡಾಪೆಸ್ತಿನ ಸೆರೆಮನೆಯ ಆ ಗಗನ ಚುಂಬಿತ ಗೋಡೆಯನ್ನು ಕಂಡು ಅವನ ಎದೆಯಲ್ಲಿ ಆ ಆಸೆಯೂ ಹೆಚ್ಚಾಗಿ ಸ್ಫೂರ್ತಿ ಕೊಡಲಿಲ್ಲ. ದೊಡ್ಡ ದೊಡ್ಡ ಬಂಡೆಗಲ್ಲುಗಳಿಂದ ಕಟ್ಟಿದ ಅದರ ವರ್ತುಲಾಕಾರದ ಗೋಡೆಯಲ್ಲಿ ಕನ್ನ ಹಾಕುವುದು ಕಲ್ಪನಾತೀತವಾಗಿತ್ತು. ಇಪ್ಪತ್ತನಾಲ್ಕು ತಾಸೂ ಗಸ್ತಿ ಕೊಡುವ ಕಾವಲುಗಾರರ ಕಣ್ಣು ತಪ್ಪಿಸಿಕೊಂಡು

ಓಡಿಹೋಗುವುದಕ್ಕೂ ಆಸ್ಪದವಿರಲಿಲ್ಲ.

ಫ್ರೆಂಚ್ ಕ್ರಾಂತಿಯ— ೨೦೦ ವರ್ಷಗಳ ಹಿಂದಿನ— "ಸೆರೆಮನೆ ಸುಧಾರಣೆ"ಗಳ ಹೆಸರೇ ಕೇಳಿರದ— ಕಾಲವಾದರೂ ಬುಡಾಪೆಸ್ತಿನ ಈ ಸೆರೆಮನೆಯಲ್ಲಿ ಕೈದಿಗಳನ್ನು ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದರೆಂದಲ್ಲ. ಗಾರ್ನರೀನನಿಗೆ ಎರಡು ಹೊತ್ತು ಸಮೀಚೀನ ಊಟ ಮತ್ತು ಮಲಗಲು ಒಳ್ಳೇ ಹಾಸಿಗೆಯ ಸೌಕರ್ಯವಿತ್ತು. ಆದರೆ ಬೆಳಕು ಗಾಳಿ ಆಡಲು ಅಲ್ಲಿ ಅವಕಾಶ ಕಡಿಮೆಯಾಗಿತ್ತು. ಮನುಷ್ಯ ದರ್ಶನವೇ ದುರ್ಲಭವಾಗಿದ್ದ ಅಲ್ಲಿ ಭಾರಿ ಬೀಗದ ಕೈ ಗೊಂಚಲನ್ನು ಟೊಂಕಕ್ಕೆ ಕಟ್ಟಿಕೊಂಡು ಸೆರೆ ಮನೆ ಕೋಣೆಯ ಬಾಗಿಲು ತೆರೆದು ಅನ್ನ ಕೊಡಲು ಬರುವ ವೃದ್ಧ ವಾರ್ಡರನ ಆಗಮನವು ಗಾರ್ನರೀನನ ಒಂಟಿತನವನ್ನು ಇನ್ನಷ್ಟು ಅಸಹನೀಯವಾಗಿ ಮಾಡುತ್ತಿತ್ತು.

ಬುಡಾಪೆಸ್ತಿನ ಸೆರೆಮನೆಯಲ್ಲಿ ಗಾರ್ನರೀನನಿಗೆ ಒಂದು ಸ್ವಾತಂತ್ರ್ಯ ಮಾತ್ರ ಇತ್ತು; ಅವನು ಆ ಸೆರೆಮನೆಯ ಮಾಳಿಗೆಯನ್ನೇರಿ ಬಾಹ್ಯ ಜಗತ್ತನ್ನು ನೋಡಬಹುದಾಗಿತ್ತು. ಸೆರೆಮನೆ ಎಷ್ಟು ಎತ್ತರವಾಗಿತ್ತೆಂದರೆ ಮಾಳಿಗೆಯಿಂದ ಯಾರಾದರೂ ಹಾರಿಕೊಂಡು ಓಡಿಹೋಗಬಹುದೆಂಬ ಭೀತಿ ಅಧಿಕಾರಿಗಳಿಗಿರಲಿಲ್ಲ. ಹಾಗೆ ಏರಿ ಕುಳಿತ ಆಂದ್ರೆಗೆ ಹಗಲಲ್ಲಿ ಬುಡಾಪೆಸ್ಟ್ ನಗರದ ಚೋಟುದ್ದವಾಗಿ ಕಾಣುವ ಮನೆಗಳೂ ಇರುಳಲ್ಲಿ ಚಂದ್ರ ತಾರೆಗಳೂ ಸ್ವಾತಂತ್ರ್ಯದ ಸಂದೇಶವನ್ನು ಬೀರುವಂತೆ ಭಾಸವಾಗುತ್ತಿತ್ತು. ಹಾವಿನಂತೆ ಹರಿಯುವ ಡ್ಯಾನ್ಯೂಬ್ ನದಿಯನ್ನು ದಿಟ್ಟಿಸುತ್ತ ಆತ ತನ್ಮಯನಾಗುತ್ತಿದ್ದ.

ಮತ್ತು ತಮಾಷೆಯಾದ ವಿಚಾರಗಳು ಅವನಿಗೆ ಅಲ್ಲಿ ಹೊಳೆಯುತ್ತಿದ್ದವು. ಜೈಲಿನ ಮಾಳಿಗೆಯಲ್ಲಿ ಬೆಳೆಯುತ್ತಿದ್ದ ಆ ಪುಟ್ಟ ದ್ರಾಕ್ಷೆಯ ಬಳ್ಳಿಗೆ, ಬೆಳೆಯುತ್ತ ನೆಲಕ್ಕೆ ಮುಟ್ಟಲು ಎಷ್ಟು ಕಾಲ ಬೇಕಾದೀತು? ಅದರ ಆಸರೆಯಿಂದ ಆಗ ತಾನು ಕೆಳಗಿಳಿದು ಹೋಗಬಹುದಲ್ಲ. ಆದರೆ ಆ ಬಳ್ಳಿ ಅವನಿಗೆ ಬಿಡುಗಡೆ ನೀಡಬಲ್ಲಷ್ಟು ಬೆಳೆದಾಗ ಅವನಿಗೆ ಸರಿಯಾಗಿ ೯೦ ವರ್ಷಗಳಾಗಬಹುದಿತ್ತು. ಆಂದ್ರೆಗೆ ಆ ವರೆಗೆ ಕಾಯುವ ಇಚ್ಛೆ ಇರಲಿಲ್ಲ!

ದ್ರಾಕ್ಷೆ ಬಳ್ಳಿ ಇರಲಿ ಇಲ್ಲದಿರಲಿ ಪಾರಾಗಿ ಹೋಗಲಂತೂ ಆತ ನಿರ್ಧರಿಸಿದ್ದ. ಆತ ತರುಣನಾಗಿದ್ದ ಮತ್ತು ಈ ಜೀವನದಲ್ಲಿ ಏನಾದರೊಂದು ಕೃತಕೃತ್ಯ ಮಾಡಬೇಕೆಂದು ಹಂಬಲಿಸುವವನಾಗಿದ್ದ. ತನ್ನೀ ಸೆರೆಮನೆ ವಾಸ ಮತ್ತು ಅದರಿಂದ ಪಾರಾಗಿ ಹೋಗುವ ಯತ್ನವೇ ತನ್ನನ್ನು ಕೀರ್ತಿ ಶಿಖರಕ್ಕೇರಿಸಬಹುದೆಂದೂ ಒಂದು ಶತಮಾನದ ನಂತರ ಬರಲಿರುವ ವಿಮಾನ ಯುಗದಲ್ಲಿ ತನ್ನೀ ಸಿದ್ಧಿಯು ಯುದ್ಧ ಕಲೆಗೆ ಕ್ರಾಂತಿಕಾರವಾದ ಹೊಸ ದಾರಿ ತೋರಿಸಲಿದೆಯೆಂದೂ ಮಾತ್ರ ಗಾರ್ನರೀನನಿಗೆ ಗೊತ್ತಿರಲಿಲ್ಲ.

*

ಸೆರೆಮನೆಯ ಏಕಾಂತ ಭಾವನೆಯನ್ನು ಸಹ್ಯವಾಗಿ ಮಾಡಿಕೊಳ್ಳಲು ಕೈದಿಗಳು ಅನೇಕ ವಿಧಾನಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಕೆಲವರು ತಮ್ಮೊಡನೆಯೇ ಚದುರಂಗದ ಮಾನಸಿಕ ಆಟವನ್ನಾಡಿ ಅದರಲ್ಲಿ ತಜ್ಞರಾಗಿದ್ದಾರೆ; ಕೆಲವರು ಗಣಿತದ ಸಮಸ್ಯೆಗಳನ್ನು ಬಿಡಿಸುವಲ್ಲಿ ತಲ್ಲೀನರಾಗುತ್ತಾರೆ; ಕೆಲವರು ತಾವು ಓದಿದ್ದನ್ನು ಅನುಭವಿಸಿದ್ದನ್ನು ಕೇಳಿದ್ದನ್ನು ಜ್ಞಾಪಿಸಿಕೊಳ್ಳುವ ಆಟವಾಡುತ್ತಾರೆ. ಆಂದ್ರೆ ಕೊನೆಯ ವಿಧಾನವನ್ನಾಶ್ರಯಿಸಿದ.

ಅವನು ಓದಿದ ಪುಸ್ತಕಗಳ ವಿಚಾರ ಮಾಡಲು ಬಹಳ ಕಾಲ ಹಿಡಿಯಲಿಲ್ಲ. ಅವನು ಓದಿದ್ದೇ ಕಡಿಮೆ. ಮೇಲಾಗಿ ಪಾರಾಗಿ ಹೋಗಬೇಕೆಂಬ ಉತ್ಕಟೇಚ್ಛೆ ಅವನ ಚಿಂತನೆಗಳನ್ನೆಲ್ಲ ಏಕಮುಖವಾಗಿ ಮಾಡಿತ್ತು. ಅದಕ್ಕೆ ಉಪಯೋಗವಾಗದ ಸಂಗತಿಗಳು ಅವನ ಮನಸ್ಸನ್ನು ತಡೆದು ನಿಲ್ಲಿಸುತ್ತಿರಲಿಲ್ಲ.

ಆದರೆ ಗಾರ್ನರ್‌ರೀನನ ಹತ್ತಿರ ಕೇಳಿದ ಕಥೆಗಳ ಸಂಗತಿಗಳ ಅಪರಿಮಿತ ಭಾಂಡಾರವಿತ್ತು. ಅದನ್ನಾತ ತನಗೆ ಪ್ರಯೋಜನಕ್ಕೆ ಬೀಳಬಹುದಾದ ಸಂಗತಿಗಳಿಗಾಗಿ ಕೆದರತೊಡಗಿದ. ಈ ನೆನಪಿನ ಶೋಧನೆಗಳಲ್ಲಿಯೇ ಒಂದು ದಿನ ಅವನಿಗೆ ಇಂಗ್ಲಂಡಿನಲ್ಲಿ ನಡೆದ ವೃತ್ತಾಂತವೊಂದು ಮರುಕಳಿಸಿದ್ದು.

ಅದು ಪಲಾಯನದ ಪ್ರಸಂಗವಾಗಿರಲಿಲ್ಲ. ಅದೊಂದು ವೈಜ್ಞಾನಿಕ ಸ್ಟಂಟ್ ಆಗಿತ್ತು. ವಾತಾವರಣದ ಒತ್ತಡ ಎಲ್ಲ ದಿಶೆಗಳಲ್ಲೂ ಇದೆಯೆಂಬ ತನ್ನ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ತೋರಿಸಲು ವಿಜ್ಞಾನಿ ಲಿಯೋಮಾರ್ಂಡ್ ಒಂದು ಎತ್ತರವಾದ ಗೋಡೆಯನ್ನೇರಿ ಎರಡು ಕೈಗಳಲ್ಲಿ ಎರಡು ಅರಳಿಸಿದ ಕೊಡೆಗಳನ್ನು ಹಿಡಿದುಕೊಂಡು ಕೆಳಗೆ ಹಾರಿಕೊಂಡಿದ್ದನೆಂದು ಆಂದ್ರೆ ಕೇಳಿದ್ದ. ಗಾಳಿಯಲ್ಲಿ ಸಾವಕಾಶವಾಗಿ ಇಳಿಯುತ್ತ ಸುರಕ್ಷಿತವಾಗಿ ಆ ವಿಜ್ಞಾನಿ ನೆಲ ಮುಟ್ಟಿದ್ದನೆಂದೂ ಆಂದ್ರೆ ಕೇಳಿದ್ದ.

ಹಾ! ಇಲ್ಲಿದೆ ತನ್ನನ್ನು ವಿಮೋಚನೆಗೊಳಿಸಬಲ್ಲ ವಿಚಾರ ಎಂದುಕೊಂಡ ಆಂದ್ರೆ. ಸೆರೆಮನೆಯ ಬಯಲು ಮಾಳಿಗೆಯನ್ನೇರಲು ತನಗೇನೂ ಯಾರ ಅಪ್ಪಣೆಯೂ ಬೇಕಿರಲಿಲ್ಲವಲ್ಲ. ವಿಚಾರ ಮಾಡುತ್ತ ಹೋದಂತೆ ಮಾತ್ರ ಅವನಿಗೆ ಈ ಯೋಜನೆ ಎಣಿಸಿದಷ್ಟು ಸುಕರವಲ್ಲೆಂದು ಗೋಚರಕ್ಕೆ ಬಂತು. ಇದಕ್ಕೆ ಬೇಕಾದ ಕೊಡೆಗಳನ್ನು ಎಲ್ಲಿಂದ ದೊರಕಿಸಬೇಕು? ಅದು ಅಸಾಧ್ಯವಾದ ಮಾತಾಗಿತ್ತು. ಮೇಲಾಗಿ ಬುಡಾಪೆಸ್ಟ್ ಬಳಿ ಗಾಳಿ ವೇಗವಾಗಿ ಬೀಸದ ದಿನಗಳು ವಿರಳವಾಗಿದ್ದವು. ಹೀಗಿರುವಾಗ ಗಗನಚುಂಬಿಯಾದ ಜೈಲಿನ ಮೇಲ್ಭಾಗದಿಂದ ಹಾರಿಕೊಂಡರೆ ಸುರಕ್ಷಿತವಾಗಿ ನೆಲ ಸೇರುವ ಭರವಸೆಯೂ ಇರಲಿಲ್ಲ.

ಆದರೆ ಈ ಕಲ್ಪನೆ ಗಾರ್ನರ್‌ರೀನನ ಮನಸ್ಸನ್ನು ಹಿಡಿದುಕೊಂಡುಬಿಟ್ಟಿತ್ತು. ಅವನೆದುರು ಇದ್ದ ತೊಡಕುಗಳು ಅಜೇಯವಾಗಿ ಕಂಡಷ್ಟೂ ಅದರ ವಿಚಾರ ಮತ್ತೂ ಬಲಗೊಳ್ಳುತ್ತಿತ್ತು. ಅವನ ಮನಸು ಕೊಡೆಗಳ ರಚನೆಯ ಕಡೆ ಹೊರಳಿತು. ಕೊಡೆಗಳನ್ನು ಬಟ್ಟೆಯಿಂದ ಮಾಡುತ್ತಾರೆ. ಅವು ಗುಳ್ಳೆಯಂತೆ ಗುಂಡಗಾಗಿವೆ. ಒಳಸೇರಿದ ಗಾಳಿಯ ಒತ್ತಡವು ಅವುಗಳ ಪತನವನ್ನು ಸಾವಕಾಶವಾಗಿ ಮಾಡುತ್ತದೆ. ಬಟ್ಟೆ, ಗುಳ್ಳೆಯ ಆಕಾರ . . . .

ಒಂದು ರಾತ್ರಿ ಆಂದ್ರೆ ನಡು ನಿದ್ದೆಯಲ್ಲಿ ಒಂದು ಚಮತ್ಕಾರವಾದ ಆಲೋಚನೆಯೊಡನೆ ಎದ್ದ: ಅಲಲಾ! ಕೊಡೆಯೇ ಏಕೆ ಬೇಕು ಅಂತ! ಇಲ್ಲಿತ್ತು ಅವನಿಗೆ ಹಾಸಲಿಕ್ಕೆ ಕೊಟ್ಟ ದಪ್ಪವಾದ ಚಾದರು. ಇದನ್ನು ಗುಳ್ಳೆಯಂತೆ ಗಾಳಿಯ ಒತ್ತಡಕ್ಕೆ ಸಿಗುವ ಆಕಾರಕ್ಕೆ ಪರಿವರ್ತಿಸಬಹುದಲ್ಲ. ಆಂದ್ರೆ ಕ್ಷಣವೂ ತಡಮಾಡದೆ ಆ ಚಾದರನ್ನೆತ್ತಿಕೊಂಡ. ಹೊರಗಿನ ಚಳಿಯನ್ನು ಲೆಕ್ಕಿಸದೆ ಜೈಲಿನ ಮೇಲ್ತುದಿಗೇರಿದ. ತನ್ನ ಸಾಹಸೋದ್ಯಮದಲ್ಲಿ ಯಾರ ಕಣ್ಣಿಗಾದರೂ ಬೀಳುವುದು ಅವನಿಗೆ ಬೇಕಿರಲಿಲ್ಲ. ನಕ್ಷತ್ರ ಮರೆಯಾಗುವುದನ್ನೆ ಕಾಯತೊಡಗಿದ.

ಕಾವಲು ವ್ಯರ್ಥವಾಗಲಿಲ್ಲ. ಉಷಃಕಾಲ ಬಂದು ನಕ್ಷತ್ರಗಳು ಮಸಕಾಗುತ್ತಿದ್ದಂತೆ ದಟ್ಟವಾದ ಮಂಜು ಕವಿದು ಅವನ ಪಲಾಯನಕ್ಕೆ ಆದರ್ಶವಾದ ಪರಿಸ್ಥಿತಿಯನ್ನು ಒದಗಿಸಿತು. ಆಂದ್ರೆ ಚಾದರಿನ ನಾಲ್ಕೂ ತುದಿಗಳನ್ನು ಸೇರಿಸಿ ಬಲವಾಗಿ ಗಂಟು ಹಾಕಿದ. ಅದನ್ನು ಮೇಲೆತ್ತಿದಾಗ ಬಿರುಸಾದ ಗಾಳಿ ಅದರೊಳಗೆ ತುಂಬಿ ಗುಳ್ಳೆಯಂತೆ ಅರಳುವಂತಿತ್ತು. ಆತ ಗಂಟನ್ನು ಹಿಡಿದುಕೊಂಡು ಮಾಳಿಗೆಯ ಅಂಚಿಗೆ ಬಂದ. ಕಣ್ಮುಚ್ಚಿಕೊಂಡು ದೇವರನ್ನು ನೆನೆದು ಮುಂದೆ ಹಾರಿದ.

ಚಾದರಿನೊಳಗೆ ಗಾಳಿ ತುಂಬಿ ಅದು ಹಗುರವಾಯಿತು. ಆಂದ್ರೆ ಅತ್ತಿತ್ತ ತೊನೆಯುತ್ತ ತೂಗುತ್ತ ಸಾವಕಾಶವಾಗಿ ಕೆಳಗಿಳಿಯುತ್ತಿದ್ದ.

ಬೀಸುವ ಗಾಳಿಯೊಡನೆ ಆತ ಸ್ವಾತಂತ್ರ್ಯದತ್ತ ತೇಲುತ್ತಿದ್ದ.

ನೆಲ ತಟ್ಟಿದ ಮೇಲೆಯೆ ಆಂದ್ರೆ ಕಣ್ಣು ತೆರೆದದ್ದು. ಅವನು ಒಂದು ಪೊದೆಯ ನಡುವೆ ಬಿದ್ದಿದ್ದ. ತನ್ನನ್ನು ಹಿಡಿಯಲು ಯಾರಾದರೂ ಬರುತ್ತಿದ್ದಾರೆಯೆ ಎಂದು ಸುತ್ತಲೂ ನೋಡಿದ. ಯಾರೂ ಕಾಣಿಸಲಿಲ್ಲ. ತನಗೆ ಅಪಾಯವಾಗಿದೆಯೆ ಎಂದು ಕೈಕಾಲುಗಳನ್ನು ತಡವಿ ನೋಡಿದ. ಏನೂ ಗಾಯವಾಗಿರಲಿಲ್ಲ. ಅವನ ತಾರಕವಾದ ಆ ಚಾದರು ಸ್ವಲ್ಪ ದೂರದಲ್ಲಿ ಬಿದ್ದಿತ್ತು. ಅದನ್ನು ಮಡಿಚಿ ಸ್ಮಾರಕವಾಗಿ ಇಟ್ಟುಕೊಂಡ.

ಸೆರೆಮನೆಯಲ್ಲಿ ಎಲ್ಲವೂ ಶಾಂತವಾಗಿತ್ತು. ಆಂದ್ರೆ ಗಾರ್ನರೀನನಿಗೆ ಊಟ ಕೊಡಲು ಮರುದಿನ ವಾರ್ಡರ್ ಬಂದಾಗಲೇ ಅವನಿಲ್ಲದ್ದು ಗೊತ್ತಾದದ್ದು. ಅಧಿಕಾರಿಗಳು ಬಂದರು. ಕೈದಿಯ ಪಲಾಯನ ಹೇಗಾಗಿರಬಹುದೆಂದು ತಲೆ ಚಚ್ಚಿಕೊಂಡರು. ಅವನಿಗೆ ಗಾಳಿಯಲ್ಲಿ ಗಾಳಿಯಾಗಿ ಹೋಗುವ ಕಲೆ ಗೊತ್ತಿರದಿದ್ದರೆ ಅವನು ಹೇಗೆ ಓಡಿಹೋಗಲು ಸಾಧ್ಯವಿತ್ತೆಂದು ಅವರಿಗೆ ಬೇರೆ ಹೊಳೆಯಲಿಲ್ಲ. ಅವನನ್ನು ಹಿಡಿಯುವ ಅವರ ಯತ್ನಗಳೆಲ್ಲ ವ್ಯರ್ಥವಾದವು.

*

ಅನಂತರ ಅವರು ಅವನ ವಿಚಾರ ಕೇಳಿದಾಗ ಆಂದ್ರೆ ಸಂಪೂರ್ಣವಾಗಿ ಅವರ ಕೈಯಳತೆಯ ಹೊರಗಿದ್ದ. ಅವನು ಫ್ರಾನ್ಸಿಗೆ ಹೋಗಿಬಿಟ್ಟಿದ್ದ, ಅಲ್ಲಿ ಆತನೊಬ್ಬ ಡೊಂಬನಿಗಿಂತಲೂ ಆಶ್ಚರ್ಯಕರವಾದ ಕೃತಿಗಳನ್ನು ಪ್ರದರ್ಶಿಸಿ ಪ್ರಸಿದ್ಧಿ ಪಡೆಯುತ್ತಿದ್ದ. ಅದು ೧೭೯೭ ಇಸವಿ.

ಜಾತ್ರೆಗಳಲ್ಲಿ, ಕುದುರೆ ಶರ್ಯತ್ತಿನ ಸ್ಥಳಗಳಲ್ಲಿ, ಜನ ನೆರೆಯುವಲ್ಲಿ ಹೋಗಿ ಆಂದ್ರೆ ಜನರಿಗೆ ಕಾಣುವಂತೆ ದೊಡ್ಡ ಬಲೂನಿಗ ಬುಟ್ಟಿ ಕಟ್ಟಿ ಅದರಲ್ಲಿ ಕುಳಿತು ಗಗನಕ್ಕೇರುತ್ತಿದ್ದ. ಅಲ್ಲಿಂದ ಜನರು ಬೆಪ್ಪಾಗಿ ನೋಡುತ್ತಿದ್ದಂತೆ ತನ್ನ ಬಟ್ಟೆಯ "ಪ್ಯಾರಾಚೂಟ್" ಹಿಡಿದು ಕೆಳಗೆ ಹಾರಿಕೊಳ್ಳುತ್ತಿದ್ದ. ಈ ಸ್ಟಂಟ್ ಅವನಿಗೆ ರೋಮಾಂಚಕ ಸಂತೋಷವನ್ನು ಕೊಡುತ್ತಿತ್ತು. ಒಮ್ಮೊಮ್ಮೆ ೮,೦೦೦ ಅಡಿಗಳ ಎತ್ತರದಿಂದ ಹಾರುವ ಅವನ ಸಾಹಸ ನೋಡಿ ಜನ ಕೇಕೆ ಹಾಕುತ್ತಿದ್ದರು.

ಯುರೋಪಿನ ಸೆರೆಮನೆಯ ಅಧಿಕಾರಿಗಳಿಗೆ ಮಾತ್ರ ಆಂದ್ರೆಯ ಸ್ಟಂಟ್ ತಲೆನೋವಾಗಿ ಪರಿಣಮಿಸಿತು. ಬುಡಾಪೆಸ್ತಿನ ಸೆರೆಮನೆಯಂತೆಯೆ ಬಹುತರ ಸೆರೆಮನೆಗಳ ರಚನೆಯಿತ್ತು. ಅವುಗಳ ಎತ್ತರವೇ ಅವುಗಳ ಭದ್ರತೆಯಾಗಿತ್ತು. ಆದರೆ ಈಗ ಆಂದ್ರೆ ಈ ಭದ್ರತೆಯನ್ನು ನಿರರ್ಥಕವಾಗಿ ಮಾಡಿದ್ದ.

ಗಾರ್ನರೀನ್ ಈಗ ವಿಶ್ವಪ್ರಸಿದ್ಧನಾಗಿ ಬಿಟ್ಟಿದ್ದ. ತನ್ನ "ಆಟ"ದಲ್ಲಿ ಆತ ಸುಧಾರಣೆಗಳನ್ನು ಮಾಡಿಕೊಂಡಿದ್ದ. ಗಗನವನ್ನಡರಿದ ಆತ ನೋಡಲು ಸೇರಿದ ಜನಸಂದಣಿಯ ನಡುವೆಯೆ ಇಳಿಯಬೇಕೆಂದು ಮಾಡಿದ ಸಂಕಲ್ಪಗಳು ಗಾಳಿಯ ದೆಸೆಯಿಂದ ವ್ಯರ್ಥವಾಗುತ್ತಿದ್ದವು. ಕೊನೆಗೆ ಆತ ಇದಕ್ಕೊಂದು ಉಪಾಯ ಹುಡುಕಿದ. ತನ್ನ ಪ್ಯಾರಾಚೂಟ್ ನಡುವೆ ಒಂದು ತೂತು ಮಾಡಿದ. ಅದರಿಂದ ಗಾಳಿ ಮೆಲ್ಲಮೆಲ್ಲಗೆ ಹೊರಬೀಳುತ್ತಿದ್ದುದರಿಂದ ಅವನ "ಕೊಡೆ"ಯ ಹೊಯ್ದಾಟ ನಿಂತು ಅದು ನೇರವಾಗಿ ಬಯಸಿದ ಸ್ಥಳದಲ್ಲೆ ಇಳಿಯುವಂತಾಯಿತು.

ಆಂದ್ರೆ ಗಾರ್ನರೀನನಿಗೆ ಸೆರೆಮನೆಯಿಂದ ಪಾರಾಗಲು ನೆರವಾದ ಈ "ಕೊಡೆ" ವಿಮಾನವೇ ಇಂದು ವಿಮಾನಯುಗದಲ್ಲಿ ಮಹೋಪಕಾರಿಯಾದ ಕೊಡೆ ವಿಮಾನ ಅಥವಾ ಪ್ಯಾರಾಚೂಟ್ ಆಗಿ ರೂಪುಗೊಂಡಿದೆ. ವಿಮಾನ ಅಪಘಾತಕ್ಕೊಳಗಾದ ಅಸಂಖ್ಯ ಜನರ ಜೀವ ಅದರಿಂದ ಉಳಿದಿದೆ. ಹಾಗೆಯೆ ಯುದ್ಧಗಳಲ್ಲಿ ಇಡಿ ಇಡಿ ದಂಡುಗಳನ್ನ ವಿಮಾನಗಳಲ್ಲಿ ಒಯ್ದು ಶತ್ರು ಪ್ರದೇಶಗಳಲ್ಲಿ ಆಕಾಶದಿಂದಿಳಿಸಲು ಇದೇ ಸಾಧನವಾಗಿದೆ.

*

ನಾನು
ಮತ್ತು
ಅ-ಬ-ಕ ನಗರ ಸಭೆ

ಹಾಸ್ಯಗಾರ, ಮುಂಬಯಿ

ನಾನು
೬/೧೨೮ ನೇತಾಜಿಗಲ್ಲಿ
೩-೨-೬೦

ಅಧ್ಯಕ್ಷರು,
ಅ-ಬ-ಕ ನಗರಸಭೆ, **ಅ-ಬ-ಕ**

ಮಹನೀಯರೆ,

ನೇತಾಜಿ ಗಲ್ಲಿಯಲ್ಲಿ ಮೇಲೆ ಬರೆದ ವಿಳಾಸದಲ್ಲಿ ವಾಸಮಾಡುತ್ತಿರುವ ನಾನೊಬ್ಬ ನಾಗರಿಕ. (ಹಾಗೆಂದು ಸಿದ್ಧಮಾಡಲು ಮೊನ್ನೆಯಷ್ಟೆ ತೆತ್ತಿದ್ದ ೩೮ ರೂಪಾಯಿ ೫೬ ನ. ಪೈಸೆಯ ನಗರ ಸಭಾ ತೆರಿಗೆಯ ರಸೀದಿಯನ್ನು ತೋರಿಸಬಲ್ಲೆನಾದರೂ ಆ ವಿಷಯವಿಲ್ಲಿ ಅಪ್ರಾಸಂಗಿಕ.) ನಾನೀಗ ಬರೆಯಲಿಚ್ಛಿಸುತ್ತಿರುವುದು ನೇತಾಜಿ ಗಲ್ಲಿಯ ವಿಷಯವಾಗಿ.

ಹಿಂದಕ್ಕೆ ರಾಮನು ಸೀತೆಯನ್ನು ಹುಡುಕುತ್ತ ಲಂಕೆಗೆ ಹೋಗುವಾಗ ಇದೇ ರಸ್ತೆಯಿಂದ ಪಾದ ಬೆಳಸಿದ ಕಾಲದಲ್ಲಿ (ಅದರ ಸಾಕ್ಷಿಯಾಗಿ ಗಲ್ಲಿಯ ಆ ತುದಿಯಲ್ಲಿದ್ದ 'ರಾಮಗಲ್ಲನ್ನು' ಕದ್ದೊಯ್ಯಲು ಮೊನ್ನೆ ಯಾರೋ ಪ್ರಯತ್ನ ಮಾಡಿದರಂತೆ, ನಿಜವೆ?) ಒಂದೆರಡೇ ಮನೆಗಳು ಇಲ್ಲಿದ್ದವೆಂಬ ಸಂಗತಿ ನಿಜವಿದ್ದಿರಬಹುದಾದರೂ ಈಗ, ಬೆಳೆಯುತ್ತಿರುವ ನಾಗರಿಕತೆಯ ಕುರುಹಾಗಿಯೂ ಗುಣಿತವಾಗುತ್ತಿರುವ ಭಾರತ ಜನತೆಯ ಹೆಗ್ಗುರುತಾಗಿಯೂ ರಸ್ತೆಯ ಎರಡೂ ಮಗ್ಗಲಿಗೆ ಸಾಲು ಮನೆಗಳಾಗಿದ್ದು ನಗರದ ಉಪಮುಖ್ಯ ಬೀದಿಗಳಲ್ಲಿ ನೇತಾಜಿ ಗಲ್ಲಿ ಒಂದೆಂದು ಗಣಿಸಲ್ಪಡುತ್ತಿದ್ದು ದಿನವೆಲ್ಲವು ಜನತೆಯ ಓಡಾಟದ ಕೇಂದ್ರವಾಗಿದೆ.

ಆದರೆ ಆಶ್ಚರ್ಯವೆಂದರೆ ರಸ್ತೆ ಮಾತ್ರ ರಾಮನ ಪಾದಧೂಳಿಯ ಪವಿತ್ರತೆಯನ್ನು ಕಳೆದುಕೊಳ್ಳಲಾರದೆಯೋ ಎಂಬಂತೆ ತ್ರೇತಾಯುಗದಲ್ಲಿದ್ದ ಪರಿಸ್ಥಿತಿಯಲ್ಲಿಯೇ ಇದ್ದುಬಿಟ್ಟಿದೆ. ಈ ವಿಷಯವಾಗಿಯೇ ತಮಗೆ ಬರೆದು ತೊಂದರೆ ಕೊಡುವ ಧೈರ್ಯ ಮಾಡಿದ್ದೇನೆ.

ರಾಮನ ಕಾಲದಿಂದಲೂ ಈ ರಸ್ತೆ ಕಲ್ಲಿನಿಂದ ಮಾಡಲ್ಪಟ್ಟಿತ್ತು ಎಂಬ ಯುಗಾಂತರದ ಸಿದ್ಧಾಂತವನ್ನು ಸುಳ್ಳು ಮಾಡಿ ಗ. ಮ. ಕ. ಶಾಲೆಯ ರಾಪಾಶಾಸ್ತ್ರಿಗಳು ಮೊನ್ನೆ ತಮ್ಮದೊಂದು ನವ್ಯ ಸಿದ್ಧಾಂತ ಬರೆದಿದ್ದು ಅದನ್ನು ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಡಿಗ್ರಿಗಾಗಿ ಒಪ್ಪಿಸಲಿದ್ದಾರೆಂದು ವದಂತಿಯಿದೆ. ಈ ವಿಭಾಗವೆಲ್ಲ ಯಕ್ಷ ಪಂಗಡವೊಂದರ ಕ್ರೀಡಾಂಗಣವಾಗಿತ್ತಂತೆ! ರಸ್ತೆಯ ತುಂಬೆಲ್ಲ ಹರಡಿದ್ದ ಎರಡಿಂಚು ದಪ್ಪ ಧೂಳೇ ಮಾಸ್ತರರ ಸಿದ್ಧಾಂತದ ಮೂಲ ತತ್ವ. ರಾಪಾ ಮಾಸ್ತರರು 'ಡಾಕ್ಟರ' ರಾಗುವ ವಿಷಯ ನಮಗೂ ನಿಮಗೂ ಸಂಬಂಧಿಸಿಲ್ಲವಾದರೂ ರಸ್ತೆಯ ಪರಿಸ್ಥಿತಿಯನ್ನು ಖಚಿತ ಮಾಡಿ ಕೊಡಲು ಅವರ ವಿಷಯವನ್ನು ಬರೆಯಬೇಕಾಯಿತು. ಹೋದ ಮಳೆಗಾಲದಲ್ಲಿ ಗುಂಡುಮನೆಯ ಮುದಿ ಸಿದ್ದಪ್ಪ (ಅವನ ಕಣ್ಣು ಮಸುಕು ಮಸುಕಂತೆ) ಇದೇ ತನ್ನ ಹೊಲವೆಂದು ಪಟ್ಟು ಹಿಡಿದು ಅರ್ಧ ರಸ್ತೆಯ ತುಂಬೆಲ್ಲ ರಾಗಿ ಬಿತ್ತ ಹೊರಟಾಗ ಇದು ಹೊಲವಲ್ಲ ರಸ್ತೆ ಎಂದು ಅವನನ್ನೊಪ್ಪಿಸಲು ನೆರೆಹೊರೆಯವರು ಬಹಳ ಪ್ರಯತ್ನಿಸಬೇಕಾಯಿತಂತೆ.

ಹೇಳುವ—ಅರ್ಥಾತ್ ಬರೆಯುವ ತಾತ್ಪರ್ಯವೆಂದರೆ, ಈ ರಸ್ತೆ ದುರಸ್ತಿ ಕಾಣದೆ ಯುಗಗಳಾದವು. (ಸರಿಯಾಗಿ ಹೇಳಬೇಕಾದರೆ ಎರಡು

ಯುಗಗಳಾದವು ಅನ್ನಿ). ಡಾಂಬರು ರಸ್ತೆಯ ಸಂಸ್ಕೃತಿಯ ಈ ಯುಗದಲ್ಲಿ ನಮ್ಮ ನಗರ ಸಭೆಯವರೂ ದಯವಿಟ್ಟು ತಮ್ಮ ರೋಡ್ ರೋಲರನ್ನು ಇತ್ತ ಹರಿಬಿಡುವ ಉಪಕಾರ ಮಾಡಿ ಮಹಾತ್ಮನೊಬ್ಬನ ಹೆಸರಿನಲ್ಲಿದ್ದ ಈ ರಸ್ತೆಯನ್ನು ಉದ್ಧಾರ ಮಾಡಬಹುದೆ? ತಮ್ಮ ನಂಬಿಕೆಯ,

ನಾನು.

ಅ-ಬ-ಕ ನಗರಸಭೆ,
೬--೨--೬೦

ನಾನು,
೬/೧೨೮, ನೇತಾಜಿಗಲ್ಲಿ.

ಮಹನೀಯರೆ,

ನಿಮ್ಮ ಪತ್ರವನ್ನು ನಗರಸಭೆಯ ಯಂತ್ರ ಶಾಖೆಗೆ (Engineering Department) ಕಳಿಸಿದ್ದು ಅವರಿಂದ ಈ ವಿಷಯವಾಗಿ ಉತ್ತರ ನಿರೀಕ್ಷಿಸಬೇಕೆಂದು ತಿಳಿಸುತ್ತೇವೆ.

ತಮ್ಮ ನಂಬಿಗೆಯ
. . . . . .
ಅಧ್ಯಕ್ಷರ ಪರವಾಗಿ.

ನಾನು
೬/೧೨೮ ನೇತಾಜಿಗಲ್ಲಿ
೨--೩--೬೦

ಎಕ್ಸಿಕ್ಯುಟಿವ್ ಎಂಜಿನಿಯರ್,
ಯಂತ್ರಶಾಖೆ, **ಅ-ಬ-ಕ ನಗರಸಭೆ ಅ-ಬ-ಕ**

ಮಹನೀಯರೆ,

ಫೆಬ್ರುವರಿ ಮೂರನೆಯ ತಾರೀಖಿನ ದಿನ ನೇತಾಜಿಗಲ್ಲಿಯ ದುರಸ್ತಿ ವಿಷಯವಾಗಿ ನಗರ ಸಭೆಯ ಅಧ್ಯಕ್ಷರಿಗೆ ಒಂದು ಪತ್ರ ಬರೆದಿದ್ದೆ. ಅದನ್ನು ತಮ್ಮಲ್ಲಿಗೆ ಕಳಿಸಿರುವರೆಂದೂ ಉತ್ತರವನ್ನು ತಮ್ಮಿಂದ ನಿರೀಕ್ಷಿಸಬೇಕೆಂದೂ ತಿಳಿಸಲಾಗಿತ್ತು.

ಈ ಮಧ್ಯೆ ನನ್ನ ಹಿಂದಿನ ಪತ್ರದಲ್ಲಿ ಬರೆದ ಒಂದು ಮುಖ್ಯ ಹೇಳಿಕೆಯನ್ನು—ಅದು ತಪ್ಪಿದ್ದುದಕ್ಕಾಗಿ, ತಿದ್ದಿಕೊಳ್ಳಲು ಅನುಮತಿ ಕೊಡುತ್ತೀರಾ? ಪುರಾತನ ಕಾಲದಿಂದಲೂ ರಸ್ತೆಯ ತುಂಬೆಲ್ಲ ಧೂಳೇ ತುಂಬಿದೆ ಎಂದೇನೋ ಅರ್ಥವಾಗುವಂತೆ ಪತ್ರ ಬರೆದಿದ್ದೆ. ಆದರೆ ಅದು ಪೂರಾ ನಿಜವಲ್ಲವೆಂದೂ ಒಂದೆರಡು ತುಂಡು ಕಲ್ಲುಗಳು ಧೂಳಿನಲ್ಲಿ ಹುದುಗಿಕೊಂಡಿವೆ ಎಂದೂ ಈಗ ತಿಳಿದುಬಂದಿದೆ. ಮೊನ್ನೆ ೪೧೬ ನಂಬರಿನ ಮನೆಯ ಜವರೇಗೌಡರು ಕುದುರೆ ಗಾಡಿಯಲ್ಲಿ ಹೋಗುತ್ತಿರುವಾಗ ಗಾಡಿಯ ಎಡಪಕ್ಕದ ಚಕ್ರವು ಕಲ್ಲೊಂದರ ಮೇಲೆ ಏರಿದ್ದಕ್ಕಾಗಿ ಗಾಡಿ ಮಗುಚಿಕೊಂಡಿತು. ಅರ್ಧ ರಸ್ತೆಯೆಲ್ಲ ದಟ್ಟವಾಗಿ ಬೆಳೆದಿದ್ದ ಹುಲ್ಲಿನಿಂದಾಗಿ (ನನಗೀಗ ತಿಳಿದಿದೆ, ರಸ್ತೆಯ ಎರಡೂ ಪಕ್ಕಕ್ಕೆ ಹುಲ್ಲು ಏಕೆ ಬೆಳಸುತ್ತಾರೆ ಎಂದು!) ಗೌಡರ ದುಂಡುಹೊಟ್ಟೆ ಒಡೆಯದೆ ಮೂರೇ ದಿನಗಳಲ್ಲಿ ಅವರು ಆಸ್ಪತ್ರೆ ಬಿಟ್ಟು ಹೊರಬರುವಂತಾದರೂ ಈ ಘಟನೆ ರಸ್ತೆಯ ಮೇಲಿನ ಧೂಳು-ಕಲ್ಲುಗಳ ಪ್ರಮಾಣದ ವಿಷಯದಲ್ಲಿ ನನ್ನ ಮೊದಲಿನ ಅಭಿಪ್ರಾಯವನ್ನು ಬದಲಿಸಲು ಕಾರಣವಾಯಿತು.

ರಸ್ತೆಗೆ ಡಾಂಬರ ಹಾಕುವ ವಿಷಯವನ್ನು ಅತಿ ಬೇಗನೆ ತಮ್ಮ ಕೈಯಲ್ಲಿ ತೆಗೆದುಕೊಳ್ಳುವಿರಾಗಿ ಆಶಿಸುತ್ತೇನೆ. ತಮ್ಮ ನಂಬಿಗೆಯ

ನಾನು.

ಎಂಜಿನಿಯರಿಂಗ್ ಖಾತೆ,
ಅ-ಬ-ಕ ನಗರಸಭೆ,
ಮಾರ್ಚ್ ೭, ೧೯೬೦

ನಾನು,
೬/೧೨೮, ನೇತಾಜಿಗಲ್ಲಿ

ಮಹನೀಯರೆ,

ತಮ್ಮ ಮಾರ್ಚ್ ೩, ೬೦ ರ ಪತ್ರ ಮುಟ್ಟಿತು. ತಮ್ಮ ಪತ್ರದ ವಿಷಯವು ಈ ಖಾತೆಯ ತುರ್ತಾದ ವಿಚಾರಣೆಯಲ್ಲಿ (active consideration)

ಇದೆಯೆಂದು ತಿಳಿಸುತ್ತೇವೆ.

ತಮ್ಮ ನಂಬಿಕೆಯ
ಎಕ್ಸಿ. ಎಂಜಿನಿಯರರ ಪರವಾಗಿ.

ನಾನು
೬/೧೨೮ ನೇತಾಜಿಗಲ್ಲಿ,
೮--೪--೬೦

ಎಕ್ಸಿ. ಎಂಜಿನಿಯರ್.
ಅ-ಬ-ಕ ನಗರಸಭೆ, ಅ-ಬ-ಕ.

ಮಹನೀಯರೆ,

ನೇತಾಜಿಗಲ್ಲಿಯ ದುರಸ್ತಿ ಬಗ್ಗೆ ತಮ್ಮ ೭-೩-೬೦ ರ ಪತ್ರದತ್ತ ತಮ್ಮ ಲಕ್ಷ್ಯವೆಳೆಯಲು ಅನುಮತಿ ಕೊಡುತ್ತೀರಾ? ಆ ವಿಷಯವು ತಮ್ಮ 'ತುರ್ತಾದ ವಿಚಾರಣೆಯಲ್ಲಿ' ಇದೆಯೆಂದು ತಾವು ತಿಳಿಸಿ ಒಂದು ತಿಂಗಳಾಯಿತು. 'ತುರ್ತಾದ ವಿಚಾರಣೆ'ಯ ಅರ್ಥವನ್ನು ನಾನು ನಾಲ್ಕೆಂಟು ಶಾಲಾ ಮಾಸ್ತರರನ್ನು ಕೇಳಿ ನೋಡಿದೆ. ಒಬ್ಬೊಬ್ಬರು ಒಂದೊಂದು ವಿಧ ಉತ್ತರ ಹೇಳಿದರೂ 'ಮೂವತ್ತು ಅಥವಾ ಹೆಚ್ಚು ದಿನಗಳು' ಎಂದೇನೂ ಅದಕ್ಕೆ ಅರ್ಥವಾಗಲಾರದೆಂದು ಎಲ್ಲರೂ ಒಪ್ಪುತ್ತಾರೆ. ಯುಗಯುಗಗಳಿಂದ ಹಾಗೆಯೇ ನಡೆದು ಬಂದ ರಸ್ತೆಯ ವಿಷಯದಲ್ಲಿ ಇನ್ನೊಂದು ಮೂವತ್ತು ದಿನಗಳು ಯಾವ ಹೆಚ್ಚು ಎನ್ನುವ ತಮ್ಮ ತರ್ಕವನ್ನು ನಾನೂ ಒಪ್ಪಬಹುದಾಗಿತ್ತು. ಆದರೆ ಈ ಮೂವತ್ತು ದಿನಗಳಲ್ಲಿ ಈ ರಸ್ತೆಯ ಮೇಲೆ ನಡೆದ ಕೆಲವೊಂದು ಘಟನೆಗಳಿಂದಾಗಿ ತಮ್ಮ ತರ್ಕದ ವಿರುದ್ಧವಾಗಿ ನನ್ನ ಮತವೀಯಲು ತಮ್ಮ ಅನುಮತಿ ಬೇಡಬೇಕಾಗಿದೆ. ಈ ಘಟನೆಗಳಲ್ಲಿ ಮುಖ್ಯವಾದ ಒಂದೆರಡನ್ನು ಇಲ್ಲಿ ಬರೆದಿದೆ.

ತಾ. ೧೪-೩-೬೦ : ೧೦೨ ನೆಯ ನಂಬರಿನ ಮನೆಯ ಎದುರಿನಿಂದ ಒಂದು ಕುದುರೆಗಾಡಿ ಹೋಗುತ್ತಿರುವಾಗ ಅದರ ಗಾಲಿಯ ಕೆಳಗಿನಿಂದ ನುಣುಚಿಕೊಂಡ ಒಂದು ಕಲ್ಲು ತುಂಡು ವಿರುದ್ಧ ಗಿಕ್ಕಿನ, ಅಂದರೆ ೮೦೪ ನೆಯ ನಂಬರಿನ ಮನೆಯ ಕಿಟಿಕಿಯ ಕಾಜಿಗೆ ಬಡಿದುದರಿಂದಾಗಿ ಆದ ಸಪ್ಪಳಕ್ಕೆ ಕೋಣೆಯಲ್ಲಿ ಹೆರಿಗೆಯ ಸಂಕಟದಿಂದ ನರಳುತ್ತಿದ್ದ ಮನೆಯ ಸೊಸೆ ಒಂದು ತಾಸು ಮೊದಲೇ ಹೆತ್ತಳು— ಹೆಣ್ಣು ಶಿಶುವನ್ನು. ಒಳ್ಳೆಯದೇ ಆಯಿತಲ್ಲ ಎಂದು ನೀವೆನ್ನಬಹುದು. ನಾನೂ ಅಂದುಕೊಂಡಿದ್ದೆ. ಆದರೆ ಒಂದು ತಾಸು ತಡೆದು ಆಕೆ ತನ್ನ ವೇಳೆಗೇ ಹೆತ್ತಿದ್ದರೆ ಗಂಡೇ ಆಗುತ್ತಿತ್ತೆಂದು ಆಕೆಯ ಮಾವ ಪಂಚಾಂಗದ ಸಾಕ್ಷಿಯಾಗಿ ಆಣೆ ಮಾಡಿ ಹೇಳುತ್ತಾನೆ. ಈ ಹಾನಿಗೆ ಯಾರು ಜವಾಬುದಾರರು ಎಂದು ನಿರ್ಣಯಿಸಲು ಆತ ತನ್ನ ವಕೀಲನನ್ನು ಕೇಳಲಿರುವನಂತೆ.

ತಾ. ೧೮-೩-೬೦ : ಈ ದಿನ ಮಧ್ಯಾಹ್ನ ದಾರಿ ತಪ್ಪಿ ಈ ಬೀದಿಗೆ ಬಂದ ನಗರಸಭೆಯ ನೀರು ಗಾಡಿಗಳು ಹನಿಸಿದ ನೀರಿನಿಂದಾಗಿ ಮೇಲೆದ್ದ ಧೂಳು ನಗರ ಸಭೆಯ ಅಗ್ನಿಶಾಮಕ ದಲದ (fire department) ಅಧಿಕಾರಿಗೆ ದೂರದಿಂದ ಮನೆಗಳ ಮೇಲಿನಿಂದ ಏಳುತ್ತಿದ್ದ ಹೊಗೆಯಂತೆ ಕಂಡು ಆತ ನಾಲ್ಕು ಅಗ್ನಿ ಯಂತ್ರಗಳೊಡನೆ (fire engines) ಢಣ ಢಣ ಗಂಟೆ ಹೊಡೆಯುತ್ತ ಗಲ್ಲಿಯೆಲ್ಲ ಸುತ್ತಾಡಿ ಮಲಗಿದವರನ್ನೆಲ್ಲ ಎಬ್ಬಿಸಿ ಹಿಂದಿರುಗಿ ಹೋದನು. ಯಂತ್ರ ಗಾಡಿಗಳ ಈ ಅನವಶ್ಯಕ ಪ್ರಯಾಣದಿಂದಾಗಿ ಖರ್ಚಾದ ಪೆಟ್ರೋಲಿಗೆ ಯಾರು ಹೊಣೆ? ಸುಖವಾಗಿ ಮಲಗಿದ್ದ ನೂರಾರು ಜನರ ಮಧ್ಯಾಹ್ನದ ನಿದ್ದೆ ಹಾಳಾದುದಕ್ಕೆ ಎಷ್ಟು ಹಾನಿಯಾಗಿರಬೇಡ?

೨೫-೩-೬೦: ಈ ದಿನ ಘಟಿಸಿದ ಒಂದು ಅಪಘಾತದಿಂದಾಗಿ ಬಡ ಕುಟುಂಬವೊಂದಕ್ಕೆ ಆಗಬೇಕಾದ ಲಾಭ ಆಗದೇ ಹೋಯಿತು. ಸಾಹುಕಾರ.... (ನಾನೇಕೆ ಹೆಸರು ಹೇಳಲಿ?) ರ ಕಾರು ಈ ಬೀದಿಗಾಗಿ ನಡೆದಿತ್ತು. ಕೂಲಿಕಾರ.... (ಇಲ್ಲಿಯೂ ಹೆಸರು ಬೇಡ) ನ ಎರಡು ವರ್ಷದ

ಹುಡುಗ ಬೀದಿಯಲ್ಲಿ ದುಂಡು ಹರಳಾರಿಸುವ ವ್ಯರ್ಥಪ್ರಯತ್ನ ಮಾಡುತ್ತ ನಡೆದಿದ್ದನು. ಸರಿಯಾಗಿಯೇ ನಡೆದಿದ್ದ ಕಾರು ಬೀದಿಯಲ್ಲಿ ಅಡ್ಡಲಾಗಿ ಉಂಟಾಗಿದ್ದ ಕೊರಕಲಿನಿಂದಾಗಿ (ಇಲ್ಲಿ ಹೋದ ಮಳೆಗಾಲದಲ್ಲಿ ಅಂಬಿಗರ ಸೋಮಪ್ಪ ದೋಣಿ ಹಾಯಿಸಲೆತ್ನಿಸಿದ್ದುದು ನಿಮಗೆ ಗೊತ್ತೆ, ಸರ್?) ಗಾಲಿಗಳು ತಿರುಗಿಕೊಂಡು ಕಾರು ಹುಡುಗನ ಮೇಲೆ ಹಾದು ಹೋಯಿತು. ಹುಡುಗ ನಿಂತಲ್ಲಿಂದಲೇ ಇಂಚಿಗೆ ಇಂಚು ಸರಿಯಾಗಿ ಕಾರಿನ ಗಾಲಿ ಹೋದುದನ್ನು ಕಣ್ಣಾರೆ ಕಂಡುದಾಗಿ ಆಣೆಯಿಟ್ಟು ಹೇಳುವ ದೃಷ್ಟಿಸಾಕ್ಷಿಯ (eye witness) ಜನರಿದ್ದಾರೆ. ಆದರೆ ಆಶ್ಚರ್ಯ! ಕಾರು ಹುಡುಗನನ್ನು ದಾಟಿ ಕಿರ್ರನೆ ನಿಲ್ಲುತ್ತಲೂ ಅದರಡಿಯಿಂದ ಹುಡುಗನು ನಿದಾನವಾಗಿ ಹರಿಯುತ್ತ ಹೊರಗೆ ಬಂದು ಕೈಯಲ್ಲಿ ಒಟ್ಟೈಸಿದ್ದ ಹರಳುಗಳು ಚೆಲ್ಲಿ ಹೋದುದಕ್ಕೆ ಅಳುತ್ತಿದ್ದನು! ಹುಡುಗನಿದ್ದ ಬದಿಯಲ್ಲಿಯೇ ರಸ್ತೆಯ ಮೇಲೆ ದೊಡ್ಡ ಹೊಂಡವಿತ್ತು. (ದೊಡ್ಡದು ಅಂದರೆ ನೀರು ಗೀರು ನಿಂತಿರಲಿಲ್ಲವೆನ್ನಿ. ಒಂದು ಒಂದೂವರೆ ಫೂಟು ಆಳವಿರಬೇಕು ಅಷ್ಟೆ). ಗಾಲಿಯ ಹೊಡೆತದಿಂದ ಹುಡುಗನು ಹೊಂಡದಲ್ಲಿ ಬಿದ್ದರೆ ಗಾಲಿ ಹೊಂಡದ ಅಂಚಿಗಿದ್ದ ಬಂಡೆಗಲ್ಲಿಗೆ ತಾಗಿ ಸಿಡಿದು ಆಚೆಗೆ ಹಾರಿತ್ತು! ಹುಡುಗನ ಬಡ ತಂದೆ ಪಾಪ,ಸಾಹುಕಾರರಿಂದ ಕನಿಷ್ಠ ೫೦೦ರೂಪಾಯಿಯನ್ನಾದರೂ ಗಿಟ್ಟಿಸಬೇಕಾದವನು ಹುಡುಗನಿಗೆ ಏನೂ ಆಗಿರದ ಕಾರಣ ಹತ್ತೇ ರೂಪಾಯಿಯಲ್ಲಿ ಸಮಾಧಾನ ಹೊಂದಬೇಕಾಯಿತು.

ಮೇಲೆ ವಿವರಿಸಿದ ಘಟನೆಗಳಾದರೂ ತಮ್ಮ 'ತುರ್ತಾದ ವಿಚಾರಣೆ' ಯ ಧೋರಣೆಯನ್ನು ಕಾರ್ಯರೂಪದಲ್ಲಿ ಪರಿವರ್ತಿಸುವುದಾಗಿ ಆಶಿಸಬಹುದೆ?

ತಮ್ಮ ನಂಬಿಗೆಯ
ನಾನು.

ಎಂಜಿನಿಯರಿಂಗ್ ಖಾತೆ,
ಅ-ಬ-ಕ ನಗರ ಸಭೆ,
ಎಪ್ರಿಲ್ ೧೮, ೧೯೬೦

ನಾನು,
೬/೧೨೮, ನೇತಾಜಿಗಲ್ಲಿ.

ಮಹನೀಯರೆ,

ತಮ್ಮ ತಾ. ೮ ಎಪ್ರಿಲ್, ೧೯೬೦ ರ ಪತ್ರ ಮುಟ್ಟಿದೆ. ನೇತಾಜಿ ಗಲ್ಲಿಯ ದುರಸ್ತಿ ವಿಷಯವಾಗಿ ನಮ್ಮ ರೋಡ್ ಇನ್ಸಪೆಕ್ಟರರ ಮೂಲಕ ವಿಚಾರಣೆ ನಡೆಯಿಸಿದ್ದು ಅದರ ಪರಿಣಾಮವಾಗಿ ಈ ಕೆಳಗಿನ ಸಂಗತಿಯನ್ನು ತಮಗೆ ತಿಳಿಸುತ್ತೇವೆ

ನೇತಾಜಿಗಲ್ಲಿ ಅಗಸ್ಟ, ೧, ೧೯೫೮ ರ ವರೆಗೆ ಡಿಸ್ಟ್ರಿಕ್ಟ್ ಬೋರ್ಡಿನ ಸತ್ತೆಯೊಳಗಿದ್ದುದು ಆ ದಿನ ರಂಗಾಪುರ ಮಹಾಲು ನಗರ ಸಭೆಯ ಹಕ್ಕಿನೊಳಗೆ ಬಂದಾಗ ರಸ್ತೆಯೂ ಸೇರಿಸಲ್ಪಟ್ಟಿತು. ರಸ್ತೆಯ ಸ್ಥಿತಿ ಚೆನ್ನಾಗಿರದ್ದರಿಂದ ಅದನ್ನು ನಗರ ಸಭೆಯಲ್ಲಿ ಸೇರಿಸುವ ವೇಳೆಯಲ್ಲಿ ಕೆಲವು ಕರಾರುಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಹಾಕಲಾಗಿತ್ತು. ಆ ಪ್ರಕಾರ ರಸ್ತೆಯನ್ನು ಡಾಂಬರಿಸುವ ಖರ್ಚಿನ ಕೆಲ ಭಾಗವನ್ನು ಜಿಲ್ಲಾ ಬೋರ್ಡು ನಿರ್ವಹಿಸುವುದೆಂದಾಗಿತ್ತು. ಈ ವಿಷಯವಾಗಿ ಬೋರ್ಡಿನೊಡನೆ ಪತ್ರವ್ಯವಹಾರ ನಡೆಯುತ್ತಲಿದ್ದು ಮೇಲಿನ ಅಧಿಕಾರಿಗಳಲ್ಲಿಯೂ ವಿಷಯವು ಪ್ರತಿಪಾದಿಸಲ್ಪಟ್ಟಿದೆ. ಆ ಸಂಬಂಧವಾಗಿ ನಿರ್ಣಯವನ್ನು ನಾವು ಶೀಘ್ರದಲ್ಲಿಯೇ ನಿರೀಕ್ಷಿಸುತ್ತಲಿದ್ದು ಅದಾದ ಕೂಡಲೆ ದುರಸ್ತಿ ಕೆಲಸ ಕೈಕೊಳ್ಳಲ್ಪಡುವುದೆಂದು ತಿಳಿಸುತ್ತೇವೆ.

ತಮ್ಮ ನಂಬಿಗೆಯ
. . . .
ಎಕ್ಸಿ. ಎಂಜಿನಿಯರರ ಪರವಾಗಿ

ನಾನು
೬/೧೨೮, ನೇತಾಜಿಗಲ್ಲಿ ೨೯-೪-೬೦
ಎಕ್ಸಿ ಎಂಜನಿಯರ್

ಯಂತ್ರಶಾಖೆ, ಅ-ಬ-ಕ ನಗರ ಸಭೆ. ಅ-ಬ-ಕ.
ಮಹನೀಯರೆ,

ನಾನು ಬರೆಯುವ ಮೊದಲೇ ನೇತಾಜಿ ಗಲ್ಲಿಯು 'ಚೆನ್ನಾಗಿರದಿರುವ' ಸ್ಥಿತಿ ತಮ್ಮ ದೃಷ್ಟಿಗೆ ಬಂದಿದ್ದುದಲ್ಲದೆ ಆ ವಿಷಯವಾಗಿ ಪತ್ರ ವ್ಯವಹಾರಗಳು ನಡೆಯುತ್ತಲಿದ್ದುದನ್ನು ತಿಳಿದು ಸಾನಂದಾಶ್ಚರ್ಯವಾಗಿದೆ. ನೋಡಿ. ಅಗಸ್ಟ ೫೮ ರಲ್ಲಿಯಷ್ಟೆ ರಸ್ತೆ ನಗರ ಸಭೆಯ ಸತ್ತೆಯಲ್ಲಿ ಬಂದಿತು. ಇದೀಗ ಏಪ್ರಿಲ್ ೬೦ ಕೂಡಾ ಪೂರಾ ಮುಗಿದಿಲ್ಲ. ಇಷ್ಟರಲ್ಲಿಯೇ ತಾವು ರಸ್ತೆಯ ಪರಿಸ್ಥಿತಿಯನ್ನು ಅರಿತುಕೊಂಡುದಲ್ಲದೆ ಸಂಬಂಧಪಟ್ಟವರೊಡನೆ ಪತ್ರವ್ಯವಹಾರವನ್ನು ಕೈಕೊಂಡುದಾಗಿ ಬರೆಯುತ್ತೀರಿ. ಅಂದಮೇಲೆ ಇನ್ನು ಒಂದೆರಡು ಮಳೆಗಾಲಗಳಿಗಿಂತಲೂ ಹೆಚ್ಚು ಈ ಗಲ್ಲಿಯ ಜನ ಈ ಕೊಳಚೆಯಲ್ಲಿ ಓಡಾಡಬೇಕಾಗಿಲ್ಲವೆಂದು ನಾನು ಖಂಡಿತವಾಗಿಯೂ ನಂಬುತ್ತೇನೆ. ಈ ಮಧ್ಯೆ ಅಲ್ಲೊಂದು ಗಾಡಿ ಮುರಿದು ಬಿದ್ದರೆ, ಇಲ್ಲೊಬ್ಬ ಮನುಷ್ಯ ಕಾಲೊಡೆದುಕೊಂಡರೆ ಏನಂತೆ?

ತಮ್ಮ ನಂಬಿಗೆಯ,
ನಾನು.

ನಾನು,
೬/೧೨೮, ನೇತಾಜಿಗಲ್ಲಿ ೨೨-೫-೬೦.
ಎಕ್ಸಿ. ಎಂಜಿನಿಯರ್,
ಯಂತ್ರ ಖಾತೆ, ಅ- ಬ- ಕ ನಗರಸಭೆ ಅ.ಬ-ಕ.
ಮಹನೀಯರೆ,

ನೇತಾಜಿಗಲ್ಲಿಯ ವಿಷಯವಾಗಿ ನಾನು ೨೯-೪-೬೦ ಕ್ಕೆ ಪತ್ರ ಬರೆದು ತಿಂಗಳಾಗುತ್ತ ಬಂತು. ತಮ್ಮಿಂದ ನನಗಾಗಲಿ, ರಸ್ತೆಗಾಗಲಿ ಯಾವ ಉತ್ತರವೂ ಬಂದಿಲ್ಲ. ನನ್ನ ಹಿಂದಿನ ಪತ್ರದಲ್ಲಿ ತಮಾಷೆಗಾಗಿ ಎರಡು ಮಳೆಗಾಲದಲ್ಲಿ ರಸ್ತೆ ದುರಸ್ತಿಯಾಗುವುದರಲ್ಲಿ ಸಂಶಯವಿಲ್ಲವೆಂದು ಬರೆದುದಕ್ಕೆ ಅದೇ ನಿಜವಾಗಲೆಂದು ತಾವೇನೂ ಪಟ್ಟು ಹಿಡಿದು ಕುಳಿತಿಲ್ಲವಲ್ಲ? ಮಳೆಗಾಲ ಆರಂಭವಾಗಿ ರಸ್ತೆ-ಹೊಲ ಒಂದಾಗತೊಡಗಿದೆಯಾದ್ದರಿಂದ ಕೂಡಲೇ ಏನಾದರೂ ಕೆಲಸ ಕೈಕೊಳ್ಳಬೇಕೆಂದು ಬಿನ್ನಹ.

ತಮ್ಮ ನಂಬಿಗೆಯ.
ನಾನು.

ನಾನು,
ನೇತಾಜಿಗಲ್ಲಿ ೬/೧೨೮,೧೪-೭-೬೦
ಎಕ್ಸಿ. ಎಂಜಿನಿಯರ್
ಯಂತ್ರ ಖಾತೆ, ಅ- ಬ- ಕ ನಗರಸಭೆ, ಅ.ಬ-ಕ.
ಮಹನೀಯರೆ,

ಅಭಿನಂದನೆಗಳು! ನೇತಾಜಿಗಲ್ಲಿಯಲ್ಲಿ ದುರಸ್ತಿಯ ಕೆಲಸ ಅತಿ ಭರದಿಂದ ಆರಂಭವಾಗಿದೆ. ರಸ್ತೆಯನ್ನು ಅರ್ಧ ಮುಚ್ಚಿದ ಹುಲ್ಲು ಬೇರು ಸಹಿತ ಕಿತ್ತೊಗೆಯಲ್ಪಡುತ್ತಿದೆ. ಹೊಂಡಗಳು ಮಾಯವಾಗತೊಡಗಿವೆ. ಬಂಡೆಗಲ್ಲುಗಳು ತುಂಡಾಗತೊಡಗಿವೆ, ದಿನವೂ ಮೂವತ್ತರ ಮೇಲೆ ಕೂಲಿಕಾರರು ಕೆಲಸದಲ್ಲಿ ತೊಡಗಿರುತ್ತಾರೆ! ಜಿಲ್ಲಾ ಬೋರ್ಡಿನೊಡನೆ ಖರ್ಚಿನ ವಿಷಯವಾಗಿ ಇನ್ನೂ ಒಮ್ಮತವಾಗಿಲ್ಲವೆಂದು ಮೊನ್ನೆ ತಾನೇ ನಾನು 'ಅ- ಬ- ಕ- ವಾರ್ತೆ' ಯಲ್ಲಿ ಓದಿದ್ದುದು ಸುಳ್ಳಾಯಿತೆ? ಈ ವರ್ಷದ ಮುಂಗಡ ಪತ್ರದಲ್ಲಿ ನೇತಾಜಿಗಲ್ಲಿಯ ಹೆಸರೇ ಇಲ್ಲ ಎಂದು ನಮ್ಮ ವಾರ್ಡಿನ ಸದಸ್ಯರು ಹೇಳಿದ್ದುದೂ ಹುರುಳಿಲ್ಲದ ಮಾತು! ತಾವು ನಿಜವಾಗಿಯೂ ಮೋಡಿಮಾಡಿದ್ದೀರಿ! ನೇತಾಜಿಗಲ್ಲಿಯವರೆಲ್ಲರ ವತಿಯಾಗಿ ನಿಮ್ಮ ಆಭಾರ ಮನ್ನಿಸುವೆ.


ತಮ್ಮ ನಂಬಿಗೆಯ, ನಾನು

ಮ. ಮಾ.

ನಮ್ಮ ಗಲ್ಲಿಯಲ್ಲಿ ಗ್ರಾಮೋದ್ಯೋಗ ಕೇಂದ್ರವನ್ನು ಉದ್ಘಾಟಿಸಲು ಮಾನ್ಯ ಮಂತ್ರಿಗಳಾದ . . . . ರು ಇದೇ ತಿಂಗಳ ಕೊನೆಗೆ ಬರಲಿರುವರಂತೆ ನಿಜವೆ? *

ನಿಮ್ಮ 'ಬಣ್ಣ'ವನ್ನು
ಬಣ್ಣಗಳೇ
ಹೊರಗೆಡಹುತ್ತವೆ

ಸ್ವಭಾವ ಪರಿಚಯಕ್ಕೆ ಒಂದು ಮಾರ್ಗ



ಒಬ್ಬೊಬ್ಬರಿಗೆ ಒಂದೊಂದು ಬಣ್ಣವೆಂದರೆ ಹೆಚ್ಚು ಇಷ್ಟವಾಗಿರುತ್ತದೆ. ನಿಮಗೆ ಯಾವ ಬಣ್ಣ ಹೆಚ್ಚು ಪ್ರಿಯವಾಗಿದೆ-ಅಥವಾ ಅಪ್ರಿಯ ವಾಗಿದೆ, ಹೇಳಿ. ಇಲ್ಲಿ ನಾಲ್ಕು ಬಣ್ಣಗಳನ್ನು-ಕೆಂಪು, ಹಳದಿ, ನೀಲಿ ಮತ್ತು ಹಸಿರು-ಆರಿಸಿ ಹೇಳಿದೆ. ನೀವು ಆರಿಸುವ ಬಣ್ಣ ನಿಮ್ಮ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡುತ್ತದೆ.

ನೀಲಿ— (ನಿಮಗ ಹೆಚ್ಚು ಪ್ರಿಯವಾಗಿದ್ದರೆ) ನಿಮ್ಮ ಸ್ವಭಾವ ಪರರ ಮೇಲೆ ವರ್ಚಸ್ಸುಕೆಡವು ವಂತಹದು ಮತ್ತು ಊಹಾಪೋಹ ಮಾಡು ವಂತಹದು. ಯಾವುದೇ ಬಗೆಯ ವರ್ಚಸ್ಸು ನಿಮ್ಮ ಮೇಲೆ ಬಿದ್ದಾಗಲೂ ಸೀವು ತತ್‌ಕ್ಷಣ ಪ್ರತಿಕ್ರಿಯೆಯನ್ನು ತೋರುತ್ತೀರಿ. ನಿಮ್ಮ ಅಭಿ ಪ್ರಾಯ ಮೇಲಿಂದ ಮೇಲೆ ಬದಲಾಗುವಂಥ

G 5-7

ದಾದರೂ ನಿಮ್ಮ ವಿಚಾರ ನಿಮ್ಮದೇ ಆಗಿರುತ್ತದೆ.

ನೀವು ಜೀವನದಲ್ಲಿ ಯಾವ ಸಾಹಸಕ್ಕೂ ಕೈ ಹಾಕುವುದಿಲ್ಲ. ಅನುಭವಸಿದ್ಧ ಹಾದಿಗಳೇ ನಿಮಗೆ ಭರವಸೆಯನ್ನು ನೀಡುತ್ತವೆ.

ಅತಿ ಉತ್ಸಾಹ ಮತ್ತು ದುಡುಕತನಗಳನ್ನು ನೀವು ತಿರಸ್ಕರಿಸುವಿರಿ. ಹಾಗಿದ್ದರೂ ಅಂತರಂಗ ದಲ್ಲಿ ನೀವು ಕಾವ್ಯಮಯ ಜೀವನ ಹಾಗೂ ಅಸಾಧ್ಯ ಬಯಕೆಗಳ ಸ್ವಪ್ನ ಸಾಮ್ರಾಜ್ಯವನ್ನು ಕಟ್ಟಿಕೊಂಡಿರುತ್ತೀರಿ. ಭಾವನೆಯ ಆವೇಗಕ್ಕೆ ನೀವು ಅತಿಯಾಗಿ ಸಿಲುಕಿಕೊಳ್ಳುವುದಿಲ್ಲ. ಹಾಗೆ ಸಿಲುಕಿಕೊಳ್ಳುವುದು ನಿಮಗೆ ಬೇಕಾಗಿದ್ದರೂ ನಿಮ್ಮ ಮೇಲೆ ನಿಮಗೇ ವಿಶ್ವಾಸವಿರುವುದಿಲ್ಲವಾದ್ದರಿಂದ ದೂರವುಳಿಯಬಯಸುತ್ತೀರಿ.

ಮೂಲತಃ ನೀವು ನಿಮ್ಮ ಕಲ್ಪನೆಯ ಜಾಡನ್ನೆ ಹಿಡಿದು ಪ್ರತಿಯೊಂದನ್ನೂ ಮಾಡುತ್ತೀರಿ. ನಿಮ್ಮ ಕಲ್ಪನಾಶಕ್ತಿ ಅವಾಸ್ತವ ಪ್ರಪಂಚದಲ್ಲೂ ವಿಹರಿಸುತ್ತಿರುತ್ತದೆ. ಆದ್ದರಿಂದಲೇ ನೀವು ಅತ್ಯಂತ ವಿರೋಧಾಭಾಸ ಪ್ರಕೃತಿಯವರಾಗಿ ಕಾಣಿಸಿಕೊಳ್ಳುತ್ತೀರಿ.

ಮುಂಜಾಗ್ರತೆಯವರಾದರೂ ನೀವು ನಿಮಗೆ ಪ್ರಥಮತಃ ಅನಿಸಿದ್ದಕ್ಕೇ ಅಂಟಿಕೊಳ್ಳುವಿರಿ. ಒಂದು ಬಗೆಯ ಜಿಗುಟುತನದಿಂದ ನೀವು ಯಾವ ಗುರಿಯನ್ನಾದರೂ ಮುಟ್ಟಬಲ್ಲಿರಿ. ಇತರರ ಅಭಿಪ್ರಾಯವನ್ನು ನೀವು ಗಮನಿಸುವವರಲ್ಲ. ಇತರರ ತಪ್ಪುಗಳನ್ನು ಗಣಿಸದಷ್ಟು ಮಟ್ಟಿಗೆ ನೀವು ಸಮರ್ಥರಾಗಿರುತ್ತೀರಿ. ನಿಮಗೆ ಹಣಕಾಸಿನ ಚಿಂತೆಯಿಲ್ಲದೆ ನಿರ್ವಿಘ್ನವಾಗಿ ಕಲ್ಪನಾಲೋಕ ದಲ್ಲಿ ವಿಹರಿಸುವುದು ಸಾಧ್ಯವಾದರೆ ನೀವು ಪೂರ್ಣ ಸುಖಿಗಳಾಗುತ್ತೀರಿ.

ನೀವು ತುಂಬ ಭಾವನಾಪ್ರದರು. ನಿಮ್ಮ ಹೃದಯ ಭಾವನೆಗಳಿಗೆ ತೀವ್ರ ಪ್ರತಿಕ್ರಿಯೆಯನ್ನು ತೋರುವುದರಿಂದ ನೀವು ಸರಕ್ಕನೆ ಟೊಪ್ಪಿಗೆ ಬೀಳಬಹುದು. ಸಾಮಾನ್ಯವಾಗಿ ನೀವು ಈ ದೋಷವನ್ನು ನಗುಮುಖದಿಂದ ಮರೆಮಾಡಿಕೊಂಡಿರುತ್ತೀರಿ. ನಿಮ್ಮ ಭಾವನೆಗಳನ್ನು ಪ್ರಕಟಿಸುವ ಬಯಕೆಯಿದ್ದರೂ ಅವನ್ನು ಹತ್ತಿಕ್ಕಿ ನೀವು ಗುಮ್ಮನಗುಸಕರಂತಿರುತ್ತೀರಿ.

ಒಟ್ಟಿನಲ್ಲಿ, ನೀವು ಸ್ವಾಸ್ಥ್ಯ ಗಾಂಭೀರ್ಯವನ್ನು ಪ್ರೀತಿಸುವವರು, ಭಾವುಕರು, ಕಲ್ಪನಾಲೋಕ ದಲ್ಲಿ ವಿಹರಿಸುವವರು, ಸೋಮಾರಿಗಳು, ಭವಿತವ್ಯದ ಅಂಜಿಕೆಯುಳ್ಳವರು, ಧ್ಯೇಯವಿಲ್ಲದ-ವರು.

ಅದೇ "ನೀಲಿ ಬಣ್ಣ" ನಿಮಗೆ ಸೇರಿಕೆಯಿಲ್ಲವಾದರೆ, ಜನ ತಮ್ಮನ್ನು ದುರ್ಬಲ ಮನುಷ್ಯ, ಕೇವಲ ಸ್ವಪ್ನಗಳನ್ನು ಕಾಣುವವ, ಎಂದು ತಿಳಿಯುತ್ತಾರೆಂದು ಯೋಚಿಸುವ ನೀವು ಭಾವನಾಪ್ರದರ್ಶನದ ಸಮಯ ಬಂದಾಗಲೆಲ್ಲ ಸಾವಧರಾಗಿರುತ್ತೀರಿ. ಹೊಣೆ ಹೊತ್ತು ಧುರೀಣತ್ವ ವಹಿಸಿ ಸಾಮರ್ಥ್ಯವನ್ನು ಪ್ರಕಟಿಸಬಲ್ಲೆವೆಂಬ ಪರಿಜ್ಞಾನ ನಿಮಗಿರುತ್ತದೆ.

ಹಸಿರು— (ನಿಮಗೆ ಪ್ರಿಯವಾಗಿದ್ದರೆ) ನೀವು ಯಾವಾಗಲೂ ಶಾಂತಿ-ಸಮತೋಲಗಳನ್ನು ಅಪೇಕ್ಷಿಸುತ್ತೀರಿ. ಶಾಶ್ವತ ಮೌಲ್ಯಗಳಿಗೇ ನೀವು ಮಹತ್ವವೀಯುತ್ತೀರಿ. ನೀವು ಗಂಭೀರರಾದರೂ ಪ್ರತಿಯೊಂದನ್ನೂ ನಿಮ್ಮತ್ತ ಎಳೆದುಕೊಳ್ಳುವ ಉತ್ತಮ ಹಾದಿಯನ್ನು ಹುಡುಕಲೆತ್ನಿಸುತ್ತೀರಿ

'ಜ್ಞಾನ' ವಿದ್ದರೆ ಯಶಸ್ಸು ಎಂದು ಭಾವಿಸುವ ನಿಮ್ಮ ಜ್ಞಾನ ತೃಷೆ ಅಸಾಧ್ಯವಾದದ್ದು. ನಿಮಗೆ ಅಪರಿಚಿತವಾದ ಸಂಗತಿಗಳೆದುರಿನಲ್ಲಿ ಸಂದೇಹವುಳ್ಳವರಾದರೂ ನಿಮ್ಮ ಕುತೂಹಲವು ಅವನ್ನು ವಿವರವಾಗಿ ಅಭ್ಯಸಿಸಲು ನಿಮ್ಮನ್ನು ಪ್ರಚೋದಿಸುತ್ತದೆ.

ಯಾವುದೇ ನಿರ್ಧಾರವನ್ನು ಮಾಡಬೇಕಾದಾಗ ನೀವು ಸಾಧ್ಯಾಸಾಧ್ಯತೆಗಳನ್ನು ತೂಗಿ ನೋಡುತ್ತೀರಿ. ಇತರರಲ್ಲಿ ವಿಶ್ವಾಸವಿಡುವುದೆಂದರೆ ನಿಮಗೆ ಮೈಮೇಲೆ ಮುಳ್ಳು ಬರುವುದ

ರಿಂದ ನೀವು ಯಾರ ಸಲಹೆಯನ್ನೂ ಪಡೆಯುವ ಗೋಜಿಗೆ ಹೋಗದೆ ಹಾಗೆ ಮಾಡಿದರೆ ಏನಾದೀತು, ಹೀಗೆ ಮಾಡಿದರೆ ಏನಾದೀತು ಎಂದು ಲೆಕ್ಕ ಹಾಕುತ್ತೀರಿ.

ನಿಮ್ಮ ಮೇಲೆ ಪ್ರಭಾವ ಬೀರಬಹುದಾದಂಥ ಯಾವುದರಿಂದಲೇ ಆಗಲಿ ದೂರವಿರಲು ನೀವು ನೆಪ ಹುಡುಕುತ್ತೀರಿ. ವಿಷಯಗಳ ಮಹತ್ವವನ್ನು ಅವಾಸ್ತವವಾಗಿ ಹೆಚ್ಚು ಮಾಡಿ ತೋರಿಸುವ ಸ್ವಾಭಾವಿಕ ಒಲವು ನಿಮಗಿದ್ದರೂ ನೀವು ಕಲ್ಪನೆಯ ಅಂಕೆ ತಪ್ಪಿದ ರೀತಿಯನ್ನು ತಿರಸ್ಕರಿಸುತ್ತೀರಿ.

ತೀರ ಸರಿಯಾಗಿರಬೇಕು ಎನ್ನುವ ನೀವು ಸದಾ ಅಸ್ವಸ್ಥಚಿತ್ತರಾಗಿರುತ್ತೀರಿ. ನಿಮ್ಮ ಮಟ್ಟಿಗೆ ಸತ್ಯ ಮೊದಲು—ಸೌಂದರ್ಯ ಆಮೇಲೆ; ತರ್ಕ ಮೊದಲು—ಭಾವನೆ ಆಮೇಲೆ.

ಜನ ನಿಮ್ಮನ್ನೂ ನಿಮ್ಮ ಮಾತನ್ನೂ ನಂಬಬಹುದು. ಆದರೆ ನಿಮ್ಮ ಮನಸ್ಸಿನಲ್ಲೇನಿದೆ ಎಂದು ತಿಳಿದುಕೊಳ್ಳುವುದು ಸಹಸಾ ಕಠಿಣವಾಗಿಯೆ ಇರುತ್ತದೆ. ನಿಮ್ಮ ಪ್ರತಿಕ್ರಿಯೆಗಳೆಲ್ಲ ತರ್ಕದ ಕುಲುಮೆಯಲ್ಲಿ ಹಾಯ್ದು ಬರುವುದರಿಂದ ನಿಮ್ಮ ಪ್ರೇಮಜೀವನದಲ್ಲಿ ನೀವು ಸುಲಭವಾಗಿ ಆತ್ಮನಿಯಂತ್ರಣವುಳ್ಳವರಾಗಿರುತ್ತೀರಿ. ನಿಮ್ಮ ಭಾವನೆಗಳನ್ನು ಪ್ರಕಟಿಸಲು ನೀವು ಅಂಜುತ್ತೀರಿ. ಇತರರನ್ನು ಸಂತುಷ್ಟಗೊಳಿಸಲು ನೀವು ಮಹಾ ಪ್ರಯತ್ನವನ್ನೇನೂ ಮಾಡುವುದಿಲ್ಲ. ಆದರೆ ನೀವು ನಿಮ್ಮ ಪ್ರೇಮವನ್ನು ಅರ್ಪಿಸಿದಾಗ ಪೂರ್ಣವಾಗಿಯೇ ಅರ್ಪಿಸುತ್ತೀರಿ.

ಒಟ್ಟಿನಲ್ಲಿ ನೀವು ಶಾಂತ ಸ್ವಭಾವದವರು, ಸತತ ಪ್ರಯತ್ನ ಮಾಡುವವರು, ಮುಂಜಾಗ್ರತೆಯವರು, ನಿಷ್ಠಾವಂತರು, ವ್ಯವಹಾರ ಜ್ಞಾನವುಳ್ಳವರು. ಅದರಂತೆ ಮೊಂಡುತನವಿರುವವರು, ಸದಾ ಚಿಂತೆ ಮಾಡುವವರು ಮತ್ತು ಅತಿ ವಿಚಾರ ಮಾಡುವವರು.

‘ಹಸಿರು’ ಬಣ್ಣ ನಿಮಗೆ ಸೇರದಿದ್ದರೆ ನೀವು ನಿಯಮ ನೇಮಗಳಲ್ಲಿ ವಿಶ್ವಾಸವುಳ್ಳವರಾದರೂ ನಿಮ್ಮ ಮೇಲೆ ಯಾರೇ ಆಗಲಿ ಶಿಸ್ತನ್ನು ಹೇರಬಹುದು ಎಂಬುದನ್ನು ನೀವು ಒಪ್ಪುವುದಿಲ್ಲ. ತಾವು ಸ್ವತಂತ್ರರು ಎಂದುಕೊಂಡು ನೀವು ಹಾಗೆಯೆ ಇರಬಯಸುತ್ತೀರಿ. ನೀವು ನಿರಾಶಾವಾದಿಗಳಲ್ಲ, ವಿವರಗಳು ನಿಮಗೆ ಮೆಚ್ಚಿಗೆಯಾಗುವುದಿಲ್ಲ. ಇಡೀ ವಿಷಯವನ್ನೆ ಲೆಕ್ಕಕ್ಕೆ ಹಿಡಿದು ಗುಣಾವಗುಣ ನೋಡಬೇಕೆನ್ನುತ್ತೀರಿ.

ಕೆಂಪು— (ನಿಮಗೆ ಹೆಚ್ಚು ಪ್ರಿಯವಾಗಿದ್ದರೆ) ನಿಮಗೆ ಬದುಕಿರುವುದರಲ್ಲಿ ಆನಂದವೆನಿಸುತ್ತದೆ. ನಿಮ್ಮ ಉತ್ಸಾಹ ಮತ್ತು ಭಾವಾವೇಗದಿಂದ ನಿಮ್ಮ ಸಂಪರ್ಕಕ್ಕೆ ಬಂದುದೆಲ್ಲವನ್ನೂ ಉದ್ದೀಪ್ತಗೊಳಿಸುತ್ತೀರಿ. ನಿಮ್ಮ ಭಾವನೆಗಳು ಸಜೀವಾಗಿರುವವುದರಿಂದ ನೀವು ಪ್ರತಿಯೊಂದನ್ನು ಅಷ್ಟೇ ಗಾಢವಾಗಿ ಅಪೇಕ್ಷಿಸುತ್ತೀರಿ. ನಿಮ್ಮ ಭಾವನೆ ಮತ್ತು ಪ್ರತಿಕ್ರಿಯೆಗಳು ಯಾವಾಗಲೂ ಉದ್ರಿಕ್ತವಾಗಿಯೆ ಇರುತ್ತವೆ.

ನಿಮಗೆ ಮಧ್ಯಮಾರ್ಗ ಎಂಬುದೇ ಗೊತ್ತಿಲ್ಲ. ಒಂದೇ ಹಣ್ಣು ಅಥವಾ ಕಾಯಿ ಎನ್ನುವವರು ನೀವು. ದುರ್ಬಲರೆಂದರೆ ನಿಮಗೆ ತಿರಸ್ಕಾರವಿದ್ದರೂ ನೀವು ಇತರರ ವಿಷಯದಲ್ಲಿ ಪ್ರೀತಿ ಸಹಾನುಭೂತಿಗಳನ್ನು ತೋರಬಲ್ಲಿರಿ. ಇತರರಿಗೆ ತಲೆವಾಗುವುದೆಂದರೆ ನಿಮಗೆ ಸಹಿಸದು. ಅಪ್ಪಣೆಯನ್ನು ಕೊಡಬೇಕೆನ್ನುವಿರೇ ವಿನಾ ಪಾಲಿಸಲು ಬಯಸುವುದಿಲ್ಲ.

ಕಾರ್ಯ ತ್ವರಿತವಾಗಬೇಕು ಎನ್ನುತ್ತೀರಿ ನೀವು. ನಿಮ್ಮ ಇಚ್ಛೆಯಂತೆ ಕಾರ್ಯದ ಗತಿ ತ್ವರಿತವಾಗದಿದ್ದರೆ ನೀವು ಬಲಪ್ರಯೋಗ ಮಾಡಲು ಹಿಂಜರಿಯುವುದಿಲ್ಲ. ಏಕೆಂದರೆ ವಿಘ್ನಗಳು ನಿಮ್ಮ ಬಯಕೆಯನ್ನು ತೀವ್ರಗೊಳಿಸುತ್ತವೆ. ನಿಮ್ಮ ಸಿಟ್ಟು ಭಯಂಕರವೆನಿಸಿದರೂ ಬೇಗನೆ ಶಾಂತವಾಗುತ್ತದೆ.

ನೀವು ತುಂಬ ಹಟವಾದಿಗಳು. ತುಂಬ ವಿರೋಧ ಮಾಡುವ ಶಕ್ತಿ ನಿಮ್ಮಲ್ಲಿದ್ದರೂ ಅದ

ರಿಂದ ಪರಿಣಾಮದಲ್ಲಿ ಬದಲಾವಣೆ ಮಾಡುವುದು ಸಾಧ್ಯವೆನಿಸಿದರೆ ಮಾತ್ರ ನೀವು ವಿರೋಧ ಪ್ರಕಟಿಸುತ್ತೀರಿ.

ನೀವೇನಾದರೂ ಹಂಚಿಕೆ ಹಾಕಿದರೆ ಅದನ್ನು ಪುನಃ ಪುನಃ ಬದಲಿಸುತ್ತೀರಿ. ನಿಮ್ಮ ಅಸಹನೆ ವಿವರಗಳನ್ನು ಗಮನಿಸುವುದೇ ಇಲ್ಲ. ಮಾಡಿದರೆ ನೀವು ದೊಡ್ಡ ಕೆಲಸ ಮಾಡಬೇಕೆನ್ನುತ್ತೀರಿ. ಅನೇಕ ವಿಷಯಗಳ ಜ್ಞಾನ ನಿಮಗೆ ಸುಲಭವಾಗಿದ್ದರೂ ನೀವು ನಿಮ್ಮ ಸಾಮರ್ಥ್ಯಕ್ಕೆ ಮಿತಿ ಹಾಕದಿದ್ದರೆ ಈ ಗುಣ ಅವಗುಣವಾದೀತು.

ಒಟ್ಟಿನಲ್ಲಿ, ನೀವು ಉತ್ಸಾಹಿಗಳು, ದೃಢ ನಿಶ್ಚಯದವರು, ಚಟುವಟಿಕೆಯವರು, ಉದಾರಿಗಳು, ಆತ್ಮವಿಶ್ವಾಸವುಳ್ಳವರು, ಸ್ವತಂತ್ರ ಪ್ರವೃತ್ತಿಯವರು. ಆದರೆ ಜೊತೆಯಲ್ಲಿ ಮುಂಗೋಪಿಗಳು, ಆಕ್ರಮಣಶೀಲರು, ತುಂಬ ಅಭಿಮಾನಿಗಳು ಆಗಿರುತ್ತೀರಿ.

'ಕೆಂಪು' ನಿಮಗೆ ಸೇರದಿದ್ದರೆ ಪ್ರಯತ್ನಗಳಲ್ಲಿ ನಿಮಗೆ ನಂಬಿಗೆಯಿರುತ್ತದೆ. ಯಾವುದೊಂದನ್ನು ಬಹಿರಂಗವಾಗಿ ಎದುರಿಸುವುದಕ್ಕಿಂತ ಅದನ್ನು ಬಿಟ್ಟು ಮತ್ತೊಂದನ್ನು ಬಯಸುವವರು. ಐಷಾರಾಮ ಪ್ರವೃತ್ತಿಯವರು. ನಿಷ್ಕಾರಣವಾಗಿ ತಲೆ ಹಾಳುಮಾಡಿಕೊಳ್ಳುವ ಸ್ವಭಾವದವರು.

'ಹಳದಿ'— (ನಿಮಗೆ ಹೆಚ್ಚು ಪ್ರಿಯವಾಗಿದ್ದರೆ) ನಿಮ್ಮಲ್ಲಿ ಉತ್ಸಾಹ ತುಂಬಿರುತ್ತದೆ. ಆದರೆ ನೀವು ಬಲು ಬೇಗ ಆನಂದದಿಂದ ದುಃಖಕ್ಕೆ, ಚಟುವಟಿಕೆಯಿಂದ ಆಲಸ್ಯಕ್ಕೆ ತಿರುಗಿಬಿಡುತ್ತೀರಿ. ಎಲ್ಲದರಲ್ಲೂ ಆಸ್ಥೆಯಿದ್ದರೂ ಒಂದನ್ನೂ ಬೆನ್ನು ಹತ್ತುವವರಲ್ಲ. ಯಾವಾಗಲೂ ಸ್ವತಂತ್ರವಾದ, ಅದ್ಭುತವಾದ ವಾತಾವರಣದಲ್ಲಿ ವಿಹರಿಸುತ್ತೀರಿ. ನಿಮ್ಮ ಯೋಗ್ಯತೆಯನ್ನು ಪ್ರದರ್ಶಿಸುವ ವಿಷಯಗಳತ್ತ ನೀವು ಆಕರ್ಷಿಸಲ್ಪಡುತ್ತೀರಿ.

ನಿಮ್ಮ ಸಾಮರ್ಥ್ಯದಲ್ಲಿ ನಂಬಿಗೆಯಿರುವ ನೀವು ಮುಂದೊತ್ತುತ್ತ ಸಾಗುವಿರಿ. ಅವಕಾಶಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ನೀವು ಬಲ್ಲಿರಿ. ಮುಂದೆ ನಿಮಗೆ ತೊಂದರೆದಾಯಕವಾಗಬಹುದಾದಂಥ ವಿಷಯಗಳನ್ನು ಎದುರು ಹಾಕಿಕೊಳ್ಳಲು ನೀವು ಹಿಂಜರಿಯುತ್ತೀರಿ.

ನಿಮ್ಮ ಜೀವನವನ್ನು ಪರಿಸ್ಥಿತಿಗೆ ಮತ್ತು ನಿಮ್ಮ ಭಾವನಾತ್ಮಕ ಪ್ರತಿಕ್ರಿಯೆಗಳಿಗನುಗುಣವಾಗಿ ನಡೆಸುವುದರಿಂದ ನಿಮ್ಮ ಭಾವನೆಗಳು ತ್ವರಿತದಲ್ಲಿ ಉದ್ರೇಕಗೊಂಡರೂ ಬೇಗನೆ ಶಮನವಾಗುತ್ತವೆ.

ದುಃಖ ಕಷ್ಟಗಳು ನಿಮ್ಮನ್ನು ನೋಯಿಸುವುದರಿಂದ ನೀವು ಜೀವನದಿಂದ ಪಲಾಯನ ಮಾಡಬೇಕೆನ್ನುತ್ತೀರಿ. ಯಾವ ರೂಪದ್ದೇ ಆದರೂ ಸೌಂದರ್ಯವೆಂದರೆ ನಿಮಗೆ ಆಕರ್ಷಣೆಯಿರುತ್ತದೆ.

ಒಮ್ಮೆಲೆ ಉದ್ರಿಕ್ತರಾಗುವ ನಿಮ್ಮ ತೋರಿಕೆಯ ಸೌಮ್ಯ ಸ್ವರೂಪವನ್ನು ನಂಬಲು ಬಾರದು. ಪ್ರವಾಸಪ್ರಿಯರು ನೀವು. ನೀವು ಸಾಹಸಿಗಳಾದರೂ ಬಲು ಬೇಗ ಬದಲಾಗುವವರು.

ಒಟ್ಟಿನಲ್ಲಿ ನೀವು ತಾತ್ತ್ವಿಕರು, ಕುಶಾಗ್ರಮತಿಗಳು, ಸಹಜ ಬುದ್ಧಿಯವರು. ಆದರೆ ಸುಲಭದಲ್ಲಿ ಉದ್ರಿಕ್ತರಾಗುವವರು. ಅಶಾಂತಚಿತ್ತರು. ದೃಢ ವಿಚಾರವಿಲ್ಲದವರು.

'ಹಳದಿ' ನಿಮಗೆ ಸೇರದಿದ್ದರೆ-ಇತರರ ಮೇಲೆ ಹೊರೆಯಾದೇನೆಂಬ ಭಯದಿಂದ ನೀವು ನಿಮ್ಮತ್ತ ಜನರ ಲಕ್ಷ್ಯ ಸೆಳೆದುಕೊಳ್ಳಲು ಅಂಜುತ್ತೀರಿ. ಬಾಹ್ಯ ಜಗತ್ತಿನ ಚಿಂತೆಗಳಿಂದ ಪೀಡಿತರಾಗುವ ನೀವು ದೂರವಿದ್ದು ಗಂಭೀರರಾಗಿರಬೇಕೆನ್ನುತ್ತೀರಿ.

ಇನ್ನು—

ಹಳದಿ ಮತ್ತು ಕೆಂಪು— ನಿಮಗೆ ಪ್ರಿಯವಾಗಿದ್ದರೆ ನೀವು ಚಟುವಟಿಕೆಯುಳ್ಳವರು,

ಸಾಹಸಿಗಳು, ಆಶಾವಾದಿಗಳು. ನಿಮ್ಮ ಶರೀರ ಬಲದ ಪ್ರಜ್ಞೆಯುಳ್ಳವರಾಗಿರುತ್ತೀರಿ. ಸ್ವತಂತ್ರ ವೃತ್ತಿಯವರೂ ಆಗಿರುತ್ತೀರಿ. ವಿಚಾರಗಳಿಗಿಂತಲೂ ಕೃತಿಗಳೇ ನಿಮಗೆ ಪ್ರಾಮುಖ್ಯವೆನಿಸಿದರೂ ನೀವು ಧ್ಯೇಯವಾದಿಗಳಾಗುವುದಕ್ಕೆ ಅದರಿಂದೇನೂ ಆತಂಕವಾಗುವುದಿಲ್ಲ. ಪ್ರಯತ್ನಗಳನ್ನು ನಡುಪೆಯೆ ನಿಲ್ಲಿಸುವ ಒಲವು ನಿಮ್ಮಲ್ಲಿದೆ.

ಹಸಿರು ಮತ್ತು ನೀಲಿ— ನಿಮಗೆ ಇಷ್ಟವಾದರೆ ನಿಮಗೆ ಸಾರಾಸಾರ ವಿಚಾರವಿರುತ್ತದೆ. ನೀವು ಜಾಣರಿರುತ್ತೀರಿ. ಲೌಕಿಕ ಸುಖಗಳಲ್ಲಿ ಆಸಕ್ತಿ ವಹಿಸುವ ಕೌಶಲ ನಿಮ್ಮಲ್ಲಿರುತ್ತದೆ. ಕೆಲವೊಮ್ಮೆ ನೀವು ಸ್ವಪ್ನಗಳನ್ನು ಕಾಣುವಿರಾದರೂ ಸಾಮಾನ್ಯವಾಗಿ ಈ ವೃತ್ತಿ ಗಂಡಾಂತರಕಾರಿ ಎಂದು ತಿಳಿಯುತ್ತೀರಿ. ಅದೃಷ್ಟದ ಆಟಕ್ಕೆ ತಲೆ ಬಾಗುವ ಪ್ರವೃತ್ತಿ ನಿಮ್ಮಲ್ಲಿರುವುದು. ನೀವು ನಿಮ್ಮ ಆತ್ಮವಿಶ್ವಾಸವನ್ನು ಕಾಯ್ದುಕೊಳ್ಳಬೇಕು.

ಹಳದಿ ಮತ್ತು ನೀಲಿ— ನಿಮಗೆ ಸೇರಿಕೆಯಾಗಿದ್ದರೆ ನೀವು ಖಂಡಿತ ಆಶಾವಾದಿಗಳು. ನೀವು ತುಂಬ ಭಾವನಾಪೂರ್ಣರಾದರೂ ಭಾವನೆಗಳ ಮೇಲೆ ವಿವೇಕದ ನಿಯಂತ್ರಣವಿರುವುದು. ನಿಮ್ಮ ಬೌದ್ಧಿಕ ವಿಕಾಸವಾಗಿರುವುದಾದರೂ ಕೆಲ ಸಲ ನೀವು ನಿರ್ಧಾರ ಮಾಡಲು ಹಿಂದೆ ಮುಂದೆ ನೋಡುತ್ತೀರಿ. ಕಲ್ಪನಾಸ್ವರ್ಗವನ್ನು ನೀವು ಇತರರ ಪಾಲಿಗೆ ಬಿಟ್ಟು ಕೊಟ್ಟುಬಿಟ್ಟರೆ ನೀವು ಮಾಡುವ ಪ್ರತಿಯೊಂದರಲ್ಲೂ ಜಯ ಸಂಪಾದಿಸುವಿರಿ.

ಹಸಿರು ಮತ್ತು ಕೆಂಪು— ನಿಮಗೆ ಪ್ರಿಯವಾಗಿದ್ದರೆ ನಿಮ್ಮ ಚಟುವಟಿಕೆ ಮತ್ತು ಊಹೆಗಳು ಸದಾ ನಿಮ್ಮ ವ್ಯಕ್ತಿತ್ವವನ್ನು ಮೀರಿ ನಿಲ್ಲುವವಾದರೂ ನೀವು ವ್ಯಾವಹಾರಿಕ ಅಂಶಗಳನ್ನು ಎಂದೂ ಮರೆಯುವುದಿಲ್ಲ. ನೀವು ಯಾವಾಗಲೂ ವ್ಯಾವಹಾರಿಕ ಸತ್ಯದತ್ತಲೇ ಗಮನವಿಟ್ಟಿರುತ್ತೀರಿ. ಜೀವನದಲ್ಲಿಯ ನಿಮ್ಮ ಮಹತ್ವಾಕಾಂಕ್ಷೆಯನ್ನು ಸಾಧಿಸಿಕೊಳ್ಳಬೇಕಾದಲ್ಲಿ ನೀವು ನಿಮ್ಮ ಅಭಿಮಾನ ಮತ್ತು ಶಕ್ತಿಗಳನ್ನು ಉಪಯೋಗಿಸಿಕೊಳ್ಳಬೇಕು.

ಕೆಂಪು ಮತ್ತು ನೀಲಿ— ನಿಮ್ಮ ಪ್ರಿಯ ಬಣ್ಣಗಳಾಗಿದ್ದರೆ ನೀವು ಮಹತ್ವಾಕಾಂಕ್ಷಿಗಳೂ ಶಾಂತಚಿತ್ತರೂ ಸತತಪ್ರಯತ್ನಿಗಳೂ ಆಗಿರುವಿರಿ. ಜಯ ಸಂಪಾದಿಸಿಯೆ ತೀರಬೇಕೆಂಬ ನಿಮ್ಮ ನಿರ್ಧಾರ ಮುಖದ ಮಂದಹಾಸದ ಹಿಂದೆ ಅಡಗಿರುತ್ತದೆ. ಭಾವನೆಯ ಅತಿರೇಕವನ್ನು ನೀವು ಹೊಂದಬಹುದಾಗಿದ್ದು ಅದರಿಂದ ನಿಮ್ಮಲ್ಲಿ ಆಂತರಿಕ ಅಸ್ವಸ್ಥತೆಯುಂಟಾಗಬಹುದು. ನಿಮ್ಮ ಅತಿ ಉತ್ಸಾಹವು ನಿಮ್ಮನ್ನು ಸಹಜವಾಗಿ ಮೂರ್ಖ ಕೃತಿಗಳಿಗೆ ಇಳಿಸಬಹುದಾಗಿದೆ.

ಹಳದಿ ಮತ್ತು ಹಸಿರು— ನಿಮಗೆ ಪ್ರಿಯವಾಗಿದ್ದರೆ ನಿಮ್ಮ ಅಭಿಪ್ರಾಯಗಳು ನ್ಯಾಯವಾಗಿರುತ್ತವೆ. ನಿಮ್ಮಲ್ಲಿ ಸಾರಾಸಾರ ಜ್ಞಾನವಿರುತ್ತದೆ. ನಿಮ್ಮ ಬಯಕೆಗಳು ವ್ಯವಹಾರದಲ್ಲಿ ಸಫಲವಾಗಬೇಕೆಂದು ನೀವು ಬಯಸುವಿರಿ. ನಿಮ್ಮ ಉತ್ಸಾಹ ಕೆಲ ಸಲ ಬೇಗನೆ ತಣ್ಣಗಾಗುವುದು. ಕೆಲ ಸಲ ನಿಮ್ಮ ಕೋಪ ಪ್ರಖರವಾಗುವುದು. ನಿಮಗೆ ಪ್ರೋತ್ಸಾಹನ ಅಗತ್ಯವಾಗಿರುತ್ತದೆ.

*


ಕೋಟ್ಯಾಂತರ ಮನೆಗಳಲ್ಲಿ
ಕುಡಿದು ಆನಂದಿಸುತ್ತಾರೆ
SPECIAL HOTEL BLEND
BROOKE BOND
ಬ್ರೂಕ್ ಬಾಂಡ್
ಚಹಾ
ತಾಜಾ ಮತ್ತು ಉತ್ತಮ
ಬ್ರೂಕ್ ಬಾಂಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
TBB 3625A

ಇದುವೆ ಜೀವ, ಇದು ಜೀವನ

"....ಲೋ ವೆಂಕಟರಮಣಾ ಲೋs ವೆಂಕಟರಮಣಾ"

ಎಂಬ ಕೂಗು ಹೊರ ಬೀದಿಯಿಂದ ಬಂದುದನ್ನು ಕೇಳಿ ಸುತ್ತಮುತ್ತಲಿನ ಜನ ರಸ್ತೆಗೆ ಬಂದು ನೋಡುವಷ್ಟರಲ್ಲಿ, ಕೂಗಿದವರು ಯಾರೆಂದು ತಿಳಿಯಲಿಲ್ಲ. ಆದರೆ ಹಿಂದಿರುಗುವಷ್ಟರಲ್ಲಿ ಮತ್ತೆ ಕೂಗು; ಮತ್ತೆ ಜನ ಹಿಂದಿರುಗಿತು ಆತುರದಿಂದ. ಅಷ್ಟರಲ್ಲಿಯೇ ಧ್ವನಿ ಮುಸುಕಾಗಿತ್ತು. ಹೀಗೆ ನಾಲ್ಕೆಂಟು ಸಲ ನಡೆದಿರಬೇಕು. ಕಡೆಗೆ—ಕನ್ನಡ ಶಾಲೆಯ ಶಿಕ್ಷಕರಾದ—ಶಾಮಶಾಸ್ತ್ರಿಗಳು ಸೈಕಲ್ ಮೇಲಿಂದ ಬರುತ್ತಿದ್ದುದು ಕಂಡಿತು! ಅವರೇ ತಮ್ಮ ಮಗ ವೆಂಕಟರಮಣನನ್ನು ಕೂಗುತ್ತ ಕೂಗುತ್ತ ಮೊದಲಿನಂತೆ ಹಾಗೇ ಮುಂದೆ ಸೈಕಲ್ ಓಡಿಸಿದರು. ಹೀಗೇಕೆ ಎಂದು ಜನಕ್ಕೆ ದಿಗಿಲಾಯಿತು. ಹೋಗಿ ಮನೆಯ ಹಿಂಬದಿ ಅಂಗಳದಲ್ಲಿ ಏನೋ ಕೆಲಸದಲ್ಲಿದ್ದ ಮಗ-ವೆಂಕಟರಮಣನನ್ನು ಕರೆ ತಂದರು. ಶಾಸ್ತ್ರಿಗಳ ಸೈಕಲ್ ಸವಾರಿ ಮತ್ತೆ ಬಂತು. ಮಗನನ್ನು ಕಂಡು ದಿಗಿಲಿನಲ್ಲಿಯೇ "ಲೋ ವೆಂಕಟರಮಣ, ಆಕಳು ನಿಂತಿದೆಯೋ...." ಎಂದು ಕೂಗಿದರು. ಮಗ ಓಡುತ್ತ ಹೋಗಿ ಸೈಕಲ್ಲನ್ನು ಹಿಡಿದ. ಆದು ಅಡ್ಡ ಬಿದ್ದಾಗ ಪ್ರಯಾಸಪಟ್ಟು ಶಾಸ್ತ್ರಿಗಳು ಇಳಿದರು, ತೇಕುತ್ತಾ ಮನೆಯೊಳಗೆ ಹೋದರು.

ಏನೆಂದು ಕೇಳಿದಾಗ ವೆಂಕಟರಮಣ ನಗೆ ತಡೆಯದೇ ಹೇಳಿದ: ... ದೂರದ ಶಾಲೆಗೆ ವರ್ಗವಾದಾಗಿನಿಂದ ಅವನ ತಂದೆ ಸೈಕಲ್ ತೆಗೆದುಕೊಂಡಿದ್ದರು. ಅವರಿಗೆ ಸೈಕಲ್ ಹತ್ತಲೂ ಮರಳಿದಾಗ ಇಳಿಯಲೂ ಮನೆಯ ಮುಂದಿನ ದೀಪದ ಕಂಬವೇ ಆಧಾರ. ಹತ್ತುವಾಗ ಅದರ ಆಧಾರದಿಂದ ಹತ್ತುತ್ತಿದ್ದರು. ಇಳಿಯಬೇಕಾದರೆ ಕಂಬಕ್ಕೆ ತೆಕ್ಕೆ ಬಿದ್ದು ಇಳಿಯುತ್ತಿದ್ದರು. ಇಂದು ಅವರು ಮರಳಿದಾಗ ಒಂದು ಆಕಳು ಆ ಕಂಬಕ್ಕೆ ಒರಗಿಕೊಂಡು ನಿಂತುಬಿಟ್ಟಿತ್ತು. ಹೇಗೆ ಇಳಿಯುವುದೆಂದು ದಿಗಿಲಾಗಿ ಮಗನನ್ನು ಕೂಗುತ್ತ ಓಣಿಯನ್ನು ಸುತ್ತು ಸುತ್ತು ಹಾಕಬೇಕಾಯಿತು. "ನೀವು ನನ್ನನ್ನು ಬೇಗ ಕರೆಯದಿದ್ದರೆ ಅವರು ಇನ್ನೂ ಎಷ್ಟು ಸುತ್ತುಗಳನ್ನು ಹಾಕಬೇಕಾಗಿತ್ತೋ ಏನೋ..." ಎಂದು ವೆಂಕಟರಮಣ ಮುಗಿಸಿದ.

—ನಾ. ದೇಸಾಯಿ

ಜಾರಿ ಲುಯಿಸನ "ಹಾಲಿವುಡ್ ಆರ್ ಬರ್ಸ್ಟ್" ಚಿತ್ರ ನೋಡಲು ಬುಕಿಂಗ್ ಆಫೀಸ್ ಎದುರು ಜನ ಕಿಕ್ಕಿರಿದಿತ್ತು. ಹೇಗೋ ಒಂದು ಟಿಕೆಟ್ ದೊರಕಿಸಿಕೊಂಡು ಒಳಹೊಕ್ಕೆ. ಎಲ್ಲರೂ ಅಭಿನಯವನ್ನು ನೋಡುತ್ತ ನಿಮಿಷ ನಿಮಿಷಕ್ಕೆ ನಗುತ್ತಿದ್ದರು. ನನಗಂತೂ ಮೈಮೇಲಿನ ಅರಿವೇ ಉಳಿಯಲಿಲ್ಲ. ಬಿದ್ದು ಬಿದ್ದು ನಗುತ್ತಿದ್ದೆ, ಎದ್ದು ಹಾರುತ್ತಿದ್ದೆ. ಎಷ್ಟೋ

ಪಲ ಪಕ್ಕದವರು ಹಿಡಿದು ನನ್ನನ್ನು ಕೆಳಗೆ ಕೂಡ್ರಿಸಬೇಕಾಗುತ್ತಿತ್ತು.

ಇಂಟರ್‌ವಲ್ಲಿನ ಸಮಯದಲ್ಲಿ ಹೊರ ಬಂದು ಜೇಬಿನಲ್ಲಿ ಕೈಹಾಕಿದಾಗಲೆ ನನಗೆ ಗೊತ್ತಾದ್ದು, ನನ್ನ ಉತ್ಸಾಹಕ್ಕೆ ತೆರಬೇಕಾದ ಬೆಲೆ ತಿಳಿದದ್ದು. ಉತ್ಸಾಹದ ಅತಿರೇಕದಲ್ಲಿ ನಾನು ಟಿಕೆಟ್ ಎಂದು ಬಗೆದು ಹರಿದು ಹಾಕಿದ್ದು ನನ್ನ ಹತ್ತಿರ ಇದ್ದ ರೂ. ೫ ನೋಟನ್ನು.

— ಜನಾರ್ದನ ಕಟ್ಟಿ

ಪೇಟೆಗೆ ಹೊರಟಿದ್ದ ನಾವು ಹಿಂದಿರುಗುವ ವೇಳೆಗೆ ಆಗಲೇ ಕತ್ತಲಾಗತೊಡಗಿತ್ತು. ಅವಸರದಿಂದ ನಾನು ಬೇಗ ಬೇಗ ಹೆಜ್ಜೆ ಹಾಕತೊಡಗಿದ್ದೆ; ನನ್ನ ಹಿಂದೆ, ಹತ್ತು ಮಾರು ದೂರದಲ್ಲಿ ನನ್ನ ಯಜಮಾನರು ನನ್ನನ್ನನುಸರಿಸಿ ಬರುತ್ತಿದ್ದರು. ಎದುರು ಬದಿಯ ಫುಟ್‌ಪಾತ್ ಮೇಲೆ, ಮಧ್ಯವಯಸ್ಸಿನ ಗೃಹಸ್ಥರೊಬ್ಬರು ನಮ್ಮ ದಾರಿಯಲ್ಲೇ ನಡೆದು ಬರುತ್ತಿದ್ದರು. ಹೀಗೆಯೇ ಸುಮಾರು ಕಾಲು ಘಂಟೆ ಕಳೆದಿರಬಹುದು; ಆ ಗೃಹಸ್ಥರು, ತಟ್ಟನೆ ನಮ್ಮ ಕಡೆಯ ಫುಟ್‌ಪಾತಿಗೆ ಬಂದು, ನನ್ನ ಯಜಮಾನರನ್ನುದ್ದೇಶಿಸಿ, "ನೋಡಿ, ನೀವು ಸಂಭಾವಿತ ಗೃಹಸ್ಥರಂತೆ ಕಾಣುತ್ತೀರಿ. ಆದರೂ ನಾನು ಈಗ ಕಾಲುಘಂಟೆಯಿಂದ ನೋಡುತ್ತಲೇ ಇದ್ದೇನೆ— ನೀವು ಈ ತರುಣಿಯನ್ನೇ ಹಿಂಬಾಲಿಸಿಕೊಂಡು ಬರುತ್ತಿದ್ದೀರಲ್ಲಾ, ಈ ತರದ ನಡವಳಿಕೆ ನಿಮ್ಮಂತಹ ವಿದ್ಯಾವಂತರಿಗೆ ಯೋಗ್ಯವೇ ?" ಎಂದರು.

ಅದು ನನ್ನ ಪತಿಯೇ ಎಂದು ತಿಳಿದಾಗ ಆ ಮಹನೀಯರು ತಬ್ಬಿಬ್ಬಾದರು. ಆದರೆ ನನ್ನ ಯಜಮಾನರು ಮಾತ್ರ ಅನಂತರ ಹಿಂದೆ ಬೀಳಲಿಲ್ಲ.

— ಸಿ. ಮಾಲಿನಿ ವಾಮನರಾವ್

ದೀಪಾವಳಿಗೆಂದು ನನ್ನ ತಂಗಿ, ಭಾವ ಇಬ್ಬರೂ ಹುಬ್ಬಳ್ಳಿಯಿಂದ ಬಂದಿದ್ದರು. ಅಂದು ವ್ಯಾಪಾರಕ್ಕೆಂದು ಪೇಟೆಗೆ ಹೋಗಿ, ಸ್ವಲ್ಪ ವ್ಯಾಪಾರಮಾಡಿ ಉಳಿದ ಇನ್ನೂರು ರೂಪಾಯಿ ಚಿಲ್ಲರೆ ಗುಂಪಿನಲ್ಲಿಲ್ಲೊ ಕಳೆದುಕೊಂಡು ಬಂದಿದ್ದರು. ಹುಡುಕಿ ಹುಡುಕಿ ಸಾಕಾಗಿ ಮುಖ ಕೆಂಪಗಾಗಿತ್ತಲ್ಲದೇ ಕಳೆಗುಂದಿತ್ತು. ನಾಲ್ಕಾರು ದಿವಸಗಳ ನಂತರ, ವಿಷಯ ಸ್ವಲ್ಪ ಮರೆಯುತ್ತಾ ಬಂದಿದ್ದಾಗ ಒಂದು ದಿನ ತಂಗಿಯ ಹೆಸರಿಗೆ ರಿಜಿಸ್ಟರ್ ಭಾಂಗಿಯೊಂದು ಬಂತು. ಕುತೂಹಲದಿಂದಲೇ ಒಡೆದು ನೋಡಿದಾಗ ಅದರಲ್ಲಿ ತಂಗಿಯ ವ್ಯಾನಿಟಿ ಬ್ಯಾಗು ಇತ್ತಲ್ಲದೇ ಕಳೆದುಹೋದದ್ದೆಲ್ಲಾ ಕ್ರಮವಾಗಿತ್ತು. ಅದರೊಡನೆ,

"ಅಪರಿಚಿತ ಸೋದರಿಗೆ—

"ನನ್ನ ಪ್ರಿಯಕರ ಇದನ್ನು ತಂದು ಕೊಟ್ಟಾಗ ಇದರಲ್ಲಿರುವ ರಸೀತಿಗಳನ್ನು ನೋಡಿ ಹೊಸದಾಗಿ ತಾಯಿಯಾಗಬಹುದಾದ ನಿಮಗೆ ತೊಂದರೆಯುಂಟಾಗದಿರಲೆಂದು ಹಿಂತಿರುಗಿಸಿರುವೆ. ಇದು ಕಳೆದುಹೋದುದರಿಂದ ನಿಮಗೆ ಹೆಚ್ಚು ತೊಂದರೆಯಾಗಿಲ್ಲದಿದ್ದರೆ ತುಂಬಿದ ಹೃದಯದೊಡನೆ ಕಳಗೆ ಕೊಟ್ಟಿರುವ ಅನಾಥ ಶಿಶುವಿಹಾರಕ್ಕೆ ಕಳುಹಿಬಿಡಿರಿ.

ಇತಿ

"ತಾಯ್ತನದ ರುಚಿಕಾಣದ ಸೋದರಿ."

ಎಂಬ ಪತ್ರದೊಡನೆ ಅನಾಥ ಶಿಶುವಿಹಾರವೊಂದರವಿಳಾಸವನ್ನೂ ಬರೆದಿತ್ತು.

— ನಾ. ಗೋವಿಂದರಾಯ

ಬ್ರಿಟಿಶರು ಅಂದಮಾನವನ್ನು ಬಿಟ್ಟೋಡಿದಾಗ

ಸಾವಿತ್ರಿದೇವಿ ನಿಗಮ

೧೯೪೨ನೇ ಇಸವಿ ಪ್ರಾರಂಭವಾಗಿತ್ತು. ಭಾರತದಲ್ಲಿ ಚಲೇಜಾವ್ ಚಳವಳಿ ಭರದಿಂದ ಸಾಗಿತ್ತು. ಅದರ ಕೆಲವು ಅಲೆಗಳು ಅಂದಮಾನದ ವರೆಗೂ ತಲುಪಿದ್ದವು. ಅಲ್ಲಿಯ ನಿವಾಸಿಗಳು ಬ್ರಿಟಿಶ ಸರಕಾರವನ್ನು ಭಕ್ತಿ ವಿಶ್ವಾಸಗಳಿಂದ ನೋಡುವುದನ್ನು ಕಡಿಮೆ ಮಾಡಿದ್ದರು. ಅಷ್ಟರಲ್ಲಿ ಜಪಾನೀಯರು ಭಾರತದತ್ತ ಭರದಿಂದ ಸಾಗಿ ಬರತೊಡಗಿದ್ದಾರೆ ಎಂಬ ಸುದ್ದಿ ಬಂತು. ಮೊದಮೊದಲು ಈ ಬಗ್ಗೆ ಮನೆಗಳಲ್ಲಿಯೆ ಚರ್ಚೆ ಮಾಡುತ್ತಿದ್ದರು. ಬರಬರುತ್ತ ಚರ್ಚೆ ಮನೆಯಿಂದ ಓಣಿಗೆ, ಓಣಿಯಿಂದ ಪೇಟೆಗೆ, ಪೇಟೆಯಿಂದ ಕಚೇರಿಗಳ ವರೆಗೂ ಹಬ್ಬಿತು.

ಏನಾದೀತೆಂದು ಯಾರಿಗೂ ತಿಳಿದಿರಲಿಲ್ಲ. ಆದರೂ ಎಲ್ಲರ ಭಾವನೆಗಳು ಮಾತ್ರ ಉದ್ರಿಕ್ತವಾಗಿದ್ದುವು. ಬುದ್ಧಿವಂತರಾದ ಅಧಿಕಾರಿಗಳು ಹಾಗೂ ಮುಂದಾಲೋಚನೆ ಮಾಡುವ ಕೂಲಿಕಾರರು ಏನಾದರೂ ನೆವ ಹೂಡಿ ಭಾರತಕ್ಕೆ ಬರುವ ವಿಚಾರದಲ್ಲಿ ತೊಡಗಿದರು. ಇಡೀ ದ್ವೀಪವೇ ನಿರ್ಜನವಾಗುವುದೇನೊ ಎನಿಸಿತ್ತು.



ಆದರೆ ಸರಕಾರ ಮಾತ್ರ, ಹಾಗಾಗಬಾರದೆಂದು ಸಾಧ್ಯವಿದ್ದುದನ್ನೆಲ್ಲ ಮಾಡತೊಡಗಿತ್ತು. ಅಧಿಕಾರಿಗಳನ್ನೂ ಕೂಲಿಕಾರರನ್ನೂ ಒಯ್ಯುತ್ತಿದ್ದ ಹಡಗುಗಳು ಮರಳಿ ಬರುವಾಗ ಸಕ್ಕರೆ, ಅನ್ನ, ಡಿಜೆಲ್ ಎಣ್ಣೆ ಮತ್ತು ಪೆಟ್ರೋಲ್ ತರುತ್ತಿದ್ದವು ಮತ್ತು ಅಂದಮಾನ ಬಿಟ್ಟು ಹೋದ ಜನರ ಬಗ್ಗೆ ಸಂದೇಹ ತಾಳುತ್ತಿದ್ದವರ ಶಂಕೆ ಕುಶಂಕೆಗಳಿಗೆ ಸಮಾಧಾನ ಹೇಳುತ್ತಿದ್ದವು.

ಒಂದು ದಿನ ಜಪಾನೀಯರ ವಿಮಾನಗಳು ಅಂದಮಾನದಲ್ಲಿದ್ದ ಬಿಳಿಯರ ಸೈನ್ಯ ಠಾಣೆಯ ಮೇಲೆ ಬಾಂಬಿನ ಸುರಿಮಳೆ ಮಾಡತೊಡಗಿದವು. ಒಬ್ಬ ಬ್ರಿಟಿಶ್ ಸಿಪಾಯಿ ಜಪಾನೀಯರ ವಿಮಾನವನ್ನು ಕೆಳಗೆ ಉರುಳಿಸಲೆಂದು ಗುಂಡು ಹಾರಿಸಿದ. ಆ ದಿನದಿಂದ ಬ್ರಿಟಿಶ ಅಧಿಕಾರಿಗಳ ಧೈರ್ಯವೇ ಉಡುಗಿಹೋಯಿತು. ಇದರಿಂದ ಅಂದಮಾನದ ನಿವಾಸಿಗಳು ಸಂಕಟವು ಬಂದೇ ಬಿಟ್ಟಿತೆಂದು ನಂಬಿಕೊಂಡು ಹೌಹಾರಿದರು.

ಜನರ ಭೀತಿ ಎಷ್ಟೊಂದು ಹೆಚ್ಚಿತೆಂದರೆ ಅವರು ಬ್ರಿಟಿಶ ಅಧಿಕಾರಿ ಕಾಣಿಸುವುದೇ ತಡ, ಅವನನ್ನು ತಡೆದು, "ಇನ್ನೇನು ಆಗುವುದು? ಜಪಾನೀಯರು ಎಲ್ಲಿಯ ವರೆಗೆ ಬಂದಿದ್ದಾರೆ?" ಎಂದು ಕೇಳತೊಡಗಿದರು. ವನ-ವಿಭಾಗದ ಕ್ಯಾಂಪುಗಳು, "ಜನರು ಬಂಡಾಯವೆಬ್ಬಿಸುವ ಸಿದ್ಧತೆಯಲ್ಲಿ ಇದ್ದಂತೆ ತೋರುತ್ತದೆ. ಎಷ್ಟೋ ಜನರು ಬಂದೂಕುಗಳನ್ನು ಕಳವು ಮಾಡಿಕೊಂಡು ಪಲಾಯನ ಮಾಡುತ್ತಿದ್ದಾರೆ" ಎಂದು ಸುದ್ದಿಗಳನ್ನು ತಿಳಿಸತೊಡಗಿದವು. ಸಂತೆ ಪೇಟೆಗಳಲ್ಲಿ ಜನರು ಒಟ್ಟುಗೂಡತೊಡಗಿದರು. ಅಲ್ಲಲ್ಲಿ ಹೊಡೆದಾಟ ಬಡಿದಾಟಗಳೂ ಆಗತೊಡಗಿದವು.

ಒಂದು ಸಣ್ಣ ಮಾತಿಗಾಗಿ ಒಬ್ಬ ಬ್ರಹ್ಮೀ ಮನುಷ್ಯ ಇನ್ನೊಬ್ಬ ಬ್ರಹ್ಮೀ ಮನುಷ್ಯನನ್ನು ಹಗಲು ಹೊತ್ತಿನಲ್ಲಿ ತುಂಬಿದ ರಸ್ತೆಯಲ್ಲಿ ಕತ್ತಿಯಿಂದ ಇರಿದು ಕೊಂದ. ಹಾಗೂ ಆ ಬಿಚ್ಚುಗತ್ತಿಯನ್ನು ಹಿಡಿದುಕೊಂಡು ಏನೂ ಆಗದವರಂತೆ ನಿದಾನವಾಗಿ ರಸ್ತೆಯಲ್ಲಿ ಸಾಗಿಹೋದ. ಪೋಲೀಸರು, ನಾಗರಿಕರು—ಯಾರೂ ಅವನನ್ನು ತಡೆಯಲು ಮುಂದೆ ಬರಲಿಲ್ಲ. ಚಿಕ್ಕ ಪುಟ್ಟ ಸಂಗತಿಗಳಿಂದಲೂ ಕಳವು ದರೋಡೆ ಹೊಡೆದಾಟಗಳು ಆಗತೊಡಗಿದವು. ದ್ವೀಪವನ್ನು ಬರಿದು ಮಾಡಬೇಕೆಂಬ ಆಜ್ಞೆ ಹೊರಡಿಸುವುದೊಂದು ಉಳಿದಿತ್ತು.

ಬೆಳಗಾಗಿತ್ತು. ಬಾರಾಟೊಂಗ್ ದ್ವೀಪದಲ್ಲಿ ಒಂದು ನೌಕೆ ಬಂದು ನಿಂತಿತು. ವನವಿಭಾಗದ ಭಾರತೀಯ ಅಧಿಕಾರಿಯೊಬ್ಬನು ಅಂದಮಾನದ ಒಬ್ಬ ಅಧಿಕಾರಿಗೆ ಹೇಳಿದ: "ಶಿಬಿರದಲ್ಲಿರುವ ಕೂಲಿಗಳನ್ನು ಕರೆಸಿಕೊ. ಎಲ್ಲರಿಗೂ ಕೆಲಸ ಕೊಡುವ ಹೊಣೆ ಇನ್ನು ನಿನ್ನದಾಗಿದೆ."

"ನೀವೆಲ್ಲಿ ಹೋಗುತ್ತೀರಿ?" ಆಶ್ಚರ್ಯದಿಂದ ಅಂದಮಾನಿ ಕೇಳಿದ.

"ನಾನು ಹೊರಟಿದ್ದೇನೆ. ಒಂದು ಮೋಟರ್ ಬೋಟನ್ನು ಕಳಿಸುತ್ತೇನೆ. ನೀನು ಅದರೊಳಗೆ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಂದುಬಿಡು" ಎಂದು ಉತ್ತರ ಬಂತು.

ಆದರೆ ಅಂದಮಾನಿ ಇಷ್ಟಕ್ಕೆ ತಡೆಯದೆ, "ಇವ್ಯಾಕ್ಯುಯೇಶನ್ (ದ್ವೀಪವನ್ನು ಬರಿದು ಮಾಡುವ ಕೆಲಸ) ಸುರುವಾಗಿದೆಯೆ?" ಎಂದು ಕೇಳಿಬಿಟ್ಟ.

"ಅದನ್ನೆಲ್ಲ ನೀನು ಕೇಳುತ್ತ ವೇಳೆಗಳೆಯಬೇಡ. ನಿನಗೊಂದು ಕಾಗದ ಬರಬಹುದು. ಅದರಿಂದ ಎಲ್ಲವೂ ವಿದಿತವಾಗುವುದು."

"ನಾನೇನು ಹೆದರುವುದಿಲ್ಲ. ಅಷ್ಟು ಕೆಚ್ಚು ಇದ್ದವನಿದ್ದೇನೆ. ವಿಷಯ ಏನೆಂಬುದನ್ನು ನೀವು ನಿಶ್ಚಿಂತೆಯಿಂದ ಹೇಳಿರಿ."

"ನಿನ್ನ ಧೈರ್ಯಕ್ಕೆ ಮೆಚ್ಚಿದೆ. ಆದರೆ ಏನೂ ಮಾತಾಡಬಾರದಾಗಿ ಆಜ್ಞೆಯಾಗಿದೆ. ಅಚ್ಛಾ, ಬರುವೆ. ಉಪಜೀವಿಕೆಗೆ ರೇಶನ್ ಸಾಕಷ್ಟು ಇದೆಯಲ್ಲವೆ?"

"ಇದೆ."

ಮೋಟರ್ ಬೋಟ್ ಬಿಡಲು ಒಂದೆರಡು ನಿಮಿಷ ವೇಳೆ ಇರಬೇಕು, ಅಷ್ಟರಲ್ಲಿ ಇಬ್ಬರು ಕೂಲಿಗಳು ಓಡುತ್ತ ಬಂದರು. "ಸಂತೆಯಲ್ಲಿ ಅಂಗಡಿಗಳನ್ನು ಲೂಟಿಮಾಡಿ ಅವರು ಇತ್ತ ಬರುತ್ತಿದ್ದಾರೆ" ಎಂದು ತೇಕುತ್ತಾ ಹೇಳಿದರು.

"ಹೆದರಬೇಡಿರಿ, ನೀವೆಲ್ಲರೂ ಒಟ್ಟಾಗಿರಿ. ಒಬ್ಬ ಸಮೀಪದ ಕ್ಯಾಂಪುಗಳಿಗೆ ಹೋಗಿ, ಈಗಲೆ ಹಾಜರಿ ಇದೆ. ಎಲ್ಲರೂ ಬರಬೇಕೆಂದು ಹೇಳಿ ಬನ್ನಿರಿ," ಎಂದು ಅಧಿಕಾರಿ ನುಡಿದ. ಮೋಟರ್ ಬೋಟ್ ಹೋಯಿತು.

ಬಂಡುಗಾರರು ಬಂದರೆಂದರೆ ಅವರನ್ನು ಎದುರಿಸುವುದು ಹೇಗೆ, ಯಾರು ಯಾರು ಎಲ್ಲಿ ಎಲ್ಲಿ ಅಡಗಿಕೊಂಡಿರಬೇಕು, ಯಾರು ಗುಂಡು ಹಾರಿಸಬೇಕು— ಇತ್ಯಾದಿ ಎಲ್ಲ ಸಂಗತಿಗಳ ನಿಶ್ಚಯ ಸಂಜೆಗೆ ಆಯಿತು. ಕಾವಲು ನಡೆಯಿತು. ಮಧ್ಯರಾತ್ರಿ ಮೀರಿದ ಮೇಲೆ ಎಲ್ಲರೂ ನಿದ್ದೆಯಿಂದ ತೂಕಡಿಸತೊಡಗಿದರು. ಆಗ ಅಧಿಕಾರಿ 'ನಿಮಗೆ ನಿದ್ದೆ ಬಂದಿದ್ದರೆ ನೀವು ಮಲಗಿರಿ. ನನ್ನ ಅಣ್ಣನ ಮಗ ಶೂರನೂ ಧೀರನೂ ಇದ್ದಾನೆ. ಆತ ಬೆಳಗಿನ ವರೆಗೆ ಕಾವಲು ಮಾಡುತ್ತಾನೆ. ದಾಳಿಯಾಗುವುದಿದ್ದರೆ ಬೆಳಿಗ್ಗೇ ಆಗಬಹುದು", ಎಂದು ಹೇಳಿದ.

ಬೆಳಗಾಯಿತು. ಮಧ್ಯಾಹ್ನವಾಯಿತು. ಅಪರಾಹ್ನವೂ ಆಯಿತು. ಆದರೆ ಬಂಡುಗಾರರು ಬರಲಿಲ್ಲ. ಅಥವಾ ಭಾರತೀಯ ಅಧಿಕಾರಿ ಚಿಗಪ್ಪಾ ಹೇಳಿ ಹೋದಂತೆ ಯಾವ ಮೋಟರ್ ಬೋಟಗಳೂ ಬರಲಿಲ್ಲ.

ಸಂಜೆಗೆ ಇಬ್ಬರು ಅಂಗಡಿಕಾರರು ಅಳುತ್ತ ಒದರುತ್ತ ಬಂದು, "ಬಂಡುಗಾರರು ನಮ್ಮ ಅಂಗಡಿಗಳನ್ನು ಲೂಟಿ ಮಾಡಿಬಿಟ್ಟಿದ್ದಾರೆ. ೩೫ ಜನರು ಈಗ ಸರಕಾರಿ ಖಜಾನೆಯನ್ನು ಲೂಟಿ ಮಾಡಲು ಬರುತ್ತಿದ್ದಾರೆ" ಎಂದು ಹೇಳಿದರು. ಈ ಮಾತು ನಡೆದಿರುವಾಗಲೇ ಎರಡು ಮೋಟರ್ ಬೋಟುಗಳು ಬರುತ್ತಿರುವುದು ಕಾಣಿಸಿತು. ನಾವೆಗಳು ಬರುತ್ತಲೇ ಜನರು ಅವುಗಳಲ್ಲಿ ಹೋಗಿ ಕೂತರು. ಅವು ಹೊರಟವು. ಹತ್ತು ಮಿನಿಟುಗಳಾದ ಮೇಲೆ ಒಂದು ನಾವೆ ಕೆಡಲಿಕ್ಕೆ ಪ್ರಾರಂಭಿಸಿತು. ೧೦-೧೫ ಮಿನಿಟಿಗೊಮ್ಮೆ ನಿಂತುಬಿಡುತ್ತಿತ್ತು. ಮತ್ತೆ ಸುರುವಾಗುತ್ತಿತ್ತು. ಕೊನೆಗೆ ರಾತ್ರಿ ಬಂಡುಗಾರರ ಕೈಗೆ ಸಿಕ್ಕು ಪ್ರಾಣ ಕಳೆದುಕೊಳ್ಳುವುದಕ್ಕಿಂತ ಬೆಳಗಾಗುವ ವರೆಗೆ ಎಲ್ಲಿಯಾದರೂ ಮರೆಯಲ್ಲಿ ಅಡಗಲು ಆಸರೆ ಹುಡುಕಬೇಕೆಂದುಕೊಂಡು ವಿಚಾರಿಸಿದರು. ಇಂಗ್ರೇಜರು ಬಿಟ್ಟುಹೋಗಿದ್ದರಿಂದ ಬರಿದಾಗಿದ್ದ ಒಂದು ಕ್ಯಾಂಪಿನಲ್ಲಿ ರಾತ್ರಿಯನ್ನು ಕಳೆಯಬೇಕೆಂದು ಕೊನೆಗೆ ನಿರ್ಣಯಿಸಿದರು.

ಬೆಳಗಾಗುವಷ್ಟೊತ್ತಿಗೆ ಆ ಕ್ಯಾಂಪಿನತ್ತ ಇನ್ನೊಂದು ನಾವೆ ಬರುತ್ತಿರುವುದು ಕಾಣಿಸಿತು. ಮತ್ತೆ ಜನರು ಗಾಬರಿಗೊಂಡು ಚೆಲ್ಲಾಪಿಲ್ಲಿಯಾಗತೊಡಗಿದರು. ವ್ಯಾಪಾರಿಗಳಿಬ್ಬರ ಕಷ್ಟವಂತೂ ಹೇಳತೀರದು. ಹೆಣ್ಣು ಮಕ್ಕಳು ಅಳುವುದನ್ನು ಕಂಡು ಚಿಕ್ಕಮಕ್ಕಳು ಅಳಲಾರಂಭಿಸಿದವು. ವನ-ವಿಭಾಗದ ಅಧಿಕಾರಿ ಎಲ್ಲರಿಗೂ ಧೈರ್ಯ ಹೇಳುತ್ತಿದ್ದ. "ಹೆಚ್ಚು ಹೆದರಿಕೊಳ್ಳುವವರು ಅರಣ್ಯದಲ್ಲಿ ಮರೆಯಾಗಿರಿ" ಎಂದು ಹೇಳಿದ. ಮತ್ತು "ಬಂಡುಗಾರರನ್ನು ಎದುರಿಸುವ ವೀರ ಯಾರಾದರೂ ಇದ್ದರೆ ಮುಂದೆ ಬನ್ನಿರಿ" ಎಂದ. ಜೋಗೇನ್ ಎಂಬ ತರುಣ ಮುಂದೆ ಬಂದ. ನಾವೆ ಸಮೀಪಿಸುತ್ತಿದ್ದಂತೆ ಕ್ಯಾಂಪಿನೊಳಗಿನ ಜನರ ಧೈರ್ಯ ಡೋಲಾಯಮಾನವಾಗಿತ್ತು. ನಾವೆ ಬಂತು. ತೀರ ಹತ್ತಿರಕ್ಕೆ ಬಂದಾಗ ಅವರ ಹತ್ತಿರ ಒಂದೂ ಬಂದೂಕು ಇಲ್ಲೆಂದು ತಿಳಿಯಿತು. ಅವರ ಕಡೆಗೂ ಬಂದೂಕುಗಳಿರಬೇಕೆಂದು ಹೆದರಿ ಈ ವರೆಗೆ ತರ್ಕವಿತರ್ಕ ಮಾಡುತ್ತಿದ್ದ ಅಧಿಕಾರಿ ಈಗ ಒದರಿ ಕೂಗಿದ: "ಮೌಗೀಜಿ, [ಬಂಡುಗಾರ ಮುಂದಾಳಿನ ಹೆಸರು] ಏನು ಆಟ ಹೂಡಿದ್ದೀ?"

'ಅನಾಸಿನ್'

ಈಗ ಹೊಸದಾದ, ಆರೋಗ್ಯದ ದೃಷ್ಟಿಯಿಂದ ಸೀಲುಮಾಡಿದ ಸೆಲೋಫೇನ್ ಪ್ಯಾಕೆಟನಲ್ಲಿ ದೊರೆಯುತ್ತದೆ





4 ಔಷಧಗಳಿಂದ ಕೂಡಿದ ಅನಾಸಿನ್ ಉತ್ತಮವಾಗಿದೆ

ಅನಾಸಿನ್ – ಹೊಸ, ನಿರ್ಮಲವಾಗಿ ಸೀಲ್‌ಮಾಡಿದ ಸೆಲೋಫೇನ್ ಪ್ಯಾಕೆಟಿನಲ್ಲಿ ದೊರೆಯುತ್ತವೆ. ಡಾಕ್ಟರರ ಸುರಕ್ಷಿತ ಔಷಧದಂತೆ ಆರೋಗ್ಯದ ದೃಷ್ಟಿಯಿಂದ ಸಮ್ಮಿಲನವಾದ ನಾಲ್ಕು ಔಷಧಗಳಿಂದ ಕೂಡಿದ 'ಅನಾಸಿನ್' ನೋವನ್ನು ಸಂಪೂರ್ಣವಾಗಿ, ಅತಿ ಶೀಘ್ರವಾಗಿ ಗುಣಪಡಿಸುತ್ತದೆ. ಅನಾಸಿನ್ (1) ತಲೆನೋವು, ಶೀತ, ಹಲ್ಲುನೋವು ಮತ್ತು ಸ್ನಾಯುಗಳ ನೋವನ್ನು ಅಧಿಕ ಶೀಘ್ರವಾಗಿ ಉಪಶಮನಗೊಳಿಸುತ್ತದೆ; (2) ಗಾಬರಿಗೊಳಿಸುವ ನರಗಳಿಗೆ ಶಾಂತತೆಯನ್ನೀಯುತ್ತದೆ;—ನೀವು ಸುಖವಾಗಿ, ಆರಾಮದಿಂದಿರುವಂತೆ ಮಾಡುತ್ತದೆ; (3) ನಿರುತ್ಸಾಹವನ್ನು ಹೋಗಲಾಡಿಸುತ್ತದೆ; (4) ಜ್ವರವನ್ನು ಕಡಿಮೆಮಾಡುತ್ತದೆ. ನಾಲ್ಕು ಔಷಧಗಳಿಂದ. ಕೂಡಿರುವ ಅನಾಸಿನ್ ನೋವನ್ನು ಹೋಗಲಾಡಿಸಲು ಬಹಳ ಉತ್ತಮವಾಗಿದೆ. ಯಾವಾಗಲೂ ಮನೆಯಲ್ಲಿ 'ಅನಾಸಿನ್' ಇಟ್ಟುಕೊಳ್ಳಿರಿ.

ಪಿಲ್ಫರ್-ಪ್ರೂಫ್ ಪ್ಯಾಕಿಂಗ್‌ನಲ್ಲಿ ಭದ್ರವಾಗಿ ಮುಚ್ಚಲ್ಪಟ್ಟ ಸೀಸೆಯಲ್ಲಿ 32 ಬಿಲ್ಲೆಗಳು ದೊರೆಯಲಾಗುತ್ತವೆ.

Registered User : GEOFFREY MANNERS & CO. PRIVATE LTD.

KAN. Z.41.

"ಏನೂ ಇಲ್ಲ. ನಾನಂತೂ ಈ ಪತ್ರ ಕೊಡಲಿಕ್ಕೆ ಬಂದಿದ್ದೇನೆ."

"ನೀನ್ಮು ಪೇಟೆಯಲ್ಲಿ ಅಂಗಡಿಗಳನ್ನು ಲೂಟಿ ಮಾಡಲಿಲ್ಲವೆ?"

"ಸರ್ವಥಾ ಸುಳ್ಳು. ನಾನೇ ನನ್ನ ಸಂಪತ್ತು ಮತ್ತು ಹೆಂಡತಿ ಮಕ್ಕಳ ರಕ್ಷಣೆಗಾಗಿ ಅಡಗಿಕೊಂಡು ತಿರುಗುತ್ತಿದ್ದೇನೆ" ಎಂದು ಮೌಗೀ ಹೇಳಿದ.

ವ್ಯಾಪಾರಿಗಳನ್ನು ಕರೆಸಿದಾಗ ಅವರು ಹೇಳಿದರು: "ಮೌಗೀಜ ಇಲ್ಲದಿದ್ದರೂ ಎಲ್ಲರೂ ಇವರ ಜನರೇ ಇದ್ದರು. ಮೇಲಾಗಿ ಅವರ ಕಡೆಗೆ ಸರಕಾರಿ ಬಂದೂಕುಗಳೂ ಇದ್ದವು."

ಇವನ್ನು ಕೇಳಿ ಮೌಗೀಜ ಎಂದ. "ರಾಯರೆ, ದ್ವೀಪವನ್ನು ಬರಿದು ಮಾಡುವ ಆಜ್ಞೆ ಹೊರಟಾಗಿನಿಂದ ಏನೇನು ನಡೆದಿದೆಯೊ ದೇವರೇ ಬಲ್ಲ. ಅನೇಕರು ಬಂದೂಕುಗಳನ್ನು ತೆಗೆದುಕೊಂಡು ಅಡವಿಗಳಲ್ಲಿ ಅಡಗಲಿಕ್ಕೆ ನಡೆದಿದ್ದಾರೆ. ಕೆಲವರು ಮುಖ್ಯ ದ್ವೀಪದತ್ತ ಹೋಗಬಯಸುತ್ತಾರೆ. . . . ಇಷ್ಟೇ ಅಲ್ಲ; ನನ್ನ ಜನರೇ ನನ್ನನ್ನು ಕೊಲ್ಲಲು ಏಳಬಾರದೆಂದು ನಾನು ಇತ್ತ ಬಂದಿದ್ದೇನೆ."

ಪತ್ರವನ್ನು ಅಧಿಕಾರಿ ಓದಿದ. ಪತ್ರ ಮುಖ್ಯಾಧಿಕಾರಿಯಿಂದ ಬಂದಿತ್ತು. "ಇಂದಿನಿಂದ ವನವಿಭಾಗದ ಮುಖ್ಯಾಧಿಕಾರಿ ಎಂದು ನಿನ್ನನ್ನು ನೇಮಿಸಲಾಗಿದೆ. ಹೊರಡುವಾಗಲೇ ನಿನಗೆ ಹೇಳಬೇಕಿತ್ತು. ಹೋಗಲಿ, ಪರಿಸ್ಥಿತಿಯು ದಿನದಿನಕ್ಕೆ ಕೆಡುತ್ತಲೇ ಹೋಗುವುದೆಂದು ತೋರುತ್ತದೆ. ಸಾಧ್ಯವಿದ್ದಮಟ್ಟಿಗೆ ಎಲ್ಲ ಶಸ್ತ್ರಾಸ್ತ್ರಗಳನ್ನು ವಶಕ್ಕೆ ತೆಗೆದುಕೊ. ಇಲ್ಲವಾದರೆ ಅವೇ ಶಸ್ತ್ರ ನಿನ್ನ ಪ್ರಾಣವನ್ನೂ ಹೀರಬಹುದು. ಕೆಚ್ಚಿನಿಂದ ಈ ಬಿಕ್ಕಟ್ಟನ್ನು ಎದುರಿಸು. ನಾವು ಅಲ್ಲಿ ಮರಳಿ ಬಂದಾಗ ನಿನ್ನ ಸಹಾಯಕ್ಕಾಗಿ, ನಿನಗೆ ದೊಡ್ಡ ಇನಾಮು ಕೊಡುವೆವು, ನಮಸ್ಕಾರ."

ವಿಷಯವು ತಿಳಿದ ಮೇಲೆ ಕೂಲಿಗಳು ಅಧಿಕಾರಿಗೆ ಬ್ಲೆಯರ್ ಬಂದರಕ್ಕೆ ಹೋಗಿ ಸಂಕಟಕ್ಕೆ ಗುರಿಯಾಗಬಾರದೆಂದು ಹೇಳತೊಡಗಿದರು. ಆರು ತಿಂಗಳ ವರೆಗೆ ಸಾಲುವಷ್ಟು ಅನ್ನಸಾಮಗ್ರಿ ಇದ್ದುದರಿಂದ ಅಲ್ಲಿಯೆ ಉಳಿಯಬೇಕೆಂದರು. ಆದರೆ ತಾನು ಹೋಗಲೇಬೇಕೆಂದು ಅಧಿಕಾರಿ ಉತ್ತರಿಸಿದ. ಸಂಜೆಗೆ ಇನ್ನೊಂದು ನಾವೆ ಬಂದಿತು. ಆತ ಬ್ಲೆಯರ್‌ಗೆ ಹೋದ.

ಬ್ಲೆಯರ್ ಬಂದರಕ್ಕೆ ತಲುಪಿದಾಗ ಅಲ್ಲಿ ಹಿಂದಿನ ದಿನವೇ ಬ್ರಿಟಿಶರನ್ನೂ ಅಧಿಕಾರಿಗಳನ್ನೂ ಒಯ್ಯಲಿದ್ದ ಹಡಗು ಇನ್ನೂ ಹೋಗಿಲ್ಲವೆಂದು ತಿಳಿಯಿತು. ಎಲ್ಲವನ್ನೂ ಹೊತ್ತು ಒಯ್ಯುವುದು ಸಾಧ್ಯವಿಲ್ಲದ್ದರಿಂದ ಮಹತ್ವದ ವಸ್ತುಗಳನ್ನು ಮಾತ್ರ ಪ್ರತಿ ಒಬ್ಬನು ತನ್ನೊಂದಿಗೆ ತಕ್ಕೊಂಡು ಬಂದಿದ್ದನು. ಸಾಮಾನುಗಳನ್ನು ಹಡಗಿನಲ್ಲಿ ಹೇರಿ ತಮಗೆ ನಿಲ್ಲಲಿಕ್ಕಾದರೂ ಸ್ಥಳ ಸಿಕ್ಕಿತೇ ಎಂದು ಎಲ್ಲರೂ ಯೋಚನೆಗೊಳಗಾಗಿದ್ದರು. ಆಗಲೇ ಹಡಗು ಹೊರಟಿತು. ಕೆಲವರು ಬಂದರದಲ್ಲಿಯೆ ಉಳಿದುಕೊಂಡರು. ಪ್ರಿಯ ಜನರ ವಿಯೋಗದಿಂದ ಹಡಗಿನಲ್ಲಿ ಇದ್ದವರೂ ಬಂದರದ ಮೇಲೆ ಉಳಿದವರೂ ಶೋಕಾಕುಲರಾಗಿದ್ದರು.

ಇಷ್ಟರಲ್ಲಿ ಸರಕಾರಿ ಸಂಗ್ರಹದೊಳಗಿನ ಸಕ್ಕರೆಯನ್ನು ಅಲ್ಲಿಯ ಕಾರಕೂನನು ಮಾರುತ್ತಿದ್ದಾನೆಂದು ತಿಳಿಯಿತು. ಕೂಡಲೆ ಅಧಿಕಾರಿ ಪೋಲೀಸರಿಗೆ ಫೋನು ಮಾಡಿದ. ಆದರೆ ಸಾಯಂಕಾಲದ ವರೆಗೆ ಯಾರೂ ಸಿಗುವುದಿಲ್ಲೆಂದು ಉತ್ತರ ಬಂತು. ಅಧಿಕಾರಿ ತಾನೇ ಸರಕಾರಿ ಸಂಗ್ರಹದ ಕಡೆಗೆ ನಡೆದ. ಅಲ್ಲಿ ಹೋಗುವಷ್ಟರಲ್ಲಿ ಮೌಗೀಜ ಇನ್ನೊಂದು ಫಿರ್ಯಾದು ಹಿಡಿದುಕೊಂಡು ನಿಂತಿದ್ದ. "ನನ್ನ ಜನರಿಗಾಗಿ ನಾನು ಒಯ್ಯುತ್ತಿದ್ದ ಅನ್ನಸಾಮಗ್ರಿಯನ್ನು ಕಳವಿನದೆಂದು ಅಪಾದನೆ ಮಾಡಿ ಕಾರಕೂನ ಪೀಟರಸನ್‌ನು ಸಮುದ್ರದಲ್ಲಿ ಹಾಕಿಬಿಟ್ಟ. ಇನ್ನು ನಾನೇನು ಮಾಡಲಿ?" ಎಂದು ಮೌಗೀಜ ಗೋಳು ಹುಯ್ದುಕೊಳ್ಳುತ್ತಿದ್ದ.

ಮೌಗೀಜಗೆ ಸಮಾಧಾನ ಹೇಳಿ, ಪೀಟರಸನ್‌ನಿಗೆ ಹೇಳಿ ಸಂಗ್ರಹದಿಂದ ಅಷ್ಟೇ ಅನ್ನ ಸಾಮಗ್ರಿಯನ್ನು ಮೌಗೀಜಗೆ ಕೊಡಿಸಿಯಾಯಿತು. ಸರಕಾರಿ ಆಜ್ಞೆ ಇಲ್ಲದೆ ಅನ್ನಸಾಮಗ್ರಿಯ ಒಂದು ಚೀಲವನ್ನೂ ಮಾರಬೇಡೆಂದು ಪೀಟರಸನ್‌ನಿಗೆ ಹೇಳಿ ಅಧಿಕಾರಿ ಮತ್ತೆ ಬ್ಲೆಯರ್‌ಗೆ ಬಂದ. ಹೆದರಿಕೆಯಿಂದ ಅಂಗಡಿಗಳು ಬಂದಾಗಿದ್ದವು. ಅಲ್ಲಲ್ಲಿ ಸ್ವಲ್ಪ ವ್ಯಾಪಾರ ಮಾಡುವವರು ಇಮ್ಮಡಿ ಮುಮ್ಮಡಿ ದರ ಹೇಳುತ್ತಿದ್ದರು. ಜನರು ವ್ಯಾಪಾರಿಗಳ ಮನೆಗೆ ಹೋಗಿ ಅಂಗಡಿ ತೆರೆಯಲು ಕೇಳಿಕೊಳ್ಳುತ್ತಿದ್ದರು. ಅಂಗಡಿ ತೆರೆಯದಿದ್ದರೆ ಲೂಟಿ ಮಾಡಿ ಮಾಲನ್ನು ಒಯ್ಯುತ್ತಿದ್ದರು.

ಈ ಅನಿಶ್ಚಿತ ಆಂದೋಲನದ ಅರ್ಥವಾಗಲಿ ಪರಿಣಾಮವಾಗಲಿ ಏನೆಂಬುದು ಯಾರಿಗೂ ಸರಿಯಾಗಿ ತಿಳಿಯುತ್ತಿರಲಿಲ್ಲ. ಎಲ್ಲಿ ನೋಡಿದರೂ ಹೆದರಿಕೆ. ಎಲ್ಲಿ ನೋಡಿದರೂ ಬೆರಗು.

ಚೀಫ್ ಕಮಿಶನರ್ ಮಿ. ಘಾಸ್ಟರರು ಮೋಟಾರಿನಿಂದ ಊರೂರಿಗೆ ಹೋಗಿ ಜನರಿಗೆ ಧೈರ್ಯದಿಂದಿರಲು ಹೇಳುತ್ತಿದ್ದರು. ಅಲ್ಲಲ್ಲಿಯ ಪ್ರತಿಷ್ಠಿತರನ್ನು ಕಂಡು ಶಾಂತತೆಯನ್ನು ಸ್ಥಾಪಿಸಲು ಯತ್ನಿಸಬೇಕೆಂದು ಕೇಳಿಕೊಳ್ಳುತ್ತಿದ್ದರು. ಬ್ರಿಟಿಶ್ ಅಧಿಕಾರಿಗಳು ಅಂದಮಾನ ಬಿಟ್ಟು ಹೋಗುವ ಮುಂಚೆ ಅರಣ್ಯಖಾತೆ, ನೌಕಾಪಡೆ, ಪಿ. ಡಬ್ಲ್ಯು. ಡಿ., ಪೋಲೀಸ್ ಮೊದಲಾದ ಎಲ್ಲ ಶಾಖೆಯ ಕೆಳಗಿನ ಅಧಿಕಾರಿಗಳಿಗೆ ಮೇಲಿನ ದರ್ಜೆ ಕೊಟ್ಟಿದ್ದರಾದರೂ ತಮ್ಮಷ್ಟು ಹೊಣೆಗಾರಿಕೆಯಿಂದ ಇವರು ಸಂಕಟಗಳನ್ನು ನೀಗಿಸಲಾರರೆಂದೇ ಬ್ರಿಟಿಶರು ಇನ್ನೂ ತಿಳಿದಿದ್ದರು. ಆದ್ದರಿಂದ ತಮ್ಮ ಆಡಳಿತದ ಸೌಕರ್ಯಗಳು ಶತ್ರುಗಳ ಕೈಗೆ ಸಿಗಬಹುದೆಂದು ಭಾವಿಸಿ "ಸಕ್ಕರೆಯನ್ನೆಲ್ಲ ಸಮುದ್ರದಲ್ಲಿ ಹಾಕಿಬಿಡಿರಿ. ಯಂತ್ರಗಳನ್ನೆಲ್ಲ ಮುರಿದುಬಿಡಿರಿ. ಡಿಜೆಲ್ ಎಣ್ಣೆಯನ್ನು ಸುರುವಿಬಿಡಿರಿ...." ಎಂದು ಆಜ್ಞೆ ಹೊರಡಿಸಿದರು. ಯಾರು ಯಾರು ಯಾವ ಯಾವ ಕೆಲಸ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತಿದ್ದರೊ ಅವರೇ ಆಯಾ ಸಾಧನ ಸಾಮುಗ್ರಿಗಳ ವಿಧ್ವಂಸ ಮಾಡಬೇಕೆಂದು ಆಣತಿಯಾಗಿತ್ತು. ಸರಕಾರ ಆಜ್ಞೆ ವಿಧಿಸಿತ್ತು; :ಆದರೆ ನಿರ್ವಹಿಸುವಾಗ ಮಾತ್ರ ಕೆಲಸಗಾರರಿಗೆ ತಮ್ಮ ಹೊಟ್ಟೆಯ ಮಕ್ಕಳನ್ನು ಕೊಂದಷ್ಟು ಕಷ್ಟವಾಗುತ್ತಿತ್ತು.

ಸಕ್ಕರೆಯ ನೂರಾರು ಚೀಲಗಳನ್ನು ಸಮುದ್ರದಲ್ಲಿ ಮುಳುಗಿಸುತ್ತಿದ್ದುದನ್ನು ಕಣ್ಣಾರೆ ಕಂಡು ತಾಳಲಾರದೆ ಒಬ್ಬ ನೌಕರ ಧೈರ್ಯದಿಂದ ಕೇಳಿದ: "ಸಾಹೇಬರೆ, ನೀವು ಇಲ್ಲಿಂದ ಹೋಗಬಹುದಾದರೂ ನಾವು ಇಲ್ಲಿಯೇ ಇರಬೇಕಲ್ಲವೆ? ಎಲ್ಲ ಅನ್ನಸಾಮಗ್ರಿ, ನೀರು ಪಾಲಾದರೆ ನಮ್ಮ ಮಕ್ಕಳು ಮರಿಗಳು ನಾಳೆ ತಿನ್ನಬೇಕೇನು?" ವಿಧ್ವಂಸಕಾರ್ಯದ ಶಕ್ತಿ ಕುಗ್ಗಿತು. ಆ ನೌಕರ ಎಲ್ಲೆಲ್ಲಿ ಈ ಕಾರ್ಯ ನಡೆದಿತ್ತೊ ಅಲ್ಲಲ್ಲಿ ಹೋಗಿ ಧ್ವಂಸವನ್ನು ನಿಲ್ಲಿಸಲು ಬಿನ್ನವಿಸಿದ. ಮೂಕ ಪಶುಗಳಂತೆ ಆಜ್ಞೆಯನ್ನು ಪಾಲಿಸುತ್ತಿದ್ದ ಜನರಲ್ಲಿ ಈಗ ಒಂದು ಬಗೆಯ ಉತ್ಕ್ರಾಂತಿಯಾಯಿತು. ಎಲ್ಲರಲ್ಲೂ ಸ್ವತಂತ್ರ ವಿಚಾರ ಜಾಗ್ರತವಾಯಿತು. ತಿಳಿದವರೂ ಬಲ್ಲವರೂ ಎಲ್ಲ ಕಡೆಗಳಲ್ಲಿ ಹೋಗಿ ಜನರಿಗೆ ಬೋಧಿಸತೊಡಗಿದರು. "ಏನಿದ್ದರೂ ಜಪಾನಿಯರೂ ಏಶಿಯದವರೇ ಇದ್ದಾರೆ. ಬಂದರೂ ಬರಲಿ. ಹೆದರಬೇಡಿರಿ. ಅವರೊಂದಿಗೂ ನಾವು ಮಿತ್ರತ್ವದಿಂದ ಇರಲೊಪ್ಪಿದರೆ ಅವರೇನು ಮಾಡಬಲ್ಲರು?"

ಬ್ರಿಟಿಶರ ವಿಚಾರದ ಚಾಲನೆಯಿಂದ ಅಸ್ತವ್ಯಸ್ತವಾಗಿತ್ತು ಅಂದಮಾನ್. ಈಗ ಅಂದಮಾನೀಯರ ವಿಚಾರದಿಂದೇ ಮತ್ತೆ ಸರಿಪಟ್ಟಿತು. ಎಲ್ಲ ಕೆಲಸಗಳು ನಿತ್ಯದಂತೆ ವ್ಯವಸ್ಥಿತವಾಗಿ ನಡೆಯ ತೊಡಗಿದವು. ಕೆಳ ದರ್ಜೆಯ ಅಧಿಕಾರಿಗಳೇ ಇಂದು ಮೇಲಿನ ದರ್ಜೆಯ ಕಾರ್ಯಗಳನ್ನೂ ಕುಶಲತೆಯಿಂದ ನಡೆಸಿದರು. ದೂರದ ವಸತಿಗಳಲ್ಲಿ ಕೆಲ ಉನ್ಮತ್ತ ಕೈದಿಗಳು



ಹಳದಿ
LUX
Yellow
ಹಸುರು
LUX
Green
ನೀಲ
LUX
Blue
ನಸುಗೆಂಪು
LUX
Pink
ಕಾಮನಬಿಲ್ಲಿನ ನಾಲ್ಕು
ಬಣ್ಣಗಳಲ್ಲಿ ನನ್ನ ಲಕ್ಸ್
-ಹೌದು, ಬಿಳಿಬಣ್ಣದಲ್ಲಿ
ಕೂಡ ಇದೆ'
ಎಂದು ಅನ್ನುತ್ತಾಳೆ
ಎಂ. ಎನ್. ರಾಜಂ
LTS. 82-X29 KN
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

ಹುಯಿಲೆಬ್ಬಿಸಿದರೂ ಅದನ್ನು ಅಲ್ಲಲ್ಲಿಯ ಸಾಮಾನ್ಯ ಜನರೇ ಒಟ್ಟಾಗಿ ನಿವಾರಿಸಿದರು. ಹೊರಗಿನವರ ಸಹಾಯವಿಲ್ಲದೇ ತಮಗೂ ಬದುಕಿನ ಹೋರಾಟವನ್ನು ಗದಿಯಲು ಸಾಧ್ಯವಿದೆ ಎಂಬ ಮಾತು ಅಂದಮಾನೀಯರಿಗೆ ಈಗ ಮನದಟ್ಟಾಯಿತು.

ಕೊನೆಗೆ ಪ್ರತ್ಯಕ್ಷ ಸಂಕಟವೂ ಬಂತು. ಮಾರ್ಚ್ ೧೧ ರಂದು ಬ್ರಿಟಿಶರು ಸೈನ್ಯ ಸಮೇತವಾಗಿ ಅಂಡಮಾನ ಬಿಟ್ಟು ಹೋಗಿದ್ದರು. ಮಾರ್ಚ್ ೨೨ರಂದು ರಾತ್ರಿ ಜಪಾನೀ ಸೈನಿಕರು ಬಂದು ಇಳಿದರು. ಮೊದಮೊದಲು ಜನರು ಹೆದರಿ ಬಾಗಿಲುಗಳನ್ನು ಮುಚ್ಚಿಕೊಂಡರು. ಹೊತ್ತು ಕಳೆದಂತೆ ಧೈರ್ಯ ಬರತೊಡಗಿತು. ಜನರು ಈ ಜಪಾನೀಯರು ಎಂಥವರಿದ್ದಾರೆಂಬುದನ್ನಾದರೂ ನೋಡೋಣವೆಂದು ಹೊರಬರತೊಡಗಿದರು.

ಬಹುಕಾಲ ದಾಸ್ಯದಲ್ಲಿ ಇದ್ದು ತಮ್ಮ ಆತ್ಮಶಕ್ತಿಯನ್ನೇ ಮರೆತಿದ್ದ ಜನ ಈಗ ಸಂಕಷ್ಟವನ್ನು ಸಾಹಸದಿಂದ ಎದುರಿಸಿ ಆತ್ಮವಿಶ್ವಾಸ ಶಕ್ತಿಗಳನ್ನು ಮರಳಿ ಪಡೆದರು. ದಾಸ್ಯ ಪಾಶ್ಚಿಮಾತ್ಯರದೇ ಇರಲಿ ಪೌರ್ವಾತ್ಯರದೆ ಇರಲಿ. ದಾಸ್ಯ ದಾಸ್ಯವೆ. ಸ್ವಾತಂತ್ರ್ಯ ಸಿಕ್ಕ ಹೊರತು ನಿಜವಾದ ಶಾಂತಿ ಸುಖ ಲಭಿಸದೆಂದು ಈಗ ಜನರಿಗೆ ಮನವರಿಕೆಯಾಗತೊಡಗಿತು. *

"ಸಾಪ್ತಾಹಿಕ ಹಿಂದುಸ್ತಾನ" ದಿಂದ



ಸಾಹಿತಿಯ ಕರುಣೆ

ಮರಾಠಿ ಸಾಹಿತ್ಯ ಲೋಕದಲ್ಲಿ ಶ್ರೀ ಆಪ್ಟೆಯವರು ಜನಪ್ರಿಯ ಸಾಹಿತಿ. ಅವರ ಜೀವನದಲ್ಲಿ ಜರುಗಿದ ಈ ಘಟನೆ ಅತ್ಯಂತ ಹೃದಯಸ್ಪರ್ಶಿ ಹಾಗೂ ರೋಚಕವಾದುದು.


ಆಪ್ಟೆ ಸ್ವಭಾವತಃ ಉದಾರಿಗಳು ಯಾರಾದರೂ ದರಿದ್ರರನ್ನು ಕಂಡರೆ ಅವರಿಗೆ ಹೆಚ್ಚು ಮರುಕ; ಅಂತಹ ವ್ಯಕ್ತಿಗಳಿಗೆ ಆ ಕೂಡಲೇ ತಮ್ಮ ಕೈಲಾದ ಸಹಾಯ ಮಾಡುವ ಸ್ವಭಾವ ಅವರದು.

ಒಂದು ದಿನ ಆಪ್ಟೆ ತಮ್ಮ ಮನೆಯ ಬಾಗಿಲಿನಲ್ಲಿ ನಿಂತಿದ್ದಾಗ ಒಬ್ಬ ಅನಾಥನಂತಿದ್ದ ಬಾಲಕ ಆಡುತ್ತಿರುವುದನ್ನು ಕಂಡರು. ಅವನ ಉಡಿಗೆ-ತೊಡಿಗೆಗಳನ್ನೂ ಅವನ ಬಳಲಿದ ಮುಖವನ್ನೂ ಕಂಡ ಅವರಿಗೆ ಬಹು ಸಂಕಟವಾಯಿತು. ಆ ಕ್ಷಣವೇ ಅವರು ಆ ಬಾಲಕನನ್ನು ತಮ್ಮ ಮನೆಗೆ ಕರೆತಂದು ಕುಳ್ಳಿರಿಸಿ ತಮ್ಮ ಪತ್ನಿಗೆ, "ನೋಡೇ, ಮೊದಲು ಈ ಬಡ ಹುಡುಗನಿಗೆ ಹೊಟ್ಟೆತುಂಬ ಒಳ್ಳೆಯ ಊಟವನ್ನು ಹಾಕು" ಎಂದರು.

ಪತಿಯ ಮಾತನ್ನು ಕೇಳಿದ ಆಕೆ ತುಸು ಕಾಲ ಚಕಿತಗೊಂಡು ಅಚಲವಾಗಿ ನಿಂತು ಬಿಟ್ಟರು. ಎರಡು ನಿಮಿಷ ಕಳೆದ ಮೇಲೆ ಆಕೆ ಇಷ್ಟೇ ಆಡಲು ಸಾಧ್ಯವಾಯಿತು: "ಏನೂಂದ್ರೆ . . . ನಿಮಗೆ ಇಷ್ಟೂ ತಿಳಿಯದೆ! ಇವನು ನಮ್ಮ ಮಗ ಮನು ಅಲ್ಲವೆ!"

—ಬಿ. ಆರ್. ಶಂಕರ್

ಷಾಮೆಯ ಚಿನ್ನದ ಗುಲಾಬಿ



ವೆಂಕಟರಾಜ ಪಾನಸೆ

ಪ್ಯಾರಿಸ್ಸಿನ ಸರಾಫರ ಅಂಗಡಿಗಳ ಕಸ ಗುಡಿಸಿ ಉಪಜೀವಿಸುತ್ತಿದ್ದ ಡಸ್ಟಮನ್ ಜೀನ್ ಷಾಮೆಯ ಕತೆಯನ್ನು ನಾನು ಹೇಗೆ ಕೇಳಿ ತಿಳಿದೆನೋ ಎಂಬುದು ಇಂದು ಸರಿಯಾಗಿ ನೆನಪಿಲ್ಲ.

ಷಾಮೆ ನಗರದ ಅಂಚಿನಲ್ಲಿದ್ದ ಗುಡಿಸಲುಗಳ ಪ್ರದೇಶದಲ್ಲಿ ವಾಸಿಸುತ್ತಿದ್ದ. ಪ್ಯಾರಿಸ್ ನಗರ ಇಂದು ಬಡಾಯಿಸಿಕೊಂಡಿರುವ ಈ ಪ್ರದೇಶದಲ್ಲಿ ಕೊಳಚೆ, ಕ್ರಿಮಿಗಳು, ಮುಳ್ಳು

ಮೂಲ: "ಕಾನ್‌ಸ್ಟಾಂಟಿನ್ ಪಾಸ್ತೋವಸ್ಕಿ"

ಕಂಟಿ, ಪೊದೆಗಳು ಇತರೇ ಹಕ್ಕಿಪಕ್ಕಿಗಳು ತುಂಬಿಕೊಂಡಿದ್ದವು. ಷಾಮೆಯ ಗುಡಿಸಲು ಉತ್ತರ ಭಾಗದ ಕೊಳಚೆ ಪ್ರದೇಶದಲ್ಲಿ ವಾಸವಾಗಿದ್ದ ಕಲಾಯಿಗಾರರು, ಚರ್ಮಕಾರರು, ಝಾಡಮಾಲಿಗಳು, ಭಿಕಾರಿಗಳು ಇವರ ಗುಡಿಸಲುಗಳ ಸಾಲಿನಲ್ಲೇ ಇತ್ತು.

ಮೆಕ್ಸಿಕನ್ ಯುದ್ಧಕಾಲದಲ್ಲಿ ಜೀನ್ ಷಾಮೆ ನೆಪೋಲಿಯನ್ ಲೆಪೆಟಿಟ್ ಸೈನಿಕ ತುಕಡಿಯಲ್ಲಿ ಒಬ್ಬ ಸಾಮಾನ್ಯ ಸಿಪಾಯಿಯಾಗಿದ್ದ. ವೇರಾ ಕ್ರೂಜ್‌ನಲ್ಲಿದ್ದಾಗ ಷಾಮೆಗೆ ಜ್ವರ ಬರಲಾರಂಭಿಸಿದುದರಿಂದ ಆತ ಮನೆಗೆ ಮರಳಬಹುದೆಂದು ಅಪ್ಪಣೆ ಕೊಡಲಾಯಿತು. ಈ ಅವಕಾಶವನ್ನೇ ಉಪಯೋಗಿಸಿಕೊಂಡು ಆ ಸೈನ್ಯ ತುಕಡಿಯ ಅಧಿಕಾರಿ ತನ್ನ ಎಂಟು ವರುಷದ ಮಗಳು ಸುಜಾನೆಯನ್ನು ಷಾಮೆಯೊಂದಿಗೆ ಫ್ರಾನ್ಸಿಗೆ ಕಳುಹಿದ.

ವಿಧುರನಾಗಿದ್ದ ಈ ಅಧಿಕಾರಿ ತಾನು ಹೋದಲ್ಲೆಲ್ಲ ಎಳೆಯ ಮಗಳನ್ನು ಕಟ್ಟಿಕೊಂಡೇ ಹೋಗಬೇಕಾಗಿತ್ತು. ಯುರೋಪಿಯನ್ ಮಕ್ಕಳಿಗೆ ಮೆಕ್ಸಿಕನ್ ಹವಾಮಾನ ಆಗುತ್ತಿದ್ದಿಲ್ಲ. ಮತ್ತು ಗರಿಲ್ಲಾ ಯುದ್ಧದಿಂದ ಅನೇಕ ಅಪಾಯಗಳು ತಲೆದೋರುತ್ತಿದ್ದುದರಿಂದ ಮಗಳನ್ನು ಅಗಲಿರಲು ಅಧಿಕಾರಿ ನಿರ್ಧರಿಸಿ ರೂಯೆನ್‌ನಲ್ಲಿರುವ ತನ್ನ ತಂಗಿಯ ಮನೆಗೆ ಷಾಮೆಯೊಂದಿಗೆ ಕಳುಹಿಸಿಕೊಟ್ಟ.

ಷಾಮೆ ಪ್ರಯಾಣದಲ್ಲಿ ಮಗುವನ್ನು ತುಂಬಾ ಕಾಳಜಿಯಿಂದಲೇ ನೋಡಿಕೊಂಡ. ಆದರೆ ಮಗುವಿಗೆ ಬರೀ ಕಾಳಜಿ ಮಾಡುವವರು ಬೇಕಾಗಿದ್ದಿಲ್ಲ, ಅಕ್ಕರೆಯನ್ನು ತೋರಿಸುವವರು ಬೇಕಾಗಿದ್ದರೆಂಬುದು ಷಾಮೆಗೆ ಬೇಗನೆ ಗೊತ್ತಾಯಿತು. ಆದರೆ ಒಬ್ಬ ಸಾಮಾನ್ಯ ಸಿಪಾಯಿಯಾಗಿದ್ದ ಆತ ಮಗುವಿಗೆ ಎಂಥ ಮಮತೆಯನ್ನು ತೋರಿಸಬಲ್ಲ? ಮಗುವಿನ ಮನವನ್ನು ಅದೆಂತು ರಂಜಿಸಬಲ್ಲ? ಅದರೊಂದಿಗೆ ಲೆತ್ತವನ್ನಾಡುವುದೆ? ಸೈನಿಕರ ಕೀಳ್ಮಟ್ಟದ ಹಾಡುಗಳನ್ನು ಹಾಡುವುದೆ?

ಆದರೂ ಏನಾದರೂ ಮಾಡಲೇಬೇಕಾಗಿತ್ತು. ಮಗುವಿನ ಬೇಸರದ, ಯಾವುದೊ ಬಗೆಯ ಅಸಮಾಧಾನದ ನೋಟವನ್ನು ಷಾಮೆ ಎದುರಿಸುವುದು ಸುಲಭವಾಗಿರಲಿಲ್ಲ. ಕೊನೆಗೆ ಧೈರ್ಯವನ್ನು ತಂದುಕೊಂಡು ಷಾಮೆ ಅಸಂಗತ, ಅಸಂಬದ್ಧವಾದರೂ ಸರಿಯೆ, ಏನೇನೋ ಹೇಳಲಾರಂಭಿಸಿದ. ತನ್ನ ಅಲೆದಾಟದ ಜೀವನ, ತಾನು ಮೀನು ಹಿಡಿಯುತ್ತಿದ್ದುದು, ತಮ್ಮ ಹಳ್ಳಿಯ ಇಗರ್ಜಿಯ ಒಡಕು ಗಂಟೆ ಎಲ್ಲವೂ ಅದರಲ್ಲಿ ಹಾದು ಹೋಗುತ್ತಿದ್ದವು.

ಸುಜಾನೆ ಇದರಿಂದ ಪ್ರಸನ್ನಚಿತ್ತಳಾಗಲಿಲ್ಲ. ಆ ಪುಟ್ಟ ಮುಖದ ಮೇಲೆ ನಗೆಯೂ ಸುಳಿಯಲಿಲ್ಲ. ಆದರೆ ಆ ಎಳೆಯ ಬಾಲೆ ಷಾಮೆಯ ಪ್ರತಿಯೊಂದು ಶಬ್ದವನ್ನೂ ಚಿತ್ತಗೊಟ್ಟು ಕೇಳಿತು; ಆತನ ಹೇಳಿಕೆಯ, ಕತೆಗಳ ವಿವರಗಳನ್ನು ಆಸಕ್ತಿಯಿಂದ ಮತ್ತೆ ಬಯಸಿತು.

ಷಾಮೆ ಏನೇನೋ ಹೇಳಿದ. ಅವನ ಬಂಡವಾಳವೆಲ್ಲ ಬರಿದಾಯಿತು. (ತಾನು ಹೇಳುವುದೆಲ್ಲ ಸತ್ಯವೆಂದು ಆತನಿಗೇ ಖಾತ್ರಿಯಾಗುವ ಪರಿಗೂ ಏನನ್ನೂ ಹೇಳದಾದ.)

ನಿಜವಾಗಿ ಆತ ಹೇಳಿದವುಗಳೆಲ್ಲ ಆತನ ಗತ ಜೀವನದ ನೆನಪುಗಳಲ್ಲ. ಆದರೆ ಆತ ಕೇಳಿ ತಿಳಿದಿದ್ದ ಸಂಗತಿಗಳ ಮಬ್ಬು ನೆರಳುಗಳು. ಕರಗುತ್ತಿರುವ ಮಂಜಿನ ಕಣಗಳಂತಿದ್ದವು ಆತನ ನೆನಪುಗಳು.

ಹಠಾತ್ತಾಗಿ ಆತನಿಗೆ ಒಂದು ದಿನ ಬಂಗಾರದ ಗುಲಾಬಿ ನೆನಪಾಯಿತು. ಮೀನುಗಾರ ಮುದುಕಿಯೊಬ್ಬಳ ಮನೆಯಲ್ಲಿ ಅಂಥದೊಂದು ಗುಲಾಬಿ ಹೂವನ್ನು ನೇತು ಹಾಕಿದುದನ್ನು ತಾನು ನೋಡಿದ್ದನೋ ಅಥವಾ ಆ ಬಗ್ಗೆ ತಾನು ಕೇಳಿ ತಿಳಿದಿದ್ದನೋ ಎಂಬುದನ್ನು ಮಾತ್ರ ಆತ ಹೇಳಲಿಲ್ಲ. ಆದರೆ ಆತನು ಸುಜಾನೆಗೆ

ಹೇಳಲಾರಂಭಿಸಿದಂತೆ ತಾನು ಅದನ್ನು ನೋಡಿದಂತೆಯೆ ಭಾಸವಾಗತೊಡಗಿತು. "ಅದು ಥಳಥಳಿಸುತ್ತಿತ್ತು" ಎಂದು ನೆನಪಿಸಿಕೊಂಡ— ಸೂರ್ಯನ ಬೆಳಕು ಆಗಿಲ್ಲದಿದ್ದರೂ ಬಿರುಗಾಳಿ ಸಮುದ್ರದ ಮೇಲೆ ಬೀಸುತ್ತಿದ್ದರೂ ಈ ಗುಲಾಬಿಯ ಬಗ್ಗೆ ಆತ ಯೋಚಿಸಿದಷ್ಟೂ ಅದು ಹೆಚ್ಚು ಸ್ಪಷ್ಟವಾಗಿ ಛಾವಣಿಯ ಕೆಳಗೆ ಹೊಳೆಯುತ್ತ ನೇತು ಬಿದ್ದುದು ಆತನಿಗೆ ಕಾಣತೊಡಗಿತು. ಅದು ಬಲು ಹಿಂದೆ ಈ ಮುದುಕಿ ತುಂಬು ಜವ್ವನೆಯಾಗಿದ್ದಾಗ ಅವಳ ಪ್ರಣಯಿ ಈ 'ಮಧುರ ಹೃದಯಿ'ಗೆ, ಕೊಟ್ಟದ್ದು.

"ಬಂಗಾರದ ಗುಲಾಬಿಗಳು ಈ ಪ್ರಪಂಚದಲ್ಲಿ ಕೆಲವೇ ಕೆಲವಿವೆ. ಆದರೆ ಅವುಗಳನ್ನು ಹೊಂದಿರುವ ಜನರು ತುಂಬಾ ಸುಖಿಗಳಾಗಿರುತ್ತಾರೆ. ಅದನ್ನು ಹೊಂದಿದವರು ಮಾತ್ರವೇ ಅಲ್ಲ, ಆ ಗುಲಾಬಿಯನ್ನು ಸ್ಪರ್ಶಿಸಿದವರು ಕೂಡ ಸುಖಿಗಳಾಗಿರುತ್ತಾರೆ" ಎಂದಿದ್ದಳು ಷಾಮೆಯ ತಾಯಿ.

ಬಾಲಕನಾಗಿದ್ದ ಷಾಮೆ ಆ ಮೀನುಗಾರ ಮುದುಕಿಯ ಮೇಲೆ ಭಾಗ್ಯ ಅದೆಂದು ಮಂದಹಾಸ ಬೀರುವುದೋ ಎಂದು ಕಾದು ನೋಡುತ್ತಿದ್ದ. ಆದರೆ ಆತನಿಗೆ ದೊರೆತುದು ಮಾತ್ರ ನಿರಾಶೆ. ಪ್ರಚಂಡ ಮಾರುತದಲ್ಲಿ ಅವಳ ಗುಡಿಸಲು ಮತ್ತಷ್ಟು ಅಲ್ಲಾಡಿತ್ತು. ಯಾವ ಬೆಳಕೂ ಗುಡಿಸಲೊಳಗಿನ ಖಿನ್ನತೆಯನ್ನು ಹೊಡೆದೋಡಿಸಲಿಲ್ಲ.

ಮುದುಕಿಯ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯನ್ನೂ ಕಾಣದೆ ಷಾಮೆ ಹಳ್ಳಿಯನ್ನು ಬಿಟ್ಟುಬಿಟ್ಟ. ಆದರೆ ಹಾವ್‌ರೆಯಲ್ಲಿ ಭೇಟಿಯಾದ ಸಹಗ್ರಾಮಸ್ಥನೊಬ್ಬ, ಮುದುಕಿಯ ಮಗನೊಬ್ಬ ಪ್ಯಾರಿಸ್ಸಿನಿಂದ ಅನಿರೀಕ್ಷಿತವಾಗಿ ಬಂದುಬಿಟ್ಟಿದ್ದಾನೆಂದೂ ಆತನ ಬರುವಿಕೆಯು ಇಡೀ ಗುಡಿಸಲನ್ನು ಗೆಲುವು-ಸಮೃದ್ಧಿಗಳಿಗೆ ಪರಿವರ್ತಿಸಿದೆಯೆಂದೂ ನಿವಾಸದ ಅಂದ ಚಂದಕ್ಕಾಗಿ ಕಲಾವಿದರು ತುಂಬ ಹಣ ಪಡೆಯುತ್ತಿದ್ದಾರೆಂದೂ ಹೇಳಿದ.

ಒಮ್ಮೆ ಅಸ್ತವ್ಯಸ್ತವಾಗಿದ್ದ ಸುಜಾನೆಯ ತಲೆಗೂದಲುಗಳನ್ನು ಷಾಮೆ ಬಾಚುತ್ತ ಡೆಕ್ಕಿನ ಮೇಲೆ ಕುಳಿತಿದ್ದಾಗ ಸುಜಾನೆ ಕೇಳಿದಳು: "ಜೀನ್, ಎಂದಾದರೂ ಯಾರಾದರೂ ನನಗೆ ಬಂಗಾರದ ಗುಲಾಬಿಯನ್ನು ಕೊಟ್ಟಾರೆಯೆ?"

"ಯಾಕಿಲ್ಲ, ಸೂಸಿ?" ಷಾಮೆ ಉತ್ತರಿಸಿದ: "ಯಾರಾದರೂ ನಿನ್ನ ಕಡೆಗೆ ಹೊರಳಿ ನೋಡಿ ಒಂದನ್ನು ಕೊಟ್ಟರೂ ಕೊಡಬಹುದು" ಎಂದು ಹೇಳಿ ಅನ್ನಾಮಿನ ಯುದ್ಧ ಭೂಮಿಯಲ್ಲಿ ಸೈನಿಕನೊಬ್ಬನಿಗೆ ದೊರೆತ ಚಿನ್ನದ ಹಲ್ಲಿನಿಂದ ಆತ ಭಾಗ್ಯವಂತನಾದುದನ್ನೂ ಅದಕ್ಕಾಗಿ ಸೈನಿಕರು ಪರಸ್ಪರರಲ್ಲಿ ಗುದ್ದಾಡಿದುದನ್ನೂ ಅನ್ನಾಮ್ ಇರುವ ಇಂಡೋ-ಚೀಣಾದ ಪ್ರದೇಶದ ಸಮುದ್ರಗಳನ್ನೂ ವರ್ಣಿಸಿದ. ಸುಜಾನೆಯನ್ನು ಸಂತೋಷಗೊಳಿಸಲು ಏನು ಬೇಕಾದುದನ್ನು ಹೇಳಲು ಆತ ಸಿದ್ಧನಾಗಿದ್ದ!

ರೂಯೆನ್‌ನಲ್ಲಿದ್ದ ಸೋದರತ್ತೆಗೆ ಷಾಮೆ ಸುಜಾನೆಯನ್ನು ಒಪ್ಪಿಸಿಕೊಟ್ಟ. ಆಕೆ ಎತ್ತರದ ನಿಲುವಿನ, ಅಚ್ಚುಕಟ್ಟಾದ ಉಡುಪಿನ, ಸರ್ಕಸ್‌ನಲ್ಲಿರುವ ಹಾವಿನಂಥ ದೃಷ್ಟಿಯ ಹೆಂಗಸು. ಅವಳನ್ನು ಒಂದು ಸಲ ನೋಡಿದ ಮಾತ್ರಕ್ಕೇನೆ ಸುಜಾನೆ ಅಂಜಿಕೆಯಿಂದ ಹಿಂಜರಿದು ಷಾಮೆಯ ಬಣ್ಣಗುಂದಿದ ಕೋಟಿಗೆ ಬಲವಾಗಿ ಅಂಟಿಕೊಂಡಳು.

"ಅಂಜಬೇಡ ಮರಿ" ಎಂದು ಗುಣುಗುಟ್ಟಿದ ಷಾಮೆ-ಧೈರ್ಯವನ್ನು ಹೇಳುತ್ತ. ಮತ್ತು ಬಲವಂತಪಡಿಸಿದ: "ಸೈನ್ಯದಲ್ಲಿ ನಮ್ಮ ದಂಡನಾಯಕರನ್ನು ನಾವೇ ಆಯ್ದುಕೊಳ್ಳುತ್ತೇವೆಂದು ನೀನು ಭಾವಿಸಿರುವೆಯಾ? ತಾಳ್ಮೆ ಇರಲಿ ಸೂಸೀ, ನೀನೊಬ್ಬ ಸೈನಿಕ ಪುತ್ರಿ!"

ಸುಜಾನೆಯ ಸೋದರತ್ತೆ ವಾಸವಾಗಿದ್ದ ಮನೆಯತ್ತ ಆಗಾಗ ದೃಷ್ಟಿ ಹೊರಳಿಸುತ್ತ

ಷಾಮೆ ಹೊರಟು ಬಂದ. ಜನದಟ್ಟಣೆಯ ಆ ಬೀದಿಗಳಲ್ಲಿಂದ ಹಾದು ನಿಧಾನವಾಗಿ ನಡೆದ. ಆತನ ಚೀಲದಲ್ಲಿ ಸೂಸಿ ಧರಿಸಿದ್ದ ನೀಲಿ ರಿಬ್ಬನ್ನು ಶೃಂಗಾರ ವಸ್ತುಗಳ ಮಧ್ಯೆ ಬಹುಕಾಲ ಬಿದ್ದಿದ್ದ ವಸ್ತುವಿನಂತೆ ಒಂದು ಬಗೆಯ ಸುವಾಸನೆಯನ್ನು ಬೀರುತ್ತಿತ್ತು.

ಮೆಕ್ಸಿಕನ್ ಜ್ವರದಿಂದ ತುಂಬಾ ಬಳಲಿದ್ದ ಷಾಮೆ ಇದೀಗ ಸೈನಿಕ ಜೀವನದಿಂದ ನಾಗರಿಕ ಜೀವನಕ್ಕಿಳಿದಿದ್ದ.

ದಾರಿದ್ರ್ಯದ ವಿರುದ್ಧ ಅತ್ಯಂತ ಉಗ್ರ ಹೋರಾಟದಲ್ಲೀ ಅವನ ಅದೆಷ್ಟೋ ವರುಷಗಳು ಗತಿಸಿದವು. ಪ್ಯಾರಿಸ್ಸಿನಲ್ಲಿ ಆತ ಡಸ್ಟ್ ಮನ್ (ಕಸಗುಡಿಸುವವ) ಆಗಿ ನೆಲೆಸುವುದಕ್ಕಿಂತ ಮೊದಲು ಇನ್ನೂ ಅದೆಷ್ಟೊ ಕೆಲಸಗಳನ್ನು ಮಾಡಿಬಿಟ್ಟ. ಆತ ಹೋದಲ್ಲೆಲ್ಲ ಆತನ ಹಿಂದೆ ಕಸಕೊಳಚೆಯ ದುರ್ಗಂಧವೇ ಬೆಂಬತ್ತಿರುವಂತೆ ಭಾಸವಾಗುತ್ತಿತ್ತು. ಸೈಯಿನ್ ನದಿಯ ಕಡೆಯಿಂದ ಬೀಸುತ್ತಿದ್ದ ಮೆಲುಗಾಳಿಯಲ್ಲೂ ಬೂಲ್‌ವರ್ಡ್‌ಗಳಲ್ಲಿ ಅಚ್ಚುಕಟ್ಟಾದ ಉಡುಪಿನಿಂದ ಕುಳಿತು ಹೂ ಮಾರುತ್ತಿದ್ದ ವೃದ್ಧೆಯರ ಹೂಗೊಂಚಲುಗಳಿಂದಲೂ ಅದೇ ವಾಸನೆ ಅವನಿಗೆ ಬಂದಂತಾಯಿತು.

ದಿನಗಳೆಲ್ಲ ಅವನ ಪಾಲಿಗೆ ಶುಷ್ಕವಾಗಿಯೇ ಕಳೆದುವು. ಬೇಸರದ, ಮ್ಲಾನವಾದ ದಿನಗಳಲ್ಲಿ ಒಂದೇ ಒಂದು ಚೆಂಗುಲಾಬಿಯಂಥ ಸುಂದರ ವರ್ಣರಂಜಿತ ನೋಟ ಮಸುಮಸುಕಾಗಿ ಆಗಾಗ ವಸಂತದ ಬೆಳಕಿನಂತೆ ಹೊಳೆಯುತ್ತಿತ್ತು. ಅದು—ಹರಿದ ಬಟ್ಟೆಗಳಲ್ಲಿ ಮೈಮುಚ್ಚಿಕೊಂಡ ಸುಜಾನೆಯ ದೃಶ್ಯ. . .

ಸುಜಾನೆ ಎಲ್ಲಿದ್ದಾಳೆ? ಆಕೆಯ ಅವಸ್ಥೆ ಏನಾಗಿದೆ? ಆದರೆ ಷಾಮೆಗೆ ಇಷ್ಟು ಮಾತ್ರ ಗೊತ್ತಿತ್ತು : ಸುಜಾನೆಯ ತಂದೆ ಗಾಯಗಳಿಂದ ಸತ್ತುಹೋಗಿದ್ದ ಮತ್ತು ಆಕೆ ಈಗ ಬೆಳೆದ ಹುಡುಗಿ.

ಷಾಮೆ ಅದೆಷ್ಟೋ ಸಲ ರೂಯೆನ್‌ಗೆ ಹೋಗಿ ಸುಜಾನೆಯನ್ನು ನೋಡಿಬರಬೇಕೆಂದು ತನ್ನಷ್ಟಕ್ಕೆ ತಾನೆ ನಿರ್ಧರಿಸಿದ್ದ. ಆದರೆ 'ಬಹಳ ದಿನ ಕಳೆದ ಬಳಿಕ ಆಕೆಯನ್ನು ನೋಡುತ್ತಿದ್ದೇನೆ, ನನ್ನನ್ನು ಮರೆತರೂ ಮರೆತಿರಬಹುದು ಆಕೆ' ಎಂದೆನಿಸುವವರೆಗೂ ಆತ ತನ್ನ ಪ್ರಯಾಣವನ್ನು ಮುಂದೆ ಹಾಕಿದ. ಒರಟುತನದಿಂದ ಆಕೆಯನ್ನು ಅಗಲಿ ಬಂದುದಕ್ಕೆ ಷಾಮೆ ತನ್ನನ್ನು ತಾನೇ ಬೈದುಕೊಂಡ. ಆ ಮುದುಕಿಯತ್ತ—ಸೋದರತ್ತೆ—ಯಾಕೆ ಅವಳನ್ನು ನೂಕಿದೆ ನಾನು ಮುತ್ತಿಡುವ ಬದಲು ಎಂದುಕೊಂಡ. ಓ! ಅದೂ "ತಾಳ್ಮೆ ಇರಲಿ ಸೂಸೀ, ನೀನು ಸೈನಿಕ ಪುತ್ರಿ!" ಎಂದು ಬೇರೆ ಉಪದೇಶಿಸಿ!

ಪ್ಯಾರಿಸ್ಸಿನ ಕಸಗುಡಿಸುವವರು ತಮ್ಮ ಕಾರ್ಯವನ್ನು ರಾತ್ರಿಯೇ ಮಾಡುತ್ತಾರೆ. ಅದಕ್ಕೆ ಎರಡು ಮುಖ್ಯ ಕಾರಣಗಳಿವೆ. ಮಧ್ಯರಾತ್ರಿಯ ಕಾಲಕ್ಕೆಂದರೆ ಕಸಕೊಳಚೆಯ ರಾಶಿಯೇರಿರುತ್ತದೆ ಮತ್ತು ಅದರ ದುರ್ಗಂಧ ಪ್ಯಾರಿಸ್ಸಿನವರಿಗೆ ತಾಕಬಾರದು ಎಂದು. ರಾತ್ರಿ ಈ ಝಾಡಮಾಲಿಗಳ ಕೆಲಸದತ್ತ ಗಮನಕೊಡುವ ಪ್ರಾಣಿಗಳು ಇಲಿಗಳನ್ನು ಬಿಟ್ಟರೆ ಮತ್ತಾವವೂ ಇಲ್ಲ.

ಷಾಮೆಗೆ ಬೆಳಗಿನ ಮೊದಲ ಗಳಿಗೆಗಳಲ್ಲಿ ಕೆಲಸಮಾಡುವುದು ತುಂಬ ಪ್ರೀತಿಯ ವಿಷಯವಾಗಿತ್ತು. ಉಷಃಕಾಲದ ಮೊದಲ ಕಿರಣಗಳು ವಿಶಾಲ ನಗರದ ಮೇಲೆ ವ್ಯಾಪಿಸಿ ಮಂಜು ಕರಗುವ ದೃಶ್ಯವಂತೂ ಅವನಿಗೆ ಇನ್ನೂ ಪ್ರೀತಿಯದಾಗಿತ್ತು.

ಒಮ್ಮೆ—

ಮಂಜು ಕವಿದ ಉಷಃಕಾಲದ ಸಮಯದಲ್ಲಿ ಷಾಮೆ ಸೈಯಿನಿನ ಕಪ್ಪು-ಕೊಳಚೆಯ ನೀರನ್ನು ವೀಕ್ಷಿಸುತ್ತ ನಿಂತಿದ್ದ. ಕೊಳಕು ಬಟ್ಟೆಯನ್ನು ತೊಟ್ಟಿದ್ದ ಹುಡುಗಿಯನ್ನು ಪಾಂಟ್‌ದ ಇನ್ ವಲಿಡೈಸ್ ದಾಟುತ್ತಿದ್ದಾಗ ನೋಡಿದ.

ಮುದುಡಿ ಬಣ್ಣಗೆಟ್ಟಿದ. ತನ್ನ ಹ್ಯಾಟನ್ನು ಮೇಲೆತ್ತಿ ಷಾಮೆ ಆ ಹುಡುಗಿಗೆ ಹೇಳಿದ: "ಮೇಡಂ, ಸೈಯಿನಿನಲ್ಲಿ ಈಗ ತುಂಬಾ ಛಳಿ. ನೀನು ಒಪ್ಪುವುದಾದರೆ ನಿಮ್ಮ ಮನೆಗೆ ನಿನ್ನನ್ನು ಕರೆದೊಯ್ಯುತ್ತೇನೆ."

"ನನಗೆ ಮನೆಯೇ ಇಲ್ಲ," ಆತುರದಿಂದ ಹೇಳಿದ ಹುಡುಗಿ ಚರಂಡಿಯಿಂದ ಷಾಮೆಯ ಕಡೆಗೆ ಮುಖ ಹೊರಳಿಸಿದಳು.

ಷಾಮೆಯ ಕೈಯಿಂದ ಹ್ಯಾಟು ಅವನಿಗರಿವಿಲ್ಲ ದಂತೆಯೇ ಕೆಳಗೆ ಬಿತ್ತು.

'ಸೂಸೀ' ಎಂದರಿಚಿದ ಷಾಮೆ. ಏಕಕಾಲಕ್ಕೆ ಆತನ ಧ್ವನಿಯಲ್ಲಿ ಸಂತೋಷ-ಕಳವಳಗಳೆರಡೂ ತುಂಬಿದ್ದವು.

"ಸೂಸೀ, ಸೈನಿಕಪುತ್ರಿಯೆ! ಏ ನನ್ನ ಪುಟ್ಟ ಹುಡುಗಿಯೆ! ಕೊನೆಗೂ ನಾವು ಭೇಟಿಯಾದೆವು! ನನ್ನನ್ನು ನೀನು ಮರೆತಿಲ್ಲವಷ್ಟೆ? ನಾನು ಜೀನ್, ಜೀನ್ ಎರ್ನೆಸ್ಟ್ ಷಾಮೆ, ರೂಯೆನ್ನಿನಲ್ಲಿರುವ ಆ ವೃದ್ಧಮೋಹಿನಿಯ ಮನೆಗೆ ನಿನ್ನನ್ನು ಕರೆತಂದು ಬಿಟ್ಟ ಸೈನ್ಯಪಡೆಯ ಮಾಜೀ ಸಿಪಾಯಿ. ಎಷ್ಟು ಚೆಂದಾಗಿದ್ದೀಯಾ ನೀನು ಸೂಸೀ! ಓಹ್! ನಿನ್ನ ಕೂದಲು, ತುಂಬಾ ಮುದ್ದು. ಅವುಗಳನ್ನು ಹೇಗೆ ಬಾಚಬೇಕೆಂಬುದೇ ನನಗೆ ತಿಳಿಯದು."

"ಜೀನ್!" ಸೂಸಿ ಕೂಗಿದಳು. ಅವನ ಕೊರಳ ಸುತ್ತ ತೋಳುಗಳನ್ನು ಬಳಸಿ ಕಣ್ಣೀರು ಸುರಿಸುತ್ತ ಹೇಳಿದಳು: "ಜೀನ್, ನನ್ನ ಮಮತೆಯ ಜೀನ್. ನನಗೆ ನೆನಪಿದೆ ಜೀನ್ ಎಂದಿನ ಹಾಗೆ ಈಗಲೂ ನೀನು ದಯಾಪರನಾಗೇ ಇದ್ದೀಯಾ!"

"ದಯಾಪರತೆ ಅರ್ಥವಿಲ್ಲದ ಮಾತು!" ಷಾಮೆ ಗುಣಗುಟ್ಟಿದ. "ಹೇಳು ನಿನಗೇನಾಗಿದೆ, ಹೇಳು."

ಸುಜಾನೆಯನ್ನು ಷಾಮೆ ಬರಸೆಳೆದು ರೂಯೆನಿನಲ್ಲಿ ಏನನ್ನು ಮಾಡಲು ಅನುಮಾನಿಸಿದ್ದನೋ ಅದನ್ನು ಮಾಡಿದ. ಅವಳ ತಲೆಗೂದಲುಗಳ ಮೇಲೆ ಕೈಯಾಡಿಸಿ ಅವುಗಳ ಮೇಲೆ ಮುತ್ತಿನ ಮುದ್ರೆಯನ್ನೊತ್ತಿದ. ಅಷ್ಟರಲ್ಲೇ ಹಿಂದೆ ಸರಿದ-ತನ್ನ ಕೊಳಕುವಾಸನೆ ಸುಜಾನೆಗೆ ಬಡಿದೀತೆಂಬ ಭೀತಿಯಿಂದ. ಸುಜಾನೆ ಆತನ ಭುಜಗಳಿಗೆ ನೇತು ಬಿದ್ದಳು.

"ಏನಾಯಿತು ಪುಟ್ಟಮರಿ?" ಷಾಮೆ ಕಳವಳದಿಂದ ಪುನಃ ಪ್ರಶ್ನಿಸಿದ.

ಸುಜಾನೆಗೆ ಉತ್ತರಿಸಲಿಕ್ಕಾಗಲಿಲ್ಲ, ಬಿಕ್ಕಳಿಕೆಯನ್ನೂ ತಡೆಹಿಡಿಯಲಾಗಲಿಲ್ಲ. ಏನನ್ನೂ ಈಗ ಪ್ರಶ್ನಿಸುವುದು ಸರಿಯಲ್ಲವೆಂಬುದನ್ನು ಷಾಮೆ ತಿಳಿದುಕೊಂಡ.

"ಹಳೆ ಕೊತ್ತಳದಾಚೆ ನನಗೊಂದು ಮನೆ ಇದೆ" ಷಾಮೆ ಕೊಂಚ ಅವಸರದಿಂದಲೇ ಹೇಳಿದ: "ಇಲ್ಲಿಂದ ಅದು ಅಷ್ಟೇನು ದೂರವಿಲ್ಲ. ನನ್ನ ದುರ್ದೈವದಿಂದ ಆ ಮನೆಯಲ್ಲಿ ತಿನ್ನುವುದಕ್ಕೆ ಮಾತ್ರ ಏನೂ ಇಲ್ಲ. ಆದರೆ ನೀನೊಂದಿಷ್ಟು ನೀರು ಕಾಸಿಕೊಂಡು ಮೈ ತೊಳೆಯಬಹುದು... ಬೇಕಾದಷ್ಟು ದಿನ ಇರಬಹುದು....."

ಸುಜಾನೆ ಷಾಮೆಯ ಮನೆಯಲ್ಲಿ ಇದ್ದ ಐದು ದಿನಗಳ ವರೆಗೂ ಷಾಮೆಯ ಪಾಲಿಗೆ ಬೇರೆ ಸೂರ್ಯಪ್ರಕಾಶ ಕಾಣಿಸಲೇ ಇಲ್ಲ..... ಅವಳೇ ಅಂಥ ಪ್ರಭೆಯಾಗಿದ್ದಳು!

ನಿದ್ರಿಸುವ ಹುಡುಗಿಯ ಕ್ರಮಬದ್ಧ ಉಸಿರಾಟವನ್ನು ಕಂಡು ಯಾರ ನಾಡಿಗಳು ಬಲವಾಗಿ ಮಿಡಿಯವೊ ಅಂಥವರಿಗೇನು ಗೊತ್ತಾದೀತು ಹೆಣ್ಣಿನ ಆ ನಾಜೂಕತೆ! ತೇವವಾದ ಕೆಂಪು ಗುಲಾಬಿಯ ಮೆದು ದಳಗಳಂಥ ತುಟಿಗಳು, ರಾತ್ರಿಯೆಲ್ಲ ಸುರಿದ ಕಂಬನಿಗಳಿಂದ ಕಣ್ಣೆವೆಗಳಿಗೆ ಬಂದ ಮಿಂಚು . . . . ಸುಜಾನೆ ಓ ನೀನೆಂಥ ಕೋಮಲೆ, ಮುಗ್ಧೆ!

ಸುಜಾನೆಗೆ ಏನಾಗಿದೆಯೆಂಬುದನ್ನು ಆತ ಊಹಿಸದಿರಲಿಲ್ಲ. ಆ ಊಹೆ ಸತ್ಯಕ್ಕೆ ದೂರವೂ ಆಗಿರಲಿಲ್ಲ. ಆಕೆಯ ಪ್ರಣಯಿ ಒಬ್ಬ ಯುವಕ ನಟ. ಆತ ಆಕೆಗೆ ಮೋಸ ಬಗೆದಿದ್ದ. ಆದರೆ

ಸುಜಾನೆ ಷಾಮೆಯ ಮನೆಯಲ್ಲಿ ಕಳೆದಿದ್ದ ಐದು ದಿನಗಳ ಅವಧಿಯಕ್ಕಿಂತ ಕಡಮೆ ಕಾಲದಲ್ಲೇ ಷಾಮೆ ಅವರಿಬ್ಬರನ್ನೂ ಪುನಃ ಒಂದುಗೂಡಿಸುವ ಕಾರ್ಯದಲ್ಲಿ ಯಶಸ್ವಿಯಾಗಿದ್ದ. ಅವನೇ ಅವಳ ಪತ್ರವನ್ನು ತೆಗೆದುಕೊಂಡು ಹೋಗಿ ಕೊಟ್ಟಿದ್ದ.

ಸುಜಾನೆಯನ್ನು ಕರೆದೊಯ್ಯಲು ನಟನು ಬಂದೇ ಬಿಟ್ಟ. ನಗೆ, ಚುಂಬನ, ಪುಷ್ಪಗುಚ್ಛಗಳ ಅರ್ಪಣೆ, ಪರಸ್ಪರ ಆಲಿಂಗನ ಮತ್ತು ಪಶ್ಚಾತ್ತಾಪ ಕಣ್ಣೀರುಗಳೊಡನೆ ಅವರಿಬ್ಬರ ಪುನರ್ಮಿಲನವಾಯಿತು. ಸುಜಾನೆಗೆ ಅದೆಷ್ಟು ಹರ್ಷವಾಗಿತ್ತೆಂದರೆ ಷಾಮೆಗೆ ಗುಡ್‌ಬೈ ಹೇಳುವುದನ್ನು ಕೂಡ ಮರೆತು ಗಾಡಿಯಲ್ಲಿ ಕುಳಿತಿದ್ದಳು! ಆ ಮೇಲೆ ನೆನಪಾಗಿ ನಾಚಿಕೊಂಡು ಕೈಕೈ ಉಜ್ಜಿಕೊಂಡಿದ್ದಳು.

"ಇಂಥ ಜೀವನವನ್ನೇ ನೀನು ಬಯಸುವುದಾದರೆ ಆಗಲಿ, ಸುಖಿಯಾಗಿರು" ಎಂದು ಷಾಮೆ ಹಾರೈಸಿದ.

"ಜೀವನದ ಬಗ್ಗೆ ನನಗೇನೂ ತಿಳಿಯದು" ಸುಜಾನೆ ಮರುನುಡಿದಳು. ಅವಳ ಕಣ್ಣುಗಳಲ್ಲಿ ನೀರು ತುಳುಕಿತು.

"ಚಿಂತಿಸಬೇಡ, ಚಿಂತಿಸುವಂಥದೇನೂ ಇಲ್ಲ ನನ್ನ ಮುಗ್ಧೆ" ಎಂದ ನಟ ಶುಷ್ಕವಾದ ಧ್ವನಿಯಲ್ಲಿ.

"ನನ್ನ ಸುದೈವಕ್ಕೆ ಯಾರಾದರೂ ಬಂಗಾರದ ಗುಲಾಬಿಯನ್ನು ಕೊಟ್ಟರೆ ಮಾತ್ರ ನಾನು. . . ." ಸುಜಾನೆ ನಿಟ್ಟುಸಿರು ಬಿಡುತ್ತ ಹೇಳಿದಳು. "ಸುಖಿಯಾಗಿರುತ್ತೇನೆ. ಅದು ನನ್ನನ್ನು ಸುಖಿಯಾಗಿಸುತ್ತದೆ . . ಜೀನ್, ನನ್ನ ಪ್ರೀತಿಯ ಜೀನ್ ನೀನು ಹಡಗಿನಲ್ಲಿ ಹೇಳಿದ್ದ ಕತೆ ನನಗೆ ಇನ್ನೂ ನೆನಪಿದೆ."

"ಯಾರಾದರೂ . . . ." ಎಂದು ಷಾಮೆ ಹೇಳಿದ. "ಆದರೆ ಯಾರಾದರೂ ಕೊಡಲಿ ಅದು ನಿನಗೊಂದು ಜಂಭವಾಗದಿದ್ದರೆ ಸಾಕು. ನಾನೆ ಕೊಡುತ್ತೇನೆಂಬ ಜಂಭವನ್ನೂ ಈಗ ಹೇಳಲಾರೆ. ನಾನು ಸಾಚಾ ಸೈನಿಕ. ನೋಡು, ದಂಭಾಚಾರ ನನಗೆ ತಿಳಿಯದು."

ಗಾಡಿ ಹೊರಟುಹೋಯಿತು.

ಷಾಮೆ ಎಂದಿನಂತೆ ಮತ್ತೆ ಅಂಗಡಿಗಳ ಕಸಕೊಳಚೆಗಳನ್ನು ಗುಡಿಸಲು ಹೊರಟ. ಆದರೆ ಸುಜಾನೆಯ ಭೇಟಿಯಾದ ಬಳಿಕ ಆತ ಅಕ್ಕಸಾಲಿಗರ, ಹಾಗೂ ಸರಾಫರ ಅಂಗಡಿಗಳಿಂದ ಗುಡಿಸಿದ ಕಸ, ಧೂಳುಗಳನ್ನು ಮಾತ್ರ ಹೊರಗೆಸೆಯದೆ ರಹಸ್ಯವಾಗಿ ಮನೆಗೆ ತರತೊಡಗಿದ. ನೆರೆಹೊರೆಯುವರೆಲ್ಲ ಷಾಮೆಯ ತಲೆ ಈಗ ಸರಿಯಾಗಿಲ್ಲ ಎಂದು ಭಾವಿಸಿದರು. ಆದರೆ ಆತ ತರುವ ಕಸದಲ್ಲಿ ಸ್ವಲ್ಪ ಮಟ್ಟಿಗೆ ಬಂಗಾರದ ಹುಡಿಯು ಸೇರಿಕೊಂಡಿರುತ್ತದೆ ಎಂಬುದು ಕೆಲವರಿಗೆ ಮಾತ್ರ ಗೊತ್ತಿತ್ತು.

ಸರಾಫರ ಅಂಗಡಿಗಳಿಂದ ಗುಡಿಸಿಕೊಂಡು ಬರುತ್ತಿದ್ದ ಕಸದೊಳಗಿಂದ ಬಂಗಾರದ ಅಣುಕಣಗಳನ್ನೆಲ್ಲ ಕಲೆಹಾಕಿ ಪುಟ್ಟದೊಂದು ಚಿನ್ನದ ಗುಲಾಬಿಯನ್ನು ಮಾಡಿಸಿ ಸುಜಾನೆ ಸುಖಿಯಾಗಿರುವಂತೆ ಮಾಡಬೇಕೆಂಬುದೇ ಷಾಮೆಯ ಗೂಢ ಯೋಜನೆಯಾಗಿತ್ತು. ತನ್ನ ತಾಯಿ ಹೇಳುತ್ತಿದ್ದಂತೆ ಈ ಗುಲಾಬಿ ಇನ್ನೂ ಅನೇಕ ಬಡವರಿಗೆ ಸುಖವನ್ನು ತಂದರೂ ತರಬಹುದು. ಯಾರಿಗೆ ಗೊತ್ತು? ಗುಲಾಬಿ ಸಿದ್ಧವಾಗುವವರೆಗೂ ಸುಜಾನೆಯನ್ನು ನೋಡಬಾರದೆಂದು ಆತ ನಿರ್ಧರಿಸಿಬಿಟ್ಟ.

ಈ ರಹಸ್ಯವೇನಾದರೂ ಬಯಲಾದರೆ ಪೋಲೀಸರ ಇಲ್ಲದ ಸಂದೇಹಕ್ಕೊಳಗಾಗಬೇಕಾದೀತೆಂಬ ಭೀತಿಯಿಂದ ಷಾಮೆ ಇದನ್ನು ಬಲು ರಹಸ್ಯವಾಗಿಟ್ಟ. ಹೌದು, ಪೋಲೀಸರು ಆತನನ್ನು ಕಳ್ಳನೆಂದು ಪರಿಗಣಿಸಿ ಜೈಲಿಗೆ ಅಟ್ಟಬಹುದು, ಅವನ ಅನರ್ಘ್ಯವಾದ ಕಸವನ್ನು ಕಿತ್ತುಕೊಂಡು ಹೋಗಬಹುದು. ಏನೆಂದರೂ ಅದು ಅವನದಲ್ಲವಷ್ಟೆ!

ಷಾಮೆ ಸೇನೆಗೆ ಸೇರುವುದಕ್ಕಿಂತ ಮೊದಲು ಒಬ್ಬ ಬೇಸಾಯದ ಕೂಲಿಯಾಗಿದ್ದ. ಕಾಳುಗಳನ್ನು ಬೇರ್ಪಡಿಸುವುದು, ಕೇರುವುದು ಎಲ್ಲವೂ ಆತನಿಗೆ ಗೊತ್ತಿತ್ತು. ಆ ಜ್ಞಾನ ಈಗ ಉಪಯೋಗವಾಯಿತು. ಸರಿ ರಾತ್ರಿಯಲ್ಲಿ ಎದ್ದು ಕುಳಿತು ಷಾಮೆ ಮೊರ ತೆಗೆದುಕೊಂಡು ಧೂಳು ಕಸವನ್ನೆಲ್ಲ ತುಂಬಿ ಕೇರಿ ಪರಿಶೀಲಿಸಿ ಹೊಳೆಯುವ ಕೆಲವು ಕಣಗಳು ಕಂಡಾಗ ಸಂತೋಷಭರಿತನಾಗುತ್ತಿದ್ದ.

ಗುಲಾಬಿಯನ್ನು ಸಿದ್ಧಪಡಿಸಲು ಅಗತ್ಯವಾದಷ್ಟು ಬಂಗಾರದ ಹುಡಿಯನ್ನು ಸಂಗ್ರಹಿಸಬೇಕಾದರೆ ಬಹುಕಾಲವೇ ಗತಿಸಿತು. ಚಿನ್ನದ ಗುಲಾಬಿ ಸಿದ್ಧವಾಗುವಷ್ಟು ಹುಡಿ ಸಂಗ್ರಹವಾದ ಬಳಿಕವೂ ಗುಲಾಬಿಯನ್ನು ರಚಿಸಲು ಸರಾಫರಿಗೆ ಕೊಡಲು ವಿಲಂಬ ಮಾಡಿದ. ಅವನ ಬಳಿಯಲ್ಲಿ ಹಣವಿರಲಿಲ್ಲವೆಂದೇನಲ್ಲ. ಗುಲಾಬಿ ತಯಾರಾದ ಕ್ಷಣವೇ ಸೂಸಿಯ ಭೇಟಿಯಾಗುವಂತಾದರೆ ಮಾತ್ರ ಹೆಚ್ಚು ಸಂಭ್ರಮ. ಹಾಗಾಗದಿದ್ದರೆ..... ಎಂಬ ಶಂಕೆಯೂ ಸುಳಿಯುತ್ತಿತ್ತು ಒಮ್ಮೊಮ್ಮೆ ಆತನಿಗೆ.

ಅವನಲ್ಲಿರುವ ಪ್ರೀತಿ, ಕರುಣೆ, ಮಮತೆ, ಎಲ್ಲ ಸೂಸಿಗಾಗಿ ಮೀಸಲಾಗಿತ್ತು. ಆದರೆ ಒರಟು, ಕುರೂಪಿಯಾದ ಈ ವ್ಯಕ್ತಿಯ ಕೋಮಲತೆ ಯಾರಿಗೆ ಬೇಕಾಗಿತ್ತು? ಜನ ತನ್ನನ್ನು ತ್ಯಜಿಸಿಬಿಟ್ಟಿದ್ದಾರೆಂಬುದನ್ನು ಷಾಮೆ ಎಂದೋ ಗಮನಿಸಿದ್ದ.

ಕೊನೆಗೊಮ್ಮೆ ಚಿನ್ನದ ಗುಲಾಬಿ ಸಂಪೂರ್ಣ ತಯಾರಾದಾಗ ಒಂದು ವರುಷದ ಹಿಂದೆಯೇ ಸುಜಾನೆ ಅಮೇರಿಕಕ್ಕೆ ತೆರಳಿದ್ದಾಳೆಂದು ಷಾಮೆಗೆ ಗೊತ್ತಾಯಿತು. ಅವಳು ತಿರುಗಿ ಬರುವ ಸಂಭವವಿರಲಿಲ್ಲ. ಅವಳ ವಿಳಾಸವೂ ಯಾರಿಗೂ ತಿಳಿದಂತಿರಲಿಲ್ಲ.

ಮೊದಲ ಸಲವೇನೋ ಷಾಮೆಗೆ ಯಾವುದೋ ಒಂದು ದುಃಖನಿವಾರಣೆಯಾದಂತಾಯಿತಾದರೂ ಕ್ರಮೇಣ ತಲೆದೋರಿದ ಘೋರ ನಿರಾಶೆ ಅವನನ್ನು ಗಾಸಿಗೊಳಿಸಿತು. ಆ ನಿರಾಶೆ ಒರಟಾದ, ಹರಿತವಾದ, ಅತ್ಯಂತ ಶೀತವಾದ ಕಬ್ಬಿಣದ ತುಂಡು ಆತನ ಹೃದಯಕ್ಕೆ ಬಡಿದು ಎದೆಯನ್ನು ಭೇದಿಸಿದಂತಿತ್ತು.

ಆ ಮೇಲೆ ಷಾಮೆ ಮತ್ತೆ ಕಸವನ್ನು ಸಂಗ್ರಹಿಸಿದುದಿಲ್ಲ. ಗೋಡೆಯ ಕಡೆಗೆ ಮುಖಮಾಡಿಕೊಂಡು ಹಾಸಿಗೆಯ ಮೇಲೆ ಸುಮ್ಮನೆ ಅದೆಷ್ಟೋ ಕಾಲ ಬಿದ್ದುಕೊಂಡಿರುತ್ತಿದ್ದ. ತನ್ನ ಹಳೆಯ ಜಾಕೆಟ್ಟಿನ ತೋಳುಗಳನ್ನು ಕಣ್ಣಿಗೊತ್ತಿಕೊಂಡು ಎಂದಾದರೊಮ್ಮೆ ನಗುತ್ತಿದ್ದ. ನೆರೆಹೊರೆಯವರಾರೂ ಇವನ ಬಗ್ಗೆ ಚಿಂತಿಸಿದುದಿಲ್ಲ. ಅವರ ಚಿಂತೆಗಳೇ ಅವರಿಗೆ ಬೇಕಾದಷ್ಟು ಇದ್ದುವು. ಆದರೆ ಒಬ್ಬ ಮಾತ್ರ ಷಾಮೆಯ ಮೇಲೆ ಕಣ್ಣಿಟ್ಟಿದ್ದ. ಅವನೆಂದರೆ ಷಾಮೆಯ ಚಿನ್ನದಿಂದ ಅತ್ಯಂತ ನಾಜೂಕಾದ ಗುಲಾಬಿ ಹೂವನ್ನು ಮಾಡಿದ್ದ ಒಬ್ಬ ಹಿರಿಯ ಸರಾಫ. ಆತ ತಪ್ಪದೆ ಷಾಮೆಯನ್ನು ನೋಡಲು ಬರುತ್ತಿದ್ದ. ಆದರೆ ಔಷಧಿಯನ್ನು ಮಾತ್ರ ಎಂದೂ ತರುತ್ತಿದ್ದಿಲ್ಲ.

ಷಾಮೆ ಸರಾಫನ ಕಣ್ಣೆದುರಿನಲ್ಲೇ ಹೊರಟು ಹೋದ. ಸರಾಫನು ಷಾಮೆಯ ತಲೆಯನ್ನೆತ್ತಿ ಹರಿದ, ಕೊಳಕಾದ ತಲೆದಿಂಬಿನಲ್ಲಿದ್ದ ಚಿನ್ನದ ಗುಲಾಬಿಯನ್ನೆತ್ತಿಕೊಂಡು ನೀಲಿ ರಿಬ್ಬನ್ನಿನಿಂದ ಕಟ್ಟಿಕೊಂಡು ಕಿರಿಚುವ ಬಾಗಿಲನ್ನು ನಿಧಾನವಾಗಿ ಮುಚ್ಚಿಕೊಂಡು ಮೆತ್ತಗೆ ಹೊರಟು ಹೋದ. ರಿಬ್ಬನ್ನಿಗೆ ಇಲಿಯ ವಾಸನೆ ಹೊಡೆಯುತ್ತಿತ್ತು.

ಅದು ಚಳಿಗಾಲ. ಮುಬ್ಬುಕವಿದ ಸಂಜೆ ತೀವ್ರವಾದ ಗಾಳಿಯಿಂದ ಕೂಡಿತ್ತು. ದೀಪಗಳು ಮಿಣಿ ಮಿಣಿ ಎನ್ನುತ್ತಿದ್ದವು. ಸರಾಫನಿಗೆ ಷಾಮೆಯ ನೆನಪಾಗಿತ್ತು. ಓ ! ಸಾಯುವಾಗ ಆತನ ಮುಖ ಹೇಗೆ ಬದಲಾಯಿಸಿತ್ತು ! ಅದರಲ್ಲಿ ಒಂದು ಕಠೋರ ಪ್ರಸನ್ನತೆಯು ತುಂಬಿತ್ತು. ಅದರಿಂದ ಒಂದು ಬಗೆಯ ಶೋಭೆ ಬಂದಿತ್ತು.

"ಬದುಕು ತಿರಸ್ಕರಿಸಿದುದನ್ನು ಸಾವು ಕೂಡ ಮಾಡಿದೆ" ಎಂದು ಯೋಚಿಸಿದ ಆ ಸರಾಫ.

ಕೆಲವು ದಿವಸಗಳು ಗತಿಸಿದ ಬಳಿಕ ಸರಾಫ ಚಿನ್ನದ ಗುಲಾಬಿಯನ್ನು ಅವನ ಅಭಿಪ್ರಾಯದಲ್ಲಿ ಬೆಲೆಬಾಳುವಂಥ ಸುವರ್ಣ ಪುಷ್ಪವನ್ನು ಕೊಳ್ಳಲು ಶಕ್ತನಲ್ಲದ, ಅಸ್ತವ್ಯಸ್ತವಾದ ಕೊಳಕು ಬಟ್ಟೆಯ ಹಿರಿಯ ಸಾಹಿತಿಯೊಬ್ಬನಿಗೆ ಮಾರಿದ. ಸಾಹಿತಿ ಇದನ್ನು ಕೊಳ್ಳಲು ನಿರ್ಧರಿಸಲು ಕಾರಣವೆಂದರೆ ಸರಾಫನು ಆಮೂಲಾಗ್ರವಾಗಿ ಗುಲಾಬಿಯ ಕತೆಯನ್ನು ಹೇಳಿದಾಗ ಆತ ಬೆರಗುಗೊಂಡು ಮನಸೋತಿದ್ದ.

ಈ ಹಿರಿಯ ಸಾಹಿತಿ ಪತ್ರಿಕೆಯೊಂದನ್ನು ನಡೆಸುತ್ತಿದ್ದ. ಜೀನ್ ಎರ್ನೆಸ್ಟ್ ಷಾಮೆ,— ವಸಾಹತು ಸೈನ್ಯಪಡೆಯ ಒಬ್ಬ ಸಿಪಾಯಿಯ ಕತೆ ತಿಳಿದುದಕ್ಕೆ ಈ ಪತ್ರಿಕೆಗೇ ನಾವು ಋಣಿಗಳಾಗಿರಬೇಕು.

ಈ ಪತ್ರಿಕೆಯು ಒಳಗೊಂಡಿರುವ ಅನೇಕ ವಿಷಯಗಳಲ್ಲಿ ಇದೂ ಒಂದಾಗಿದೆ :

"ಪ್ರತಿಯೊಂದು ನಿಮಿಷ, ಪ್ರತಿಯೊಂದು ನುಡಿ, ನೋಟ, ಪ್ರತಿಯೊಂದು- ಭವ್ಯವಾದ ಅಥವಾ ಲಘುವಾದ- ಯೋಚನೆ, ಮಾನವ ಹೃದಯದ ಅತ್ಯಂತ ಸೂಕ್ಷ್ಮವಾದ ಬಡಿತ, ಹೂವಿನಿಂದುದುರುವ ಪರಾಗ, ತೊರೆಯಲ್ಲಿ ತೋರುವ ತಾರೆಗಳ ಕಿರುಗಿರಣದ ಕಾಂತಿ ಇವೆಲ್ಲವೂ ಚಿನ್ನದ ಹುಡಿಯ ಕಾಳುಗಳು. ವರುಷ ವರುಷಗಳ ಕಾಲ ನಾವು, ಬರೆಹಗಾರರು ನಮ್ಮ ಸುಪ್ತಪ್ರಜ್ಞೆಯಲ್ಲಿ ಇಂಥ ಸಹಸ್ರಾರು ಸೂಕ್ಷ್ಮ ಕಾಳುಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತೇವೆ ಮತ್ತು ಅವುಗಳಿಂದ ನಮ್ಮದೇ ಆದ ಚಿನ್ನದ ಗುಲಾಬಿಯನ್ನು-ಒಂದು ಕತೆಯನ್ನೋ, ಕಾದಂಬರಿಯನ್ನೋ ಅಥವಾ ಕವಿತೆಯನ್ನೊ ತಯಾರಿಸುತ್ತೇವೆ. ಅನರ್ಘ್ಯವಾದ ಈ ಕಣಗಳಿಂದಲೇ ಸಾಹಿತ್ಯದ ಹೊಳೆ ಪ್ರವಹಿಸುತ್ತದೆ.

"ನನಗೆ ಷಾಮೆಯ ಚಿನ್ನದ ಗುಲಾಬಿಯ ಕತೆ ಸೃಷ್ಟಿಗೊಳ್ಳುವ ಸಾಹಿತ್ಯಕ್ಕೆಲ್ಲ ಸಂಕೇತವಾಗಿರಬೇಕೆನಿಸುತ್ತದೆ. ನಮ್ಮ ಬರೆವಣಿಗೆ ಕೂಡ ಸುಜಾನೆಗೆ ಸುಖವನ್ನು ತರಲಿದ್ದ ವೃದ್ಧ ಡಸ್ಟ್ಮನ್ನನ ಚಿನ್ನದ ಗುಲಾಬಿ ಹೂವಿನಂತಿರಬೇಕು. ಅದು ಆ ಸುಖ ಸೌಂದರ್ಯಗಳನ್ನು ಒದಗಿಸಿ ಕೊಡುವ ಆಶ್ವಾಸನೆಯನ್ನೀಯಬೇಕು, ಆ ಸಂಭ್ರಮ, ಸ್ವಾತಂತ್ರ್ಯ, ಔದಾರ್ಯಗಳನ್ನು ಒದಗಿಸಿ ಕೊಡಬೇಕು, ಮಂಕುತನವನ್ನು ಹೊಡೆದೋಡಿಸುವ ಅಸ್ತಂಗತನಾಗವ ಸೂರ್ಯನ ಉಜ್ವಲ ಪ್ರಭೆಯಂತೆ ಮಿನುಗಬೇಕು." ★


ಹೀಗಿತ್ತು ಕಾಲ !

"ಒಬ್ಬನು ಇನ್ನೊಬ್ಬನ ಕಣ್ಣು ಕುರುಡು ಮಾಡಿದರೆ ಅವನ ಕಣ್ಣನ್ನು ಕುರುಡು ಮಾಡತಕ್ಕದ್ದು."

"ಹೊಸದಾಗಿ ಕಟ್ಟಿದ ಮನೆಯು ಕುಸಿದು ಬಿದ್ದು ಯಜಮಾನನು ಸತ್ತರೆ ಮನೆ ಕಟ್ಟಿದವನನ್ನು ಕೊಲ್ಲತಕ್ಕದ್ದು. ಸತ್ತದ್ದು ಯಜಮಾನನ ಮಗನಾದರೆ ಮನೆ ಕಟ್ಟಿದವನ ಮಗನನ್ನು ಪ್ರತಿಯಾಗಿ ಕೊಲ್ಲತಕ್ಕದ್ದು."

ಈ ಮೇಲಿನ ವಾಕ್ಯಗಳನ್ನು ನೋಡಿ ಅಹಿಂಸಾಯುಗದ ನೀವು ಅಚ್ಚರಿಪಡಬೇಕಿಲ್ಲ.

ಇವು ಮೆಸಿಪುಟೇಮಿಯಾದ ಚಕ್ರವರ್ತಿ ಹಮ್ಮುರಬಿ (ಕ್ರಿ. ಪೂ. ೨೧೩೩-೨೧೬೫) ಯ ಕಾಲದ ಕಾನೂನುಗಳಲ್ಲಿ ಕೆಲವು. —ರವೀಂದ್ರನಾಥ ಎಸ್. ಬಿ.



ಚಿರತೆಯ ಸಹಾಯದಿಂದ ಬೇಟೆ

ಇದು ರಾಜ-ಮಹಾರಾಜರ
ಷೋಕಿ ಆಟವಾಗಿತ್ತು

ಎಚ್. ಜಿ. ಆರ್.

ನಾಯಿಯ ಸಹಾಯದಿಂದ ಮನುಷ್ಯ ಕಾಡು ಪ್ರಾಣಿಗಳ ಬೇಟೆಯಾಡುವುದನ್ನು ಸಾಮಾನ್ಯವಾಗಿ ಎಲ್ಲರೂ ಬಲ್ಲರು. ನಾಯಿಗಳನ್ನು ಬಡ ಬೇಟೆಗಾರನೂ ಸಾಕಿಕೊಳ್ಳಬಲ್ಲನಾದ್ದರಿಂದ ಈ ಮಾತು ಸರ್ವಸಾಮಾನ್ಯವಾಗಿದೆ. ಆದರೆ ಚಿರತೆ (ಚೀತಾ)ಯ ಸಹಾಯದಿಂದ ಮನುಷ್ಯ ಬೇಟೆಯಾಡುವುದನ್ನು ಕೆಲವರು ಅರಿತಿರಬಹುದಾದರೂ ಅದು ಅನೇಕರಿಗೆ ಗೊತ್ತಿಲ್ಲ. ನಾಯಿಯನ್ನು ಸಂಪಾದಿಸಿ ಸಾಕಬಹುದಾದಷ್ಟು ಚಿರತೆಯನ್ನು ಸಂಪಾದಿಸಿ ಸಾಕುವುದು ಸುಲಭವಲ್ಲ.

ಭಾರತದಲ್ಲಿ ಕಿರುಬ ಮತ್ತು ಚಿರತೆಗಳ ಸಹಾಯದಿಂದ ಜಿಂಕೆ ಮೊದಲಾದ ಪ್ರಾಣಿಗಳ ಬೇಟೆಯಾಡುವುದು ಶತಮಾನಗಳಿಂದಲೂ ರೂಢಿಯಲ್ಲಿದೆ. ಕಿರುಬಗಳನ್ನು ಸಿಂಧ, ಕಚ್ಛ, ಪಂಜಾಬ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಮಧ್ಯಭಾರತಗಳಲ್ಲಿ ಮೊಲ, ನರಿ, ಬಕಪಕ್ಷಿ, ಚಿಗರಿ ಮೊದಲಾದವುಗಳ ಬೇಟೆಯಾಡಲು ಉಪಯೋಗಿಸಿಕೊಳ್ಳುತ್ತಿದ್ದರು. ಇವನ್ನು ಬಹು ಸುಲಭವಾಗಿ ಪಳಗಿಸಿಕೊಂಡು ಜನ ಬೇಟೆಯ ಸಮಯದಲ್ಲಿ ಅವುಗಳ ಪ್ರಯೋಜನ ಪಡೆಯುತ್ತಿದ್ದರು. ಕಿರುಬ ಬೆಕ್ಕಿನಂತೆ ಅಡಗಿ ಕುಳಿತು ಅಳವಿನಲ್ಲಿ ಬಂದ ಪ್ರಾಣಿಯ ಮೇಲೆ ಜಿಗಿದು ಕೊಲ್ಲುತ್ತಿತ್ತು.

ಚಿರತೆ ಕಿರುಬಕ್ಕಿಂತಲೂ ಬಲಶಾಲಿಯಾದದ್ದು. ಅದು ಬೆಕ್ಕು ಕಿರುಬಗಳಂತೆ ಅವಿತು ಕುಳಿತು ಬೇಟೆಯ ಮೇಲೆ ಜಿಗಿಯಬಲ್ಲುದು ಮಾತ್ರವಲ್ಲ, ಬಯಲು ಭೂಮಿಯಲ್ಲಿ ನಾಯಿಯಂತೆ ಅದನ್ನು ಬೆನ್ನಟ್ಟಿ ಹಿಡಿಯಲೂ ಬಲ್ಲುದು. ಸ್ವಲ್ಪವೇ ದೂರ ಓಡುವ ಮಾತು ಬಂದಾಗ ನೆಲದ ಮೇಲಿನ ಪ್ರಾಣಿಗಳಲ್ಲಿ ಚಿರತೆಯಷ್ಟು ವೇಗವಾಗಿ ಓಡುವ ಪ್ರಾಣಿ ಇನ್ನೊಂದಿಲ್ಲವೆನ್ನಬಹುದು. ಚಿರತೆ ಹತ್ತು ಸೆಕಂದುಗಳಲ್ಲಿ ಅರ್ಧ ಮೈಲನ್ನು ಓಡಿದ ದಾಖಲೆಗಳುಂಟು. ಅದರ ದೇಹ ತೀವ್ರಗತಿಯ ಓಟಕ್ಕೆ ಅನುಕೂಲವಾ

ದದ್ದೇ ಆಗಿದೆ. ಅಗಲವಾದ ಎದೆ, ಉದ್ದನ್ನ ಬಲಶಾಲಿ ಕಾಲುಗಳು, ಗಟ್ಟಿಮುಟ್ಟಾದ ಟೊಂಕ ಮತ್ತು ಬಿರುಸು ಪಾದಗಳು ಅದಕ್ಕೆ ಅಪಾರ ವೇಗವನ್ನು ಸಾಧಿಸಿಕೊಡುತ್ತವೆ. ಚಿರತೆಯ ತಲೆ ಚಿಕ್ಕದಾಗಿ ದುಂಡಗಿರುವುದು. ಅದರ ಮೈ-ತುಂಬ ಕಪ್ಪು ಚುಕ್ಕಿಗಳಿರುತ್ತವೆ. ಬಾಲದ ತುದಿಗೆ ಗೊಂಡೆಯಿರುತ್ತದೆ. ಚಿರತೆ ದೊಡ್ಡ ಜಿಂಕೆಯನ್ನು ಕೂಡ ಬೇಟೆಯಾಡಬಲ್ಲುದು. ಭಾರತದಲ್ಲಿ ಚಿರತೆಯ ಸಹಾಯದಿಂದ ಬೇಟೆ-ಯಾಡುತ್ತಿರುವ ದಾಖಲೆಗಳು ೧೬ ನೆಯ ಶತಮಾನದಿಂದಲೂ ಸಿಗುತ್ತವೆ.

ಮೊಗಲ ಚಕ್ರವರ್ತಿ ಅಕಬರನಿಗೆ ಈ ವಿಧದ ಬೇಟೆಯಲ್ಲಿ ಬಲು ಆಸಕ್ತಿಯಿತ್ತು. ಅವನ ಚರಿತ್ರಕಾರನಾದ ಅಬುಲ್‌ಫಜಲನು ಚಿರತೆಯ ಸಹಾಯದಿಂದ ಆಡಿದ ಅನೇಕ ಬೇಟೆಗಳ ಸುಂದರ ವರ್ಣನೆಯನ್ನು ಬರೆದಿಟ್ಟಿದ್ದಾನೆ. ಅಕಬರ ೧೩ ವರ್ಷದವನಾಗಿದ್ದಾಗ ಮೊಟ್ಟಮೊದಲು ಇಂಥ ಬೇಟೆಯನ್ನು ಕಂಡ. ಆತ ಮುಂದೊಮ್ಮೆ ಪಂಜಾಬಿನಲ್ಲಿ ಪ್ರವಾಸ ಮಾಡುತ್ತಿದ್ದಾಗ ಅವನಿಗೆ ಬೇಟೆಯಾಡಲು ಪಳಗಿಸಲ್ಪಟ್ಟ ಚಿರತೆಯೊಂದು ಕಾಣಿಕೆಯಾಗಿ ಸಿಕ್ಕಿತು.

ಅಲ್ಲಿಂದಲೇ ಅಕಬರ ಬೇಟೆಯಾಡುವ ಚಿರತೆಗಳನ್ನು ಸಾಕತೊಡಗಿದ. ಅವನಲ್ಲಿ ಇಂಥ ಅನೇಕ ಚಿರತೆಗಳಿದ್ದವು. ಚಿರತೆಯ ಮಾರ್ಗದಲ್ಲಿ ಒಂದು ಹೊಂಡ ತೋಡಿ ಮೇಲೆ ಹುಲ್ಲು ಮುಚ್ಚಿಟ್ಟು ಈ ಮೋಸವನ್ನರಿಯದೆ ಅದರಲ್ಲಿ ಚಿರತೆ ಬಿದ್ದ ಮೇಲೆ ಅದನ್ನು ಹಿಡಿದು ಪಳಗಿಸುತ್ತಿದ್ದರು. ಆದರೆ ಕೆಲ ಸಲ ಹೊಂಡದಲ್ಲಿ ಬಿದ್ದ ಚಿರತೆಗಳು ಪಾರಾಗುವ ಪ್ರಯತ್ನದಲ್ಲಿ ಕಾಲು ಮುರಿದುಕೊಳ್ಳುತ್ತಿದ್ದುದರಿಂದ ಅಕಬರನು ಅವುಗಳನ್ನು ಹಿಡಿಯಲು ಅವು ಒಳಗೆ ಪ್ರವೇಶಿಸಿದೊಡನೆ ತಂತಾನೆ ಬಾಗಿಲು ಮುಚ್ಚಿಕೊಳ್ಳುವ ಪಂಜರಗಳನ್ನು ಮಾಡಿಸಿದ. ಚಿರತೆಗಳನ್ನು ಅವು ದಣಿದು ಸುಸ್ತಾಗಿ ಬೀಳುವವರೆಗೆ ಬೆನ್ನಟ್ಟಿ ಆ ಮೇಲೆ ಅವನ್ನು ಹಿಡಿಯುವ ಸಂಪ್ರದಾಯವೂ ಇತ್ತು. ಮರಗಳಿಗೆ ತಿಕ್ಕಿ ತಮ್ಮ ಉಗುರುಗಳನ್ನು ಹರಿತ ಮಾಡಿಕೊಳ್ಳಲೆಂದು ಚಿರತೆಗಳು ಬಂದಾಗ ಅವುಗಳ ಕುತ್ತಿಗೆಗೆ ನೇಣು ಹಗ್ಗ ಹಾಕಿ ಕೂಡ ಹಿಡಿಯುತ್ತಿದ್ದರು.

ಚಿರತೆಯನ್ನು ಬೇಟೆಗಾಗಿ ಪಳಗಿಸಲು ಸಾಮಾನ್ಯವಾಗಿ ಎರಡು ಮೂರು ತಿಂಗಳು ಬೇಕಾಗುತ್ತಿತ್ತು. ಆದರೆ ಹದಿನೆಂಟೇ ದಿನಗಳಲ್ಲಿ ಅವುಗಳನ್ನು ಪಳಗಿಸುವ ಹೊಸ ರೀತಿಯನ್ನು ಅಕಬರನು ಕಂಡುಹಿಡಿದ.

ಅಕಬರ ಒಂದು ಸಾವಿರ ಚಿರತೆಗಳನ್ನು ಸಾಕಿದ್ದ. ಅವನ್ನು ನೋಡಿಕೊಳ್ಳಲು ೩೦೦ ಜನರಿದ್ದರು. ಚಿರತೆಗಳಿಗೆ ಹೆಸರಿಟ್ಟು ಹತ್ತು ಹತ್ತರ ಗುಂಪುಗಳಲ್ಲಿ ವಿಂಗಡಿಸಿದ್ದರು. ಅವುಗಳಲ್ಲಿ ಯೋಗ್ಯತಾನುಸಾರ ವರ್ಗಗಳನ್ನೂ ಮಾಡಲಾಗಿತ್ತು. ಅವಕ್ಕೆ ಪ್ರತಿನಿತ್ಯ ಮಾಂಸದ ಊಟ ಹಾಕುತ್ತಿದ್ದರು. ಆದಿತ್ಯವಾರ ಪ್ರಾಣಿವಧೆಯನ್ನು ಮಾಡುತ್ತಿರಲಿಲ್ಲವಾದ್ದರಿಂದ ಶನಿವಾರ ಎರಡು ದಿನದ ಊಟವನ್ನು ಒಮ್ಮೆಲೆ ಕೊಡುತ್ತಿದ್ದರು.

ಚಿರತೆಗಳನ್ನು ಬಹು ಕಾಳಜಿಯಿಂದ ಸಾಕುತ್ತಿದ್ದರು. ಅದರ ಮೈ ನವೆಯೇಳಬಾರದೆಂದು ಚರ್ಮಕ್ಕೆ ಬೆಣ್ಣೆ ಮತ್ತು ಗಂಧಕ ಕೂಡಿಸಿದ ಮಲಮನ್ನು ತಿಕ್ಕುತ್ತಿದ್ದರು. ಅವುಗಳ ಕೊರಳ ಪಟ್ಟಿಗೆ ಮುತ್ತು ರತ್ನ ಕೂಡಿಸಿರುತ್ತಿದ್ದರು. ಅವು ಕುಳಿತುಕೊಳ್ಳಲು ಪರ್ಶಿಯಾದ ರತ್ನಕಂಬಳಿಗಳಿರುತ್ತಿದ್ದವು. ಬೇಟೆಗೆ ಹೊರಟಾಗ ಅವುಗಳಲ್ಲಿ ಕೆಲವು ಕುದುರೆಯನ್ನೇರಿ ಹೊರಡುತ್ತಿದ್ದರೆ ಕೆಲವು ಚಕ್ಕಡಿಗಳಲ್ಲೂ ಇನ್ನು ಕೆಲವು ಆನೆ, ಒಂಟೆ, ಹೇಸರಕತ್ತೆ, ಕುದುರೆಗಳ ಮೇಲೆ ಇಟ್ಟ ಪಲ್ಲಕ್ಕಿಗಳಲ್ಲೂ ಹೊರಡುತ್ತಿದ್ದವು. ಎಲ್ಲಕ್ಕೂ ಶ್ರೇಷ್ಠವಾದ ಚಿರತೆ ಕುಳಿತ ಮೇಣೆಯನ್ನು ಮನುಷ್ಯರೇ ಹೊತ್ತಿರುತ್ತಿದ್ದರು. ಮೇಣೆಯ ಮುಂದೆ ನಗಾರಿ ಬಾರಿಸುತ್ತ ನಡೆಯುತ್ತಿದ್ದರು.

ಕುದುರೆಯ ಮೇಲಿದ್ದ ಚಿರತೆಯನ್ನು ನೋಡಿಕೊಳ್ಳಲು ಮೂರು ಜನ ಇದ್ದರೆ ಮೇಣೆ ಮತ್ತು ಚಕ್ಕಡಿಗಳ ಮೇಲಿನ ಚಿರತೆಗಳನ್ನು ನೋಡಿಕೊಳ್ಳಲು ಇಬ್ಬಿಬ್ಬರು ಇರುತ್ತಿದ್ದರು. ಚಿರತೆಯನ್ನು ನೋಡಿಕೊಳ್ಳುವವರಿಗೆ ತಿಂಗಳಿಗೆ ೫ ರಿಂದ ೩೦ ರೂಪಾಯಿಗಳ ಸಂಬಳವಿರುತ್ತಿತ್ತು. ಹೆಚ್ಚಿನ ಕೌಶಲ್ಯ, ಪರಾಕ್ರಮಗಳನ್ನು ತೋರಿದ ಚಿರತೆಯನ್ನು ನೋಡಿಕೊಂಡಿದ್ದವನಿಗೆ ಬಹುಮಾನ ಸಿಗುತ್ತಿತ್ತು. ಬೇರೆ ಬೇರೆ ವರ್ಗಗಳ ಚಿರತೆಗಳ ಮೇಲ್ವಿಚಾರಣೆಯ ಹೊಣೆ ಸರದಾರರ ಮೇಲಿರುತ್ತಿತ್ತು. ಹೊಸ ಚಿರತೆಯನ್ನು ಸಂಪಾದಿಸುವುದು ಇದ್ದವುಗಳ ಯೋಗಕ್ಷೇಮ ಸರಿಯಾಗಿ ನೋಡಿಕೊಳ್ಳುವುದೇ ಮುಂತಾದ ಹೊಣೆಯೆಲ್ಲ ಇವರದಾಗಿರುತ್ತಿತ್ತು.

ಭಾರತದ ರಾಜರಲ್ಲಿ ಅನೇಕರಿಗೆ ಚಿರತೆಗಳಿಂದ ಬೇಟೆಯಾಡಿಸುವ ಹವ್ಯಾಸವಿತ್ತು. ಮೈಸೂರಿನ ಟೀಪುವಿಗಂತೂ ಇದರಲ್ಲಿ ತುಂಬಾ ಆಸ್ಥೆ ಇತ್ತು. ಟೀಪು ಮರಣಹೊಂದಿದಾಗ ಅವನು ಚಿರತೆಗಳ ಮೂಲಕ ಬೇಟೆಯಾಡುತ್ತಿದ್ದ ಪದ್ಧತಿಯನ್ನು ಬರೆದುಕೊಂಡು ಈಸ್ಟ್ ಇಂಡಿಯ ಕಂಪನಿಯ ಡೈರೆಕ್ಟರರಿಗೆ ಕಳಿಸಲು ಮಾರ್ಕ್ವಿಸ್ ವೆಲ್ಲೆಸ್ಲಿಯ ಏ. ಡಿ. ಸಿ. ಕ್ಯಾಪ್ಟನ್ ಬೆಂಜಾಮಿನ್ ಸಿಡೆನ್ ಹ್ಯಾಮನಿಗೆ ಆದೇಶವೀಯಲಾಯಿತು. ಈ ವರದಿ ಈಗಲೂ ಇಂಡಿಯ ಆಫೀಸ್ ಲೈಬ್ರರಿಯಲ್ಲಿದೆ. ಟೀಪುವಿನ ಬಳಿ ಹದಿನಾರು ಪಳಗಿದ ಚಿರತೆಗಳಿದ್ದವೆಂದೂ ಶ್ರೀರಂಗಪಟ್ಟಣದ ಆಗ್ನೇಯ ದಿಕ್ಕಿನಲ್ಲಿ ಆತ ಬೇಟೆಗಾಗಿ ಒಂದಿಷ್ಟು ಭೂಮಿಯನ್ನು ಕಾಯ್ದಿರಿಸಿದ್ದನೆಂದೂ ವರದಿಯಲ್ಲಿ ಹೇಳಿದೆ.

ಬೇಟೆಗೆ ಹೋಗುವ ಪ್ರತಿ ಚಿರತೆಯ ಜೊತೆಗೂ ನಾಲ್ಕು ಜನ ಇರುತ್ತಿದ್ದರು. ಒಬ್ಬ ಬೇಟೆಗಾರ, ಇಬ್ಬರು ಸಾಕುವವರು, ಒಬ್ಬ ಚಕ್ಕಡಿ ಹೊಡೆಯುವವ. ನಾಲ್ಕು ಪಳಗಿದ ಎತ್ತುಗಳೂ ಇರುತ್ತಿದ್ದವು. ಟೀಪು ಬೇಟೆಗೆ ಹೊರಡಬೇಕೆಂದಾಗ ಚಿರತೆಗಳನ್ನು ಮುಂದಾಗಿ ಕಳಿಸುತ್ತಿದ್ದರು. ಮರುದಿನ ಮುಂಜಾನೆ ಟೀಪು ಕೆಲ ಇಷ್ಟಮಿತ್ರರೊಡನೆ ಬೇಟೆಯ ಸ್ಥಳಕ್ಕೆ ಬರುತ್ತಿದ್ದ.

ಅಲ್ಲಿ ಬೇಟೆಗಾರರೊಡನೆ ಅವರು ಮೆರವಣಿಗೆಯಿಂದೆಂಬಂತೆ ಹೊರಡುತ್ತಿದ್ದರು. ಕಣ್ಣು ಕಟ್ಟಿದ ಚಿರತೆಗಳು ಚಕ್ಕಡಿಗಳ ಮೇಲೆ ಕುಳಿತಿರುತ್ತಿದ್ದವು. ಬೇಟೆಗಾರರು ಚಕ್ಕಡಿಯ ಜೊತೆಯಲ್ಲಿ ಸಾಧ್ಯವಿದ್ದ ಮಟ್ಟಿಗೂ ಇನಿತೂ ಸದ್ದು ಮಾಡದೆ ನಡೆಯುತ್ತಿದ್ದರು. ಬೇಟೆ—ಜಿಂಕೆ ಅಥವಾ ಚಿಗರಿ ಕಣ್ಣಿಗೆ ಬಿದ್ದೊಡನೆ ಈ ಚಕ್ಕಡಿಗಳನ್ನು ಯಾವ ರೀತಿಯಲ್ಲಿ ವ್ಯೂಹ ಕಟ್ಟುತ್ತಿದ್ದರೆಂದರೆ ಜಿಂಕೆಗೆ ಸಾಮಾನ್ಯವಾಗಿ ಏರಿನತ್ತಲೇ ಓಡಬೇಕಾಗಿ ಬರುತ್ತಿತ್ತು. ಜಿಂಕೆಯಿಂದ ಸುಮಾರು ಐನೂರು ಗಜ ದೂರದಲ್ಲಿರುವಾಗ ಚಿರತೆಯ ಕಣ್ಣು ಮತ್ತು ಹಗ್ಗವನ್ನು ಬಿಚ್ಚುತ್ತಿದ್ದರು. ಜಿಂಕೆಗಳ ಹಿಂಡು ಇದ್ದರೆ ಎರಡು ಮೂರು ಚಿರತೆಗಳನ್ನು ಬಿಡುತ್ತಿದ್ದರು. ಚಿರತೆಗಳು ಚಕ್ಕಡಿಯಿಂದ ಜಿಗಿದು ಬಹು ಸಾವಧಾನದಿಂದ ಗಿಡಗಂಟಿಗಳ ಮರೆಯಲ್ಲಿ ಅಡಗುತ್ತ ಜಿಂಕೆ ಎರಡು ನೂರು ಗಜ ದೂರ ಇರುವವರೆಗೆ ಮುಂದುವರಿಯುತ್ತಿದ್ದವು. ಆ ಮೇಲೆ ಬಯಲಿಗೆ ಬಂದು ಅವನ್ನು ಬೆನ್ನಟ್ಟಿ ಮೂರು ನಾಲ್ಕು ನೂರು ಗಜ ಅಂತರದೊಳಗಾಗಿ ಅವನ್ನು ಹಿಡಿಯುತ್ತಿದ್ದವು. ಜಿಂಕೆ ತಪ್ಪಿಸಿಕೊಂಡಾಗ ಚಿರತೆ ನಿಂತು ಮುಖ ಬಿಗಿದುಕೊಳ್ಳುತ್ತಿತ್ತು. ಅದನ್ನು ಸಾಕಿದವ ಬಂದು ಮತ್ತೆ ಅದರ ಕಣ್ಣು ಕಟ್ಟಿ ಚಕ್ಕಡಿಗೊಯ್ಯುತ್ತಿದ್ದ. ಬೇಟೆ ಸಾಧಿಸಿದಾಗ ಸಾಕಿದವ ಬರುವ ವರೆಗೂ ಬೇಟೆಯನ್ನು ಹಿಡಿದುಕೊಂಡು ಕೂಡ್ರುತ್ತಿತ್ತು. ಆತ ಬಂದು ಅದರ ಕಣ್ಣು ಕಟ್ಟಿ ಜಿಂಕೆಯ ಕಾಲೊಂದನ್ನು ಕತ್ತರಿಸಿ ಅದಕ್ಕೆ ಬಹುಮಾನವಾಗಿ ಇತ್ತು ಚಕ್ಕಡಿಗೆ ಕರೆದೊಯ್ಯುತ್ತಿದ್ದ. ಬಾಯಲ್ಲಿ ಕಚ್ಚಿಹಿಡಿದ ಜಿಂಕೆಯನ್ನು ಅದು ತಾನಾಗಿ ಬಿಟ್ಟು ಕೊಡಲೆಂದು ಅದಕ್ಕೆ ಒಂದು ದೊಡ್ಡ ಮರದ ಸೌಟಿನ ತುಂಬ ಜಿಂಕೆಯ

ರಕ್ತವನ್ನು ಕುಡಿಯಲು ಕೊಡುತ್ತಿದ್ದರು. ಒಂದು ಚಿರತೆ ದಿನದಲ್ಲಿ ಎರಡು ಮೂರು ಸಲ ಬೇಟೆಯಾಡುತ್ತಿತ್ತು. ಜಿಂಕೆಗಳನ್ನು ಜೀವಂತವಾಗಿಡಲು ಕೂಡ ಕೆಲವು ಚಿರತೆಗಳಿಗೆ ಕಲಿಸಿರುತ್ತಿದ್ದರು.

ಚಿರತೆಗಳು ತಮ್ಮನ್ನು ನೋಡಿಕೊಳ್ಳುವವರನ್ನು ಬಿಟ್ಟು ಉಳಿದವರನ್ನು ಸಹಸಾ ಹತ್ತಿರ ಬರಗೊಡಿಸುವುದಿಲ್ಲ. ತಂಜಾವೂರಿನ ರಾಜಾ ಸರಫೋಜಿ ಕೂಡ ಬೇಟೆಯಾಡುವ ಚಿರತೆಗಳನ್ನಿಟ್ಟುಕೊಂಡಿದ್ದ. ಈತ ಅವುಗಳ ಚಿತ್ರಗಳನ್ನೂ ಇಂಗ್ಲಂಡಿಗೆ ಕಳಿಸಿಕೊಟ್ಟಿದ್ದ. ಒಂದು ಚಿತ್ರದ ಅಡಿಯಲ್ಲಿ ಆತ ಮರಿಗಳಿಗೆ ಬೇಟೆಯಾಡುವುದನ್ನು ಬೇಗ ಕಲಿಸಬಹುದಾದರೂ ಬೆಳೆದವುಗಳಿಗೆ ಕಲಿಸಲು ವರ್ಷ ಎರಡು ವರ್ಷ ಬೇಕಾಗುವುದು ಎಂದು ಬರೆದಿದ್ದ. "ಜನರ ಗದ್ದಲ ಅವಕ್ಕೆ ಪರಿಚಿತವಾಗಲೆಂದು ಅವನ್ನು ನಿತ್ಯವೂ ತಾಸೆರಡು ತಾಸು ಪೇಟೆಗಳಲ್ಲಿ ಅಡ್ಡಾಡಿಸಿಕೊಂಡು ಬರಬೇಕು. ಚಿರತೆ ಬೇಟೆಯಾಡಲು ತಪ್ಪಿದಾಗ ತುಂಬಾ ಸಿಟ್ಟಿಗೇಳುವುದು. ಆಗ ಅದಕ್ಕೆ ಮಾಂಸವನ್ನು ಕೊಡದೆ ಅದನ್ನು ತಿರುಗಿ ಚಕ್ಕಡಿಗೆ ತರುವುದು ಸಾಧ್ಯವಿಲ್ಲ ಎಂದು ರಾಜಾ ಸರಫೋಜಿ ಹೇಳಿದ್ದಾನೆ."

ಭಾರತದ ರಾಜಮಹಾರಾಜರಲ್ಲದೆ ಭಾರತದಲ್ಲಿ ವಾಸವಾಗಿದ್ದ ಕೆಲ ಯುರೋಪಿಯನ್ನರೂ ಈ ಹವ್ಯಾಸವನ್ನು ಇಟ್ಟುಕೊಂಡಿದ್ದರು.

ಟೀಪುವನ್ನು ಸೋಲಿಸಿದ ನಂತರ ಅವನ ಮೂರು ಚಿರತೆಗಳನ್ನು ಕಾಣಿಕೆಯೆಂದು ಮೂರನೆಯ ಜಾರ್ಜ ಅರಸರಿಗೆ ಮಾರ್ಕ್ವಿಸ್ ವೆಲ್ಲೆಸ್ಲಿ ಕಳಿಸಿಕೊಟ್ಟಿದ್ದ. ಇದಕ್ಕೂ ಮುಂಚೆ ಮದ್ರಾಸಿನ ಗವರ್ನರ ಲಾರ್ಡ್ ಪಿಗೋಟ್ ಕೂಡ ಒಂದು ಚಿರತೆಯನ್ನು ಕಳಿಸಿದ್ದ. ಆ ಚಿರತೆ ಬೇಟೆಯಾಡುವುದನ್ನು ಪ್ರದರ್ಶಿಸಲೆಂದು ಏರ್ಪಾಡು ಮಾಡಿದಾಗ ಅದು— ಬಹುಶಃ ಅಲ್ಲಿ ಸೇರಿದ್ದ ಪ್ರಚಂಡ ಜನ ಸಮುದಾಯವನ್ನು ಕಂಡು ದಿಗ್ಭ್ರಾಂತವಾಗಿ ಏನೋ— ಸುಮ್ಮನೆ ಕುಳಿತುಬಿಟ್ಟಿತು. ಅದರ ನೆನಪಿನಿಂದಲೇ ಇರಬೇಕು, ಟೀಪುವಿನ ಚಿರತೆಗಳ ಕೌಶಲ್ಯ ಪ್ರದರ್ಶನದ ಏರ್ಪಾಟನ್ನು ಮೂರನೆಯ ಜಾರ್ಜ್ ಮಾಡುವ ಹವ್ಯಾಸಕ್ಕೆ ಬೀಳಲಿಲ್ಲ.

ಹಿಂದೆ ಸಾಮಾನ್ಯವಾಗಿ ಭಾರತದ ಎಲ್ಲ ಕಡೆಗಳಲ್ಲಿ ಕಂಡುಬರುತ್ತಿದ್ದ ಚಿರತೆಗಳು ಈಗ ಭಾರತದಲ್ಲಿ ಕಾಣಿಸುವುದೇ ಇಲ್ಲವೆನ್ನಬಹುದು. ಈಗ ಚಿರತೆಗಳು ಬೇಕೆನ್ನುವವರು ಅವನ್ನು ಆಫ್ರಿಕೆಯಿಂದ ತರಿಸಿಕೊಳ್ಳಬೇಕಾಗುತ್ತದೆ. ರಾಜಮಹಾರಾಜರ ಕಾಲ ಸಮಾಪ್ತವಾಗಿರುವ ಈ ಸಮಯದಲ್ಲಿ ಚಿರತೆಯಿಂದ ಬೇಟೆಯಾಡಿಸುವ ಆಟ ಅಪರೂಪವಾಗಿದೆ. ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರದಲ್ಲಿ ಮತ್ತು ಬೇರೆ ಕೆಲವೇ ಎಡೆಗಳಲ್ಲಿ ಈ ಪದ್ಧತಿ ಇನ್ನೂ ಪ್ರಚಲಿತವಿದೆ. ★

ಮೋಟಾರ್ ಶರ್ಯತ್ತಿನಲ್ಲಿ ಪ್ರವೀಣನಾದ ಮ್ಯಾಲ್ಕಂ ಕೇಂಪ್‌ಬೆಲ್ ಒಂದು ದಿನ ಲಂಡನಿನ ಒಂದು ಬೀದಿಯಲ್ಲಿ ಅಪಾಯಕಾರಿ ರೀತಿಯಲ್ಲಿ ತನ್ನ ಕಾರನ್ನು ವೇಗವಾಗಿ ಓಡಿಸುತ್ತಿದ್ದನು. ಅದನ್ನು ನೋಡಿದ ಓರ್ವ ಪೋಲೀಸ್ ಅವನನ್ನು ನಿಲಿಸಿ ಎಚ್ಚರಿಸಿದ.

ಇದರಿಂದ ಮುನಿಸೊಂಡು ಕೇಂಪ್‌ಬೆಲ್, "ನಾನು ಕಾರು ಬಿಡಲು ತಿಳಿದಿರುವಷ್ಟು ವಿಷಯ ಯಾವುದಾದರೊಂದು ದೊಡ್ಡ ಪುಸ್ತಕವನ್ನು ತುಂಬಿಸಲು ಸಾಕು. ನಿನಗೇನು ಗೊತ್ತು?" ಎಂದು ಅವನನ್ನು ದಬಾಯಿಸಿದ.

ಅದಕ್ಕೆ ಪೋಲೀಸ್ ಶಾಂತವಾಗಿ ಉತ್ತರವಿತ್ತ— "ಸರಿ ಸ್ವಾಮೀ! ಆದರೆ ನಿಮಗೆ ಗೊತ್ತಿಲ್ಲದ ಕೆಲವು ವಿಷಯಗಳು ಒಂದು ಆಸ್ಪತ್ರೆಯನ್ನು ತುಂಬಿಸಲು ಸಾಕು ಗೊತ್ತೇ?"

—ಬಿ. ಸಚ್ಚಿದಾನಂದ ಹೆಗ್ಡೆ, ಕಟಪಾಡಿ

ನೆಲವನ್ನು ಶುದ್ಧವಾಗಿಟ್ಟುಕೊಳ್ಳಿ


ಆರೋಗ್ಯ ರಕ್ಷಣೆಗೆ ಇದು ಅತ್ಯುತ್ತಮ ಉಪಾಯ

ಪ್ರೊ. ಪಿ. ಜಯವಾಸುದೇವ ಶಾಸ್ತ್ರಿ

ನೆಲವೆಂದರೆ ಭೂಮಿಯ ಮೇಲ್ಮೈ. ಇದನ್ನೇ ಮಣ್ಣು ಎನ್ನುವುದು. ಮಣ್ಣಿಗೆ ಕಲ್ಲೇ ಮೂಲವಸ್ತು. ಕಲ್ಲು ಎಷ್ಟೇ ಗಟ್ಟಿಯಾಗಿದ್ದರೂ ವಾತಾವರಣ ವಾಯುಗಳ ಸಂಸರ್ಗದಿಂದ ಕಣಗಳಾಗಿ ಒಡೆದು, ಕಾಲಾಂತರದಲ್ಲಿ ರೂಪಾಂತರ ಹೊಂದಿ, ಸಾವಯವ (Organic) ವಸ್ತುಗಳೊಂದಿಗೆ ಬೆರೆತು ಮಣ್ಣಾಗುತ್ತದೆ. ಇದರಲ್ಲಿ ಮಿಶ್ರವಾಗುವ ಸಾವಯವ ವಸ್ತುಗಳಲ್ಲಿ ಪ್ರಾಣಿಗಳಿಗೆ ಹಾಗೂ ಸಸ್ಯಗಳಿಗೆ ಸಂಬಂಧಿಸಿದ ಮೂಲ ವಸ್ತುಗಳು ಹೇರಳವಾಗಿರುತ್ತವೆ. ಮನೆ ಕಟ್ಟುವುದಕ್ಕೆ ಉಪಯೋಗಿಸುವ ಇಟ್ಟಿಗೆ ಗಾರೆ ಸಿಮೆಂಟುಗಳು ಮಣ್ಣಿನ ರೂಪಾಂತರಗಳೇ. ಮಣ್ಣಿಲ್ಲದೆ ಯಾವ ವ್ಯವಸಾಯವೂ · ನಡೆಯದೆಂದೂ ಇದೇ ನಮ್ಮ ಆಹಾರ ಮತ್ತು ಬಟ್ಟೆಗಳಿಗೆ ಮೂಲವೆಂದೂ ನಮಗೆಲ್ಲಾ ತಿಳಿದೇ ಇದೆ. ಮಣ್ಣಿನಲ್ಲಿ ಅನೇಕ ಬಗೆಯ ಜೀವಿಗಳಿರುತ್ತವೆ. ಇವುಗಳಲ್ಲಿ ಬೆಕ್ಟೀರಿಯಾ ಪ್ರೋಟೊಜೋವಾ ಇತ್ಯಾದಿ ಅನೇಕ ಭೇದಗಳಿದ್ದು, ಇವುಗಳನ್ನು ನಮ್ಮ ಬರಿಯ ಕಣ್ಣಿನಿಂದ ನೋಡಲು ಕೂಡ ಸಾಧ್ಯವಾಗುವುದಿಲ್ಲ. ಸೂಕ್ಷ್ಮದರ್ಶಕ ಯಂತ್ರಗಳು ಬೇಕೇ ಬೇಕು. ಇಷ್ಟು ಚಿಕ್ಕವಾಗಿದ್ದರೂ ಇವು ಪ್ರಕೃತಿಯಲ್ಲಿ ಮಾಡುವ ಮಾರ್ಪಾಟುಗಳು ಅದ್ಭುತ; ನಮ್ಮ ಆರೋಗ್ಯದ ಮೇಲೆ ಏಕೆ, ನಮ್ಮ ಇಡೀ ಜೀವನದ ಮೇಲೆ ಇವುಗಳ ಪರಿಣಾಮವು ಅಪಾರ. ಇವುಗಳ ಜೀವನದ ವಿಧಾನವೇ ಒಂದು ಸೃಷ್ಟಿವೈಚಿತ್ರ್ಯ. ಪ್ರಕೃತಿಯಲ್ಲಿ ಸಸ್ಯ ಹಾಗೂ ಪ್ರಾಣಿಗಳ ಜೀವನಕ್ಕೆ ಸಂಬಂಧಿಸಿದ ಕಶ್ಮಲ ಮಲ- (Waste matter) ಗಳನ್ನು ನಿರ್ಮಲಗೊಳಿಸುವುದು ಈ ಸೂಕ್ಷ್ಮ ಜೀವಿಗಳ ಜೀವಿತ ಕಾರ್ಯದಲ್ಲಿ ಒಂದು ಅಂಶ.

ನಾವು ಹೊಲಸೆಂದೂ ನಿರುಪಯೋಗವೆಂದೂ ನಿತ್ಯವೂ ಬೀಸಾಡುವ ವಸ್ತುಗಳನ್ನು ಈ ಸೂಕ್ಷ್ಮ ಜೀವಿಗಳು ವಿಶ್ಲೇಷಿಸಿ, ಅವುಗಳಲ್ಲಿರುವ ಸಸ್ಯೋಪಯುಕ್ತವಾದ ಅಂಶಗಳನ್ನೆಲ್ಲಾ ಮಣ್ಣಿನಲ್ಲಿ ಒಟ್ಟುಗೂಡಿಸುತ್ತವೆ. ಈ ಅಂಶಗಳನ್ನು ಸಸ್ಯಗಳು ಮಣ್ಣಿನಿಂದ ಮತ್ತೆ ಪಡೆಯಬಲ್ಲವು. ಈ ಸೂಕ್ಷ್ಮ ಜೀವಿಗಳ ಸಹಕಾರವಿಲ್ಲದಿದ್ದರೆ ಈ ಅಂಶಗಳೆಲ್ಲವೂ ಸಂಪೂರ್ಣವಾಗಿ ನಷ್ಟವೇ ಆಗಬೇಕಿತ್ತು. ಕೆಲವು ಅನುಕೂಲ ಸಂದರ್ಭಗಳು ಒದಗಿ ಬಂದರೆ ಮಲದಲ್ಲಿ ಅಡಗಿಕೊಂಡಿರುವ ರೋಗಕಾರಕ ಕ್ರಿಮಿ ವಿಶೇಷಗಳನ್ನು ಈ ಜೀವಿಗಳು ನಾಶಗೊಳಿಸುತ್ತವೆ.

ಮಲಿನ ವಸ್ತುಗಳನ್ನು ಜೀರ್ಣಿಸಿಕೊಳ್ಳುವ ಪ್ರಕೃತಿದತ್ತವಾದ ಶಕ್ತಿ ನೆಲದಲ್ಲಿದ್ದರೂ ಈ ಶಕ್ತಿಗೂ ಒಂದು ಮಿತಿಯುಂಟು. ಈ ಮಿತಿಯನ್ನು ಮೀರಿದರೆ ನೆಲದಲ್ಲಿ ಕಶ್ಮಲದ ಹೊರೆ ಹೆಚ್ಚಿ ಇದೇ ಭೂಮಿಯೇ ರೋಗಗಳಿಗೆ ತೌರು-ಮನೆಯಾಗಿ ಪರಿಣಮಿಸಲೂಬಹುದು. ಆದುದರಿಂದ ಈ ಕಶ್ಮಲವನ್ನು ನೆಲದಲ್ಲಿ ಚೆಲ್ಲಿ ಶುದ್ಧೀಕರಣವನ್ನು ನಿರೀಕ್ಷಿಸುವಾಗ ಕಶ್ಮಲವಸ್ತುಗಳ ಪರಿಮಾಣ ಮತ್ತು ಪರಿಣಾಮಗಳನ್ನು, ಇದಕ್ಕೆ ಸಂಬಂಧಿಸಿದ ಪ್ರಕೃತಿ ನಿಯಮಗಳನ್ನು ನಾವು ಸೂಕ್ಷವಾಗಿ ಅಭ್ಯಸಿಸಬೇಕಾಗುತ್ತದೆ. ಅಲ್ಲದೆ ಈ ಕಾರ್ಯಗಳಿಗೆ ಸಹಾಯಕಗಳಾದ ಸನ್ನಿವೇಶಗಳನ್ನೂ ಕೆಲವು ವೇಳೆ ಒದಗಿಸಿಕೊಡಬೇಕಾಗುತ್ತದೆ. ಹಾಗೆ ಮಾಡದಿದ್ದಲ್ಲಿ ನೆಲದಲ್ಲಿಯ



೧ ಮಣ್ಣಿನ ಹೊದಿಕೆ. ೨ ಕಲ್ಲಿನ ಅಥವಾ ಕಾಂಕ್ರೀಟ್ ಚಪ್ಪಡಿ. ೩ ಕಾಡುಕಲ್ಲಿನ ಪರಸು. ೪ ಶೌಚದ ಬಲೆ. ೫ ನೀರಿನ ತಡೆ (Trap). ೬ ಸುತ್ತುವರಿದ ಸುಣ್ಣದ ಕಾಂಕ್ರೀಟ್. ೭ ಹವೆಯ ಕೊಳವಿ. ೮ ಇಟ್ಟಿಗೆಯ ಚೂರುಗಳು. ೯ ಮೆಟ್ಟಲು.


ರುಗ್ಣಾಂಶಗಳು ಹೆಚ್ಚಿ ನೆಲಕ್ಕೆ "ಅಜೀರ್ಣ" ವಾಗಿ ಕಶ್ಮಲಗಳು ಸಾಕಾದಷ್ಟು ರೂಪಾಂತರ ಹೊಂದದೆ ಅನೇಕ ರೋಗಾಣುಗಳು ಉಳಿಯುತ್ತವೆ. ಇವುಗಳಲ್ಲಿ ಹೊಟ್ಟೆಹುಳಗಳ ಮೊಟ್ಟೆಗಳೂ ಜತೆಗೆ ಅತಿಸಾರ, ಆಮಶಂಕೆ, ವಿಷಮ ಶೀತ ಜ್ವರ, ಟಿಟಾನಸ್ ಆಂಥ್ರಾಕ್ಸ್, ಬಾಟ್ಯುಲಿನಿಸಂ ಈ ಸಂಬಂಧವಾದ ಜಡ್ಡುಗಳನ್ನು ಹರಡಬಲ್ಲ ರೋಗಕಾರಕ ಸೂಕ್ಷ್ಮ ಜೀವಿಗಳೂ ಮುಖ್ಯವಾದುವು.

ಮೇಲೆ ಹೇಳಿದ ಸೂಕ್ಷ್ಮಜೀವಿಗಳು ಸ್ವಾಭಾವಿಕವಾಗಿ ಮನುಷ್ಯನಲ್ಲಿರುತ್ತವೆ. ಆಯಾ ರೋಗಪೀಡಿತರು ಸುವ್ಯವಸ್ಥಿತವಾದ ಶೌಚಕೂಪಗಳನ್ನು ಉಪಯೋಗಿಸದೆ ಬಯಲು ಪ್ರದೇಶಗಳಲ್ಲಿ ಅಥವಾ ಮೈದಾನಗಳಲ್ಲಿ ಮಲವಿಸರ್ಜನೆ ಮಾಡುವುದರಿಂದ ಈ ರೋಗಾಣುಗಳು ಮಣ್ಣಿನ ಮೇಲ್ಪದರಗಳಲ್ಲಿ ಬೀಜ ರೂಪದಿಂದಿರುತ್ತವೆ. ಅವಕಾಶ ದೊರೆತಾಗ ಮತ್ತೆ ಮಾನವನ ಕರುಳನ್ನು ಸೇರಿ ರೋಗಗಳನ್ನು ಉಂಟುಮಾಡುತ್ತವೆ.

ಈ ಸೂಕ್ಷ್ಮಜೀವಿಗಳ ರೀತಿನೀತಿಗಳು ವಿವಿಧ. ಕೊಕ್ಕೆಹುಳುವಿನ (Hook worm) ರೋಗಕ್ಕೆ ಸಂಬಂಧಪಟ್ಟ ತತ್ತಿಗಳು ನೆಲದ ಮೇಲೆ ಒಡೆದು "ಲಾರ್ವಾ" ರೂಪದಲ್ಲಿರುತ್ತವೆ. ಸಮಯ ಸಿಕ್ಕಿದಾಗ ಈ ಲಾರ್ವಾಗಳು ಮನುಷ್ಯನ ಚರ್ಮದಿಂದ ಒಳಹೊಕ್ಕು ಕ್ರಮೇಣ ಕರುಳಿನಲ್ಲಿ ನೆಲೆಸುತ್ತವೆ. ಕಶ್ಮಲಯುಕ್ತ ನೆಲದಲ್ಲಿ ಬರಿ ಕಾಲಿನಿಂದ ಓಡಾಡಿದರೆ ಇದರ ಉಪದ್ರವ ಹೆಚ್ಚು. ಜಂತು ಹುಳುಗಳ (Round worm) ಮೊಟ್ಟೆಗಳು ನಮ್ಮ ಆಹಾರದೊಂದಿಗೆ ಸೇರಿ ಕರುಳಿನಲ್ಲಿ ನೆಲಸುತ್ತವೆ. ಅತಿಸಾರ, ಆಮಶಂಕೆ ಮತ್ತು ಕರುಳಿಗೆ ಸಂಬಂಧಿಸಿದ ಇತರ ರೋಗಗಳು ಅಷ್ಟು ನೇರವಾಗಿ ಅಂಟುವುದಿಲ್ಲ. ಆದರೂ ಅವುಗಳಿಗೆ ಸಂಬಂಧಪಟ್ಟ ಕ್ರಿಮಿಗಳು ಮಳೆಗಾಲದಲ್ಲಿ ನೀರಿನ ಪ್ರವಾಹದೊಂದಿಗೆ ಜಲಾಶಯಗಳನ್ನು ಸೇರುತ್ತವೆ. ಇವುಗಳ ನೀರನ್ನು ಶೋಧಿಸದೆ ಕುಡಿದ ಜನತೆಗೆ ಈ ರೋಗಗಳಾಗುತ್ತವೆ. ಆದುದರಿಂದ ಅತಿಸಾರ, ಆಮಶಂಕೆ, ವಿಷಮ ಶೀತ ಜ್ವರ, ಕಾಲರಾ ರೋಗಗಳನ್ನು ವಾರಿವಾಹಕ (Water borne) ರೋಗಗಳೆಂದು ಕರೆಯುವುದು ವಾಡಿಕೆಯಾಗಿದೆ. ವಾರಿವಾಹಕ ರೋಗಗಳು ನೀರಿನ ಮುಖಾಂತರವಾಗಿ ಅಲ್ಲದೆ ನೊಣಗಳಿಂದಲೂ ವಿಶೇಷವಾಗಿ ಹರಡುತ್ತವೆ. ಕಶ್ಮಲಯುಕ್ತವಾದ ನೆಲದ ಮೇಲೆ ನಿಂತ ನೀರು ಸಹಜವಾಗಿಯೇ ಅಶುದ್ಧವಾಗಿರುತ್ತದೆ. ಆ ನೀರಿನಲ್ಲಿ ತೊಳೆಯಲ್ಪಟ್ಟ ಕಾಯಿಪಲ್ಯಗಳಮೇಲೆ, ಸಾಮಾನ್ಯವಾಗಿ ಸೌತೇಕಾಯಿ, ಟೊಮ್ಯಾಟೋ ಹಣ್ಣು, ಮೂಲಂಗಿ ಇವುಗಳ ಮೇಲೆ ಈ ಸೂಕ್ಷ್ಮಜೀವಿಗಳು ನೆಲೆಸಿದ್ದು ಈ ಕಾಯಿಪಲ್ಯಗಳನ್ನು ಹಸಿಯಾಗಿ ಉಪಯೋಗಿಸುವ ಜನತೆಗೆ ಸಾಂಕ್ರಾಮಿಕ ರೋಗಗಳು ಸುಲಭವಾಗಿ ತಗಲುತ್ತವೆ. ಹೀಗಿದ್ದರೂ ಈ ರೋಗವೆಲ್ಲವುಗಳ ಮೂಲ ಕಾರಣ ನೆಲವೆಂಬುದನ್ನು ನಾವು ಮರೆಯಬಾರದು.

ರೋಗಕಾರಕ ಬೆಕ್ಟೀರಿಯಾ ಮತ್ತು ಮಲದಲ್ಲಿ ವಿಸರ್ಜಿತವಾದ ಜಂತುಗಳ ಮೊಟ್ಟೆಗಳು ಒಣ ನೆಲದ ಮೇಲೆ ಬಹು ಕಾಲ ಜೀವಂತವಾಗಿರಲಾರವು. ಆದರೆ ಅನುಕೂಲವಾದ ತೇವ, ಹವೆ, ಶಾಖ ಮತ್ತು ಇತರ ನೈಸರ್ಗಿಕ ಸನ್ನಿವೇಶಗಳು ದೊರೆತಾಗ ಕೆಲ ಕಾಲ ಬದುಕಿ ರೋಗಗಳನ್ನು ಹರಡುವ ಸ್ಥಿತಿಯಲ್ಲಿರಬಲ್ಲುವು. ಅನೇಕ ವೇಳೆ ಮಣ್ಣಿನಲ್ಲಿಯೇ ಸಹಜವಾಗಿ ಬದುಕಬಲ್ಲ ಬೇರೆ ಬಗೆಯ ಸೂಕ್ಷ್ಮಜೀವಿಗಳೂ ಪ್ರೋಟೋಜೋವಾಗಳೂ ಈ ರೋಗಾಣುಗಳನ್ನು ನಾಶ ಮಾಡುತ್ತವೆ.

ವಿಷಮಶೀತಜ್ವರ (Typhoid), ಆಮಶಂಕೆ ಇವುಗಳ ಕ್ರಿಮಿಗಳು ಸಹಜವಾಗಿ ಮನುಷ್ಯನ ಕರುಳಿನಲ್ಲಿರುತ್ತವೆಂದು ಹಿಂದೆಯೇ ಹೇಳಿದೆ. ಅಲ್ಲಿ ಅವಕ್ಕೆ ಅನುಕೂಲವಾದ ಆಹಾರ ಶಾಖ



ಲೈಫ್‌ಬಾಯ್ ಎಲ್ಲಿದೆಯೋ ಅಲ್ಲಿದೆ ಆರೋಗ್ಯ!

ಆಹಾ! ಲೈಫ್‌ಬಾಯ್‌ಯಿಂದ ಮಾಡುವ ಸ್ನಾನ ಎಷ್ಟು ಆನಂದಕರ!
ಆ ಸ್ವಚ್ಛತೆ, ಆರೋಗ್ಯದ ಉಲ್ಲಾಸ . . . ನಿಶ್ಚಯವಾಗಿಯೂ ನಿಮಗೆ ಸಂತೃಪ್ತಿಯುಂಟಾಗುವುದು!

ಆಟವಾಡುವಾಗಲೂ, ಕೆಲಸ ಮಾಡುವಾಗಲೂ ನಮ್ಮ ಮೈಕೈಗಳಿಗೆ ಕೊಳೆ ತಗಲುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಲೈಫ್‌ಬಾಯ್‌ಯ ಸಮೃದ್ಧ ನೊರೆ ಕೊಳೆಯಲ್ಲಿರುವ ಕ್ರಿಮಿಗಳನ್ನು ತೊಳೆದು ತೆಗೆಯುತ್ತದೆ ಮತ್ತು ಆರೋಗ್ಯವನ್ನು ರಕ್ಷಿಸುತ್ತದೆ. ನೀವೂ ನಿಮ್ಮ ಮನೆಯವರೆಲ್ಲರೂ ಇಂದಿನಿಂದಲೇ ಲೈಫ್‌ಬಾಯ್ ಉಪಯೋಗಿಸುವ ಅಭ್ಯಾಸವನ್ನು ಏಕೆ ಇಟ್ಟುಕೊಳ್ಳಬಾರದು?

L. 16-X29 KN

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ.

ಇರುತ್ತದೆ. ಇವು ಪರೋಪಜೀವಿಗಳು (Parasites) ಆದರೆ ಇವು ನೆಲದಲ್ಲಿ ಸಹಜವಾಗಿ ಜೀವಿಸಿರಲಾರವು. ಏಕೆಂದರೆ ಅವುಗಳಿಗೆ ತಕ್ಕ ಆಹಾರ ಮಣ್ಣಿನಲ್ಲಿ ಇರುವುದಿಲ್ಲ. ಆ ಜೀವಿಗಳ ಸಂಖ್ಯೆ ಬೆಳೆಯುವುದೂ ಇಲ್ಲ. ಒಂದು ವೇಳೆ ಬದುಕಿದ್ದರೂ ಕುಟುಕು ಜೀವದಲ್ಲಿ ಒಂದೆರಡು ವಾರ ಮಾತ್ರ ಬದುಕಿರಬಲ್ಲುವು. ಅನಂತರ ಸಾಯುತ್ತವೆ. ಈ ರೀತಿಯಲ್ಲಿ ನೋಡಿದರೆ ಜಂತುಹುಳುಗಳ (ascaris) ಮೊಟ್ಟೆಗಳ, ಕೊಕ್ಕೆಹುಳುಗಳ ಮೊಟ್ಟೆಗಳ ಸ್ಥಿತಿ ಮೇಲು. ಅವು ತೇವದ ಮಣ್ಣಿನಲ್ಲಿ ೩-೪ ತಿಂಗಳು ಚೇತನ ಸ್ಥಿತಿಯಲ್ಲಿರುತ್ತವೆ. ನೆಲದಲ್ಲಿ ಹೂತಿಟ್ಟರೂ ೬ ತಿಂಗಳವರೆಗೂ ನಾಶವಾಗುವುದಿಲ್ಲ. ಅನಂತರ ನಾಶವಾಗುತ್ತವೆ.

ಆದುದರಿಂದ ಮನುಷ್ಯನ ಮಲವನ್ನು ಆಳವಾದ ಮಣ್ಣಿನಲ್ಲಿ ಹೂತಿಟ್ಟರೆ ಆರು ತಿಂಗಳಲ್ಲಿ ರೋಗ ಕ್ರಿಮಿಗಳು ನಾಶವಾಗುವುವಲ್ಲದೆ ಮಲದಲ್ಲಿರುವ ಸಾವಯವ ಮತ್ತು ನಿರವಯವ (inorganic) ಧಾತುಗಳು ಹಿಂದೆ ತಿಳಿಸಿದಂತೆ ಸೂಕ್ಷ್ಮಜೀವಿಗಳ ಪರಿಶ್ರಮದಿಂದ ಉತ್ತಮವಾದ ಗೊಬ್ಬರವಾಗುತ್ತವೆ. ಇಷ್ಟರಲ್ಲಿ ಈ ಗೊಬ್ಬರದಲ್ಲಿದ್ದ ಅನಿಲಾಂಶಗಳೆಲ್ಲವೂ ಹೊರಬಿದ್ದು ಯಾವ ದುರ್ವಾಸನೆಯೂ ಉಳಿದಿರುವುದಿಲ್ಲ. ಈಗ ಇದೊಂದು ಸಸ್ಯೋಪಯುಕ್ತವಾದ ಸ್ಥಿರವಸ್ತು.

ಪ್ರಕೃತಿಯ ಕ್ರಮಕ್ಕೆ ಭಂಗ ಬಂದಾಗ ನೆಲವು ರೋಗ ಹರಡುವ ಸೂಕ್ಷ್ಮಜೀವಿಗಳಿಂದ ತುಂಬಿ ಹೋಗಿರುತ್ತದೆ. ಆ ಜಾಗದಲ್ಲಿ ಹರಿದ ನೀರೂ ಕೆಟ್ಟಿರುತ್ತದೆ. ಆ ನೀರನ್ನು ಕ್ಲೋರಿನ್ ಅಂತಹ ಕ್ರಿಮಿನಾಶಕಗಳಿಂದ ಶುದ್ಧಿ ಮಾಡದಿದ್ದರೆ ಕೆಡಕುಂಟು. ಅಂತಹ ಅಶುಚಿಯಾದ ನೆಲದ ಮೇಲೆ ಕುಳಿತ ನೊಣಗಳು ಕೂಡಾ ಹೊಲಸನ್ನು ಮೈಗೆ ಹತ್ತಿಸಿಕೊಂಡು ರೋಗರುಜಿನಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹರಡುತ್ತವೆ. ನೀರು ಎಷ್ಟೇ ಕೆಟ್ಟಿದ್ದರೂ ೧೦-೧೨ ಗಜಗಳಷ್ಟು ಆಳಕ್ಕೆ ಇಂಗಿದ ಮೇಲೆ ಅವುಗಳಲ್ಲಿ ಯಾವ ಕ್ರಿಮಿಗಳೂ ಇರುವುದಿಲ್ಲ. ಇದೇ ಕಾರಣದಿಂದ ಆಳವಾದ ಭಾವಿಯ ನೀರು ಕೆಡುಕೆನಿಸುವುದಿಲ್ಲ.

ನಮ್ಮ ನಾಡಿನಲ್ಲಿ ನೂರಕ್ಕೆ ಎಂಬತ್ತರಷ್ಟು ಜನ ಹಳ್ಳಿಗಳಲ್ಲಿ ವಾಸಿಸುವರಷ್ಟೆ? ಇಂತಹ ಹಳ್ಳಿಗಳಲ್ಲಿ ಉತ್ಪತ್ತಿಯಾಗುವ ಕಶ್ಮಲಗಳನ್ನು ಶಾಸ್ತ್ರೀಯವಾಗಿ ಶುದ್ಧಿಗೊಳಿಸುವ ಯೋಜನೆಗಳು ಇರುವುದಿಲ್ಲ. ಕೆಲವು ದೊಡ್ಡ ನಗರಗಳಲ್ಲಿ ಈ ಯೋಜನೆಗಳು ಇದ್ದರೂ ಅಲ್ಲಿಯ ಕೊಳಚೆಯ ಪ್ರದೇಶಗಳಿಗಾಗಲೀ ಕೈಗಾರಿಕೆಗಳಿಗಾಗಿ ಕಾದಿಟ್ಟ ನಗರದ ಸರಹದ್ದುಗಳಿಗಾಗಲೀ ವಿಸ್ತರಿಸಲ್ಪಟ್ಟಿರುವುದಿಲ್ಲ. ಹಳ್ಳಿಗಾಡಿನಲ್ಲಿ ಶಾಸ್ತ್ರೀಯವಾಗಿ ಕಟ್ಟಿದ ಕಕ್ಕಸ್ಸುಗಳೂ ಇರುವುದಿಲ್ಲ. ಮಲವಿಸರ್ಜನೆಗೆ ಊರ ಹೊರಗಿನ ಮೈದಾನಗಳಿಗಾಗಲೀ ಕೆರೆಯ ಅಂಚುಗಳಿಗಾಗಲೀ ಹೋಗುವುದೇ ರೂಢಿ.

ಇವುಗಳ ಪರಿಣಾಮವಾಗಿ ನಮ್ಮ ದೇಶದಲ್ಲಿ ಕೊಕ್ಕೆ ಹುಳಗಳ ರೋಗವು ನೂರಕ್ಕೆ ೪೦ ರಿಂದ ೭೦ ರಷ್ಟು ಜನಗಳಿಗೆ ವ್ಯಾಪಿಸಿರುತ್ತದೆ. ಇಡೀ ಭಾರತದಲ್ಲಿ ೧೯೪೦ ರಿಂದ ೫೦ ರ ವರೆಗೂ ೩ ಕೋಟಿಗಿಂತಲೂ ಹೆಚ್ಚು ಜನ ಕರುಳಿಗೆ ಸಂಬಂಧಿಸಿದ ಕಾಹಿಲೆಗಳಿಂದ ಮೃತಪಟ್ಟಿದ್ದಾರೆ. ನಮ್ಮ ಗ್ರಾಮಗಳ ಸುತ್ತುಮುತ್ತಲಿನ ಪ್ರದೇಶಗಳು ಚೊಕ್ಕಟವಾಗಿಲ್ಲದಿರುವುದೇ ಇದಕ್ಕೆ ಕಾರಣ.

ಒಟ್ಟಿನಲ್ಲಿ ಹೇಳುವುದಾದರೆ ಜನವಸತಿಯ ಸರಹದ್ದುಗಳು ಚೊಕ್ಕಟವಾಗಿರಬೇಕು. ಕಶ್ಮಲಗಳನ್ನು ಕೊಳೆಯ—ಬಿಡದೆ ಆಗಿಂದಾಗ್ಗೆ ಸಾಗಿಸುತ್ತಿರಬೇಕು. ಈ ಕೆಲಸವನ್ನು ಹೆಚ್ಚು ಸಾಧನ ಸಂಪತ್ತಿ ಇರುವ ನಗರಗಳಲ್ಲಿ ತೃಪ್ತಿಕರವಾಗಿ ನೆರವೇರಿಸಬಹುದು. ಹಳ್ಳಿಗಳಲ್ಲಿ ಅದು ಕಷ್ಟಸಾಧ್ಯ. ಹಳ್ಳಿಗಳಲ್ಲಿ ಅಥವಾ ನಗರಗಳಲ್ಲಿ

ಕಶ್ಮಲಗಳನ್ನೆಲ್ಲಾ ಎರಡು ಬಗೆಯಾಗಿ ವಿಂಗಡಿಸಬಹುದು: ನೇರವಾಗಿ ಮನುಷ್ಯನಿಂದ ಉಂಟಾದವು, ಮನುಷ್ಯನಿಗೆ ಸಹಾಯಕಗಳಾದ ದನಕರುಗಳಿಂದ ಉಂಟಾದವು. ಈ ಕಶ್ಮಲಗಳಲ್ಲಿ ಮಲ, ಮೂತ್ರ, ಬೀದಿಗುಡಿಸಿದ ಕಸ, ಸೆಗಣಿ, ಬೂದಿ ಮತ್ತು ರಸ್ತೆಯಲ್ಲಿ ಸಾಯುವ ಪ್ರಾಣಿಗಳು ಸೇರಿರುತ್ತವೆ. ಇವುಗಳಲ್ಲೆಲ್ಲಾ ಮಲಮೂತ್ರಗಳನ್ನು ಸಂಸ್ಕರಿಸುವುದೇ ಕಷ್ಟತಮವಾದದ್ದು. ಏಕೆಂದರೆ ಇವುಗಳಲ್ಲಿ ಸಾಂಕ್ರಾಮಿಕ ರೋಗಗಳು ಮೊಳೆಯುವವು. ಇವುಗಳನ್ನು ಸಾಗಿಸಲು ಮುಖ್ಯವಾಗಿ ಎರಡು ಪದ್ಧತಿಗಳು ಪ್ರಚಾರದಲ್ಲಿವೆ. ಅವುಗಳಲ್ಲಿ ಮೊದಲನೆಯದು ಪ್ರತಿದಿನವೂ ಝಾಡಮಾಲಿಗಳಿಂದ ಶುಚಿಮಾಡಲ್ಪಡುವ ಕನ್ಸರ್ವೆನ್ಸಿ ಪದ್ಧತಿ; ಎರಡನೆಯದು ಹರಿಯುವ ನೀರಿನಿಂದ ಕಶ್ಮಲಗಳನ್ನು ಕೊಚ್ಚಿ ಹಾಕುವ ಫ್ಲಷ್ (flush) ಪದ್ಧತಿ. ಸಾರ್ವಜನಿಕ ಆರೋಗ್ಯದೃಷ್ಟಿಯಿಂದಲೂ ಶುಚಿತ್ವದ ದೃಷ್ಟಿಯಿಂದಲೂ ಎರಡನೆಯದು ಉತ್ತಮ. ಆದರೆ ನೀರಿನ ವಸತಿಯು ಕಡಿಮೆ ಇರುವ ಹಳ್ಳಿಗಳಲ್ಲಿ ಫ್ಲಷ್ ಪದ್ಧತಿಯನ್ನು ಅನುಸರಿಸುವುದು ಆಗುವುದಿಲ್ಲ. ಅದರಂತೆಯೇ ಸೆಪ್ಟಿಕ್ ಟ್ಯಾಂಕುಗಳನ್ನು ಅಳವಡಿಸುವುದೂ ಕಠಿಣ.

ಭಾರತ ವೈದ್ಯಕೀಯ ಸಂಶೋಧನಾಮಂಡಲಿ (Indian Council of Medical Research) ಯವರು ಇತ್ತೀಚೆಗೆ ಕೆಲವು ಶೋಧನೆಗಳನ್ನು ನಡೆಸಿ ಒಂದು ಉತ್ತಮವಾದ ಶೌಚಕೂಪವನ್ನು ನಿರ್ಮಿಸಿದ್ದಾರೆ. ಇವುಗಳನ್ನು ಆಳವಾಗಿ ತೋಡಿದ ಭಾವಿ ಅಥವಾ ಕುಳಿಗಳ ಮೇಲೆ ಕಟ್ಟಬಹುದು. ಈ ಕೂಪಗಳಲ್ಲಿ ಉತ್ಪತ್ತಿಯಾಗುವ ದುರ್ವಾಸನೆಯಿಂದ ಕೂಡಿದ ಅನಿಲಗಳು ಮೇಲೇರದಂತೆ ನೀರಿನ ತಡೆ (Water seal) ಇದೆ. ಈ ರೀತಿಯ ಕಕ್ಕಸ್ಸುಗಳು ಭೂಮಿಯ ಮೇಲ್ಮೈಯ ಮಣ್ಣು ಮಲಿನಗೊಳ್ಳದಂತೆ ಕಾಯುವುದಲ್ಲದೆ ನೊಣಗಳು ಸೇರದಂತೆ ತಡೆಯುತ್ತದೆ. ಕಟ್ಟಿಸುವುದಕ್ಕೂ ಸುಲಭ, ಬೆಲೆಯೂ ಕಡಿಮೆ. ಆರೋಗ್ಯದೃಷ್ಟಿಯಿಂದಲೂ ಒಳ್ಳೆಯದು. ಮರಳು ಮಣ್ಣಿರುವ ಪ್ರದೇಶದಲ್ಲಿ ಈ ರೀತಿಯ ಶೌಚಕೂಪಗಳು ತುಂಬಾ ಚೆನ್ನಾಗಿ ಕೆಲಸ ಮಾಡುತ್ತವೆ. ದಪ್ಪನೆಯ ನೊರಜು ಕಲ್ಲು ಮತ್ತು ಗ್ರಾವೆಲ್ ಇರುವ ನೆಲಗಳಲ್ಲಿ ಕೊಂಚ ಬದಲಾವಣೆ ಮಾಡಬೇಕು.

ಮಣ್ಣಿನ ಮೇಲೆ ಮಲ, ಕಸ, ಸೆಗಣಿಯಂತಹ ಯಾವ ಹೊಲಸು ವಸ್ತು ನಿಂತು ಕೊಳೆಯುತ್ತಿದ್ದರೂ ಅಲ್ಲಿ ನೊಣಗಳು ಸೇರುತ್ತವೆ. ಮಲಿನ ವಸ್ತುಗಳನ್ನು ತಕ್ಕ ರೀತಿಯಲ್ಲಿ ಸಾಗಿಸಿ ಸಂಸ್ಕಾರ ಮಾಡುವುದರಿಂದ ನೊಣಗಳ ಅಭಿವೃದ್ಧಿಯನ್ನು ತಡೆಯುವುದಲ್ಲದೆ ಮಣ್ಣಿನಲ್ಲಿ ನೆಲೆಸುವ ಅನೇಕ ಬಗೆಯ ರೋಗಗಳನ್ನು ತಡೆಗಟ್ಟಬಹುದು. ಕೇವಲ ಸಣ್ಣ ಹಳ್ಳಿಗಳಲ್ಲಿಯೂ ಕೂಡ ಆಯಾ ಊರಿನ ಕಸ ಕುಪ್ಪೆಗಳನ್ನು ನಾಜೂಕಾಗಿ ತೋಡಿದ ಗೊಬ್ಬರದ ಗುಂಡಿಗಳಲ್ಲಿ ಪರಿಷ್ಕರಿಸಬಹುದು. ಇಂತಹ ಗೊಬ್ಬರದ ಗುಂಡಿಗಳನ್ನು ಮನೆಗೊಂದರಂತೆಯಾಗಲೀ ಓಣಿಗೊಂದರಂತೆಯಾಗಲೀ ಇಡಬಹುದು. ಆ ಗೊಬ್ಬರದ ಗುಂಡಿಗಳು ಕನಿಷ್ಠ ಮೂರು ತಿಂಗಳ ಕಸವನ್ನು ಒಟ್ಟುವಷ್ಟು ದೊಡ್ಡದಾಗಿರಬೇಕು. ಆ ಗುಂಡಿಗಳನ್ನು ಕಸದಿಂದ ತುಂಬಿದ ಕೂಡಲೇ ಒಂದು ಗೇಣು ಮಣ್ಣಿನಿಂದ ಮುಚ್ಚಿದರೆ ಮೂರು ನಾಲ್ಕು ತಿಂಗಳಲ್ಲಿ ಅದು ಹದನಾಗಿ ಗೊಬ್ಬರವಾಗುವುದು. ನೊಣಗಳೂ ಸೇರುವುದಿಲ್ಲ.

ಸ್ನಾನದ ಮನೆಯ ಹೊಲಸು ನೀರನ್ನು ಇಂಗುಗುಳಿ (Soakage pits) ಗಳಲ್ಲಿ ಸುಲಭವಾಗಿ ಸಂಸ್ಕರಿಸಬಹುದು. ೬ ಜನ ವಾಸಿಸುವ ಒಂದು ಸಾಧಾರಣ ವರ್ಗದ ಮನೆಗೆ ೪′×೪′×೩′ ಅಳತೆಯ ಕುಳಿ ಸಾಕಾಗುತ್ತದೆ. ಅದರ ಅರ್ಧ ಆಳವನ್ನು ಎಂದರೆ ೧॥′ ಮೂರಂಗುಲ ದಪ್ಪದ ಇಟ್ಟಿಗೆ ಚೂರುಗಳಿಂದ ತುಂಬಬೇಕು. ಹೀಗಾ

ದರೆ ಅದು ಒಂದು ಉತ್ತಮ ಇಂಗುಗುಳಿಯಾಗುತ್ತದೆ. ನೆಲದಲ್ಲಿ ಗಟ್ಟಿ ಕಲ್ಲಾಗಲೀ ಹಿಟ್ಟು ಕಲ್ಲಾಗಲೀ ಇದ್ದರೆ ಅಲ್ಲಿ ನೀರು ಚೆನ್ನಾಗಿ ಇಂಗುವುದಿಲ್ಲ. ಜೇಡಿ ಮಣ್ಣು ಕಡಿಮೆ ಇರುವ ಮರಳು ನೆಲ ಅತ್ಯುತ್ತಮ. ಸಾಮಾನ್ಯವಾಗಿ ಈ ಬಗೆಯ ಇಂಗುಗುಳಿಗಳು ಎರಡು ವರ್ಷ ಯಾವ ದುರ್ವಾಸನೆಯನ್ನೂ ಕೊಡದೆ ಬಚ್ಚಲ ನೀರನ್ನು ಇಂಗಿಸಿಕೊಳ್ಳುತ್ತವೆ. ೨ ವರ್ಷಗಳಿಗೊಮ್ಮೆ ಇಟ್ಟಿಗೆ ಚೂರುಗಳನ್ನು ತೆಗೆದು, ತೊಳೆದು ಒಣಗಿಸಿ ಗಟ್ಟಿಯಾದ ಚೂರುಗಳನ್ನು ಆಯ್ದು ಮತ್ತೆ ಕುಳಿಗಳಿಗೆ ತುಂಬಬಹುದು. ಕಡಿಮೆ ಬಿದ್ದುದಕ್ಕೆ ಹೊಸ ಚೂರುಗಳನ್ನು ತುಂಬಬೇಕು.

ಮನೆಯ ಅಥವಾ ದನದ ಕೊಟ್ಟಿಗೆಯ ಕಸವನ್ನು ಕಂಪೋಸ್ಟ್ ಗುಣಿಗಳಲ್ಲಿ ಸುಧಾರಿಸಬಹುದು. ಇದರಲ್ಲಿ ಮಲವನ್ನೂ ಸೇರಿಸಿದರೆ ಕಡೆಯ ಪಕ್ಷ ಆರು ತಿಂಗಳಾದರೂ ಕೊಳೆಯಲು ಬಿಡಬೇಕು. ಆಗ್ಗೆ ಹೊಟ್ಟೆಯ ಹುಳುಗಳ ತತ್ತಿಗಳು ನಾಶವಾಗುತ್ತವೆ.

ಮಲಿನ ವಸ್ತುಗಳೆಲ್ಲಾ ರಾಸಾಯನಿಕವಾಗಿ ಮಾರ್ಪಟ್ಟು ಸಸ್ಯಗಳಿಗೆ ಉಪಯುಕ್ತವಾದ ಗೊಬ್ಬರವಾಗುವುದರಿಂದ ಇದನ್ನು ಜಮೀನಿಗೆ ಹಾಕಬಹುದು. ಇದು ಆರ್ಥಿಕ ಪ್ರಯೋಜನದ ದೃಷ್ಟಿ. ಇದರಲ್ಲಿ ಅಡಕವಾಗಿರುವ ಮೂಲಭೂತವಾದ ತತ್ವಗಳು ಕಶ್ಮಲ ಸಂಸ್ಕರಣಕ್ಕಾಗಿ ಪ್ರಪಂಚದ ಎಲ್ಲೆಡೆಗಳಲ್ಲಿಯೂ ಬೇರೆ ಬೇರೆ ರೀತಿಯಲ್ಲಿ ಅಳವಡಿಸಲ್ಪಡುತ್ತಿವೆ. ಇವುಗಳ ನೆರವಿನಿಂದ ರೋಗಗಳು ಹರಡದಂತೆ ತಡೆಯಬಹುದು. ಇದು ಆರೋಗ್ಯ ದೃಷ್ಟಿ.

ಆರೋಗ್ಯ ಮತ್ತು ಆರ್ಥಿಕ ಲಾಭ ಎರಡು ದೃಷ್ಟಿಗಳಿಂದಲೂ ಕಶ್ಮಲಗಳನ್ನೆಲ್ಲ ನಿಯಂತ್ರಿಸಿ ಚೊಕ್ಕಟವಾಗಿಟ್ಟುಕೊಳ್ಳುವುದು ಶ್ರೇಯಸ್ಕರ. ✶

ನುಡಿ ಮುತ್ತು

ಪ್ರಪಂಚದಲ್ಲಿ ಯಾರೂ ಎಂದೂ ಬೇಸರಿಯದ ವಸ್ತುಗಳು ಮೂರಿವೆ. ಆರೋಗ್ಯ, ದೀರ್ಘಾಯುಃ ಮತ್ತು ಐಶ್ವರ್ಯ.

*

ಒಂದೂ ಕುಂದಿಲ್ಲದ ಹೆಂಡತಿ ಸಿಗಬೇಕೆನ್ನುವವರು ಆಜನ್ಮವೂ ಬ್ರಹ್ಮಚಾರಿಯಾಗಿಯೆ ಉಳಿಯಬೇಕಾಗುತ್ತದೆ.

*

ಬಂಗಾರದ ಪ್ರತಿಯೊಂದು ಎಳೆಯಂತೆ ಕಾಲದ ಪ್ರತಿಯೊಂದು ಕ್ಷಣವೂ ಬೆಲೆಯುಳ್ಳದ್ದು.

*

"ಇಲ್ಲ" ಎನ್ನುವ ಮಾತೇ ಆಗಿರಲಿ, ಅದನ್ನು ಹೆಣ್ಣಿನಂತೆ ಮಧುರವಾಗಿ ಹೇಳುವಂಥ ಶಕ್ತಿಯನ್ನು ಗಂಡಸರೇನೂ ಪಡೆದಿಲ್ಲ.

*

ಒಬ್ಬ ವೃದ್ಧನನ್ನು ಬದುಕಿಸಿದರೆ ಒಬ್ಬ ವ್ಯಕ್ತಿಯನ್ನು ಬದುಕಿಸಿದಂತೆ. ಒಂದು ಕಂದನನ್ನು ಬದುಕಿಸಿದರೆ ಒಂದು ವಂಶವನ್ನು ಬದುಕಿಸಿದಂತೆ.


ಸಂಗ್ರಹ— ಪಿ. ಮೇಘರಾಜನ್

30 ವರ್ಷಗಳಿಂದ ಲಕ್ಷೋಪಲಕ್ಷ ಜನರಿಗೆ

'ಡಾಲ್ಡ'ದ ಉತ್ಕೃಷ್ಟತೆಯಲ್ಲಿ

ನಂಬಿಕೆಯಿದೆ

ನಿಮ್ಮ ಮನೆಯವರು ಅದಕ್ಕೆ ಅರ್ಹರಲ್ಲವೆ?



ಡಾಲ್ಡ

ವನಸ್ಪತಿ

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

DL. 54-50 KN

ಬೇಡ—
ಈ ಒಳದಾರಿ!

ಜೀವನದಲ್ಲಿ ಕೆಲ ಸಂಗತಿಗಳು
ರಾಜಮಾರ್ಗವನ್ನೇ ಅಪೇಕ್ಷಿಸುತ್ತವೆ

ಕನ್ಹಯ್ಯಾಲಾಲ ಮಿಶ್ರ ಪ್ರಭಾಕರ

ಭಗತಸಿಂಗರು ರಾಷ್ಟ್ರಕ್ಕಾಗಿ ಪ್ರಾಣಾರ್ಪಣೆ ಮಾಡಿದರು. ಗಾಂಧೀಜಿಯವರು ತಮ್ಮ ಸಿದ್ಧಾಂತಗಳಿಗಾಗಿ ಗುಂಡಿಗೆ ಗುರಿಯಾದರು. ಗಿರ್ಯಾರೋಹಣದ ಕಾರ್ಯದಲ್ಲಿ ತೊಡಗಿ ಅನೇಕ ತರುಣರು ಸಾಹಸದ ವಿಕ್ರಮವನ್ನು ಸಾಧಿಸಲೆಂದು ಹಿಮರಾಶಿಯಲ್ಲಿ ಸಿಕ್ಕು ಸತ್ತುಹೋದರು. ಚಂದೂ ಕೂಡ ಒಬ್ಬ ಸ್ತ್ರೀಯ ಮಾನರಕ್ಷಣೆಗಾಗಿ ಕಳ್ಳರ ಗುಂಡಿಗೆ ಎದೆಕೊಟ್ಟನು.

ಹಾಗೇ ಇನ್ನೊಂದು ಸುದ್ದಿ. ಹನುಮಾನಗಡ ಸಾದೂರ್ಲ ಶಹರಕ್ಕೆ ಹೋಗುವ ರೇಲ್ವೆ ಮಾರ್ಗದಲ್ಲಿರುವ ಐಲನಾಬಾದ ಸ್ಟೇಶನ್ನಿನ ಮೇಲೆ ಒಬ್ಬ ಪ್ರವಾಸಿ ಟೀ ಸ್ಟಾಲ್‌ನಲ್ಲಿ ಚಹಾ ಕುಡಿಯುತ್ತಿದ್ದ. ಚಹಾ ಬಾಯಿ ಸುಡುವಷ್ಟು ಬಿಸಿಯಾಗಿತ್ತು. ಆರುವ ವರೆಗೆ ತಡೆಯಬೇಕೆಂದರೆ ಅಷ್ಟರಲ್ಲಿ ಗಾಡಿ ಹೊರಟುಬಿಡಬಹುದಿತ್ತು. ಚಹಾ ಕುಡಿದರೆ ಗಾಡಿ ಹೋಗುತ್ತದೆ; ಗಾಡಿ ಹತ್ತಿದರೆ ಚಹಾ ತಪ್ಪುತ್ತದೆ. ಯಾವುದನ್ನು ಬಿಡಬೇಕು? ಯಾಕೆ ಬಿಡಬೇಕು? ಎರಡೂ ಸಾಧಿಸಬೇಕು. ಆಯಿತು. ಗಾಡಿಯ ಸೀಟಿ ಆಯಿತು. ಇವನು ಮನಸ್ಸು ಗಟ್ಟಿ ಮಾಡಿ ಚಹಾದ ಲೋಟ ಗಂಟಲಿಗೆ ಸುರಿದೇ ಬಿಟ್ಟ. ಓಡಿದ, ಆಗಲೇ ಸ್ಟೇಶನ್ ಬಿಟ್ಟು ಮುಂದೆ ಸಾಗಿದ್ದ ಗಾಡಿಯ ಒಂದು ಡಬ್ಬಿಯನ್ನು ಏರಿದ, ಕೂತ.

ಕೆಲ ಹೊತ್ತಿನಲ್ಲಿ ಆತ ಸತ್ತ. ಮುಂದೆ ವೈದ್ಯಕೀಯ ಪರೀಕ್ಷೆ ನಡೆಸಲಾಗಿ ಆತ ಬಿಸಿ ಚಹಾ ಕುಡಿದದ್ದರಿಂದ ಸತ್ತನೆಂದು ತಿಳಿಯಿತು. ಒಂದು ಚವಲಿಗಾಗಿ ಆತ ಚಟ್ಟ ಹತ್ತಿದ. ಭಗತಸಿಂಗರಿಂದ ಚಂದೂನ ವರೆಗೆ ಎಲ್ಲರನ್ನೂ ನಾವು ಹೊಗಳುತ್ತೇವೆ! ಈ ಪ್ರವಾಸಿಕನನ್ನೇಕೆ ಹೊಗಳಬಾರದು?

ಹೊಗಳುವುದು ಒತ್ತಟ್ಟಿಗಿರಲಿ, ನಾವು ಅವನ ಬಗ್ಗೆ ಆಡುವುದು ಇಷ್ಟೇ: "ಹುಚ್ಚ, ಮೂರ್ಖ!- ಎರಡಾಣೆ ವ್ಯರ್ಥ ಹೋಗುತ್ತವಲ್ಲ ಅನ್ನುವ ಕಿಚ್ಚಿಗೆ ಪ್ರಾಣ ಕಳಕೊಂಡ! ಮೂರ್ಖ!"

ದೇಶಕ್ಕಾಗಿ ಸಾಯಬಹುದು; ತತ್ತ್ವಕ್ಕಾಗಿ ಸಾಯಬಹುದು; ಸಾಹಸಕ್ಕಾಗಿ ಸಾಯಬಹುದು; ಸತ್ಕಾರ್ಯಕ್ಕಾಗಿ ಸಾಯಬಹುದು; ಕೊನೆಗೆ ಎರಡಾಣೆಗಳಿಗಾಗಿಯೂ ಸಾಯಬಹುದು. ಅಂದಮೇಲೆ ನಾಲ್ಕಾರು ನಿಮಿಷಗಳಿಗಾಗಿ ಯಾಕೆ ಸಾಯಬಾರದು? ನಿಮ್ಮನ್ನೇ ಕೇಳುತ್ತೇನೆ. ನೀವು ಸಾಯಬಲ್ಲಿರಾ?

ಹೆದರಬೇಡಿರಿ. ಪ್ರಶ್ನೆ ವಿಕ್ಷಿಪ್ತವಾದರೂ ಸರಿ

ಯಾಗಿ ಅರ್ಥಮಾಡಿಕೊಂಡರೆ ವಿಶೇಷವೇನೂ ಅನಿಸದು; ನೀವು ಕಾರಿನಿಂದ ರಾತ್ರಿ ೧೦ ಗಂಟೆಗೆ ದಿಲ್ಲಿಯನ್ನು ಬಿಟ್ಟು ಮುಂಬಯಿಗೆ ಹೊರಟಿದ್ದೀರೆಂದು ಕಲ್ಪನೆ ಮಾಡಿರಿ. ನಿಮ್ಮ ಗಾಡಿ ಮೂರನೆ ದಿವಸದ ಬೆಳಗಿನ ೧೦ ಕ್ಕೆ ಮುಂಬಯಿಯನ್ನು ತಲುಪಬಹುದು. ನಾನು ನಿಮ್ಮನ್ನು ೯-೫೩ ಕ್ಕೆ ಮುಟ್ಟಿಸುತ್ತೇನೆ. ರೇಲ್ವೆಯಿಂದ ಹೋದರೆ ೭ ನಿಮಿಷ ಹೆಚ್ಚು ಬೇಕಾಗುತ್ತವೆ. ನನ್ನ ಗಾಡಿಯಲ್ಲಾದರೆ ೭ ನಿಮಿಷ ಕಡಿಮೆ ಬೇಕಾಗುತ್ತವೆ. ಆದರೆ ಇಷ್ಟೇ, ನನ್ನ ಗಾಡಿ ಹೋಗುವ ದಾರಿಯಲ್ಲಿ ಒಂದು ದೊಡ್ಡ ಕಣಿವೆ ಅಡ್ಡಲಾಗಿ ಬರುತ್ತದೆ. ಗಾಡಿ ಧುಮುಕಿ ಬಿಟ್ಟರೆ ಪ್ರಾಣಹೋಗಬಹುದು.

ಇಡೀ ಪ್ರಾಣವನ್ನೇ ಕಳೆಯುವ ಈ ಉದಾಹರಣೆ ಬೇಡವೆನ್ನುತ್ತೀರಾ ? ಹಾಗಾದರೆ ಕೈ-ಕಾಲು ಮುರಿಸುವ ಉದಾಹರಣೆ ಎತ್ತಿಕೊಳ್ಳಿ.

ಯಾಕೆ ಬೇಸರವಾಯಿತೆ ? ೫-೬ ನಿಮಿಷ ಉಳಿಸಲಿಕ್ಕೆ ಕೈಕಾಲು ಮುರಿದುಕೊಳ್ಳಲು ಯಾರಾದರೂ ಒಪ್ಪುತ್ತಾರೆಯೆ ? ಎಂದು ನೀವು ಕೇಳಿ ನನ್ನನ್ನು ಮೂರ್ಖರಲ್ಲಿ ಗಣನೆ ಮಾಡಬಹುದಲ್ಲವೆ? ಹಾಗೆ ಮಾಡಿದರೆ ನೀವು ಎಂ. ಎ. ಪಾಸ್ ಮಾಡಿ ಓದನ್ನು ನಿಲ್ಲಿಸಿ ಎಲ್ಲಿಯಾದರೂ ವೃತ್ತಪತ್ರ, ಇಲ್ಲ ಮಿತ್ರರ ಪತ್ರ ಇಷ್ಟನ್ನೇ ಓದುತ್ತೀರೆಂದು ಮಾತ್ರ ನೀವು ತೋರಿಸಿಕೊಟ್ಟಂತಾಗುತ್ತದೆ.

...." ಎಂ. ಎ. ಪಾಸ್ ಮಾಡಿ ಓದನ್ನು ನಿಲ್ಲಿಸಿ ಅಂದಿರಲ್ಲ ? ಅಡ್ಡಿಯಿಲ್ಲ. ಆದರೆ ಈ ಓದಿನ ಹುಚ್ಚು ಓದು ಮುಗಿಸಿದರೂ ಮುಗಿದಿಲ್ಲ. ದಿನಾ ಗಂಟೆ-ಅರ್ಧಗಂಟೆ ಏನಾದರೂ ಓದಲೇಬೇಕು, ಇಲ್ಲವಾದರೆ ನಿದ್ರೆಯೇ ಬರುವುದಿಲ್ಲ. ಹಾಗೆ ಚಟಾ ಬೆಳೆದುಬಿಟ್ಟಿದೆ"....

ಸರಿ; ಆ ಓದಿಗೂ ಈ ಓದಿಗೂ ಭೇದವಿದೆ ಸ್ವಾಮಿ. ಅದೆಲ್ಲ ಹಾಳು ವ್ಯಾಕರಣ ಎಂತೀರಾ ? ಹೋಗಲಿ, ತಮಗೆ ಈಸ್ಟರ್ನ ರೇಲ್ವೆಯ ಹೆಸರು ಕೇಳಿ ಗೊತ್ತಿರಬೇಕಲ್ಲ ? —

ಹುಂ. ಆದರೆ ಈ ರೇಲ್ವೆ ಸುಮಾರು ೨,೩೨೫ ಮೈಲು ಉದ್ದವಿದ್ದು ಪ. ಬಂಗಾಲ, ಬಿಹಾರ ಮತ್ತು ಉತ್ತರಪ್ರದೇಶಗಳಲ್ಲಿ ಹರಡಿದೆ ಎಂಬ ಮುಂತಾದ ವಿವರ ಗೊತ್ತಿರಲಿಕ್ಕಿಲ್ಲ.

ಅದರಂತೆಯೆ—ಸ್ವಲ್ಪ ಕಿವಿ ನೆಟ್ಟಗೆ ಮಾಡಿ ಕೇಳಿರಿ.— ಈ ರೇಲ್ವೆ ಹಳ್ಳಿಗಳನ್ನು ದಾಟಲಿಕ್ಕೆ ಹೋಗಿ ಪ್ರತಿವರ್ಷ ೮೫೦ ಜನರು ಓಡುವ ಗಾಡಿಯ ಗಾಲಿಗೆ ಸಿಕ್ಕು ಜೀವಕ್ಕೆ ಎರವಾಗುತ್ತಾರೆ ಹಾಗೂ ೬೮೦ ಜನರು ಕೈಕಾಲುಗಳನ್ನು ಕತ್ತರಿಸಿಕೊಂಡು ಅಂಗವಿಕಲರಾಗುತ್ತಾರೆ ಎಂಬ ವರ್ತಮಾನ ನಿಮ್ಮ ಕಿವಿಗೆ ಬಿದ್ದಿರಲಿಕ್ಕಿಲ್ಲ.

ಇದೆಲ್ಲ ಹಿನ್ನೆಲೆ ಇಟ್ಟುಕೊಂಡೇ ನಾನು ನಿಮ್ಮನ್ನು ಮೇಲಿನ ವಿಕ್ಷಿಪ್ತ ಪ್ರಶ್ನೆ ಕೇಳಿದ್ದು. ಈಗ ವೇದ್ಯವಾಯಿತಲ್ಲವೆ? ಗಡಿಬಿಡಿ ಮಾಡಬೇಡಿರಿ. '೫-೬ ನಿಮಿಷಕ್ಕಾಗಿ' ಎಂಬ ಪದಪುಂಜದ ಅರ್ಥ ಇನ್ನಷ್ಟು ಸ್ಪಷ್ಟವಾಗಿ ತಿಳಿದುಕೊಳ್ಳಿ.

ಹಾಗೆಂದರೆ ನಮ್ಮ ಬಾಯಿಮಾತಿನಲ್ಲಿ 'ಶಾರ್ಟ್‌ಕಟ್' (ಒಳಹಾದಿ) ಎನ್ನಬಹುದು. "ದಾರಿಯ ಉದ್ದವನ್ನು ಕಡಿಮೆ ಮಾಡಲೋಸುಗ, ಬೇಗ ನಿಶ್ಚಿತ ಸ್ಥಳವನ್ನು ಮುಟ್ಟಲೋಸುಗ, ಸ್ವಲ್ಪವ್ಯಯ ಅಧಿಕ ಆದಾಯಕ್ಕೋಸುಗ ಒಳಹಾದಿ ತುಳಿಯುವುದು" ಎಂದು ಮುಂತಾಗಿ ವಿವರಿಸಬಹುದು. ಅರ್ಥ ಸ್ಪಷ್ಟವಾಯಿತಲ್ಲ.

ನಿಮ್ಮ ದಾರಿಯಲ್ಲಿ ಒಂದು ಹೆಣ ಕಾಣುತ್ತೀರಿ (ತಿಳಿಯಿರಿ). ಆ ಹೆಣ ಹೆಣ್ಣಿನದು. ಹೆಣ್ಣು ತರುಣಿ ಸುಂದರಿ. 'ರೂಪಸಿ' ಅಂದುಕೊಳ್ಳಿ. ಆದರೆ ಕೊಲೆ-ನಿರ್ದಯ ಕೊಲೆ, ಅವಳ ಹೊದ್ದ ಸೆರಗಿನ ಮರೆಯಿಂದ ಇಣಿಕುತ್ತಿದ್ದ ಹೊಟ್ಟೆ, ಆ ಹೊಟ್ಟೆಯನ್ನೆ ಕೊರೆದು ವಿಕಾರಗೊಳಿಸಲಾಗಿದೆ. ಕಂಡ ಕೂಡಲೆ ನಿಮಗೆ ಹೇಗೆ ಅನ್ನಿಸಬಹುದು ?

ಕೆಡಕನ್ನಿಸಬಹುದು. ಆದರೆ ಅದೇ ರೀತಿ ಅಂದವಾಗಿ ಬೆಳೆದ ತೋಟದ ಮಧ್ಯದಲ್ಲಿ ಒಂದು ಕಾಲು ದಾರಿ ಹೋಗಿದ್ದು ಕಂಡರೆ ಅನ್ನಿಸುವುದೆ, ಕೆಡಕು —

ಉತ್ತರ ನೀವು ಹೇಳಬೇಡಿರಿ. ನಾನೇ ಹೇಳುತ್ತೇನೆ. ತರುಣಿಯ ಚಿತ್ರ ನಿಮ್ಮ ಸ್ಮೃತಿಯಲ್ಲಿ ಅನಂತಕಾಲ ಉಳಿಯಬಹುದು. ಆದರೆ ತೋಟವನ್ನು ಕೊರೆದ ಕಾಲುದಾರಿಯನ್ನು ಕಂಡಾಗ ಮಾತ್ರ ಹಾದಿ ಕೊರೆದ ವಿಚಾರವೂ ನಿಮ್ಮ ಮನಸ್ಸಿನಲ್ಲಿ ಬರಲಾರದು. ಬದಲು ಉದ್ದನ್ನ ದಾರಿಗಿಂತ ಈ ಒಳಹಾದಿಯೇ ಒಳಿತೆಂದು ನೀವು ಹಾಯ್ದು ಹೋಗುವಿರಿ. ನಿಶ್ಚಿಂತರಾಗಿ, ಅಲ್ಲವೆ?

ನನ್ನದೇ ಒಂದು ಅನುಭವ. ನಮ್ಮ ಗಾಂಧೀ ಪಾರ್ಕಿನಲ್ಲಿ ಒಂದು ಕಾಲುದಾರಿ ಟಿಸಿಲೊಡೆದು ಇಂಥ ಹೊಟ್ಟೆ ಹರಿಯುವ ಕಾರ್ಯ ಮಾಡಿದೆ. ಕಂಡಾಗಲೆಲ್ಲ ನನ್ನ ಹೊಟ್ಟೆ ಹೊಸೆಯುತ್ತದೆ. ನನ್ನ ತಳಮಳವನ್ನು ಒಮ್ಮೆ ನಾನು ನಗರಾಧಿಕಾರಿಗಳ ಮುಂದೆ ತೋಡಿಕೊಂಡೆ. ನನ್ನ ತಳಮಳಕ್ಕೆ ಮರುಗಿ ಅಲ್ಲದಿದ್ದರೂ ತೋಟಿಗನಿಗೆ ಹೇಳಿ ಮರುದಿವಸ ಸುತ್ತೂ ಕಡೆಗಳಲ್ಲಿ ಮುಳ್ಳು ಬೇಲಿ ಹಾಕಿಸಿದರು. ಅಂದು ಸಂಜೆ ನನ್ನ ಮನಸ್ಸಿಗೆ ಏನೊ ಒಂದು ತುಸು ನೆಮ್ಮದಿಯಾಗಿತ್ತು.

ಆದರೆ ಒಂದು ವಾರ ಕಳೆಯಲಿಲ್ಲ. ಮತ್ತೆ ಮೊದಲಿನಂತೆ ಕಾಲ ದಾರಿ ಕಾಲು ಚಾಚಿತ್ತು. ರಹದಾರಿ ಪ್ರಾರಂಭವಾಗಿತ್ತು. ನಾನು ಮತ್ತೆ ಅಧಿಕಾರಿಗಳೆದುರು ಅತ್ತೆ. ಅವರು ಮತ್ತೆ ಬೇಲಿ ಹಾಕಿಸಿದರು. ತಂತಿಯ ಬೇಲಿ! ಆದರೆ ಈ ಬಾರಿಯೂ ನನ್ನ ದುರದೃಷ್ಟ ತಪ್ಪಲಿಲ್ಲ. ಒಂದೇ ವಾರದಲ್ಲಿ ಪೂರ್ತಿ ಕಿತ್ತು ಹಾಕಲಿಕ್ಕೆ ಬರಲಿಲ್ಲವೆಂದು ಅಲ್ಲಲ್ಲಿ ನಡುವಿನ ತಂತಿಗಳನ್ನು ಮೇಲೆ ಕೆಳಗೆ ಬಗಿದು ನುಸುಳಿ ಹೋಗಲಿಕ್ಕೆ ಕಿಡಿಕಿಗಳನ್ನು ನಿರ್ಮಿಸಿದರು.

ಈ ಕಿಂಡಿಯೊಳಗಿಂದ ಕೋಣಗಳೇನಾದರೂ ಹೋಗಿಬರುತ್ತಿರಬಹುದೆ? ಎಂದೊಂದು ಪ್ರಶ್ನೆ ನನ್ನ ತಲೆಯಲ್ಲಿ ಬಂತು. "ಇಲ್ಲ" ನಾನೇ ಹೇಳಿಕೊಂಡೆ.

ಹಾಗಾದರೆ ಹೋಗುವವರು ಮನುಷ್ಯರು! ಹೌದು! ಸರಿಯಾದ ದಾರಿ ಇರಲಾಗಿ ಈ ಅಡ್ಡ ತುಳಿತವೆ ಇವರಿಗೆ ಯಾಕೆ ಬೇಕೆನಿಸುತ್ತದೆ? ಎಂಬ ಎರಡನೇ ಪ್ರಶ್ನೆ ಉದ್ಭವಿಸಿತು. ಉತ್ತರ ಕಂಡುಕೊಳ್ಳಲು ನಾನು ಪ್ರಯೋಗ ನಡೆಸಿದೆ. ರಾಜಮಾರ್ಗದಿಂದಲೂ ಅಡ್ಡದಾರಿಯಿಂದಲೂ ನಡೆದು ನೋಡಿದೆ. ಹತ್ತುವ ವೇಳೆಯನ್ನು ಲೆಕ್ಕ ಹಾಕಿದೆ. ಒಳಹಾದಿ ೧½ ನಿಮಿಷದ ಉಳಿತಾಯ ಮಾಡುವುದೆಂದು ನನ್ನ ಗಡಿಯಾರ ತೋರಿಸಿತು.

ಮತ್ತೆ ಅದೇ – ಮರೆತಿರೇನು ?- ಹಳೆ ಪ್ರಶ್ನೆ. ೧½ ನಿಮಿಷದ ಉಳಿತಾಯಕ್ಕಾಗಿ ರಾಷ್ಟ್ರದ ಒಂದು ಸುಂದರ ಹೂದೋಟ ಹಾಳುಮಾಡಲ್ಪಡುತ್ತದೆ. ೫-೬ ನಿಮಿಷದ ಉಳಿತಾಯಕ್ಕಾಗಿ ನುಗ್ಗುವ ಸಾಹಸಿಗರು ರೇಲ್ವೆ ಗಾಲಿಗೆ- ಕೈಯನ್ನೊ- ಕಾಲನ್ನೊ- ಕೊನೆಗೆ ಎದೆ, ಕುತ್ತಿಗೆ ತಲೆ ಪ್ರಾಣವನ್ನೆ ಕೊಟ್ಟು ಅರ್ಧವೊ ಪೂರ್ಣವೊ ಮೃತರಾಗುವಂತೆಯೆ ಅಲ್ಲವೆ ಇದು ?—

ಮೌಲವಿಯೊಬ್ಬನ ಗಡ್ಡದ ಒಂದು ಜಾನಪದ ಕತೆ ಇದೆ. ಒಂದು ರಾತ್ರಿ ಮೌಲವಿ ಒಂದು ಪುಸ್ತಕ ಓದುತ್ತಿದ್ದ. " ಮುಖಕ್ಕಿಂತ ಗಡ್ಡ ಉದ್ದವಿದ್ದವರು ದಡ್ಡರಿರುತ್ತಾರೆ " ಎಂದು ಅದರಲ್ಲಿ ಬರೆದಿತ್ತು. ಈ ದಡ್ಡ ತನ್ನ ಗಡ್ಡವನ್ನು ಅಳತೆ ಮಾಡಿ ತಾನು ದಡ್ಡ ಎಂಬ ನಿರ್ಣಯಕ್ಕೆ ಬಂದು " ಪುಸ್ತಕ ಓದಿದವರು ನೂರಾರು ಸಾವಿರಾರು ಬಹಳ, ಎಲ್ಲರೂ ಇರಬಹುದು. ಅವರು ನನ್ನನ್ನು ಕಂಡಕೂಡಲೆ ನನ್ನ ಬಗ್ಗೆ 'ಹೀಗೇ' ತಿಳಿಯುತ್ತಿರಬೇಕು. ಇನ್ನೇನು ಮಾಡಲಿ ? " ಮೌಲವಿ ಯೋಚಿಸಿದ ; ವಿಚಾರ ಹೊಳೆಯಲಿಲ್ಲ. ಅಲ್ಲಿ ಒಂದು ದೀಪ ಉರಿಯುತ್ತಿತ್ತು. ತಲೆ ಓಡಿಸಿದ. ಗಡ್ಡದ ಹೆಚ್ಚಿನ ಉದ್ದವನ್ನು ಸುಡಲೆಂದು ಮುಷ್ಟಿಯಲ್ಲಿ ಗಡ್ಡ ಹಿಡಿದ. ಬೆಂಕಿ ಹತ್ತಿತು. ಗಡ್ಡ ಸುಡುತ್ತ ಕೈಗೆ ಝಳ ಬಡಿಯಿತು. ಕೈಬಿಟ್ಟಾಗ ಬೆಂಕಿ ಮುಂದುವರಿಯಿತು. ಇಡೀ ಗಡ್ಡವನ್ನೇ ನುಂಗಿ ಶಾಂತವಾಯಿತು. ಮೌಲವಿ ಎಷ್ಟು ಪಾಂಚಜನ್ಯ ಮಾಡಿದರೂ ಬೆಂಕಿ ಅತ್ತ ಕಿವಿಗೊಡಲಿಲ್ಲ.

ಕನ್ನಡಿಯಲ್ಲಿ ತನ್ನ ಮುಖ ನೋಡಿದವನೆ 'ಯಾ ಖುದಾ!' ಎಂದು ತಲೆ ಹಿಡಿದುಕೊಂಡು ಬಿಟ್ಟ. ಅತ್ತು ಶಾಂತನಾದಮೇಲೆ ಅವನ ತಲೆಯಲ್ಲಿ ಪ್ರಕಾಶ ಬಿತ್ತು. "ಗಡ್ಡವನ್ನು ಗಿಡ್ಡ ಮಾಡಬೇಕಿದ್ದರೆ ನಾಳೆ ಬೆಳಿಗ್ಗೆ ನಾಯಿಂದನನ್ನು ಕರೆಸಿ ಮಾಡಬಹುದಿತ್ತಲ್ಲ!" ಆದರೆ ಅತಿ ಬುದ್ಧಿವಂತಿಕೆ ಮಾಡಲಿಕ್ಕೆ ಹೋಗಿ ಮರುದಿನ ಮಸೀದಿಗೆ ಹೋಗಲಿಕ್ಕೂ ಮುಖ ಇಲ್ಲದಂತಾಗಿಬಿಟ್ಟ

ಇಷ್ಟೆಲ್ಲ ಮಾತುಗಳಿಂದ ಸಿದ್ಧವಾಗುವ ಮಾತು ಅದೇ. ೫-೬ ನಿಮಿಷಕ್ಕಾಗಿ ಮನುಷ್ಯ ಏನು ಬೇಕಾದರೂ ಮಾಡಬಲ್ಲ! ಎಂಥ ಹಾನಿಯನ್ನಾದರೂ ದುರ್ಲಕ್ಷಿಸಬಲ್ಲ!

೧೫ ವರ್ಷಗಳ ಹಿಂದೆ ಇಬ್ಬರು ಪಾಲುಗಾರಿಕೆಯ ಮೇಲೆ ಒಂದು ಅಂಗಡಿಯನ್ನು ನಡೆಸುತ್ತಿದ್ದರು. ಮುಂದೇನೊ ಜಗಳವಾಯಿತು. ಇಬ್ಬರೂ ಬೇರೆಯಾದರು. ಒಬ್ಬನ ಹೆಸರು ಮಹಿಪಾಲ, ಇನ್ನೊಬ್ಬ ಕುಮಾರ.

ಮಹಿಪಾಲನಿಗೆ ಒಬ್ಬ ಮಗ ಒಬ್ಬ ಮಗಳು ಇದ್ದರು. ಇಬ್ಬರೂ ವಯಸ್ಸಿಗೆ ಬಂದಿದ್ದರು. ಮಗ ಕಾರಕೂನನಾದ. ಮಗಳು ಟೈಪಿಸ್ಟಳಾದಳು. ಮನೆಯ ಖರ್ಚು ಹೇಗೊ ಸಾಗತೊಡಗಿತು.

ಕುಮಾರ— ಪಾಪ! ಏಕಾಕಿ. ವೃತ್ತಪತ್ರಗಳನ್ನು ಮಾರತೊಡಗಿದ.

೧೫ ವರ್ಷಗಳ ತರುವಾಯ—

ಕುಮಾರನು ಒಂದು ಪುಸ್ತಕದ ಅಂಗಡಿ ತೆರೆದಿದ್ದ. ೭-೮ ವೃತ್ತಪತ್ರಗಳ ಏಜನ್ಸಿ ವಹಿಸಿದ್ದ. ಅವನ ಜೀವನ ಸುಖವಾಗಿ ಸಾಗಿತ್ತು.

ಇತ್ತ ಮಹಿಪಾಲ ದಿನದಿನಕ್ಕೆ ಹೆಚ್ಚು ಹೆಚ್ಚು ಬಡವನಾಗುತ್ತ ನಡೆದಿದ್ದ. ಹಗಲೆಲ್ಲ ಮನೆಯ ಜನರೊಂದಿಗೆ ಜಗಳಾಡುತ್ತಿದ್ದ. ಯಾಕೆಂದರೆ ಈತ ಲಾಟರೀ ಹುಚ್ಚಿಗೆ ಬಿದ್ದಿದ್ದ. ಒಂದು ತಿಕೀಟಿನಲ್ಲಿ ಲಕ್ಷಾಧೀಶನಾಗಬೇಕೆಂದು ಲಕ್ಷಾಂತರ ತಿಕೀಟುಗಳಿಗೆ ಆಗಲೆ ದುಡ್ಡು ಸುರಿದಿದ್ದ. ಈಗ ತಿಕೀಟು ಕೊಳ್ಳಲಿಕ್ಕೂ ದುಡ್ಡು ಸಿಗದಂತಾಗಿತ್ತೆಂದು ಮನೆಯಲ್ಲಿ ಮಹಾಭಾರತ ಹೂಡುತ್ತಿದ್ದ.

ಕುಮಾರನು ರಾಜಮಾರ್ಗವನ್ನು ಹಿಡಿದು ನಡೆದಿದ್ದ.— ಉದ್ದವಾಗಿದ್ದರೂ ಕಾಲ ಬಹಳ ವ್ಯಯಮಾಡುವುದಾದರೂ! ಮಹೀಪಾಲನು ಒಳಹಾದಿಯಲ್ಲಿ ಹೋಗಿದ್ದ— ಬೇಗ ಮುಟ್ಟಲೆಂದು, ಶ್ರಮ ಉಳಿಸಿಕೊಳ್ಳಲೆಂದು! ಕುಮಾರ ಸಮೃದ್ಧನಾಗಿದ್ದ. ಮಹಿಪಾಲ ನಿರ್ಗತಿಕನಾಗಿದ್ದ.

ಹಿರಿಯರು ಹೇಳುವ ಮಾತು:— "ಏನೇ ಆದರೂ ದಾರಿ ಬಿಡಬೇಡ. ಅದು ಎಲ್ಲಿಗೇ ಹೋಗಲಿ; ಹೋಗುತ್ತದೆ. ಅಡ್ಡ ಹಾದಿ ತುಳಿದರೆ ಮಾತ್ರ ತಿರುಗಿ ಬರಲಿಕ್ಕೂ ದಾರಿಕಾಣದೆ ಕಂಗಾಲಾಗಬಹುದು."

ಬುದ್ಧ ಉವಾಚ : ವೈರತ್ವದಿಂದ ವೈರತ್ವ ಅಳಿಯದು. ಶಾಂತಿಯಿಂದ ಕ್ರೋಧವನ್ನು ಗೆದೆ.

ಗಾಂಧೀ ಉವಾಚ : ಒಳ್ಳೇ ಸಾಧ್ಯವನ್ನು ಸಾಧಿಸಲು ಸಾಧನಗಳೂ ಒಳ್ಳೇಯವೇ ಇರಲಿ. ಏಕೆಂದರೆ ಅಯೋಗ್ಯ ಸಾಧನಗಳಿದ್ದರೆ ಯೋಗ್ಯ ಕಾರ್ಯಗಳೂ ಅಯೋಗ್ಯ ರೀತಿಯಲ್ಲಿ ಮುಕ್ತಾಯವಾಗುತ್ತವೆ.

ಆದ್ದರಿಂದ 'ನಾ' ಉವಾಚ : ನಮ್ಮ ದಿಕ್ಕು 'ಸರಿ' ಆಗಿರಲಿ. ನಮ್ಮ ದಾರಿ 'ಸರಿ' ಆಗಿರಲಿ. ದೂರದ್ದಾದರೂ ಚಿಂತೆಯಿಲ್ಲ; ತಡ ಮಾಡುವಂಥಾದ್ದಾದರೂ ಚಿಂತೆಯಿಲ್ಲ. *



ಹಿಂದುಳಿದ ದೇಶಗಳು ಈ ಕಟುಸತ್ಯವನ್ನು ಅರಿಯಬೇಕು

ಬಂಡವಾಳವಿಲ್ಲದೆ ಬಡಾಯಿ!

ಅನಭಿವೃದ್ಧ ರಾಷ್ಟ್ರಗಳೆಲ್ಲ ಇಂದು ಅಭಿವೃದ್ಧಿಯ, ಸಂಪತ್ತಿನ ಕನಸು ಕಾಣುತ್ತಿವೆ. ಅಮೇರಿಕದ ಹಾಗೆ, ರಶಿಯದ ಹಾಗೆ ಪ್ರಬಲ ರಾಷ್ಟ್ರಗಳಾಗಬೇಕೆಂಬ ಹುಮ್ಮಸವೂ ಅವುಗಳಿಗಿದೆ. ಆದರೆ ಇಂಥ ಕನಸುಗಳನ್ನು ಅವರ ಮನಸಿನಲ್ಲಿ ನಟ್ಟ ಮುಂದಾಳುಗಳು ಒಂದು ಅತಿ ಮಹತ್ವದ ಅಂಶವನ್ನು ಕಡೆಗಣಿಸುತ್ತಾರೆ.

ಆ ಮಹತ್ವದ ಅಂಶ ಎಂದರೆ ಯಾವುದಾದರೂ ಬಡ ದೇಶ ಸಂಪನ್ನವಾಗಬೇಕಾದರೆ ಬಂಡವಾಳ ಬೇಕು ಎಂಬುದು. ಒಂದು ದೇಶದ ಆರ್ಥಿಕ ಪದ್ಧತಿ ಬಂಡವಾಳದಾರಿಕೆ ಇರಬಹುದು, ಸಮಾಜವಾದಿ ಇರಬಹುದು, ಕಮ್ಯುನಿಸ್ಟ್ ಇರಬಹುದು. ಯಾವ ಪದ್ಧತಿಯಾದರೂ ಬಂಡವಾಳವಿಲ್ಲದೆ ಬಡಾಯಿ (ಹಿರಿಮೆ) ಇಲ್ಲ. ಕನಸುಗಳನ್ನು ಮಾರುವ ಹಿಂದುಳಿದ ದೇಶಗಳ ನಾಯಕರೂ ಅರ್ಥಶಾಸ್ತ್ರಿಗಳೂ ಈ ಅಪ್ರಿಯ ಸತ್ಯವನ್ನು ಜನರಿಗೆ ಬಿಂಬಿಸಿ ಹೇಳುವುದಿಲ್ಲ.

ಕೊಲಂಬಿಯಾ ವಿಶ್ವವಿದ್ಯಾಲಯ ಪತ್ರಿಕೆಯಲ್ಲಿ ನಾರ್ಮನ್ ಬೆಯ್ಲಿ ಎಂಬ ಅರ್ಥಶಾಸ್ತ್ರಜ್ಞರು ಕೆಲ ವಿಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಮಂಡಿಸಿ ಹಿಂದುಳಿದ ದೇಶಗಳಿಗೆ ಎಚ್ಚರವಿತ್ತಿದ್ದಾರೆ.

ಬಂಡವಾಳ ಹೇಗೆ ಬರುತ್ತದೆ? ಇದಕ್ಕೆ ಮೂರು ದಾರಿಗಳಿವೆ: ೧. ವಿದೇಶಗಳಿಂದ ಸರಕಾರಿ ಸಹಾಯ; ೨. ವಿದೇಶಗಳಿಂದ ಖಾಸಗಿ ಬಂಡವಾಳ; ಮತ್ತು ೩. ದೇಶಿ ಬಂಡವಾಳ.

ಪ್ರತಿಯೊಂದು ಹಿಂದುಳಿದ ದೇಶದಲ್ಲೂ ಮೇಲಿನ ಮೂರರಲ್ಲಿ ಮೊದಲಿನ ಎರಡು ದಾರಿಗಳ ಮೇಲೆ ಮಿತಿ ಮೀರಿದ ಭರವಸೆ ಕಾಣಬರುತ್ತದೆ: ಆಗಲೇ ಆರ್ಥಿಕ ಪ್ರಗತಿ ಸಾಧಿಸಿಕೊಂಡು ಸಂಪನ್ನವಾಗಿರುವ ದೇಶಗಳು ಹಿಂದುಳಿದ ದೇಶಗಳಿಗೆ ಸಹಾಯ ಮಾಡಿದರೆ ಎಲ್ಲವೂ ಸರಿಹೋಗುತ್ತದೆ, ಎಂದು. ಇದು ಬರಿ ಭ್ರಮೆ.

ಸರಕಾರಿ ಮಟ್ಟದಲ್ಲಿ ವಿದೇಶಿ ಸಹಾಯದಿಂದ ಹಿಂದುಳಿದ ದೇಶಗಳ ಅಭಿವೃದ್ಧಿ ತ್ವರಿತದಿಂದ ಆಗಲು ಎರಡು ಆತಂಕಗಳಿವೆ. ಮೊದಲನೆಯದಾಗಿ, ಜಗತ್ತಿನ ಜನಸಂಖ್ಯೆಯಲ್ಲಿ ಸೇಕಡಾ ೨೦ರಷ್ಟು ಇರುವ ಪ್ರದೇಶ ಮಾತ್ರ ಅಭಿವೃದ್ಧಿಹೊಂದಿದ್ದು, ಉಳಿದ ೮೦ ಅಂಶ ಹಿಂದುಳಿದದ್ದು. ಮುಂದುವರಿದ ದೇಶಗಳು ಎಷ್ಟು ತ್ಯಾಗ ಮಾಡಿ ಸಹಾಯ ಮಾಡಿದರೂ ತಮಗಿಂತ ನಾಲ್ಕುಪಟ್ಟು ಜನರನ್ನು ಮೇಲೆತ್ತಲು ಸಾಧ್ಯವೆ?

ಎರಡನೆಯದಾಗಿ, ಅವರು ಅಂಥ ತ್ಯಾಗ ಮಾಡಲು ಒಲ್ಲರು. ತಮ್ಮ ಪೂರ್ವಜರ ಮತ್ತು ತಮ್ಮ ಕಷ್ಟಾರ್ಜಿತವಾದ ಉನ್ನತ ಜೀವನ ಮಟ್ಟವನ್ನು ಇಳಿಸಿಕೊಂಡು ಅನ್ಯ ದೇಶಗಳಿಗೆ ನೆರವು ನೀಡುವಂತೆ ಹೆಚ್ಚು ಕರ ಕಂದಾಯಗಳನ್ನು ನೀಡಲು ಅವರು ಸಿದ್ಧರಿಲ್ಲ. ಆಗಲೇ ಅಮೇರಿಕದಲ್ಲಿ ಹಿಂದುಳಿದ ದೇಶಗಳಿಗೆ ಕರಾವಲಂಬನವೀಯಲು ಯುರೋಪಿನ ರಾಷ್ಟ್ರಗಳೂ ಏಕೆ ತ್ಯಾಗ ಮಾಡಬಾರದೆಂಬ ಕೂಗು ಎದ್ದಿದೆ. ಹೀಗಿರುವಲ್ಲಿ ವಿದೇಶಿ ಸಹಾಯ ಈಗಿರುವುದಕ್ಕಿಂತ ವಿಶೇಷ ಹೆಚ್ಚಾಗುವುದೆಂಬ ಆಸೆಗೆಡೆಯಿಲ್ಲ; ಕಡಿಮೆಯಾಗದಿದ್ದರೆ ಪುಣ್ಯ.

ಖಾಸಗಿ ವಿದೇಶಿ ಬಂಡವಾಳ ಹೆಚ್ಚು ಸ್ವೇಚ್ಛೆಯಿಂದ ಬರಬಹುದು. ಆದರೆ ಖಾಸಗಿ ಬಂಡವಾಳ ಲಾಭದಾಶೆಯಿಂದಲೇ ಬರುತ್ತದೆಂಬುದನ್ನು ಮರೆಯುವಂತಿಲ್ಲ. ಲಾಭ ಗಳಿಸಲು ಮತ್ತು ಗಳಿಸಿದ ಲಾಭದ ಒಂದಂಶವನ್ನಾದರೂ ಬಂಡವಾಳ ಒದಗಿಸಿದ ದೇಶಕ್ಕೆ ಕಳಿಸಲು ಅವಕಾಶವಿದ್ದರೇನೇ ಬಂಡವಾಳ ಬಂದೀತು. ಆದರೆ ಲಾಭ ಹೊರಗೆ ಕಳಿಸುವ ಪ್ರಶ್ನೆಯಿಂದ ಅಪ್ರಿಯ ಪ್ರಸಂಗಗಳು ಹುಟ್ಟಿ ಆ ದೇಶದ ಸರಕಾರವೂ ಜನರೂ ಬಿಗಿ ಧೋರಣ ವಹಿಸುವ ಸ್ಥಿತಿ ಬರುತ್ತದೆ. ಸರಕಾರಗಳು ಬೇರೆ ಬೇರೆ ನಿಯಂತ್ರಣಗಳನ್ನು ಹೇರಲು ಮುಂದಾಗುತ್ತವೆ. ಹೀಗಾಗಿ ಹಿಂದುಳಿದ ದೇಶಗಳಿಗೆ ಬಂಡವಾಳ ಬರುವುದು ಕಷ್ಟವಾಗುತ್ತದೆ.

ಬಂದರೂ ಬಹಳ ಬಾರದು. ಅಭಿವೃದ್ಧ ದೇಶಗಳು ತಮ್ಮಲ್ಲಿಯೇ ಹೆಚ್ಚು ಹೆಚ್ಚು ಬಂಡವಾಳ ತೊಡಗಿಸಿಕೊಂಡು ಬೆಳೆಯುತ್ತಿವೆ. ಅಮೇರಿಕವು ೧೯೫೫ ರಲ್ಲಿ ತೊಡಗಿಸಿದ ಬಂಡವಾಳದಲ್ಲಿ ಸೇಕಡಾ ೯೦ ಸ್ವದೇಶದಲ್ಲಿ, ೧೦ ಮಾತ್ರ ವಿದೇಶಗಳಲ್ಲಿ; ಈ ಹತ್ತರಲ್ಲಿಯೂ ನಾಲ್ಕು ಭಾಗವನ್ನಷ್ಟೇ ಅನಭಿವೃದ್ಧ ದೇಶಗಳಲ್ಲಿ ತೊಡಗಿಸಿದ್ದು; ಉಳಿದ ಆರು ಭಾಗವನ್ನು ತನ್ನಂತೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವಿನಿಯೋಗ ಮಾಡಲಾಯಿತು.

ಅಂದ ಮೇಲೆ ಉಳಿದದ್ದು ಮೂರನೆಯದು- ದೇಶಿ ಬಂಡವಾಳ. ಈ ಬಂಡವಾಳ ಸ್ವಪ್ರಯತ್ನದಿಂದಲೇ ಶೇಖರವಾಗಬಲ್ಲದು. ಇಂದು ಅಭಿವೃದ್ಧಿಯಲ್ಲಿರುವ ರಾಷ್ಟ್ರಗಳೆಲ್ಲ— ಅಮೇರಿಕ, ಇಂಗ್ಲಂಡುಗಳಂಥ ಬಂಡವಾಳಗಾರ ರಾಷ್ಟ್ರಗಳಿರಲಿ,— ರಶಿಯದಂಥ ಕಮ್ಯುನಿಸ್ಟ್ ರಾಷ್ಟ್ರವಿರಲಿ, ಹೆಚ್ಚು ಕೆಲಸ, ಕಡಿಮೆ ಸಂಬಳ,- ಈ ಮಾರ್ಗದಿಂದಲೇ ಬಂಡವಾಳ ಕೂಡಿಸಿ ಅಭಿವೃದ್ಧಿಗೆ ದಾರಿ ಮಾಡಿಕೊಂಡವು.

ಔದ್ಯೋಗಿಕ ಕ್ರಾಂತಿಯಲ್ಲಿ ಮುಂದಾಳಾದ ಇಂಗ್ಲಂಡು ಹೇಗೆ ಅಭಿವೃದ್ಧಿ ಹೊಂದಿತು? ಹದಿನೆಂಟನೇ ಶತಮಾನದ ಔದ್ಯೋಗಿಕ ಇತಿಹಾಸ ಇದನ್ನು ಹೇಳುತ್ತದೆ. ಕಾರಖಾನೆದಾರರು ಗಂಡ

ಸರನ್ನಷ್ಟೇ ಅಲ್ಲದೇ, ಹೆಂಗಸರನ್ನು ಮಕ್ಕಳನ್ನು ಕೂಡ ದಿನಕ್ಕೆ ಹನ್ನೆರಡೋ ಹದಿನಾಲ್ಕೋ ಹದಿನಾರೋ ತಾಸು ದುಡಿಸಿಕೊಂಡು ಅತ್ಯಲ್ಪ ಕೂಲಿ ಕೊಡುತ್ತಿದ್ದರು. ಕೂಲಿಕಾರರೂ ಅವರ ಮಕ್ಕಳೂ ಅತ್ಯಂತ ಅಮಾನುಷ ದುರವಸ್ಥೆಯಲ್ಲಿ ಕೊಳಚೆ ಪ್ರದೇಶಗಳಲ್ಲಿ ಬಾಳಿ ನಾನಾ ರೋಗಗಳಿಗೆ ತುತ್ತಾಗುತ್ತಿದ್ದರು. ಈ ರೀತಿ ಬಂಡವಾಳಗಾರರಿಗೆ ಅಪಾರ ಲಾಭವಾಗುತ್ತಿತ್ತು. ಅವರು ಅದನ್ನು ಹೊಸ ಹೊಸ ಉದ್ಯಮಗಳಲ್ಲಿ ತೊಡಗಿಸುತ್ತಿದ್ದರು. ಅಲ್ಲಿನ ಕೆಲಸಗಾರರ ಈ ಹೇಯ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ಹೇಸಿಯೆ ಕಮ್ಯುನಿಜಂನ ತಂದೆಯಾದ ಕಾರ್ಲ್ ಮಾರ್ಕ್ಸ್ ತನ್ನ ಕೂಲಿಕಾರಸರ್ವಾಧಿಕಾರದ ತತ್ವಜ್ಞಾನವನ್ನು ಕಲ್ಪಿಸಿದ.

ಅವನ ಶಿಷ್ಯರು ರಶಿಯದಲ್ಲಿ ಕೂಲಿಕಾರರ ಸ್ವರ್ಗ ಸ್ಥಾಪಿಸುವ ಭರವಸೆ ಕೊಟ್ಟು ರಾಜ್ಯ ಸ್ಥಾಪಿಸಿದರು. ಆದರೆ ಔದ್ಯೋಗಿಕ ಪ್ರಗತಿ ಬೇಗ ಬೇಗ ಆಗಬೇಕಾದರೆ ಹೆಚ್ಚು ಬಂಡವಾಳ ಬೇಕೆಂದು ಸ್ಟಾಲಿನ್ನನಿಗೆ ಗೊತ್ತಾಗಲು ತಡ ಹಿಡಿಯಲಿಲ್ಲ. ಇಂಗ್ಲಂಡಿನ ಬಂಡವಾಳಗಾರರು ಮಾಡಿದ್ದನ್ನೇ ಅವನು ಹತ್ತು ಪಟ್ಟು ಉಗ್ರವಾಗಿ ಮಾಡಿದ. ಅವನು ಪ್ರೋತ್ಸಾಹನೆ ಮತ್ತು ಬಲಾತ್ಕಾರದಿಂದ ಕೆಲಸಗಾರರನ್ನು ಹೆಚ್ಚು ದುಡಿಸಿದ, ಕಡಿಮೆ ಸಂಬಳ ಕೊಟ್ಟ; ಸಾವಿರಗಟ್ಟಳೆ ಜನರನ್ನು ರಾಜಕೀಯದ ನೆವದಲ್ಲಿ ಬಂಧಿಸಿ ಬಲವಂತದ ಶ್ರಮದಲ್ಲಿ— ಸಂಬಳವೇ ಇಲ್ಲದೆ!— ತೊಡಗಿಸಿದ; ಅನುಕೂಲಸ್ಥ ರೈತರನ್ನು ಕೊಂದು ಅವರ ಭೂಮಿಯನ್ನು ಪರಿಹಾರವಿಲ್ಲದೆ ಕಸಿದುಕೊಂಡು, ರೈತರು ತಾನು ಹೇಳಿದ ಬೆಲೆಗೆ ಆಹಾರ ಧಾನ್ಯಗಳನ್ನು ಸರಕಾರಕ್ಕೆ ಪೂರೈಸುವ ಹಾಗೆ ಒತ್ತಾಯಿಸಿದ. ಹೀಗೆ ಕೂಡಿಸಿದ ಉಳಿತಾಯವನ್ನು ಬಂಡವಾಳ ಮಾಡಿ ಅದರಿಂದ ರಶಿಯದ ಪ್ರಚಂಡ ಔದ್ಯೋಗಿಕ ಸಾಮ್ರಾಜ್ಯವನ್ನು ಕಟ್ಟಿದ. ಇಂಗಂಡಿನ ಕಳೆದ ಶತಮಾನದ ಬಂಡವಾಳಗಾರರಿಗೂ ಸ್ಟಾಲಿನ್ನನಿಗೂ ಅಂತರ ಇಷ್ಟೇ: ಆ ಬಂಡವಾಳಗಾರರು ಖಾಸಗಿಯಾಗಿ ಹೆಚ್ಚು ದುಡಿಸಿ ಕಡಿಮೆ ಸಂಬಳ ಕೊಟ್ಟು "ಲಾಭ" ಮಾಡಿ ಖಾಸಗಿಯಾಗಿಯೆ ಉದ್ಯೋಗಗಳನ್ನು ಬೆಳಸಿದರು. ಸ್ಟಾಲಿನ್ನನ ಸರಕಾರ ಇಡೀ ದೇಶಕ್ಕೆ ಐಕೈಕ ಬಂಡವಾಳಗಾರನಾಗಿ "ಲಾಭ" ವೆಂಬ ಶಬ್ದದ ಬದಲಿಗೆ "ಉಳಿತಾಯ" ಎಂಬುದನ್ನುಪಯೋಗಿಸಿ ಅದನ್ನೇ ಹೆಚ್ಚು ತ್ವರಿತವಾಗಿ ಪೂರೈಸಿದ— ಏಕೆಂದರೆ ಅವನ ಹತ್ತಿರ ಅವರಿಗಿಲ್ಲದ ಅಧಿಕಾರವಿತ್ತು.

ಇಂದು ಚೀನ ಅದನ್ನೇ ಮಾಡುತ್ತಿದೆ. ರಶಿಯದತ್ತ ಅಥವಾ ಚೀನದತ್ತ ನೋಡಿ ಸುಖಮಯ ಜೀವನವನ್ನು ಕನವರಿಸಿ ಜೊಲ್ಲು ಸುರಿಸುವವರು ಈ ಅಂಶವನ್ನು ಮರೆಯುತ್ತಾರೆ ಇಲ್ಲವೆ ಮರೆಮಾಚುತ್ತಾರೆ. ಇಂಗ್ಲಂಡಿನ ಬಂಡವಾಳಗಾರರನ್ನಾಗಲಿ ಸ್ಟಾಲಿನ್ನನನ್ನಾಗಲಿ ಮಾವೊ ತ್ಸೆ ತುಂಗನನ್ನಾಗಲಿ ದೂರಿ ಫಲವಿಲ್ಲ. ಬಂಡವಾಳವಿಲ್ಲದೆ ಪ್ರಗತಿ ಇಲ್ಲ ಎಂಬ ಸತ್ಯವನ್ನು ಕಮ್ಯುನಿಜಂ ಕೂಡ ಬದಲಿಸಲಾರದು. ಬಂಡವಾಳ ಕೂಡ ಬೇಕಾದರೆ ಉಳಿತಾಯ ಬೇಕು; ಉಳಿತಾಯವೆಂದರೆ ಲಾಭ; ಲಾಭವೆಂದರೆ ಹೆಚ್ಚು ಕೆಲಸ, ಕಡಿಮೆ ಸಂಬಳ—ಅರೆಹೊಟ್ಟೆ. ಖಾಸಗಿ ಬಂಡವಾಳಗಾರರಾದರೂ ಅಷ್ಟೇ; ಸರಕಾರವೇ ಬಂಡವಾಳಗಾರನಾದರೂ ಅಷ್ಟೇ.

ಬಂಡವಾಳ ಸಂಗ್ರಹದಲ್ಲಿ ಶ್ರಮಜೀವಿಗಳ ಪಾತ್ರ ವಿಶೇಷವಾಗಿಲ್ಲ; ಅದು ಬಂಡವಾಳ ತೊಡಗಿಸುವವನ ಸಾಹಸ ಮತ್ತು ಹಣದಿಂದಲೆ ಹೆಚ್ಚಾಗಿ ಸಾಧಿಸತಕ್ಕದ್ದು. ಉತ್ಪಾದನೆ ಹೆಚ್ಚಲು ಯಂತ್ರಗಳು ಕಾರಣವಾಗಿವೆ. ಯಂತ್ರಗಳನ್ನು ಹಾಕಲು ಬಂಡವಾಳ ಅನಿವಾರ್ಯ, ಬಂಡವಾಳ ಲಾಭದ ಮಗು.

ಕಡಿಮೆ ಸಂಬಳ, ಅತಿಯಾದ ದುಡಿತ ಇವುಗಳ ದೆಸೆಯಿಂದಲೇ ಅಮೇರಿಕ ಯುರೋಪುಗಳ ಅಭಿವೃದ್ಧಿಗೆ ತಳಪಾಯ ಹಾಕಲಾಯಿತು. ಇತರ

ದೇಶಗಳಲ್ಲಿಯೂ ಹಾಗೆಯೆ ಆಗಬೇಕಷ್ಟೇ. ಬೆವರು, ಅರೆಹೊಟ್ಟೆ ಇವೇ ಅಭಿವೃದ್ಧಿಗೆ ಅಡಿಗಲ್ಲು. ಇದು ದುರದೃಷ್ಟದ ಸಂಗತಿ ನಿಜ; ಆದರೆ ಇದು ಹೊರತು ಬೇರೆ ದಾರಿಯಿಲ್ಲ.

ರೋಗ, ಬಡತನ, ನಿರಕ್ಷರತೆ ಇವುಗಳ ಅಸ್ತಿತ್ವ ವಿಷಾದಕರವಾದದ್ದು. ಆದರೆ ಕಲ್ಪನಾವಿಲಾಸದಿಂದ, ಭಾಷಣಗಳಿಂದ ಅವುಗಳನ್ನು ಓಡಿಸಲು ಸಾಧ್ಯವಿಲ್ಲ. ಕೆಲಸ ಮತ್ತು ಲಾಭ ಇವು ಮಾತ್ರ ತಾರಕವಾದಾವು. ಆದರೆ ಹಿಂದುಳಿದ ದೇಶಗಳಿಗೆ ಅಕ್ಕನೂ ಬರಬೇಕು, ಅಕ್ಕಿಯೂ ಉಳಿಯಬೇಕೆಂಬ ಮನೋವೃತ್ತಿ ಉಂಟಾಗಿದೆ. ಅಲ್ಲಿನ ಜನರಿಗೆ ಕೈತುಂಬ ಸಂಬಳವೂ ಬೇಕು, ಸಾಮಾಜಿಕ ಕಲ್ಯಾಣದ ಭಾರೀ ಯೋಜನೆಗಳೂ ಬೇಕು ಮತ್ತು ಸಂಗಡಲೇ ಶೀಘ್ರ ಔದ್ಯೋಗಿಕ ಅಭಿವೃದ್ಧಿಯೂ ಬೇಕು! ಇದು ಹಿಂದೆ ಸಾಧ್ಯವಾಗಿಲ್ಲ, ಮುಂದೆಯೂ ಆಗುವ ಮಾತಲ್ಲ.



ನನ್ನ ಕರವಸ್ತ್ರ ಎಲ್ಲಿ ಹೋಯಿತು?

ಈ ಮನೋವೃತ್ತಿಯನ್ನು ಆಚರಣೆಗೆ ತರಹೋದದ್ದರಿಂದಲೇ ಹಿಂದುಳಿದ ದೇಶಗಳು ಅತಿ ಪ್ರಸರಣಕ್ಕೆ ತುತ್ತಾಗಿವೆ. ಅತಿಪ್ರಸರಣವೂ ಬಂಡವಾಳ ಸಂಗ್ರಹದ ಒಂದು ಉಪಾಯವೆಂದು ಕೆಲ ಅರ್ಥಶಾಸ್ತ್ರಿಗಳು ಹೇಳುವುದು ಅತಿ ನಿಜ. ಪ್ರಸರಣದಿಂದ ಸಾಮಾನ್ಯ ಜನರ ಕೈಲಿದ್ದ ಸಂಪತ್ತನ್ನು ಅವರಿಗೆ ತಿಳಿಯದಂತೆ ಕಸಿದುಕೊಳ್ಳಲಾಗುತ್ತದೆ. ಇದು ಕೆಲವರ ಕೈಸೇರಿ ಬಂಡವಳವಾಗುತ್ತದೆ. ಆದರೆ ಇದು ಬಂಡವಾಳ ಸಂಗ್ರಹದ ಹೇಯ ಕ್ರಮವಾಗಿದ್ದು ಜನರ ಅಸಂತುಷ್ಟಿ ಮತ್ತು ಕೊನೆಗೆ ಆರ್ಥಿಕ ಕೋಲಾಹಲಕ್ಕೆ ಕಾರಣವಾಗುತ್ತದೆ.

ಒಮ್ಮೆ ಸಾಕಷ್ಟು ಬಂಡವಾಳ ಶೇಖರವಾಗಿ ಉತ್ಪಾದನೆ ಹೆಚ್ಚಿತೆಂದರೆ ಆ ಮೇಲೆ ಉನ್ನತ ಜೀವನ ಮಟ್ಟ, ಧಾರಾಳ ಸಂಬಳ, ಸಾಮಾಜಿಕ ಕಲ್ಯಾಣ ಇವೆಲ್ಲವೂ ಸಾಧ್ಯವಾಗುವವು. ಇಂದು ಅತ್ಯುತ್ತಮ ಜೀವನ ಮಟ್ಟ, ಶ್ರೇಷ್ಠ ಸಾಮಾಜಿಕ ಕಲ್ಯಾಣ ವ್ಯವಸ್ಥೆ, ಸಾಮಾಜಿಕ ನ್ಯಾಯ ಇವನ್ನು ಅನುಭವಿಸುತ್ತಿರುವ ದೇಶಗಳೆಲ್ಲ ಈ ಕಷ್ಟದ ದಾರಿಯಿಂದಲೇ ಹಾಯ್ದು ಬಂದಿವೆ.

ಈ ತ್ರಿಕಾಲಸತ್ಯವನ್ನು ಮರೆಮಾಚಿ ಕೆಲವು ಮುಂದಾಳುಗಳು ನಾನಾ ತರದ ಆರ್ಥಿಕ ರಾಮಬಾಣೋಪಾಯಗಳನ್ನು ಸೂಚಿಸುತ್ತಾರೆ; ಅವು ವ್ಯರ್ಥವಾದಾಗ ಹೊಸ ಉಪಾಯಗಳನ್ನು ಸೂಚಿಸಲಾಗುತ್ತದೆ. ಈ ನಡುವೆ ವೇಳೆ ಹಾಳಾಗುಗುತ್ತದೆ; ಜನಸಂಖ್ಯೆ ಹೆಚ್ಚುತ್ತದೆ; ಸಮಸ್ಯೆ ಇನ್ನೂ ಗಡುಚಾಗುತ್ತದೆ. *

ನಗೆಮಲ್ಲಿಗೆ

ಅದೇ ತಾನೆ ಸೈನ್ಯಕ್ಕೆ ಸೇರಿದ್ದವರ ಕವಾಯತು ನಡೆದಿತ್ತು. ಹವಾಲದಾರ "ಬಲಕ್ಕೆ ತಿರುಗಿರಿ, ಎಡಕ್ಕೆ ತಿರುಗಿರಿ, ಬಲಕ್ಕೆ ತಿರುಗಿರಿ" ಎಂದು ಸರಸರ ಹೇಳುತ್ತಿದ್ದ.

ಆಗ ಒಬ್ಬ ಸೈನಿಕ ಸಾಲನ್ನು ಬಿಟ್ಟು ಹೊರಡಲು ಹವಾಲದಾರ "ಯಾಕೆ?" ಎಂದು ಗದರಿಸಿದ.

ಆ ಸೈನಿಕ, "ಹವಾಲದಾರ ಸಾಹೇ-ಬರೇ, ನಾವು ಯಾವ ದಿಕ್ಕಿಗೆ ತಿರುಗಬೇಕು ಎಂದು ನೀವು ನಿರ್ಧಾರ ಮಾಡಿಕೊಂಡು ಬಂದ ನಂತರ ನಾನು ಕವಾಯತಿಗೆ ಬರುತ್ತೇನೆ" ಎಂದ.

*

ಅಮೇರಿಕೆಯ ಸುಪ್ರಸಿದ್ಧ ಲೇಖಕರಾದ ಮಾರ್ಕ್ ಟ್ವೈನರ ಮನೆಯಲ್ಲಿ ಒಮ್ಮೆ ದೊಡ್ಡ ಕಳವಾಯಿತು. ಮರುದಿನವೇ ಅವರು ತಮ್ಮ ಮನೆಯ ಮುಂದೆ ಒಂದು ಬೋರ್ಡು ಬರೆಯಿಸಿ ಹಾಕಿದರು:

"ಈ ಮನೆಯಲ್ಲಿ ಕಳವು ಮಾಡತಕ್ಕಂಥ ಒಂದೇ ಒಂದು ವಸ್ತು ಉಳಿದಿದೆ. ಅದೆಂದರೆ ಬೆಳ್ಳಿಯ ತಾಟು. ಅದನ್ನು ಅಡುಗೆ ಮನೆಯಲ್ಲಿ ಕಪಾಟಿನ ಮೇಲಿನ ಖಾನೆಯಲ್ಲಿ ಇಡಲಾಗಿದೆ. ಅದರ ಬಳಿಗೆ ಬೆಕ್ಕಿನ ಮರಿಗೆ ಎಂದು ಸಣ್ಣದೊಂದು ಗಾದಿ ಇಡಲಾಗಿದೆ. ತಮಗೆ ಆ ಗಾದಿಯನ್ನು ಕೂಡ ಕಳವು ಮಾಡುವ ವಿಚಾರವಿದ್ದಲ್ಲಿ ದಯವಿಟ್ಟು ಬೆಕ್ಕಿನ ಮರಿಯನ್ನೂ ಒಂದು ಅರಿವೆಯಲ್ಲಿ ಸುತ್ತಿಟ್ಟು ಒಯ್ಯಬೇಕು. ಅದರಂತೆ ದಯಮಾಡಿ ಸಪ್ಪಳ ಮಾಡಬಾರದು. ಏಕೆಂದರೆ ಮನೆಯ ಮಂದಿ ಎಚ್ಚರವಾದಾರು. ಹಾಗೆಯೇ ಹೋಗುವಾಗ್ಗೆ ಬಾಗಿಲು ಹಾಕಿಕೊಂಡು ಹೋದಲ್ಲಿ ಮಹದುಪಕಾರವಾಗುವುದು."

ಮುಂದೆ ಅವರ ಮನೆಯಲ್ಲಿ ಎಂದೂ ಕಳವಾಗಲಿಲ್ಲ.

—ಸಂಜೀವ ಲಕ್ಷ್ಮೇಶ್ವರ, ಮುಂಬಯಿ

*

ಮುದುಕ: ಡಾಕ್ಟ್ರೇ ನನ್ನ ಎಡಕಿವಿ ನೋವು.

ಡಾಕ್ಟ್ರ: ಪ್ರಾಯದ ದೆಸೆಯಿಂದ ಹಾಗಾಗಲು ಸಾಧ್ಯವಿದೆ.

ಮುದುಕ: ಛೆ! ಛೆ! ಅದು ಸಾಧ್ಯವಿಲ್ಲ. ಅದೇ ಪ್ರಾಯದ ಬಲಗಿವಿ ಚೆನ್ನಾಗಿಯೇ ಇದೆಯಲ್ಲಾ?

— ಹ. ಚಾ. ಪ್ರಭು

*

ದೀಪವಿಲ್ಲದೆ ಸೈಕಲ್ ಹೊಡೆದದ್ದಕ್ಕಾಗಿ ಶಿಕ್ಷಕರೊಬ್ಬರ ವಿಚಾರಣೆ ನಡೆದಿತ್ತು. ಶಿಕ್ಷಕರು ಮ್ಯಾಜಿಸ್ಟ್ರೇಟರಿಗೆ "ಸ್ವಾಮಿ, ನಾನು ಶಾಲೆಗೆ ಹೋಗಬೇಕು. ಬೇಗ ವಿಚಾರಣೆ ಮುಗಿಸಬೇಕಾಗಿ ವಿನಂತಿ" ಎಂದರು.

ಆಗ ಮ್ಯಾಜಿಸ್ಟ್ರೇಟರು "ವ್ಹಾ! ನೀವು ಶಿಕ್ಷಕರೇ? ಸರಿ. ಈಗ ೨೫ ವರ್ಷಗಳಿಂ-ದಲೂ ಇಂಥ ಸುಸಂಧಿಗಾಗಿ ಕಾಯುತ್ತಿದ್ದೆ. ಅಲ್ಲಿ ಆ ಮೂಲೆಯಲ್ಲಿ ಕುಳಿತು 'ನನ್ನ ಸೈಕಲ್ಲಿಗೆ ದೀಪವಿರಲಿಲ್ಲ' ಎಂದು ೫೦೦ ಸಲ ಬರೆಯಿರಿ. ಅದೇ ನಿಮಗೆ ನಾನು ವಿಧಿಸುವ ಶಿಕ್ಷೆ" ಎಂದರು.

ಕುಲೀನ ರಕ್ತ ಎಂಬುದು ಶುದ್ಧ ಸುಳ್ಳು!

ರಕ್ತದ ಬಗ್ಗೆ ನಿಮಗೇನು ಗೊತ್ತಿದೆ?

ಆರ್. ಕೆ. ನಾಯಕ

ಅದು ಅವನ ರಕ್ತಗುಣ, ಎನ್ನುತ್ತಾರಲ್ಲ ಅದು ಎಷ್ಟರ ಮಟ್ಟಿಗೆ ನಿಜ? ರಕ್ತಗುಣ ಎನ್ನುವಾಗ ತಂದೆ-ತಾಯಿಗಳಿಂದ ಬಂದ ಗುಣ ಎಂದು ಅರ್ಥವಿದೆ. ಆದರೆ ನಿಜವಾಗಿ ತಂದೆ-ತಾಯಿಗಳ ಗುಣ ಮಕ್ಕಳಲ್ಲಿ ಕಂಡು ಬರುವುದಾದರೂ ಅದಕ್ಕೂ ರಕ್ತಕ್ಕೂ ಸಂಬಂಧವೇ ಇಲ್ಲ. ತಾಯಿಯ ಗರ್ಭದಲ್ಲಿ ಶಿಶು ಬೆಳೆಯುವುದಾದರೂ ತಾಯಿಯ ರಕ್ತದ ಒಂದು ಹನಿ ಕೂಡ ಮಗುವಿನ ರಕ್ತದಲ್ಲಿ ಸೇರಿರುವುದಿಲ್ಲ. ತಾಯಿ ಮತ್ತು ಮಗುವಿನ ರಕ್ತ ಬೇರೆ ಬೇರೆಯೆ ಆಗಿದ್ದು ಅವರೀರ್ವರ ರಕ್ತದ ಗುಣಧರ್ಮ ಬೇರೆಬೇರೆಯೆ ಆಗಿರುವುದೇ ಹೆಚ್ಚು.

ರಕ್ತದ ಪರೀಕ್ಷೆಯಿಂದ ಮನುಷ್ಯ ಉಚ್ಚ ಕುಲದವನೇ, ಹೀನ ಕುಲದವನೇ, ಭಾರತೀಯನೇ, ಆಂಗ್ಲನೇ ಎಂದು ಹೇಳಬಹುದೇ? ಇಲ್ಲ. ಅವನ ಧಮನಿಗಳಲ್ಲಿ ರಜಪೂತರ ರಕ್ತ ಹರಿಯುತ್ತದೆ ಎಂಬುದು ಸಾಹಿತ್ಯದಲ್ಲಿ ರೋಚಕವಾಗಿರಬಹುದಾದರೂ ವಾಸ್ತವದಲ್ಲಿ ಸತ್ಯವಲ್ಲ. ಆದರೆ ರಕ್ತದ ಪರೀಕ್ಷೆಯ ಮೇಲಿಂದ ಅಪರಾಧಿಗಳನ್ನು ಪತ್ತೆ ಹಚ್ಚಿದ ದಾಖಲೆಗಳುಂಟು. ಇತ್ತೀಚೆಗೆ ಇಂಗ್ಲಂಡಿನಲ್ಲಿ ಒಬ್ಬನಿಗೆ ಶಿಕ್ಷೆಯಾಯಿತು. ಆತನ ಮೇಲೆ ಇತರರಿಗೆ ಬೆದರಿಕೆಯ ಪತ್ರಗಳನ್ನು ಬರೆದು ಹಣ ಎಬ್ಬಿಸುತ್ತಿದ್ದ ಆರೋಪವಿತ್ತು. ಸಾಕ್ಷಿಗಾಗಿ ಕರೆಸಿದ ಒಬ್ಬ ವಿಜ್ಞಾನಿ ಪ್ರತಿ ನಾಲ್ಕು ಜನರಲ್ಲಿ ಮೂವರ ಲಾಲಾರಸದಲ್ಲಿ ಅವರ ರಕ್ತದ ಗುಣಗಳು ಕಾಣಿಸುತ್ತವೆ ಎಂದ. ಆರೋಪಿಯ ರಕ್ತ "ಅ" ಪಂಗಡದ್ದಾಗಿತ್ತು. ಆತ ಕವರುಗಳನ್ನು ಬಂದು ಮಾಡಲು ಹಚ್ಚಿದ್ದ ಉಗುಳಿನಲ್ಲಿ 'ಅ' ಪಂಗಡದ ರಕ್ತದ ಗುಣಗಳೇ ಇದ್ದವು. ಆರೋಪ ಸಿದ್ಧವಾಗಿ ಅವನಿಗೆ ಶಿಕ್ಷೆಯಾಯಿತು.

ರಕ್ತವೆಂದರೇನು ಎಂದು ಅರ್ಥ ಮಾಡಿಕೊಳ್ಳಬೇಕಾದರೆ ಮಹಾಸಾಗರವನ್ನು ನೋಡಬೇಕು. ಅಲ್ಲಿ ಕೋಶಗಳ ಒಂದು ಅಥವಾ ಎರಡು ಪದರುಗಳಿಂದ ಹುಟ್ಟಿದ ಜೀವಿಗಳಿವೆ. ಇವು ತಮ್ಮ ಆಹಾರವನ್ನು ನೇರವಾಗಿ ನೀರಿನಿಂದ ಪಡೆದು ತಮ್ಮ ದೇಹದ ಮಲವನ್ನು ನೀರಿನ ಮೂಲಕವಾಗಿಯೆ ಹೊರಚೆಲ್ಲುತ್ತವೆ. ಮನುಷ್ಯನ ದೇಹವು ಅಂಗಸತ್ವ (Tissue) ಗಳ ಪದರುಗಳ ಮೇಲೆ ಪದರುಗಳಿಂದ ಮಾಡಿದ್ದಾಗಿದೆ; ದೇಹದಲ್ಲಿ ಆಳದಲ್ಲಿ ಇರುವ ಜೀವಕೋಶ (ಕಣ) ಗಳಿಗೆ ಆಹಾರ ಸಿಗುವುದು ಹೇಗೆ? ರಕ್ತದಿಂದ ಎಂದು ನಿಸರ್ಗ ಯೋಜಿಸಿದೆ. ರಕ್ತವು ಪ್ರತಿಯೊಂದು ಕೋಶವನ್ನೂ ಒಂದು ದ್ರವದಲ್ಲಿ ಮೀಯಿಸುತ್ತದೆ. ಜೀವವನ್ನು ಬದುಕಿಸಲು ಅವಶ್ಯವಿರುವಷ್ಟು ಶಾಖ ಮತ್ತು ರಸಾಯನಗಳ ಮಿಶ್ರಣ ಈ ದ್ರವದಲ್ಲಿರುವುದು. ಸಾಮಾನ್ಯ ಮನುಷ್ಯನಲ್ಲಿ ಒಂದೂವರೆ ಗ್ಯಾಲನ್ನಿನಷ್ಟು ರಕ್ತವಿರುತ್ತದೆ.

ರಕ್ತವೆಂದರೆ ಕಣ ಮತ್ತು ಪ್ಲಾಸ್ಮಾ (ದ್ರವ ಪದಾರ್ಥ) ಗಳ ಸಮಪ್ರಮಾಣದ ಮಿಶ್ರಣ. ಪ್ಲಾಸ್ಮಾ ದೇಹದ ಕೋಶಗಳಿಗೆ ಕೊಬ್ಬು, ಸಕ್ಕರೆ, ಪ್ರೋಟೀನು ಮತ್ತು ವಿಟಾಮಿನ್ನುಗಳನ್ನು ಒಯ್ಯುತ್ತದೆ. ಅದೇ ಕಾಲಕ್ಕೆ ಅದು ಮೂತ್ರ ಮತ್ತು ಇತರ ಹೊಲಸನ್ನು ಹೊರಹಾಕಿ ಯಕೃತ್ತಿನಂಥ ಕೋಶಾಗಾರಗಳಿಗೆ ಹೆಚ್ಚಿನ ಆಹಾರ ಸಾಮಗ್ರಿಯನ್ನು ಮುಟ್ಟಿಸುತ್ತದೆ.

ಪ್ಲಾಸ್ಮಾದಲ್ಲಿ ಬಗೆ ಬಗೆಯ ಕಣಗಳು ತೇಲುತ್ತಿರುವವು. ಅಚ್ಚ ಕೆಂಪು ಬಣ್ಣದ ಕಣಗಳು ಮತ್ತು ರೋಗಜಂತುಗಳೊಡನೆ ಕಾದಾಡುವ ಬಿಳಿಯ ಕಣಗಳಿವೆ. ಯಕೃತ್ತು, ಹೊಟ್ಟೆ, ಪ್ಲೀಹ, ಎಲುಬಿನ ಪೊಳ್ಳಿನಲ್ಲಿರುವ ಮಜ್ಜೆ ಮೊದಲಾದವು ಈ ಕಣಗಳನ್ನು ತಯಾರಿಸಲು ಒಟ್ಟಾಗಿ ದುಡಿಯುತ್ತವೆ.

ದೇಹದ ಕೋಶಗಳಿಗೆ ಬೇಕಾಗುವ ಪ್ರಾಣವಾಯುವನ್ನು ರಕ್ತದ ಕೆಂಪು ಕಣಗಳೇ ಮುಟ್ಟಿಸುತ್ತವೆ. ಕಬ್ಬಿಣದ ಅಂಶವುಳ್ಳ ಹೆಮೊಗ್ಲೊಬಿನ್ ಎಂಬ ದ್ರವ್ಯವು ಅದರ ಕೆಂಪುತನಕ್ಕೆ ಕಾರಣ. ಪುಪ್ಫುಸದಿಂದ ದೇಹದ ಕೋಶಗಳಿಗೆ ಪ್ರಾಣವಾಯುವನ್ನು ಸುಮಾರು ಮೂರೂವರೆ ಕೋಟಿ ಕೋಟಿ ಕೆಂಪು ಕಣಗಳು ಪೂರೈಸುತ್ತಲಿರುತ್ತವೆ. ಪ್ರಾಣ ವಾಯುವನ್ನು ಮುಟ್ಟಿಸಿ ತಿರುಗಿ ಬರುವಾಗ ಇವು ಅಂಗಾರಾಮ್ಲ ವಾಯುವನ್ನು ತರುತ್ತವೆ. ಪ್ರತಿಯೊಂದು ಕೆಂಪು ಕಣವು ಸುಮಾರು ನಾಲ್ಕು ತಿಂಗಳ ಕಾಲ ಮಾತ್ರ ಜೀವಿಸಿರುವುದರಿಂದ ಪ್ರತಿ ಸೆಕಂದಿಗೆ ೮ ಕೋಟಿಯಷ್ಟು ಹೊಸ ಕಣಗಳನ್ನು ಎಲುಬಿನ ಪೊಳ್ಳುಗಳಲ್ಲಿರುವ ಮಜ್ಜೆಯು ರಕ್ತ ಪ್ರವಾಹದಲ್ಲಿ ಸುರಿಯುತ್ತಿರುತ್ತದೆ.

ನಿಮ್ಮ ದೇಹದಲ್ಲಿರುವ ಕೆಂಪು ಕಣಗಳ ಸಂಖ್ಯೆ ನಿಮ್ಮ ಲಿಂಗ, ವಾಸಸ್ಥಾನ, ಚಟುವಟಿಕೆ ಮತ್ತು ವಯಸ್ಸುಗಳನ್ನವಲಂಬಿಸಿವೆ. ನೀವು ನಿದ್ದೆ ಮಾಡುವಾಗ ರಕ್ತದ ಕೆಂಪು ಕಣಗಳ ಸಂಖ್ಯೆ ಕಡಿಮೆಯಾಗುತ್ತದೆ; ನೀವು ಎಚ್ಚತ್ತಾಗ ಹೆಚ್ಚತೊಡಗಿ ಜಾಗೃತಾವಸ್ಥೆಯಲ್ಲಿ ನೂರಕ್ಕೆ ೫ ರಷ್ಟು ಹೆಚ್ಚುವುದು. ಹುಟ್ಟಿದಾಗ ಶಿಶುವಿನ ರಕ್ತದ ಪ್ರತಿ ಹನಿಯಲ್ಲಿ ಪ್ರೌಢನಲ್ಲಿರುವುದಕ್ಕಿಂತ ಹೆಚ್ಚು ಕೆಂಪು ಕಣಗಳಿರುತ್ತವೆ. ಎರಡು ವಾರಗಳ ನಂತರ ಅದು ಕಡಿಮೆಯಾಗುತ್ತ ಹೋಗುತ್ತದೆ.

ಸಾಮಾನ್ಯವಾಗಿ ಗಂಡಸರಲ್ಲಿ ಹೆಂಗಸರಿಗಿಂತ ನೂರಕ್ಕೆ ೭॥ ಯಷ್ಟು ಹೆಚ್ಚು ಕಣಗಳಿರುತ್ತವೆ. ಗುಡ್ಡ ಹತ್ತುವಾಗ ಕೆಂಪು ಕಣಗಳ ಸಂಖ್ಯೆ ಹೆಚ್ಚುತ್ತದೆ. ಇದಕ್ಕೆ ಕಾರಣ ಮೇಲೇರಿದಂತೆ ಗಾಳಿಯಲ್ಲಿ ಪ್ರಾಣವಾಯು ಅಂಶ ಕಡಿಮೆಯಾಗಿ ಇದ್ದ ಪ್ರಾಣವಾಯುವನ್ನು ಹಿಡಿದುಕೊಳ್ಳಲು ಹೆಚ್ಚು ಕಣಗಳು ಬೇಕಾಗುತ್ತವೆ. ವ್ಯಾಯಾಮ ಮಾಡುವಾಗ ಮತ್ತು ವಿಪರೀತ ಉದ್ರಿಕ್ತರಾದಾಗ ಸಹ ಹಾಗಾಗುತ್ತದೆ.

ರಕ್ತದ ಬಿಳಿ ಕಣಗಳಲ್ಲಿ ಹೆಮೊಗ್ಲೊಬಿನ್ ಇರುವುದಿಲ್ಲ. ಕೆಂಪು ಮತ್ತು ಬಿಳಿ ಕಣಗಳ ಸಂಖ್ಯಾ ಪ್ರಮಾಣ ೬೦೦:೧ ಇದ್ದರೂ ಬಿಳಿ ಕಣಗಳು ಕೂಡ ಅಷ್ಟೇ ಮಹತ್ವದವಾಗಿವೆ. ನಿಮ್ಮ ಬೆರಳು ಕೊಯ್ದಿತೆನ್ನಿರಿ. ಆಗ ಆ ಗಾಯದ ಮೂಲಕ ರೋಗಜಂತುಗಳು ದೇಹವನ್ನು ಪ್ರವೇಶಿಸುವ ಸಂಭವ ಹೆಚ್ಚುತ್ತದೆ. ಇಂಥ ಸಮಯದಲ್ಲಿ ಆ ಗಾಯವಾದ ಸ್ಥಳಕ್ಕೆ ಬಿಳಿ ಕೋಶಗಳು ಧಾವಿಸಿ ಗಾಯದ ಸ್ಥಳಕ್ಕೆ ಮುತ್ತಿಗೆ ಹಾಕಿ ರೋಗಜಂತುಗಳನ್ನು "ನುಂಗಿ" ಗಾಯ ಮಾಯಲು ಸಹಾಯ ಮಾಡುತ್ತವೆ.

ಅವುಗಳ ಸಂಖ್ಯೆ ಹೆಚ್ಚು ಕಡಿಮೆಯಾಗುತ್ತಲೆ ಇರುತ್ತದೆ. ಗರ್ಭಿಣಿಯರ ಒಂಬತ್ತನೆಯ ತಿಂಗಳಲ್ಲಿ ಇವು ಅಸಂಖ್ಯವಾಗಿ ಸನ್ನದ್ಧವಾಗಿ ನಿಂತು ಹೆರಿಗೆಯ ಬೇನೆ ಶುರುವಾದೊಡನೆ ಮೇಲಕ್ಕೆ ಧಾವಿಸುತ್ತವೆ. ಅಪೆಂಡಿಸೈಟಿಸ್ ಅಥವಾ ನ್ಯುಮೋನಿಯದಂಥ ರೋಗ ಪ್ರಸಂಗಗಳಲ್ಲಿ ಇವು ತಮ್ಮ ಸಂಖ್ಯೆಯನ್ನು ಎರಡು ಮೂರು ಪಟ್ಟು ಹೆಚ್ಚಿಸಿಕೊಳ್ಳುತ್ತವೆ. ಇಂಥ

ಸಮಯದಲ್ಲಿ ಕಂಡುಬರುವ ಬಿಳಿ ಕೋಶಗಳ ಸ್ವರೂಪ ಮತ್ತು ಸಂಖ್ಯೆಯ ಮೇಲಿಂದ ಡಾಕ್ಟರರಿಗೆ ರೋಗದ ನಿದಾನ ಮತ್ತು ಕಠಿನ ಸ್ಥಿತಿ ತಿಳಿದು ಬರುತ್ತದೆ.

ಇತರ ಕಾರ್ಯಗಳ ಜೊತೆಯಲ್ಲಿ ಹಾರ್ಮೋನುಗಳನ್ನು ರಕ್ತವು ತನ್ನೊಂದಿಗೆ ಒಯ್ಯುತ್ತದೆ. ಆಡ್ರೆನಲ್, ಥೈರಾಯ್ಡ್ ಮೊದಲಾದ ಗ್ರಂಥಿಗಳಿಂದ ವಿವಿಧ ಹಾರ್ಮೋನುಗಳೆಂಬ ರಾಸಾಯನಿಕ ದ್ರವ್ಯಗಳು ಹುಟ್ಟುತ್ತವೆ. ನಮ್ಮ ಭಾವನೆಗಳ ಮೇಲೆ ಹಾರ್ಮೋನುಗಳು ಬೀರುವ ಪ್ರಭಾವ ಏನು ಎಂಬುದು ಇನ್ನೂ ಪೂರ್ಣವಾಗಿ ಗೊತ್ತಾಗಿರದಿದ್ದರೂ ನಮ್ಮ ಭಯ ಮತ್ತು ಉದ್ವೇಗಗಳಿಗೆ ಆಡ್ರೆನಲ್ ಗ್ರಂಥಿಗಳ ಸಂಬಂಧವಿದೆ. ಥೈರಾಯ್ಡ್ ಗ್ರಂಥಿಯ ವಿಶೇಷ ಚಟುವಟಿಕೆಯಿಂದ ಉದ್ರೇಕವುಂಟಾಗುತ್ತದೆ ಎಂಬುದು ತಿಳಿದಿದೆ.

ಹೆಂಗಸರ ಋತು ಕಾಲಕ್ಕೆ ಮೊದಲು ಗ್ರಂಥಿಗಳ ಉತ್ಪಾದನೆಯಲ್ಲಿ ಬದಲಾವಣೆಗಳಾಗುವುದರಿಂದಲೇ ಅವರಲ್ಲಿ ಉದ್ವೇಗ ಮೂಡುತ್ತದೆಂದು ಗೊತ್ತಾಗಿದೆ.

ಹೀಗಿದ್ದರೂ ಫ್ರೆಂಚ್ ರಕ್ತ, ಭಾರತೀಯ ರಕ್ತ, ಕಾಡು ರಕ್ತ ಎಂಬೆಲ್ಲ ಮಾತುಗಳಲ್ಲಿ ಏನೂ ಅರ್ಥವಿಲ್ಲ. ದೇಶ ದೇಶಗಳ ಜನರ ಮತ್ತು ವಿವಿಧ ವರ್ಗಗಳ ಜನರ ರಕ್ತ ಭಿನ್ನವಾಗಿರುತ್ತದೆ ಎಂದು ಈ ಮಾತುಗಳ ಅರ್ಥವಾಗುತ್ತದೆ. ಆದರೆ ವಿಜ್ಞಾನ ಇದು

— ಮಕ್ಕಳ ಮನರಂಜನೆ ಮತ್ತು ಜ್ಞಾನ ವಿಕಾಸಕ್ಕೆ —

ಅಂದ ಚೆಂದದ ಬಣ್ಣದ ಚಿತ್ರಗಳಿಂದ ಕೂಡಿದ ಮಕ್ಕಳ ಪುಸ್ತಕಗಳು

೧. ಕಾಗದದ ಪಾಪಚ್ಚಿ: ಕೇಂದ್ರಸರಕಾರದಿಂದ ಬಹುಮಾನಿತ ತಮಿಳಿನ ಅತ್ಯುತ್ತಮ ಮಕ್ಕಳ ಪುಸ್ತಕದ ಅನುವಾದ.
ಬೆಲೆ: ೧-೨೫ ಅನು: ಮುತ್ತೂರಕೃಷ್ಣಮೂರ್ತಿ

೨. ಬೇಟೆಗಾರನ ಮಗ: ದೇಶವಿದೇಶಗಳ ಜಾನಪದ ನೀತಿಕತೆಗಳ ಸಂಕಲನ.
ಬೆಲೆ; ೧-೨೫ ಅನು: ವಾಗೀಶ

೩. ಕಡಲದಡದದಲ್ಲಿ: ಬಣ್ಣದ ಚಿತ್ರಗಳಿಂದಲೇ ಕತೆ ನಿರೂಪಿಸಲ್ಪಟ್ಟ ಮುದ್ದಾದ ಮಕ್ಕಳ ಪುಸ್ತಕ. ರೂ. ೧-೫೦

೪. ರಾಜ ಮತ್ತು ಕಾಡುಕೋಣ: ಕಾಡು ಪ್ರಾಣಿಗಳ ಅನ್ಯೋನ್ಯ ಸಾಹಸ ಜೀವನದ ಕತೆ.
ರೂ. ೦-೯೦ ಅನು: ಜಿ. ಪಿ. ರಾಜರತ್ನಂ

೫. ನೀನೂ ವಿಜ್ಞಾನಿಯಾಗು: ಕೇಂದ್ರ ಸರಕಾರದಿಂದು ಮೆಚ್ಚುಗೆ ಗಳಿಸಿದ ಸರಳವಾದ ವೈಜ್ಞಾನಿಕ ಹೊತ್ತಿಗೆ.
ರೂ: ೦-೯೦ ಅನು: ಉಷಾದೇವಿ

ಈ ಪುಸ್ತಕಗಳು ತಮಿಳು-ತೆಲಗು-ಮಳೆಯಾಳದಲ್ಲಿಯೂ ದೊರೆಯುತ್ತವೆ.

ಪ್ರತಿಗಳಿಗೆ ಮತ್ತು ಪುಸ್ತಕ ಸೂಚೀ ಪತ್ರಕ್ಕೆ:

ದ. ಕನ್ನಡ ಜಿಲ್ಲೆ ಹೊರತಾಗಿ ಮೈಸೂರು ದೇಶದಾದ್ಯಂತ

ಉಷಾಪ್ರೆಸ್, ಹಳೇ ಪೋಸ್ಟ್ ಆಫೀಸು ರಸ್ತೆ, ಮೈಸೂರು

[ದಕ್ಷಿಣ ಭಾಷಾ ಸಂಸ್ಥೆಯ ಅಧಿಕೃತ ಮಾರಾಟಗಾರರು]

ದ. ಕನ್ನಡ ಜಿಲ್ಲೆಯಲ್ಲಿ **ಯು. ಆರ್. ಶೆಣೈ & ಸನ್ಸ್**

ರಥಬೀದಿ, ಮಂಗಳೂರು. ದ. ಕ.

ಸುಳ್ಳೆಂದು ಸಿದ್ಧಮಾಡಿದೆ. ಅರಸು ಮತ್ತು ಸಾಮಾನ್ಯರ ರಕ್ತದಲ್ಲಿ, ಬೇರೆ ಬೇರೆ ದೇಶಗಳ ಜನರ ರಕ್ತದಲ್ಲಿ ಮೂಲಭೂತವಾದ ಭಿನ್ನತೆಯೇನೂ ಇಲ್ಲವೆಂದು ಕಂಡುಬಂದಿದೆ. ತಂದೆ ತಾಯಿಗಳ ಗುಣಾವಗುಣಗಳು ಮಗುವಿಗೆ ಬರುವುದು ನಿಜ; ಆದರೆ ಅದಕ್ಕೂ ರಕ್ತಕ್ಕೂ ಸಂಬಂಧವಿಲ್ಲ. ತಂದೆ ತಾಯಿಗಳ ವೀರ್ಯಕಣ ಮತ್ತು ಅಂಡಗಳಲ್ಲಿರುವ ಜೀನ್ಸ್ ಎಂಬ ಸೂಕ್ಷ್ಮ ಅಂಶಗಳು ಗುಣಗಳನ್ನು ಮಗುವಿಗೆ ಸಾಗಿಸುತ್ತವೆ.

ಆದರೆ ರಕ್ತದಲ್ಲಿ ಬೇರೆ ಬೇರೆ ವರ್ಗ ಅಥವಾ ಪಂಗಡಗಳಿವೆಯೆಂಬುದು ನಿಜ. ನಿಮ್ಮ ರಕ್ತ ಯಾವ ಮಾದರಿಯದು? ಹಲವರ ರಕ್ತದಲ್ಲಿ ಅ ಮತ್ತು ಬ ಎಂಬ ಎರಡು ಬಗೆಯ ಪ್ರೋಟೀನುಗಳಿರುತ್ತವೆ. ನಿಮ್ಮ ರಕ್ತದಲ್ಲಿ ಕೇವಲ 'ಅ' ಮಾತ್ರ ಇದ್ದರೆ ಅದು 'ಅ' ಗುಂಪಿನದು. 'ಬ' ಮಾತ್ರ ಇದ್ದರೆ 'ಬ' ಗುಂಪಿನದು. ಎರಡೂ ಇದ್ದರೆ 'ಅ ಬ' ಗುಂಪಿನದು. ಎರಡೂ ಇಲ್ಲದಿದ್ದರೆ 'ಒ' ಗುಂಪಿನದು. ರಕ್ತದ ಮಾದರಿಯನ್ನು ನಿರ್ಧರಿಸುವ ಗುಣಗಳು ವೀರ್ಯ, ಲಾಲಾರಸ ಮತ್ತು ಎಲುಬಿನ ಪೊಳ್ಳುಗಳಲ್ಲೂ ಇರುವವು. ಪ್ರತಿಯೊಬ್ಬನ ರಕ್ತವೂ ಈ ನಾಲ್ಕರಲ್ಲಿ ಒಂದಿಲ್ಲ ಒಂದು ಪಂಗಡದ್ದಾಗಿರುತ್ತದೆ.

ರಕ್ತದ ವರ್ಗೀಕರಣವು ವಿಜ್ಞಾನದ ಮಹತ್ವದ ಶೋಧನೆಗಳಲ್ಲೊಂದಾಗಿದೆ. ಈ ಶತಮಾನದ ಆದಿಯಲ್ಲಿ ಲ್ಯಾಂಡ್ ಸ್ಟೈನರನು ಕಂಡುಹಿಡಿದ ಈ ತತ್ವವು ಲಕ್ಷಾಂತರ ಜನರ ಜೀವ ಉಳಿಸಿದೆ. ಏಕೆಂದರೆ ಈ ಶೋಧದ ಒಂದು ಮಹತ್ವದ ಅಂಶವೆಂದರೆ ಒಂದು ವರ್ಗದ ರಕ್ತವು ಇನ್ನೊಂದು ವರ್ಗದ ರಕ್ತದೊಡನೆ ಬೆರೆಯಲು ಒಪ್ಪುವುದಿಲ್ಲ. ಉದಾಹರಣೆಗಾಗಿ 'ಅ' ಗುಂಪಿನ ರಕ್ತವುಳ್ಳವನಿಗೆ 'ಒ' ಗುಂಪಿನವನ ರಕ್ತವನ್ನು ತುಂಬಿದರೆ ಮೊದಲನೆಯದು ಎರಡನೆಯದರಲ್ಲಿರುವ ಕೆಂಪು ಕಣಗಳ ಮೇಲೆ ದಾಳಿ ಮಾಡಿ ಅವನ್ನು ಹೆಪ್ಪುಗಟ್ಟಿಸಿಬಿಡುತ್ತದೆ. ಅದು ಸೂಕ್ಷ್ಮ ರಕ್ತನಾಳಗಳಲ್ಲಿ ಸೇರಿ ಮಾರ್ಗವನ್ನು ಬಂದು ಮಾಡಿಬಿಟ್ಟು ರೋಗಿಗೆ ಅಪಾಯವುಂಟು ಮಾಡುತ್ತದೆ. ಈ ತತ್ವವನ್ನರಿಯದೆ ಹಿಂದಿನ ಕಾಲದಲ್ಲಿ ಗಾಯ ಅಥವಾ ಇನ್ನಾವ ಕಾರಣದಿಂದ ರಕ್ತ ಕಡಿಮೆಯಾದ ರೋಗಿಗಳಿಗೆ ಸಿಕ್ಕವರ ರಕ್ತವನ್ನು ತೆಗೆದು ಇಂಜಕ್ಶನ್ ಕೊಡುತ್ತಿದ್ದುದರಿಂದ ಲಕ್ಷಾಂತರ ಜನರು ಪ್ರಾಣಕ್ಕೆರವಾಗುತ್ತಿದ್ದರು. ಈಗ ಆ ಅಪಾಯ ಉಳಿದಿಲ್ಲ.

ರಕ್ತದ ಬಗ್ಗೆ ವಿಜ್ಞಾನಕ್ಕೆ ಇಷ್ಟೆಲ್ಲ ತಿಳಿದಿದ್ದರೂ ಕೃತಕವಾಗಿ ರಕ್ತವನ್ನು ತಯಾರಿಸಲು ಮಾತ್ರ ಸಾಧ್ಯವಾಗಿಲ್ಲ. ಅದಿನ್ನೂ ನಿಸರ್ಗದ ಗುಟ್ಟಾಗಿದೆ. *



ರಾಮರಾಯ ಸೈಕಲ್ ಅಂಗಡಿಗೆ ಹೋಗಿ "ಮೂರು ಹೊಸ ಸೈಕಲ್ಲುಗಳು ಬೇಕು. ಬೆಲೆ ಎಷ್ಟಾಗುತ್ತೆ ಹೇಳಿ?" ಎಂದು ಕೇಳಿದ.

ಅಂಗಡಿಯವ ಮಂದಹಾಸ ಬೀರುತ್ತ "ತಮಗೆ ಮೂರು ಮಕ್ಕಳಿದ್ದಾರಂತ ಕಾಣುತ್ತೆ" ಎಂದ.

"ಇಲ್ಲ. ಹಗಲೆಲ್ಲ ಸೈಕಲ್ ಎರವಲು ಕೇಳುವ ಇಬ್ಬರು ನೆರೆಹೊರೆಯವರಿದ್ದಾರೆ" ಎಂದ ರಾಮರಾಯ ಗಂಭೀರವಾಣಿಯಲ್ಲಿ.

ಜೀವನವನ್ನು ರೂಪಿಸುವ ಕಲೆ

ಸುರೇಶ ಶರ್ಮಾ

ಅಂದು ನಾನು ಗಾಂಧೀಜಿಯವರ ಪ್ರಾರ್ಥನಾ ಸಭೆಗೆ ಹೋದಾಗ, ಅದೇ ನನ್ನ ಜೀವನದ ಕೊನೆಯ ದಿನವಾಗಬೇಕು ಎಂದು ನಿಶ್ಚಯಿಸಿದ್ದೆ. ಅದುವರೆಗೂ ನಾನು ಗಾಂಧೀಜಿಯವರನ್ನು ನೋಡಿರಲಿಲ್ಲವಾದ್ದರಿಂದ ಈ ಜಗತ್ತನ್ನು ಬಿಟ್ಟು ಹೋಗುವ ಮೊದಲು ಒಮ್ಮೆ ಅವರನ್ನು ನೋಡಿಬಿಡೋಣ ಎಂದು ಅನಿಸಿತು. ನನ್ನ ದೇಶದಲ್ಲಿಯೇ ಇದ್ದು ಮೃತರಲ್ಲಿ ಜೀವಚೈತನ್ಯವನ್ನು ತುಂಬುತ್ತ ದೇಶಾದ್ಯಂತ ಅಲೆದಾಡುವ ಈ ಮಹಾತ್ಮನನ್ನು ನಾನು ನೋಡಿಲ್ಲವಲ್ಲ ಎಂಬ ಕೊರಗು ನನ್ನಲ್ಲಿ ಇದ್ದಿತಾದ್ದರಿಂದ ಈ ಕೊನೆಯ ಗಳಿಗೆಯಲ್ಲಿಯಾದರೂ ನೋಡೋಣ ಎಂದು ನಿರ್ಧರಿಸಿದೆ.

ತಂದೆ-ತಾಯಿ, ಹೆಂಡತಿ ಮತ್ತು ಪೋಲೀಸ್ ಕಮೀಶನರರಿಗೆ ಪತ್ರಗಳನ್ನು ಬರೆದಿಟ್ಟಿದ್ದೆ. ಕೇವಲ ಅಂಚೆಗೆ ಹಾಕುವುದಷ್ಟುಳಿದಿತ್ತು. ಈಗೆರಡು-ಮೂರು ದಿನಗಳಿಂದ ಮನಸ್ಸು ಹಗುರಾಗಿತ್ತು, ಶುದ್ಧವಾಗಿತ್ತು. ಯಾರೊಂದಿಗೆ ಜಗಳಾಡುತ್ತಿದ್ದೆನೊ, ಯಾರೊಂದಿಗೆ ವೈಮನಸ್ಸಿತ್ತೊ, ಯಾರಿಗೆ ನನ್ನಿಂದ ತೊಂದರೆಯಾಗುತ್ತಿತ್ತೊ, ಅವರೆಲ್ಲರಲ್ಲಿ ಪತ್ರಮುಖೇನ ಕ್ಷಮಾಯಾಚನೆ ಮಾಡಿದ್ದೆ. ಕೊಡತೆಗೆದುಕೊಳ್ಳುವ ವ್ಯವಹಾರ ಮುಗಿಸಿದ್ದೆ. ಸಂಸಾರಬಂಧನ ಮತ್ತು ರಾಗದ್ವೇಷಗಳಿಂದ ಮುಕ್ತನಾದವನಂತಿದ್ದೆ. ನಾನು ಇಳಿದುಕೊಂಡಿದ್ದ ಹೊಟೆಲ್ಲಿನ ಕಿಟಕಿಯಿಂದ ಅನೇಕಾನೇಕ ಜನರ ಚಿಂತಾಯುಕ್ತ ಚಲನವಲನ, ಉತ್ಸಾಹ, ಜೀವನಕ್ಕಾಗಿ ಅವರು ನಡೆಸುತ್ತಿದ್ದ ಗುದ್ದಾಟ ಎಲ್ಲವನ್ನೂ ಕಂಡು ನನಗೆ ಅವರ ಬಗ್ಗೆ ಮರುಕ ಹುಟ್ಟುತ್ತಿತ್ತು, ಅದರಂತೆಯೆ ನಗೆಯೂ ಬರುತ್ತಿತ್ತು.

ಪ್ರಾರ್ಥನೆ ಶುರುವಾಯಿತು. ಗಾಂಧೀಜಿಯವರನ್ನು ಕಂಡೆ. ಅವರು ಧ್ಯಾನಮಗ್ನರಾಗಿ, ಏಕಾಗ್ರಚಿತ್ತರಾಗಿ ತಮ್ಮ ಅಂತರ್ಮನದತ್ತ ಲಕ್ಷ್ಯವನ್ನು ಕೇಂದ್ರೀಕರಿಸಿ ಕುಳಿತಿದ್ದರು. ನಾನವರನ್ನು ನೋಡುತ್ತ, ಆ ತಪೋಮಗ್ನ ಮೂರ್ತಿಯ ಬಗ್ಗೆ ವಿಚಾರ ಮಾಡುತ್ತ ಕುಳಿತೆ. ಭಜನೆ ಶುರುವಾಯಿತು. ಕೆಲ ನಿಮಿಷ ನಿಷ್ಕ್ರಿಯನಾಗಿ, ಉದಾಸೀನನಾಗಿ ನಿಂತಿದ್ದ ನನ್ನ ತುಟಿಗಳೂ ಅಲುಗತೊಡಗಿ ಸಾಮೂಹಿಕ ಭಜನೆಯ ಭಾವದಲ್ಲಿ ನಾನೂ ತಲ್ಲೀನನಾದೆ. "ವೈಷ್ಣವ ಜನ" ಆರಂಭವಾದಾಗ ನನಗರಿವಿಲ್ಲದೆಯೆ ನನ್ನ ಕಣ್ಣುಗಳಲ್ಲಿ ನೀರು ತುಂಬಿತು. ಇದು ವರೆಗೆ ಎಷ್ಟೋ ಸಲ ಈ ಭಜನೆಯನ್ನು ಜನರ ಬಾಯಿಂದ ಕೇಳಿದ್ದೆ. ಆದರೆ ಇಂದು ಈ ಪ್ರಾರ್ಥನಾ ಸಭೆಯಲ್ಲಿಯ ಈ ಭಜನೆಯಿಂದ ನನಗೆ ಬೇರೆಯೇ ಒಂದು ಆನಂದವಾಗತೊಡಗಿತ್ತು.

ನನ್ನ ಕಣ್ಣುಗಳು ಮುಚ್ಚಿ ನಾನು ನನ್ನನ್ನು ಯಾವಾಗ ಮರೆತನೋ ತಿಳಿಯಲೇ ಇಲ್ಲ. ಆತ್ಮವಿಸ್ಮೃತಿಯ ಆ ಕ್ಷಣದಲ್ಲಿ ಒಂದು ಹಳೆಯ ನೆನಪು ಜಾಗೃತವಾಗಿ ದುರ್ಲಭವಾದೊಂದು ಅನುಭೂತಿ ನನ್ನ ಸರ್ವಾಂಗದಲ್ಲಿ ಸಂಚರಿಸಿತು.

'ನವನೀತ'ದಿಂದ

ಕಾಲವು ನನ್ನಿಂದ ಅಪಹರಿಸಿಕೊಂಡಿದ್ದ ಅಮೂಲ್ಯ ಅನುಭವವೊಂದು ನಿರಾಯಾಸವಾಗಿ ಮರುಕಳಿಸಿತು.

ಅದು ನನ್ನ ಬಾಲ್ಯದ ಸಂಗತಿ. ನನ್ನ ಅಜ್ಜಿ ತೀರ ನಸುಕಿನಲ್ಲಿಯೆ ಎದ್ದು ಬೀಸಲು ಕುಳಿತು ಅತ್ಯಂತ ಶ್ರದ್ಧಾಪೂರ್ಣಸ್ವರದಲ್ಲಿ ಈ ಗೀತವನ್ನು ಹಾಡುತ್ತಿದ್ದಳು. ಮೈತುಂಬ ಹೊದೆದುಕೊಂಡು ಮಲಗಿದಲ್ಲಿಯೆ ನಾನು ಅದನ್ನು ಕೇಳುತ್ತಿದ್ದೆ. ಚಳಿಯಿಂದ ಕಂಪಿಸುತ್ತಿದ್ದರೂ ಆ ಭಜನೆ ಬಲು ಸುಂದರವಾಗಿ, ಸವಿಯಾಗಿ ಅನಿಸುತ್ತಿತ್ತು. ಒಂದು ದಿನ ಅಜ್ಜಿ ಸತ್ತಳು. ಆದರೆ ಅವಳ ಆ ಸರ್ವಶ್ರೇಷ್ಠ ಸಂಪತ್ತು ನನಗೆ ಸಿಕ್ಕಿತ್ತು. ನನ್ನ ಹೃದಯಾಂತರಾಳದಲ್ಲಿ ಅದು ಹುದುಗಿ ಕುಳಿತಿತು. ಗಾಂಧೀಜಿಯ ಪ್ರಾರ್ಥನಾಸಭೆಯಲ್ಲಿ ಆ ಪ್ರಸುಪ್ತಕೋಶ ಅರಳಿ ಕಾಲಾವಕಾಶದಲ್ಲಿ ನಾನು ಕಳೆದುಕೊಂಡಿದ್ದ ಈ ಸಂಪತ್ತು ಮತ್ತೆ ಸಿಕ್ಕಿತು.

ಅಲ್ಲಿಂದ ನೆಟ್ಟಗೆ ಹೋಟೆಲ್ಲಿಗೆಹೋದೆ. ರಾತ್ರಿಯಿಡೀ ಅಳುತ್ತಲೇ ಕಳೆದೆ. ನಸುಕಿನಲ್ಲಿ ನಿದ್ರೆ ಹತ್ತಿತು. ಎಚ್ಚರವಾದಾಗ ಒಂಬತ್ತೂ ಕಾಲು ಹೊಡೆದಿತ್ತು. ಸೂರ್ಯಪ್ರಕಾಶದ ಜೊತೆ ನನ್ನ ಉದಾಸ ಜೀವನದ ಜಂಜಾಟ ಎದುರು ನಿಂತಿತ್ತು. ಅದೇ ನನ್ನನ್ನು ಆತ್ಮಹತ್ಯೆಗೆ ಪ್ರೇರೇಪಿಸಿತ್ತು. ತಂದೆಯ ಜಡ್ಡು, ಕುಟುಂಬ ಸುಖವನ್ನೆ ಹಾಳು ಮಾಡುತ್ತಿದ್ದ ಮಲತಾಯಿಯ ದುರಾಶೆ, ಬಂಧುಗಳಲ್ಲಿಯ ಕಲಹ, ಹೆಂಡತಿಗೆ ಕ್ಷಣಕ್ಷಣಕ್ಕೆ ಆಗುತ್ತಿದ್ದ ಕಷ್ಟ, ಜೀವನವಿಡೀ ದುಡಿದರೂ ತೀರಿಸಲಾಗದಷ್ಟು ಸಾಲ - ಇವೇ ನನ್ನ ಜೀವನವನ್ನು ಹಿಂಡಿ ಹಿಪ್ಪೆಮಾಡಿದ್ದ ಜಂಜಾಟವಾಗಿತ್ತು.

ಎಲ್ಲ ನೆನಪಿಗೆ ಬಂದು ನಿನ್ನಿನ ಆತ್ಮಹತ್ಯೆಯ ನಿರ್ಧಾರ ದೃಢವಾಗತೊಡಗಿತು. ನನ್ನ ಆತ್ಮದೌರ್ಬಲ್ಯವನ್ನು ಧಿಕ್ಕರಿಸಿಕೊಂಡೆ. ಸ್ನಾನ ಮಾಡಿ ಪೇಟೆಗೆ ಹೋಗಿ ೫ ರೂಪಾಯಿಗಳ ಅಫು ಕೊಂಡೆ. ಹಗಲಿಡೀ ಏನೇನೊ ಯೋಚನೆ ಹಾಕಿದೆ- ಸಂಜೆಯಾಗುತ್ತಲೆ ಕಾಲುಗಳು ತಾವಾಗಿ ಪ್ರಾರ್ಥನಾಸಭೆಗೆ ನಡೆದವು. ಅಂದು 'ವೈಷ್ಣವಜನ' ಆದ ಮೇಲೆ ಇನ್ನೊಂದು ಬಂಗಾಲಿ ಭಜನೆ ಹಾಡಿದರು. ಅದರ ಭಾವಾರ್ಥವನ್ನು ಹಿಂದಿಯಲ್ಲಿ ಹೇಳಿದರು. ಅದನ್ನೆಂದೂ ನಾನು ಮರೆಯಲಾರೆ. ಆ ಗೀತೆಯ ಅರ್ಥ ಹೀಗಿತ್ತು: "ದುಃಖರೂಪೀ ಮೋಡಗಳಿಂದ ಆಕಾಶ ತುಂಬಿದೆ. ಗಾಢಾಂಧಕಾರ ನಾಲ್ಕೂ ದಿಕ್ಕಿನಲ್ಲಿ ನಾಗಿಣಿಯಂತೆ ಫೂತ್ಕಾರ ಬೀರುತ್ತಿದೆ. ಹುಲ್ಲುಕಡ್ಡಿಯ ಆಧಾರವೂ ಇಲ್ಲ. ಇಂಥ ವೇಳೆಯಲ್ಲಿ ನೀನತ್ತು ಏನು ಪ್ರಯೋಜನ? ಪ್ರಾಣತ್ಯಾಗ ಮಾಡಿ ಏನು ಪ್ರಯೋಜನ? ಎಲೊ, ದುಃಖ ಮಾಡುತ್ತ ಕುಳಿತರೆ ದುಃಖ ನಿವಾರಣೆಯಾದೀತೆ? ಇದೆಂಥ ವಿಚಾರಸರಣಿ ನಿನ್ನದು? ನೀನು ತಪ್ಪುತ್ತಿರುವೆ. ನಿನಗೆ ಭ್ರಮೆಯಾಗಿದೆ. ಪರಾಭೂತನಾಗಿ ನೀನು ಹೋದೆಡೆಯಲ್ಲೆಲ್ಲ ದುಃಖ ನಿನ್ನನ್ನು ಬೆಂಬತ್ತಿ ಬರುವುದು. ಓಡಬೇಡ. ನಿನ್ನನ್ನು ಸಾವರಿಸಿಕೊಂಡು ನೆಟ್ಟಗೆ ನಿಲ್ಲು. ದುಃಖ ಅಮರವಲ್ಲ. ಸಾವು ದುಃಖಕ್ಕೆ ಇದೆಯಲ್ಲದೆ ಮನುಷ್ಯನಿಗಲ್ಲ."

ಪ್ರಾರ್ಥನೆ ಮುಗಿದ ಬಳಿಕ ನೆಟ್ಟಗೆ ಹೋಟೆಲ್ಲಿಗೆ ಹೋದೆ. ಅಫುವಿನ ಗುಳಿಗೆಗಳನ್ನು ಗಟಾರದಲ್ಲಿ ಚೆಲ್ಲಿ ಬಿಲ್ ಚುಕ್ತಾ ಮಾಡಿ ಹೊರಗೆ ಬಂದೆ. ಮನೆಗೆ ಬಂದಾಗ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿತ್ತು. ಆದರೆ ನನ್ನ ಸಂಕಲ್ಪ ದೃಢವಾಗಿತ್ತು. "ಸಾವು ದುಃಖಕ್ಕೆ ಇದೆಯಲ್ಲದೆ ಮಾನವನಿಗಲ್ಲ" ಎಂಬ ಒಂದೇ ಮಾತು ನನ್ನನ್ನು ಧೈರ್ಯಶಾಲಿಯನ್ನಾಗಿ ಮಾಡಿತ್ತು. ನಾನು ಜೀವನದ ಹೋರಾಟದಲ್ಲಿ ಧುಮುಕಿದೆ. ಈ ಮಾತಿಗೆ ೧೧ ವರ್ಷಗಳಾದವು. ನಾನು ಬಯಸಿದ್ದು ನನಗೆ ಸಿಕ್ಕಿಲ್ಲ ನಿಜ, ಆದರೆ ಜೀವನವನ್ನು ರೂಪಿಸುವ ಕಲೆಯನ್ನು ನಾನು ಅವಗತ ಮಾಡಿಕೊಂಡಿದ್ದೇನೆ ಎಂದು ನಿಶ್ಚಿತವಾಗಿ ಹೇಳಬಲ್ಲೆ. ★

ಸಿಕೋಯಾ ವೃಕ್ಷ
ಜಗತ್ತಿನ ಅತಿ ಭಾರಿ ಜೀವಿ!

ಕೆಲಿಫೋರ್ನಿಯದ ಅಮರ ವೃಕ್ಷಗಳು

ಅವು ಬರಿ ಮರಗಳು. ಆದರೆ ಅವುಗಳನ್ನು ನೋಡಲೆಂದೇ ದೇಶ ವಿದೇಶಗಳಿಂದ ಪ್ರತಿವರ್ಷ ಹತ್ತು ಲಕ್ಷ ಮೀರಿ ಜನ ಬರುತ್ತಾರೆ. ಏಕೆಂದರೆ ಅವು ಜಗತ್ತಿನ ಅತಿ ದೊಡ್ಡ ಜೀವಂತ ವಸ್ತುಗಳಾಗಿವೆ. ಅವುಗಳ ಹೆಸರು "ದೈತ್ಯ ಸಿಕೋಯಾ" ವೃಕ್ಷಗಳೆಂದು.

ದೈತ್ಯ ಸಿಕೋಯಾಗಳು ಜಗತ್ತಿನ ಅತಿ ದೊಡ್ಡ ಜೀವಂತ ಪದಾರ್ಥಗಳು ಮಾತ್ರವಲ್ಲ, ಅವುಗಳಲ್ಲಿ ಕೆಲವು ಅತಿ ಪುರಾತನ ಸಜೀವ ವಸ್ತುಗಳೂ ಹೌದು. ಅಮೇರಿಕದ ಕೆಲಿಫೋರ್ನಿಯ ರಾಜ್ಯದಲ್ಲಿ ಸೀರಾ ನೆವಡಾ ಪ್ರದೇಶದಲ್ಲಿ ಎರಡು ಸಂರಕ್ಷಿತ ವನಗಳಲ್ಲಿ ಈ ಅದ್ಭುತ ವೃಕ್ಷಗಳು ನೂರುಗಟ್ಟಳೆಯಲ್ಲಿವೆ.

ಈ ಮರಗಳ ಹತ್ತಿರ ನಿಂತರೆ ನಮಗೆ ಆನೆಯ ಹತ್ತಿರ ನಿಂತ ಇಲಿಯಂತೆ ಅನಿಸುತ್ತದೆ. ಅವು



ಗಳಲ್ಲಿ ಅತಿ ದೊಡ್ಡವು ೩೦೦ ಅಡಿವರೆಗೆ ಎತ್ತರ ಮತ್ತು ೧೧೦ ಅಡಿವರೆಗೆ ಸುತ್ತಳತೆಯುಳ್ಳವುಗಳಾಗಿವೆ.

ಪ್ರಪಂಚದ ಅತಿ ಪ್ರಚಂಡ ವೃಕ್ಷವೆನಿಸಿದ ಒಂದು ಸಿಕೋಯಕ್ಕೆ ಅಮೇರಿಕದ ರಾಷ್ಟ್ರೀಯ ವೀರರಲ್ಲೊಬ್ಬನ್ನನುಸರಿಸಿ ಜನರಲ್ ಶರ್ಮನ್ ಎಂದು ಹೆಸರಿಟ್ಟಿದ್ದಾರೆ. ಅದರ ಎತ್ತರ ೨೭೨ ಅಡಿ; ಬುಡದಲ್ಲಿ ವ್ಯಾಸ ೩೭ ಅಡಿ ಎಂದರೆ ಸುತ್ತಳತೆ ೧೧೬ ಅಡಿ: ೨೦ ಜನ ಅಜಾನುಬಾಹುಗಳು ಕೈಗೆ ಕೈಗೋಣಸು ಹಾಕಿ ತಬ್ಬಿಕೊಳ್ಳುವಷ್ಟು! ಇದು ಎತ್ತರದಲ್ಲಾಗಲಿ ಸುತ್ತಳತೆಯಲ್ಲಾಗಲಿ ಅತಿ ದೊಡ್ಡ ಸಿಕೋಯ ಎನ್ನಲು ಬಾರದು ಮತ್ತೆ! ಬುಡದಲ್ಲಿ ಸುತ್ತಳತೆ ಇದಕ್ಕಿಂತ ಹೆಚ್ಚಾಗಿರುವ ಮತ್ತು ಎತ್ತರದಲ್ಲಿ ಇದನ್ನೂ ಮೀರಿಸುವ ಇದರ ಬಂಧುಗಳಿವೆ. ಆದರೆ ತನ್ನ ಎತ್ತರದ ಅರ್ಧದ ವರೆಗೂ ಹೆಚ್ಚುಕಡಿಮೆ ಒಂದೇ ಗಡುತರವನ್ನುಳಿಸಿಕೊಂಡ ಶರ್ಮನ್ ಎಲ್ಲಕ್ಕೂ ಗಾತ್ರವಾದದ್ದು ಎನಿಸಿದೆ. ಇದನ್ನು ಕಡಿದರೆ ೨,೦೦೦ ಟನ್ ನಾಟು ದೊರೆಯಬಹುದು ಎಂದು ಅಂದಾಜಿದೆ.

"ಜನರಲ್ ಶರ್ಮನ್"ಗೆ ೩೫ ಶತಮಾನ ವಯಸ್ಸಾಗಿದೆ ಎಂದು ಲೆಕ್ಕ ಹಾಕಿದ್ದಾರೆ. ಅದು ಬಹಳ ಇತಿಹಾಸವನ್ನು ಕಂಡಿರಬೇಕು. ಕೆಲ ಸಂಶೋಧಕರ ಊಹೆ ನಿಜವಾಗಿರುವುದಾದರೆ ಋಗ್ವೇದದ ಋಷಿಗಳು ಮಂತ್ರರಚನೆ ಮಾಡುತ್ತಿದ್ದಾಗ ಭೂಮಿಯ ಬೆನ್ನು ಮಗ್ಗುಲಲ್ಲಿ ಈ ಮರ ಹುಟ್ಟಿರಬೇಕು. ಬುದ್ಧನು ಧರ್ಮೋಪದೇಶ ಮಾಡುತ್ತಿದ್ದಾಗ ಅದಕ್ಕೆ ಆಗಲೇ ಸಾವಿರ ವರ್ಷ ವಯಸ್ಸಾಗಿತ್ತು.

ಕೆಂಬಣ್ಣದ ಕಾಂಡವುಳ್ಳ "ದೈತ್ಯಸಿಕೋಯಾ"ಗಳೇ ಪ್ರಪಂಚದ ಅತಿ ಪುರಾತನ ಜೀವಿಗಳು ಎಂದು ಮೊನ್ನೆಮೊನ್ನೆಯ ವರೆಗೆ ವಿಶ್ವಕೋಶಗಳು ಹೇಳುತ್ತ ಬಂದಿದ್ದವು. ಆದರೆ ಎರಡು ವರ್ಷಗಳ ಹಿಂದೆ ಉತ್ತರ ಕೆಲಿಫೋರ್ನಿಯದಲ್ಲಿ ಬೆಳೆಯುವ ಬ್ರಿಸಲ್‌ಕೋನ್ ಪೈನ್ ವೃಕ್ಷಗಳು ಇವುಗಳಿಗಿಂತ ಪ್ರಾಚೀನವಾದವೆಂದು ಸಿದ್ಧವಾಯಿತು: ಅವುಗಳಲ್ಲೊಂದು ೪,೬೦೦ ಮಳೆಗಾಲಗಳನ್ನು ಕಂಡಿದೆ.

ಆದರೂ ಮೂರೂವರೆ ಸಾವಿರ ವರ್ಷಗಳೆಂದರೆ ತುಸು ಅಲ್ಲ. ಇನ್ನೂ ಹೆಚ್ಚಿನದೆಂದರೆ, ಇವು ಇನ್ನೂ ಎಷ್ಟು ಶತಮಾನ ಬದುಕಲಿವೆಯೆಂದು ಹೇಳಲು ಬಾರದು. ಈಗಿರುವ ಸಿಕೋಯಗಳಲ್ಲಿ ಅತಿ ಮುಪ್ಪಾದವು ಕೂಡ ಇನ್ನೂ ಪ್ರತಿವರ್ಷ ಬೆಳೆಯುತ್ತಿವೆ, ಬೀಜಗಳನ್ನು ಕೊಡುತ್ತಿವೆ.

ಹಾಗೆ ನೋಡಿದರೆ ಸಿಕೋಯಾಕ್ಕೆ ಸ್ವಾಭಾವಿಕ ಮೃತ್ಯುವೇ ಇಲ್ಲವೇನೋ ಎನಿಸುತ್ತದೆ. ಈ ವೃಕ್ಷಗಳ ಅರಣ್ಯವನ್ನು ಕಂಡುಹಿಡಿದು ಇಂದಿಗೆ ನೂರು ವರ್ಷ ಮಿಕ್ಕಿದೆ. ಈ ಅವಧಿಯಲ್ಲಿ ತಾನಾಗಿ ಸತ್ತುಹೋದ ಸಿಕೋಯವನ್ನು ಯಾರೂ ಕಂಡಿಲ್ಲ. ಅವುಗಳ ಸಾವು ಹೆಚ್ಚಾಗಿ ಉರುಳಿ ಬೀಳುವುದರಿಂದ ಒದಗುತ್ತದೆ. ಸಿಕೋಯಕ್ಕೆ ತಾಯಿ ಬೇರು ಇಲ್ಲ. ನೆಲದ ಮೇಲ್ಪದರನ್ನಷ್ಟೇ ಆಶ್ರಯಿಸಿದ ಅದರ ಬೇರುಗಳು ಪ್ರಕಾಂಡವಾದ ಅದರ ಭಾರವನ್ನು ತಾಳಲಾರದೆ ಕೆಲವೇಳೆ ಸ್ವಲ್ಪ ಗಾಳಿಗೂ ಉರುಳುವುದುಂಟು.

ಇದೊಂದನ್ನು ಬಿಟ್ಟರೆ ಸಿಕೋಯದ ಜೀವನೇಚ್ಛೆ ಅಜೇಯವೇ ಆಗಿದೆ. ಸಿಕೋಯ ಅರಣ್ಯಗಳಲ್ಲಿ ದಾವಾನಲಗಳು ಸುತ್ತಲೂ ಸುಟ್ಟಿದ್ದರೂ ಚೇತರಿಸಿಕೊಂಡ ಅನೇಕ ವೃಕ್ಷಗಳಿವೆ. ಸಾಧಾರಣದ ಬೆಂಕಿ ಅದರ ದಪ್ಪನ್ನ (ಕೆಲವೇಳೆ ಎರಡಡಿ) ತೊಗಟೆಯನ್ನು ಭೇದಿಸಲಿಕ್ಕೇ ಸಮರ್ಥವಾಗುವುದಿಲ್ಲ. ಭೇದಿಸಿದರೂ ತಿರುಳಿನಿಂದಲೂ ತೊಗಟೆಯಿಂದಲೂ ಒಸರುವ ಟ್ಯಾನಿನ್ ಎಂಬ ರಸಾಯನ ಶೀಘ್ರವಾಗಿ ಗಾಯಗಳನ್ನು ಮಾಯಿಸಿಬಿಡುತ್ತದೆ. ತಿರುಳಿನ ವರೆಗೂ ಸುಡಲ್ಪಟ್ಟು ಒಳಗೆ ಒಂದು ದೊಡ್ಡ ಕೋಣೆಯಷ್ಟು ಪೊಳ್ಳಾದರೂ ಇನ್ನೂ ಬದುಕಿರುವ

ಒಂದು ಮರ "ಕೋಣೆ ಮರ" ಎಂದೇ ಹೆಸರಾಗಿದೆ. ಒಂದು ಮರವನ್ನಂತೂ ಒಬ್ಬ ನಾಟಿನವ ಪೂರ್ತಿಯಾಗಿ ಗರಗಸದಿಂದ ಅಡ್ಡಕ್ಕೆ ಕತ್ತರಿಸಿದ್ದರೂ ಅದು ಉರುಳದೆ ಪುನಃ ಕೂಡಿಕೊಂಡು ಬದುಕಿದೆ!

ಸಿಕೋಯಾ ಉರುಳಿ ಸತ್ತರೂ ಅದರ ಪ್ರತಿಭಟನಾಶಕ್ತಿ ಶತಮಾನಗಳ ವರೆಗೆ ಉಳಿಯಬಲ್ಲದು. ಅದರ ರಾಸಾಯನಿಕ ರಚನೆ ಬಹುಕಾಲದ ವರೆಗೆ ಕ್ರಿಮಿಕೀಟಗಳನ್ನು ನಿರೋಧಿಸುತ್ತದೆ. ಇಂಥ ಒಂದು ಮರ ಕಳೆದ ಶತಮಾನದಿಂದಲೂ ಆ ಅರಣ್ಯದಲ್ಲಿದ್ದು ಆದರೆ ಪೊಟರೆಯನ್ನೇ ಕೆಲಕಾಲ ಒಬ್ಬ ಕಾವಲುಗಾರ ಮನೆ ಮಾಡಿಕೊಂಡಿದ್ದ. ಇನ್ನೂ ಹಲ ಶತಮಾನಗಳ ವರೆಗೆ ಅದು ಲಡ್ಡಾಗದೆ ಉಳಿದೀತು.

ಇಂಥ ದೈತ್ಯ ವೃಕ್ಷದ ಬೀಜ ಬಲು ಚಿಕ್ಕದಾಗಿರುವುದು ನಿಸರ್ಗದ ವೈಪರೀತ್ಯಗಳಲ್ಲೊಂದು. ತೆಳ್ಳಗಿನ ರೆಕ್ಕೆಯಂಥ ಪದರಿನಲ್ಲಿ ಮುಚ್ಚಲ್ಪಟ್ಟ ಈ ಬೀಜಗಳು ೧,೨೦೦ ಸೇರಿದರೆ ಒಂದು ತೊಲೆ ಆಗುತ್ತದೆ.

೧೮೭೮ ರ ವರೆಗೆ ಕೆಲಿಫೋರ್ನಿಯದ ಪರ್ವತದ ತಪ್ಪಲುಗಳಲ್ಲಿದ್ದ ನಿಸರ್ಗದ ಈ ಮಹಾ ಕೃತಿಗಳ ಅಸ್ತಿತ್ವವೇ ಅಮೇರಿಕನ್ನರಿಗೆ ಗೊತ್ತಿದ್ದಿಲ್ಲ. ೧೮೫೮ ರಲ್ಲಿ ಕೆಲ ಮೂಲ ನಿವಾಸಿಗಳು ಹೇಲ್ ಥಾರ್ಪ್ ನೆಂಬವನನ್ನು ಕರೆದೊಯ್ದು ಈ ಅರಣ್ಯವನ್ನಾತನಿಗೆ ತೋರಿಸಿದರು. ಸಿಕೋಯಾ ಎಂಬುದು ಸ್ವ-ಪ್ರಯತ್ನದಿಂದ ಅಭ್ಯಾಸ ಮಾಡಿ ತನ್ನ ಭಾಷೆಗೊಂದು ಅಕ್ಷರಮಾಲೆಯನ್ನು ರೂಪಿಸಿದ ಒಬ್ಬ ಮೂಲನಿವಾಸಿ ಗೌಡನ ಹೆಸರು. ಅವನ ಗೌರವಾರ್ಥ ಈ ಮರಕ್ಕೆ ಹೆಸರಿಡಲಾಗಿದೆ.

ಇಂಥ ಭಾರಿ ನಾಟಿನ ಮರ ಕಂಡ ಮೇಲೆ ಜನ ಬಿಟ್ಟಾರೇ? ಅವುಗಳನ್ನು ನಾಟಿನ ವ್ಯಾಪಾರದವರು ಸಿಕ್ಕಾಬಟ್ಟೆ ಕಡಿದು ಮಾರಲಾರಂಭಿಸಿದರು. ಕೆಲವೇ ವರ್ಷಗಳಲ್ಲಿ ಒಂದು ದೊಡ್ಡ ಅರಣ್ಯವೇ ಧ್ವಂಸವಾಗಿ ಹೋಯಿತು. ಅನಂತರ ಅಮೇರಿಕದ ಭೌಗೋಲಿಕ ಸಂಸ್ಥೆ ಉಳಿದ ಅರಣ್ಯಗಳನ್ನು ಪಾರು ಮಾಡಲು ಶತಪ್ರಯತ್ನ ಮಾಡಿತು. ಸರಕಾರ ಮತ್ತು ಸಾರ್ವಜನಿಕ ಸಹಾಯದಿಂದ ಇಡೀ ಪ್ರದೇಶವನ್ನು ಕೊಂಡುಕೊಂಡು ರಕ್ಷಣೆಯ ಕ್ರಮಗಳನ್ನು ಯೋಜಿಸಿತು. ಇಂದು ೧,೩೦೦ ಚದರ ಮೈಲು ವಿಸ್ತಾರವಾದ ಸೀರಾ ನೆವಡಾ ತಪ್ಪಲಿನಲ್ಲಿ ಎರಡು ಮಹಾ ಸಿಕೋಯಾ ಅರಣ್ಯಗಳು ನೋಟಕರ ಕಣ್ಣಿಗೆ ಹಬ್ಬವಾಗಿವೆ, ಹಕ್ಕಿಗಳ ಹಾಡಿನ ಗೂಡಾಗಿವೆ, ನಾನಾ ಪ್ರಾಣಿಗಳಿಗೆ ಆಶ್ರಯಸ್ಥಾನವಾಗಿವೆ. *

ಆತ— ಕೇಳಿದಿರಿ ನೀನು, ಏನೋ ಸ್ಟಿರಿಯೊಫೋನಿಕ್ ಸೌಂಡ್ ಅಂತ ಶೋಧ ಮಾಡಿದ್ದಾರಂತೆ. ನೀವು ಕೋಣೆಯ ನಡುವೆ ಕುಳಿತರೆ ನಿಮ್ಮ ಎಡ ಮತ್ತು ಬಲ ಬದಿಗಳೆರಡು ಕಡೆಯಿಂದಲೂ ಧ್ವನಿ ಕೇಳಿಸುವುದಂತೆ.

ಆತ— ಅದೆಂಥ ಹೊಸ ಶೋಧ? ಹತ್ತು ವರ್ಷಗಳಿಂದಲೂ ನನ್ನ ಹೆಂಡತಿ ಮತ್ತು ಅತ್ತೆಯ ಜೊತೆ ವಾಸಿಸುವ ನನಗೆ ಈ ಮಾತು ಗೊತ್ತಾಗಿ ಅಷ್ಟೇ ವರ್ಷಗಳಾದವು.

*

ನಿಮ್ಮ ಹೆಂಡತಿಗೆ ಬಂದಿರುವ ಯಾವುದೇ ಸಾಮಾನ್ಯ ರೋಗವನ್ನಾದರೂ ನೀವು "ಹಾಂ! ಇದು ಮುಪ್ಪಿನ ಪ್ರಾರಂಭದ ಲಕ್ಷಣ" ಎಂದಿಷ್ಟೇ ಹೇಳಿ ಗುಣಪಡಿಸಬಲ್ಲಿರಿ.

ನೋರ್ಟನ್ ಅಥವಾ
ಎಡ್ಮಿರಲ್ ಆರಿಸಿರಿ





ನಿಯಂತ್ರಿಸಲು ತುಂಬಾ ಸರಳ...

ಇವುಗಳ ಸೆಲ್ಫ್ ಎಲ್ಯೈನಿಂಗ್
ಫೊರ್ಕ್ ಫಿಟ್ಟಿಂಗ್ಸ್‌ಗೆ ಧನ್ಯವಾದ

ASP/HC-163 A

ಹಿಂದ್ ಸೈಕಲ್ಸ್ ಲಿ., 250 ವರ್ಲಿ, ಬೊಂಬಾಯಿ-18.

ರಾಜರ ರಾಜ

ರವೀಂದ್ರರ ಒಂದು ಗೀತ

ಹಳ್ಳಿಯ ದಾರಿಯಲ್ಲಿ ನಾನು ಬಾಗಿಲಿನಿಂದ ಬಾಗಿಲಿಗೆ ಭಿಕ್ಷೆ ಬೇಡುತ್ತಾ ಸಾಗುತಿದ್ದೆ. ಆಗ ನನ್ನ ಕಣ್ಣುಗಳಿಗೆ ಆಶ್ಚರ್ಯದ ಕನಸು ಬಿದ್ದಂತೆ ಒಂದು ಚಿನ್ನದ ರಥವು ಅತಿ ದೂರದಲ್ಲಿ ಗೋಚರಿಸಿತು. ಆ ರಥದಲ್ಲಿ ಆರೂಢನಾದವನನ್ನು ಕಂಡು ನಾನು ಇವನು ಯಾವ ರಾಜರ ರಾಜನೆಂದು ಅಚ್ಚರಿಪಟ್ಟೆ.


ಸ್ವರ್ಣರಥಾರೂಢನಾದ ಅರಸನನ್ನು ಕಂಡಾಕ್ಷಣ ನನ್ನ ಆಶೆಗಳು ಅಂಕುರಿಸಿ ಮೇಲಕ್ಕೆದ್ದುವು. ನಾನು ನನ್ನ ಕಷ್ಟದ ದಿನಗಳು ದೂರವಾದುವು ಎಂದು ಭಾವಿಸಿದೆ. ರಾಜನು ನಾನು ಬೇಡದೆ ನೀಡಬಹುದಾದ ಭಿಕ್ಷೆಗಾಗಿ ನಾನು ನನ್ನ ಕೈ ಚಾಚುತ್ತಾ ಕಾದು ನಿಂತೆ. ರಾಜನು ನನ್ನ ಸುತ್ತುಮುತ್ತಲೂ ಧೂಳಿನಲ್ಲಿ ಚೆಲ್ಲಬಹುದಾದಷ್ಟು ಸಂಪತ್ತನ್ನು ಈಯಬಹುದೆಂದು ನಂಬಿ ಆತನನ್ನೇ ನಿರೀಕ್ಷಿಸುತ್ತಾ ನಾನು ನಿಂತೆ.

ನನ್ನ ನಿರೀಕ್ಷೆಯಂತೆ ನಾನು ನಿಂತಲ್ಲೆ ಅರಸನ ರಥವು ನಿಂತಿತು. ರಾಜನ ದೃಷ್ಟಿ ನನ್ನ ಮೇಲೆ ಬೀಳುವುದಕ್ಕೆ ತಡವಾಗಲಿಲ್ಲ. ಆತನು ನಸು ನಗುತ್ತಾ ರಥದಿಂದ ಕೆಳಗಿಳಿದು ನನ್ನ ಕಡೆಗೇನೇ ಬಂದನು. ನನ್ನ ಜೀವನದ ಸುದಿನಗಳು ಆರಂಭವಾದುವು, ನನ್ನ ಭಾಗ್ಯದ ಬಾಗಿಲು ತೆರೆಯಿತು, ನನ್ನ ಅದೃಷ್ಟವು ಕೊನೆಗಾದರೂ ಒಳ್ಳೆಯದಾಗಿ ಪರಿಣಮಿಸಿತಲ್ಲಾ ಎಂದು ನಾನು ಭಾವಿಸಿ ಆನಂದಪಟ್ಟೆ. ಅರಸನು ತತ್‌ಕ್ಷಣ ನನ್ನ ಬಲಗೈಯನ್ನು ಹಿಡಿದು ಕೇಳಿದ. "ನಿನ್ನ ಬಳಿ ನನಗೆ ಕೊಡುವುದಕ್ಕಾಗಿ ಏನಿದೆ?" ಅರಸ ನನ್ನ ಕಡೆ ಕೈಚಾಚಿದ!

ಆಹಾ! ಒಬ್ಬ ಭಿಕ್ಷುಕನಿಂದ ಭಿಕ್ಷೆ ಯಾಚಿಸಲು ಕರಗಳನ್ನು ಮುಂದೊಡ್ಡಿದ ಆ ರಾಜನ ವಿನೋದವಾದರೂ ಎಂತಹುದು? ನಾನು ಗಲಿಬಿಲಿಗೊಂಡೆ. ಅನಿಶ್ಚಿತನಾಗಿ ನಿಂತೆ. ಏನು ಮಾಡುವುದೆಂದು ನನ್ನ ಬುದ್ಧಿಗೆ ತೋಚಲಿಲ್ಲ. ಚಾಚಿದ ಕರಗಳನ್ನು ಆತ ಹಿಂದೆಗೆಯಲಿಲ್ಲ. ನಂತರ ನನ್ನ ಜೋಳಿಗೆಯಿಂದ ನಿಧಾನವಾಗಿ ಒಂದು ಅತಿ ಚಿಕ್ಕ ಧಾನ್ಯವನ್ನು ಹೊರತೆಗೆದು, ಅದನ್ನು ಚಾಚಿದ ರಾಜನ ಕರಗಳಿಗೆ ಹಾಕಿದೆ. ಆತ ಪುನಃ ರಥಾರೂಢನಾಗಿ ತೆರಳಿದ.

ಆ ದಿನದ ಅಂತ್ಯದಲ್ಲಿ ನಾನೊಂದು ಆಶ್ಚರ್ಯವನ್ನು ಕಂಡೆ. ಆ ದಿನದ ಸಂಜೆ ನಾನು, ದಿನವಿಡೀ ಸಂಗ್ರಹಿಸಿದ ಭಿಕ್ಷೆಯನ್ನೆಲ್ಲಾ ನೆಲದ ಮೇಲೆ ಸುರುವಿ ಚೀಲವನ್ನು ಬರಿದು ಮಾಡಿದಾಗ, ಏನಾಶ್ಚರ್ಯ, ನನ್ನ ಅಲ್ಪ ಭಿಕ್ಷೆಯ ದವಸ ಧಾನ್ಯಗಳ ರಾಶಿಯಮಧ್ಯೆ ಒಂದು ಅತಿ ಚಿಕ್ಕ ಚಿನ್ನದ ಧಾನ್ಯವು ಹೊಳೆಯುತ್ತಿತ್ತು! ಇದನ್ನು ಕಂಡು ನಾನು ಸಂತೋಷಪಡಲಿಲ್ಲ. ನನಗೆ ನನ್ನ ಎಲ್ಲ ಭಿಕ್ಷೆಯನ್ನು ಅರಸನಿಗೆ ನೀಡುವ ಮನಸ್ಸು ಬರಲಿಲ್ಲವಲ್ಲಾ' ಎಂದು ಗಟ್ಟಿಯಾಗಿ ಬಿಕ್ಕಿಬಿಕ್ಕಿ ಅತ್ತೆ. *

ರೂಪಾಂತರ : ಸದಾಶಿವರಾವ್ ಕಡಿಯಾಳಿ



ಗುರುಗಳ ಭವಿಷ್ಯ ಸುಳ್ಳಾಗಲಿಲ್ಲ

ಹೆಣ್ಣು ಗಂಡಾಯ್ತು

ಸಿ. ಡಿ. ಪಾಟೀಲ

ಮಿತ್ರನ ಬಲವಂತದ ಕರೆಯಿಂದಾಗಿ, ಹಳ್ಳಿಯ ಪ್ರವಾಸವು ನನಗೆ ಬೇಡಾಗಿದ್ದರೂ ಮಿತ್ರನೊಡನೆ ನಲಸಾಪುರ ಗ್ರಾಮಕ್ಕೆ ಪ್ರಯಾಣ ಬೆಳೆಸಿದೆ. ರಾಯಬಾಗ ರೇಲ್ವೆ ಸ್ಟೇಶನ್ನಿನಲ್ಲಿ ಇಳಿದು ಮೈಸೂರು ಸರಕಾರದ ಸಾರಿಗೆಯ ಬಸ್ಸಿನಲ್ಲಿ ಏಳು ಮೈಲು ಪ್ರವಾಸ ಮಾಡಿ ನಲಸಾಪುರ ಗ್ರಾಮಕ್ಕೆ ಬಂದು ತಲುಪಿದೆವು.

ಗ್ರಾಮದ ಅಗಸೆಯ ಹತ್ತಿರವೇ 'ಶ್ರೀ ಸಿದ್ಧಗಿರಿ ವಾಚನಾಲಯ'ವು ಕಾಣಿಸಿತು. ವಾಚನಾಲಯದ ಕಟ್ಟಡ ಒಂದು ಮಠದ ಹಾಗೆ ಕಾಣುತ್ತಿತ್ತು. ಸುತ್ತಲೂ ಹೂವಿನ ಗಿಡಗಳನ್ನು ಹಚ್ಚಿ ಚಿಕ್ಕ ಕೈದೋಟವನ್ನು ತಯಾರಿಸಿದ್ದರು. ವಾಚನಾಲಯದ ಮುಖ್ಯ ದ್ವಾರದ ಎದುರಿಗೇ ಒಂದು ದೊಡ್ಡ ತುಳಸೀ ಕಟ್ಟೆ ಇತ್ತು. ಅಲ್ಲಿಯ ಎಲ್ಲ ಗಿಡಗಳಲ್ಲಿಯೂ ಈ ತುಳಸೀ ಗಿಡವೇ ಎದ್ದು ಕಾಣುತ್ತಿತ್ತು. ನನಗೆ ಈ ವಾಚನಾಲಯದ ಹೆಸರೂ ಎದುರಿಗಿನ ತುಳಸೀಕಟ್ಟೆಯೂ ಸ್ವಲ್ಪ ವಿಚಿತ್ರವೇ ಅನ್ನಿಸಿದವು. ನಾನು ನೋಡಿದ ಯಾವ ವಾಚನಾಲಯದ ಎದುರೂ ತುಳಸೀ ಕಟ್ಟೆ ಇರಲಿಲ್ಲ. ಅದನ್ನು ನೋಡಿ ನನ್ನ ಮಿತ್ರ ನನ್ನು ಕೇಳಿದೆ, "ಇದೇನಪ್ಪಾ, ಸಾರ್ವಜನಿಕ ವಾಚನಾಲಯದ ಎದುರು ತುಳಸೀಕಟ್ಟೆ ಇದೆಯಲ್ಲ! ಇದು ಯಾವುದಾದರೂ ಪಂಥದವರ ವಾಚನಾಲಯವೊ?"

"ಛೇ, ಛೇ!, ಹಾಗೇನಿಲ್ಲ. ಇದರ ಕತೆ ಸ್ವಲ್ಪ ಕೇಳುವ ಹಾಗೆಯೇ ಇದೆ. ಮನೆಗೆ ಹೋದ ಮೇಲೆ ಹೇಳುತ್ತೇನೆ, ನಡೆ" ಎಂದ ಆತ.

ಮನೆಗೆ ಬಂದೆವು. ಮುಖ ತೊಳೆದು ಬಂದು ಮಿತ್ರನ ಕೋಣೆಯಲ್ಲಿ ಇಬ್ಬರೂ ಕುಳಿತೆವು. ಅವನ ತಮ್ಮನು ಎರಡು ತಟ್ಟೆಗಳಲ್ಲಿ ಸ್ವಲ್ಪ ತಿಂಡಿಯನ್ನೂ ಎರಡು ಬಟ್ಟಲುಗಳಲ್ಲಿ ಚಹ ವನ್ನೂ ತಂದಿಟ್ಟನು. ಎರಡನ್ನೂ ಸೇವಿಸುತ್ತ ಸಹಜವಾಗಿ ಪ್ರಶ್ನಿಸಿದೆ. "ನಿಮ್ಮ ಸಿದ್ಧಗಿರಿ ವಾಚ ನಾಲಯಕ್ಕೆ ಯಾವಾಗ್ಗೆ ಭೆಟ್ಟಿ ಕೊಡೋಣ?"

"ಓಹೋ, ವಾಚನಾಲಯಕ್ಕೋ? ಅಂದ ಹಾಗೆ ನಿನಗೆ ಆ ವಾಚನಾಲಯದ ಕತೆ ಹೇಳು ತ್ತೇನೆ, ಕೇಳು" ಎಂದ.

ಮಿತ್ರ ಆರಂಭಿಸಿದ: "ನಲಸಾಪುರ ಗ್ರಾಮವು ಈ ಮೊದಲು ಇನಾಮು ಗ್ರಾಮವಾಗಿತ್ತು. ಈ ಗ್ರಾಮದ ಇನಾಮದಾರರ ಹೆಸರು ಮನೋಜಿ ರಾವ ಶಿಂದೆ. ತಮ್ಮ ವಂಶವು ಇತಿಹಾಸ ಪ್ರಸಿದ್ಧ ವಂಶವೆಂದೂ ಪೇಶ್ವೆಯರ ಕಾಲದಿಂದಲೂ ಯುದ್ಧಗಳನ್ನು ಮಾಡುತ್ತ ಬಂದ ವಂಶವೆಂದೂ ಹೇಳಿಕೊಂಡು ಜಂಭ ಕೊಚ್ಚಿಕೊಳ್ಳುತ್ತಾರೆ.

"ಅದೇನೇ ಇರಲಿ, ಒಂದು ಮಾತು ಮಾತ್ರ ಸ್ವಲ್ಪ ಮಟ್ಟಿಗೆ ನಿಜವೆಂದು ಕಾಣುತ್ತದೆ. ಇವರ ವಂಶದ ಮೂಲಪುರುಷನಿಂದಲೂ ಪ್ರತಿಯೊಬ್ಬ ರಿಗೂ ಒಂದೊಂದೇ ಗಂಡು ಸಂತತಿಯಾಗುತ್ತಾ ವಂಶವು ಈ ವರೆಗೂ ಸಾಗಿ ಬಂದಿದೆಯಂತೆ. ಇವರ ವಂಶದಲ್ಲಿ ಒಂದೂ ದತ್ತಕ ಪ್ರಕರಣ ನಡೆದಿಲ್ಲವಂತೆ. ಆದರೆ ಇದರ ಸತ್ಯಾಸತ್ಯತೆ ಯನ್ನು ಕಂಡುಹಿಡಿಯುವುದು ಯಾರಿಗೂ ಶಕ್ಯವೂ ಆಗಿಲ್ಲ, ಅಗತ್ಯವೂ ಅನಿಸಿಲ್ಲ. ಇದೆಲ್ಲಾ ಇನಾಮದಾರರ ಹೇಳಿಕೆ ಮಾತ್ರ.

"ಸುಮಾರು ಇಪ್ಪತ್ತೊಂದು ವರ್ಷಗಳ ಹಿಂದೆ ಈಗಿರುವ ಇನಾಮದಾರರಿಗೆ ಮಕ್ಕಳಾಗಿರಲಿಲ್ಲ. ಆಗಲೇ ಅವರಿಗೆ ವಯಸ್ಸು ನಾಲ್ವತ್ತಾರು. ಮಕ್ಕ ಳಾಗದ್ದರಿಂದ ಆಗಲೇ ನಾಲ್ಕು ಜನ ಹೆಂಡಂದಿ ರನ್ನು ಮಾಡಿಕೊಂಡಿದ್ದರು. ನಾಲ್ಕು ಜನ ಹೆಂಡಂ ದಿರೂ ಸುಖವಾಗಿ ಜೀವಿಸಿದ್ದರು. ಆದರೆ ಒಬ್ಬ ಳಿಗೂ ಸಂತತಿಯಾಗಿರಲಿಲ್ಲ. ಇದರಿಂದ ಇತಿ ಹಾಸ ಕಾಲದಿಂದಲೂ ನಡೆದು ಬಂದ ವಂಶವು ತಮ್ಮಿಂದ ನಿಂತು ಹೋಗುವುದಲ್ಲಾ ಎಂದು ಇನಾಮದಾರರು ಸದಾಕಾಲ ಕೊರಗುತ್ತಿದ್ದರು.

"ಆದರೆ ಅವರು ಸಂಪೂರ್ಣ ನಿರಾಶರಾಗಿರ ಲಿಲ್ಲ. ಅವರ ಆಶೆಯೆಂದರೆ ಗ್ರಾಮದ ಹೊರ ಗಿನ ಮಠದ ಗುರುಗಳಾದ 'ಸಿದ್ಧಗಿರಿ ಗೋಸಾವಿ' ಇವರ ಭವಿಷ್ಯ ವಾಣಿಯದು.

"ಸಿದ್ಧಗಿರಿ ಗೋಸಾವಿ ಎಂದರೆ ನಲಸಾಪುರ ಗ್ರಾಮಕ್ಕೇ ಗುರುಗಳಾಗಿದ್ದರು. ಇವರಿಂದ ಗ್ರಾಮವು ಅನೇಕ ಬಗೆಯಿಂದ ಸೇವೆ ಪಡೆಯು ತ್ತಿತ್ತು. ಇವರು ಭೂತ ಬಿಡಿಸುತ್ತಿದ್ದರು. ಭವಿಷ್ಯ ಹೇಳುತ್ತಿದ್ದರು. ಕೆಲವೊಂದು ಔಷಧಗಳನ್ನೂ ಕೊಡುತ್ತಿದ್ದರು. ಗ್ರಾಮದ ಸಕಲ ಮಂಗಲ ಕಾರ್ಯಗಳಲ್ಲಿ ಪೌರೋಹಿತ್ಯ ವಹಿಸುತ್ತಿದ್ದರು.

"ನಲಸಾಪುರದ ಜನರು ಗುರುಗಳ ಮೇಲೆ ಅಚಲವಾದ ಶ್ರದ್ಧೆಯನ್ನಿಟ್ಟಿದ್ದರು. ಜನರು ತಮ್ಮ ಪ್ರತಿಯೊಂದು ಕಾರ್ಯಕ್ಕೂ ಗುರುಗ- ಳಿಂದ ಮುಹೂರ್ತವನ್ನು ಹೇಳಿಸಿಕೊಂಡೇ ಕಾರ್ಯವನ್ನು ಆರಂಭಿಸುತ್ತಿದ್ದರು. ಇನಾಮದಾ ರರಂತೂ ಇವರೆಲ್ಲರನ್ನು ಮೀರಿ ಅತಿಯಾಗಿಯೇ ಸಿದ್ಧಗಿರಿ ಗುರುಗಳನ್ನು ನಂಬಿದ್ದರು. ಗುರುಗಳ ಭವಿಷ್ಯವಾಣಿಯ ಮೇಲೆ ವಿಶ್ವಾಸವಿಟ್ಟೇ ಐದನೇ ಮದುವೆ ಮಾಡಿಕೊಳ್ಳುವುದನ್ನು ತಡೆಹಿಡಿದಿ- ದ್ದರು.

"ಒಂದು ದಿನ ಇನಾಮದಾರರು ಗುರುಗಳನ್ನು ವಾಡೆ ಅರಮನೆಗೇ ಕರೆಯಿಸಿಕೊಂಡು ಕೇಳಿ ದರು, 'ನೋಡಿ ಗುರುಗಳೇ, ಇತಿಹಾಸ ಕಾಲ ದಿಂದಲೂ ಬೆಳೆದು ಬಂದ ನಮ್ಮ ವಂಶವೃಕ್ಷ ವನ್ನು ನನ್ನ ಕೈಯಿಂದಲೇ ಕಡಿದು ಹಾಕಲಾರೆ. ನನಗೆ ದತ್ತು ತೆಗೆದುಕೊಳ್ಳುವ ಇಷ್ಟವಿಲ್ಲ ವಯಸ್ಸು ಹೋಗುವ ಮೊದಲೇ ಇನ್ನೊಂದು

ಲಗ್ನವಾಗಬೇಕೆನ್ನಿಸುತ್ತದೆ.'

" 'ನೀವು ದೇವರ ಮೇಲೆ ವಿಶ್ವಾಸವಿಡಬೇಕು ಇನಾಮದಾರರೆ,' ಎಂದರು ಗುರುಗಳು, 'ದೇವರು ನಿಮಗ ನಿಶ್ಚಯವಾಗಿಯೂ ಸಂತತಿಯನ್ನು ಕರುಣಿಸುತ್ತಾನೆ. ಅವಿಶ್ವಾಸ ಬೇಡ.'

" 'ನನಗೆ ದೇವರಿಗಿಂತಲೂ ನಿಮ್ಮ ಮೇಲೆ ವಿಶ್ವಾಸ ಹೆಚ್ಚಿಗಿದೆ ಗುರುಗಳೇ, ನೀವು ಇನ್ನೊಮ್ಮೆ ಕುಂಡಲಿ ನೋಡಿ ಹೇಳಿ. ಕೊನೆಯ-ವಳನ್ನು ಲಗ್ನವಾಗಿ ನಾಲ್ಕು ವರ್ಷಗಳಾದವು. ನನಗಂತೂ ಬೇರೆ ಲಗ್ನವಾಗುವುದೇ ಒಳಿತೆಂದೆನಿಸಹತ್ತಿದೆ.'

"ಸಿದ್ಧಗಿರಿ ಗುರುಗಳಿಗೆ ಇನಾಮದಾರರ ಆತುರ ಕಂಡು ಸ್ವಲ್ಪ ನಗೆಯೇ ಬಂತು. ಅವರು ಇನಾಮದಾರರ ಕುಂಡಲಿ ತರಿಸಿದರು. ನಾಲ್ಕೂ ಜನ ಹೆಂಡಂದಿರ ಕುಂಡಲಿಗಳನ್ನು ತರಿಸಿದರು. ನೋಡಿದರು. ಮತ್ತೆ ಮತ್ತೆ ನೋಡಿದರು. ಲೆಕ್ಕ ಹಾಕಿದರು. ಅರ್ಧ ತಾಸಿನ ವರೆಗೆ ಕುಂಡಲಿಯ-ಲ್ಲಿಯೇ ಮಗ್ನರಾದರು. ಕೊನೆಗೊಮ್ಮೆ ಗುರುಗಳ ಮುಖದಲ್ಲಿ ಮುಗುಳು ನಗೆ ಮೂಡಿತು. ಅದನ್ನು ಕಂಡು ಇನಾಮದಾರರಿಗೆ ಸಂತತಿ ಪಡೆದಷ್ಟೇ ಆನಂದವಾಯಿತು.

" 'ನಿಮಗೆ ಸಂತತಿಯಾಗುವುದು ನಿಶ್ಚಿತ ಇನಾಮದಾರರೇ' ಎಂದರು ಗುರುಗಳು. 'ಅದೂ ಗಂಡು ಸಂತತಿ. ಆದರೆ ಅದೊಂದೇ ಸಂತತಿ ನಿಮ್ಮ ಭಾಗ್ಯದಲ್ಲಿದೆ.'

" 'ಸಾಕು ಗುರುಗಳೇ. ನನಗೇನೂ ಹತ್ತು ಮಕ್ಕಳು ಬೇಕಾಗಿಲ್ಲ. ಒಂದು ಗಂಡು ಮಗು ಹುಟ್ಟಿ ವಂಶವೃದ್ಧಿಯಾದರೆ ಸಾಕು. ಆದರೆ ... ಸರಿಯಾಗಿ ನೋಡಿದಿರಾ?'

" 'ದೇವರ ಮೇಲೆ ವಿಶ್ವಾಸವಿಡಿ. ಇಲ್ಲಿ ನೋಡಿ,' ಎಂದು ಎರಡು ಕುಂಡಲಿಗಳನ್ನು ಎತ್ತಿ ಇನಾಮದಾರರ ಮುಂದೆ ಹಿಡಿದರು.

" 'ಇದರಲ್ಲಿ ನನಗೇನು ಕಲ್ಲು ತಿಳಿಯುತ್ತದೆ? ನೀವೇ ಹೇಳಿ.'


" 'ನೋಡಿ, ಇದು ನಿಮ್ಮ ಕುಂಡಲಿ. ಇದು ಚಿಕ್ಕ ಯಜಮಾನಿಯ ಕುಂಡಲಿ. ಈ ಎರಡು ಕುಂಡಲಿಗಳಲ್ಲಿಯೂ ಒಂದೊಂದೇ ಗಂಡು ಸಂತಾನದ ಫಲವಿದೆ. ವಿಶ್ವಾಸವಿಡಿ. ನನ್ನ ಮಾತು ಹುಸಿ ಎಂದೂಯಾಗಲಾರದು.

" 'ನೀವೇನೂ ಕೊರಗುವ ಕಾರಣವಿಲ್ಲ. ಒಡೆಯರೇ, ನೀವು ನಿಶ್ಚಿಂತವಾಗಿರಿ. ಅಲ್ಲಿಯ ವರೆಗೆ ಈ ಎರಡು ಕುಂಡಲಿಗಳು ನನ್ನ ಹತ್ತಿರ ವಿದ್ದರೆ ನಡೆಯಬಹುದಲ್ಲ,' ಎಂದು ಕುಂಡಲಿಗಳನ್ನು ಸುತ್ತತೊಡಗಿದರು.

" 'ಅವುಗಳನ್ನು ನಾನು ಇಲ್ಲಿಟ್ಟುಕೊಂಡು ಮಾಡುವುದಾದರೂ ಏನಿದೆ? ನಿಮ್ಮಲ್ಲಿಯೇ ಇರಲಿ.'


"ಇದಾದ ಆರು ತಿಂಗಳ ವರೆಗೂ ಇನಾಮದಾರರ ವಂಶವೃದ್ಧಿಯಾಗುವ ಲಕ್ಷಣ ಕಾಣಿಸಲಿಲ್ಲ. ಇನಾಮದಾರರು ಸಿದ್ಧಗಿರಿ ಗುರುಗಳನ್ನು ಮೇಲಿಂದ ಮೇಲೆ ಕೇಳತೊಡಗಿದರು. ಗುರುಗಳೂ ಅದೇ ಮಾತನ್ನೇ ಹೇಳುತ್ತಾ ಬಂದರು. ಆದರೆ ಈ ಸಂಗತಿಯು ಇಷ್ಟರಲ್ಲಿಯೇ ಇನಾಮದಾರರ ವಾಡೆಯಿಂದ ಕರ್ಣೋಪಕರ್ಣವಾಗಿ ನಲಸಾಪುರ ಗ್ರಾಮದ ಎಲ್ಲ ಜನರಿಗೂ ಗೊತ್ತಾಯಿತು. ಸಿದ್ಧಗಿರಿ ಗುರುಗಳ ಜನಪ್ರಿಯತೆಯನ್ನೂ ಇನಾಮದಾರರಿಗೆ ಅವರ ಮೇಲಿದ್ದ ಅಚಲ ವಿಶ್ವಾಸವನ್ನೂ ಕಂಡು ಸಹಿಸದ ಕೆಲವು ಜನರೂ ಗುಡಿಗಳ ಪೂಜಾರಿಗಳೂ ಗ್ರಾಮದಲ್ಲಿದ್ದರು. ಗ್ರಾಮದಲ್ಲಿ ಸಿದ್ಧಗಿರಿ ಗುರುಗಳ ಬಗ್ಗೆ ಅಪಪ್ರಚಾರ ಆರಂಭವಾಯಿತು. ಈ ಅಪಪ್ರಚಾರವು ಇನಾಮದಾರರ ಕಿವಿಗೂ ಮು-ಟ್ಟಿತು. ಅವರ ವಿಶ್ವಾಸವೂ ಸ್ವಲ್ಪ ಸ್ವಲ್ಪ ಅಲುಗಾಡತೊಡಗಿತು. ಅವರು ವಿಚಾರಿಸತೊಡಗಿದರು: ಮಾನವನು ಮಾನವನ ಭವಿಷ್ಯವನ್ನು ಹೇಳಬಲ್ಲನೇ? ಎಷ್ಟೋ ಭವಿಷ್ಯಕಾರರು ಬಂದು ಮೂರು-ನಾಲ್ಕು ಸಂತತಿಗಳಾಗುವವೆಂದು ಹೇಳಿ ಹಣ ಇಸಿದುಕೊಂಡು ಹೋಗಿದ್ದಾರೆ. ಅವ





ನೊಡೆಲ್ ೦೩೭೪: ೬ವಾಲ್ವ, ಅಲ್ ವೇವ್ಸ್
೪ ಬ್ಯಾಂಡ ಪಿಯಾನೋ ಕೀ ಸ್ವಿಚ್ ಏಸಿ
ಅಥವಾ ಎಸಿ/ಡಿಸಿ (ಎರಡು ಮಾಡಲ್)

ನೀವು ಯಾರೇ ಇದ್ದರೂ.....




ನೀವು ಮರ್ಫಿ ರೇಡಿಯೋದಿಂದ

ಉಲ್ಲಸಿತರಾಗುವಿರಿ




ಮಾಡೆಲ್ ೦೩೨೨: ೬ ವಾಲ್ವ ಅಲ್ ವೇವ್ಸ್ ೩
ಬ್ಯಾಂಡ ಏಸಿ ಇಲ್ಲವೆ ಏಸಿ/ಡಿಸಿ (೨ ಮಾಡಲ್)


MR.6.139




ಮೊಡೆಲ್ ೨೬೬
೭ವಾಲ್ವ, ಆಲ್ ವೇವ್ಸ ೫ ಬ್ಯಾಂಡ,
ಪಿಯಾನೋ ಕೀ ಸ್ವಿಚ್. ಎಸಿ




ಮೊಡೆಲ್ ೦೭೨೪
೬ ವಾಲ್ವ
ಆಲ ವೇವ್ಸ
೮ ಬ್ಯಾಂಡ, ಪೂರ
ಬ್ಯಾಂಡ ಸ್ಪ್ರೆಡ್
ಎಸಿ ಇಲ್ಲವೆ ಎಸಿ
ಡಿಸಿ (೨ಮಾಡಲ್)
ನೊಡೆಲ್ ೦೭೩೨ :
(ಡ್ರಾಯ ಬ್ಯಾಟರಿ)
೭ ವಾಲ್ವ




ನೊಡೆಲ್ ೦೩೫೨ :
೫ ವಾಲ್ವ ಆಲ್ ವೇವ್ಸ ೩ ಬ್ಯಾಂಡ ಎಸಿ
ಇಲ್ಲವೆ ಎಸಿ/ಡಿಸಿ (ಎರಡು ಮಾಡಲ್)



ಡೆಲ್ ೦೭೨೬ :
೭ ವಾಲ್ವ, ಆಲ್
ವೇವ್ಸ ೮ ಬ್ಯಾಂಡ,
ಪೂರ್ಣ ಬ್ಯಾಂಡ
ಸ್ಪ್ರೆಡ್ ಎಸಿ ಇಲ್ಲವೆ
ಎಸಿ ಡಿಸಿ (ಎರಡು
ಮೊಡೆಲ್ಲು)



ಮೊಡೆಲ್ ೦೨೯೮
೫ ವಾಲ್ವ, ಅಲ್ ವೇವ್ಸ ೩ ಬ್ಯಾಂಡ
ಎಸಿ/ಡಿಸಿ ಹಾಗೂ ಮೊಡೆಲ್ ೦೨೯೯ :
(ಡ್ರಾಯ ಬ್ಯಾಟರಿ) ೪ ವಾಲ್ವ



ನೊಡೆಲ್ ೦೭೫೨
೫ ವಾಲ್ವ, ಆಲ್
ವೇವ್ಸ ೩ ಬ್ಯಾಂಡ
ಎಸಿ ಇಲ್ಲವೆ
ಎಸಿ/ಡಿಸಿ
(ಎರಡ: ಮಾಡಲ್)
ಹಾಗೂ
ಮೊಡೆಲ್ ೦೭೫೧ :
(ಡ್ರಾಯ ಬ್ಯಾಟರಿ)
೫ ವಾಲ್ವ

murphy radio
delights
the home!

ರಂತೆಯೇ ಇವರೂ ತನ್ನನ್ನು ಏಕೆ ಮೋಸಗೊಳಿಸುತ್ತಿರಬಾರದು ?

"ಆದರೆ ಇದೆಲ್ಲವನ್ನೂ ಅಳಿಸಿ ಹಾಕುವಂತೆ ಕೊನೆಯ ಯಜಮಾನಿ ಎರಡು ತಿಂಗಳ ಗರ್ಭಿಣಿ ಎಂಬ ಸುದ್ದಿ ಹೊರಬಿತ್ತು. ಅಪಪ್ರಚಾರಕರ ನೀರು ಇಳಿದು ಹೋದವು. ಆದರೆ ಅವರು ಇಷ್ಟಕ್ಕೆ ಸುಮ್ಮನಾಗಲಿಲ್ಲ. 'ಏನೋ ಇನಾಮದಾರರಿಗೆ ದೈವಾನುಗ್ರಹವಿದ್ದಂತೆ ಆಗುತ್ತದೆ. ಆದರೆ ಇದು ಗಂಡು ಸಂತತಿಯೇ ಆಗುತ್ತದೆ ಎಂಬುದಕ್ಕೆ ಏನು ಆಧಾರ ?' ಗುರುಗಳ ಮೇಲೆ ಭಕ್ತಿ ಇದ್ದವರು, 'ಈಗ ಹೇಗಾಯಿತೋ ಮುಂದೂ ಹಾಗೇ ಆಗುತ್ತದೆ' ಎಂದು ಉತ್ತರಿಸಿದರು.

"ಇನಾಮದಾರರ ವಾಡೆಯಲ್ಲಿ ಸಂಭ್ರಮವೇ ಸಂಭ್ರಮ. ಗರ್ಭಿಣಿಯ ಬಯಕೆಗಳು, ಆಕೆಯ ಸ್ವಂತ ಬಯಕೆ ಏನೂ ಇರದಿದ್ದರೂ, ದಿನಕ್ಕೊಂದು ತೆರನಾಗಿ ಪೂರೈಸಲ್ಪಡಹತ್ತಿದವು. ಸಿದ್ಧಗಿರಿ ಗುರುಗಳನ್ನು ದಿನವೂ ವಾಡೆಗೆ ಕರೆಯಿಸಿ ಆದರಿಸುವುದು ಅತಿಯಾಗಿಯೇ ನಡೆಯತೊಡಗಿತು. ಇನಾಮದಾರರಿಗಂತೂ ಎಲ್ಲಿಲ್ಲದ ಆನಂದ. ಅವರಿಗೆ ಆತುರವೇ ಆತುರ. ಭಾವೀ ವಂಶೋದ್ಧಾರಕನಿಗಾಗಿ ಏನೆಲ್ಲವನ್ನೂ ಸಿದ್ಧಪಡಿಸತೊಡಗಿದರು. ಹೊಸ ತೊಟ್ಟಿಲು, ಹೊಸ ಆಭರಣ, ಹೊಸ ಆಟಿಗೆಗಳು ಇನ್ನೂ ಏನೇನೋ ಬರತೊಡಗಿದವು. ಇನಾಮದಾರರ ಆತುರ ಕಂಡು ಸಿದ್ಧಗಿರಿ ಗುರುಗಳು ನಕ್ಕರು."

ನಾನು ಮಾತ್ರ ಬೇಸರಿಸಿದ್ದೆ. ಕೆಲವು ಜನರು ಹೇಳುವಂತೆ ಸದರೀ ಸಿದ್ಧಗಿರಿ ಗುರುಗಳೂ ನಿಜವಾದ ಭವಿಷ್ಯವನ್ನೇ ಹೇಳಿರಬಹುದು. ಇನಾಮದಾರರಿಗೆ ಗಂಡುಮಗು ಹುಟ್ಟಿರಬಹುದು. ಆ ಆನಂದಕ್ಕಾಗಿ ಈ ವಾಚನಾಲಯ ಜನ್ಮತಾಳಿರಬಹುದು. ಆದರೆ ಇದನ್ನು ಇಷ್ಟು ಸುತ್ತುವರಿಸಿ ಏಕೆ ಹೇಳುತ್ತಿದ್ದಾನೋ ತಿಳಿಯದಾಯಿತು. ನಿರ್ವಾಹವಿಲ್ಲದೆ ಹೂಂ ಎನ್ನುತ್ತಿದ್ದೆ. ಅವನು ಮುಂದುವರಿಸಿದ:

"ಹೆರಿಗೆಯ ದಿನ ಬಂತು. ಇನಾಮದಾರರು ಸ್ವತಃ ಹೆರಿಗೆಯ ಬೇನೆ ಅನುಭವಿಸತೊಡಗಿದರು. ಗ್ರಾಮದ ಸೂಲಗಿತ್ತಿಯರು, ರಾಯಬಾಗದಿಂದ ಬಂದ ಓರ್ವ ನರ್ಸ್ ಹೆರಿಗೆಗಾಗಿ ಪ್ರಯತ್ನಿಸುತ್ತಿದ್ದರು. ಇನಾಮದಾರರೂ ಸಿದ್ಧಗಿರಿ ಗುರುಗಳೂ ಒಂದು ಕೋಣೆಯಲ್ಲಿ ಎದುರಿಗೆ ಕುಂಡಲಿಗಳನ್ನು ಇಟ್ಟುಕೊಂಡು ಗಡಿಯಾರ ನೋಡುತ್ತ ಕುಳಿತಿದ್ದರು. ಇನಾಮದಾರರ ಮುಖವು ಕ್ಷಣಕ್ಕೊಂದು ನಮೂನೆಯಾಗುತ್ತಿತ್ತು. ಅಷ್ಟರಲ್ಲಿ ನರ್ಸ್ ಇವರಿದ್ದ ಕೋಣೆಯನ್ನು ಪ್ರವೇಶಿಸಿ 'ಬಂಗಾರದಂಥ ಹೆಣ್ಣು ಮಗುವಾಯ್ತು. ಬಾಣಂತಿಯು ಕ್ಷೇಮವಾಗಿದ್ದಾಳೆ' ಎಂದು ಹೇಳಿ ಬಕ್ಷೀಸಿನ ಆಶೆಯಿಂದ ಹಾಗೇ ನಿಂತಳು.

"ಆದರೆ ಇನಾಮದಾರರ ಮುಖ ನೋಡುತ್ತಲೇ ಬಕ್ಷೀಸಂತೂ ಇರಲಿ, ತನ್ನ ಫೀಜೂ ಬರುವ ಆಶೆ ಅವಳಿಗೆ ಕಾಣಲಿಲ್ಲ.

"ಇನಾಮದಾರರಿಗೆ ದಿಕ್ಕು ತಿಳಿಯದಾಯಿತು. ಅವರೊಮ್ಮೆ ಸಿಟ್ಟಿನಿಂದ ಸಿದ್ಧಗಿರಿ ಗುರುಗಳನ್ನು ನೋಡಿದರು. ಬಾಯಿಂದ ಒಂದು ಶಬ್ದವನ್ನೂ ಉಚ್ಚರಿಸದೆ ಮಹಡಿಯನ್ನೇರಿ ತಮ್ಮ ಕೋಣೆಯನ್ನು ಸೇರಿ ಒಳಚಿಲಕವನ್ನು ಹಾಕಿಕೊಂಡರು.

"ಸಿದ್ಧಗಿರಿ ಗುರುಗಳಿಗೆ ನರ್ಸಳ ಮಾತಿನ ಮೇಲೆ ವಿಶ್ವಾಸ ಉಂಟಾಗಲಿಲ್ಲ. ಅವರು ಬಾಣಂತಿಯ ಕೋಣೆಗೆ ಧಾವಿಸಿದರು. ಅಲ್ಲಿಂದ ಹೊರಬಿದ್ದ ಓರ್ವ ಹೆಣ್ಣು ಮಗಳನ್ನು ಕೇಳಿದರು. ಅವಳು 'ಹೆಣ್ಣು ಮಗುವಾಯ್ತು' ಎಂದು ಹೇಳಿ ಗುರುಗಳನ್ನು ಅರ್ಥಪೂರ್ಣವಾಗಿ ನೋಡಿ ನಗುತ್ತ ಹೋಗಿಬಿಟ್ಟಳು.

"ಸಿದ್ಧಗಿರಿ ಗುರುಗಳು ಓಡುತ್ತ ಹೋಗಿ ಆ ಎರಡು ಕುಂಡಲಿಗಳನ್ನೂ ತೆಗೆದುಕೊಂಡರು. ನೋಡತೊಡಗಿದರು. ಶರೀರವೆಲ್ಲವೂ ಬೆವೆತಿತ್ತು. ತುಟಿಗಳು ನಡುಗುತ್ತಿದ್ದವು. ಕೈಗಳು ನಡುಗುತ್ತಿದ್ದವು. ಎಷ್ಟೋ ಹೊತ್ತಿನ ವರೆಗೆ ಕುಂಡಲಿ

ಗಳನ್ನು ನೋಡಿದರು. ಒಮ್ಮೆಲೆ ಹುಚ್ಚನಂತೆ ಕೂಗುತ್ತ ಎದ್ದರು. 'ಸುಳ್ಳು, ಸುಳ್ಳು. ಇದು ಗಂಡು. ಇದು ಹೆಣ್ಣಲ್ಲ. ಗಂಡು, ಗಂಡು, 'ಎಂದು ಇನಾಮದಾರರ ಕೋಣೆಗೆ ಓಡಿದರು.

"ಇನಾಮದಾರರು ಕೋಣೆಯ ಬಾಗಿಲು ತೆಗೆಯಲಿಲ್ಲ. ಸಿದ್ಧಗಿರಿ ಗುರುಗಳು ಹಾಗೇ ಹಿಂದಿರುಗಿದರು. ಕೈಯಲ್ಲಿ ಎರಡು ಕುಂಡಲಿಗಳನ್ನೂ ಹಿಡಿದುಕೊಂಡು ತಮ್ಮ ಮಠದತ್ತ ನಡದರು. ದಾರಿಯಲ್ಲಿ ಇಂಥ ಹೊತ್ತಿನಲ್ಲಿ ಯಾವ ಶಬ್ದಗಳು ಕಿವಿಗೆ ಬೀಳಬಹುದೆಂದೆನಿಸಿತ್ತೋ ಅದಕ್ಕಿಂತಲೂ ಸ್ವಲ್ಪ ಅಸಹ್ಯ ಶಬ್ದಗಳೇ ಕೇಳಿಸಿದವು. ಮನೆ ಮುಟ್ಟಿದರು. ಏನು ಮಾಡಬೇಕೋ ತಿಳಿಯದಾಯಿತು. ಮತ್ತೆ ಕುಂಡಲಿಗಳನ್ನು ಬಿಚ್ಚಿದರು. ಎಷ್ಟೋ ಹೊತ್ತಿನ ವರೆಗೆ ನೋಡಿದರು. ಒಮ್ಮೆಲೇ ಎದ್ದು 'ಇದು ಗಂಡು. ಇದು ಹೆಣ್ಣಲ್ಲ ಗಂಡು' ಎಂದು ಕೂಗುತ್ತ ಇನಾಮದಾರರ ವಾಡೆಯ ಕಡೆಗೆ ಓಡತೊಡಗಿದರು. ದಾರಿಯಲ್ಲಿ ಬಿದ್ದರು. ಎದ್ದರು. ಜನ ನಕ್ಕಿತು. ಗುರುಗಳು ವಾಡೆಯ ಹೆಬ್ಬಾಗಿಲನ್ನು ಮುಟ್ಟಿದರು. ಆದರೆ ಹೆಬ್ಬಾಗಿಲಿಗೆ ಒಬ್ಬ ಆಳು ಬಂದು 'ನೀವು ಇನ್ನು ಈ ವಾಡೆಯನ್ನು ಪ್ರವೇಶಿಸಬಾರದು. ಒಡೆಯರು ಇನ್ನು ಮುಂದೆ ನಿಮ್ಮ ಮುಖಾವಲೋಕನವನ್ನೂ ಮಾಡುವುದಿಲ್ಲವೆಂದು ತಮಗೆ ತಿಳಿಸಲು ಹೇಳಿದ್ದಾರೆ' ಎಂದ.

"ಸಿದ್ಧಗಿರಿ ಗುರುಗಳು ಒಮ್ಮೆಲೇ ಶಾಂತರಾಗಿಬಿಟ್ಟರು. ಅವರು ಬಾಯಿಂದ ಒಂದು ಶಬ್ದವನ್ನೂ ಉಚ್ಚರಿಸದೆ ನಡೆದುಬಿಟ್ಟರು.

"ಮರುದಿವಸ ಮುಂಜಾನೆ ಗ್ರಾಮದ ಜನರೆಲ್ಲರೂ ಸಿದ್ಧಗಿರಿ ಗುರುಗಳ ಮೃತ ಶರೀರವು ಊರಹೊರಗಿನ ಆಲದ ಮರಕ್ಕೆ ನೇತಾಡುತ್ತಿದ್ದುದನ್ನು ಕಂಡರು."

"ಓಹೋ ಹೀಗಾಯಿತೋ, ಪಾಪ" ಎಂದು ನಾನು ಜೋರಾಗಿ ಬಾಯಿ ತೆರೆದು ಆಕಳಿಸಿದೆ, ಕತೆ ಮುಗಿಯಿತೆಂದು ತಿಳಿದು.

ಆದರೆ ನನ್ನ ಮಿತ್ರನು, "ಇಲ್ಲಿಗೆ ಈ ಕತೆ ಮುಗಿಯಲಿಲ್ಲ. ಕೇಳು. ಇವೆಲ್ಲವುಗಳಿಂದ ಇನಾಮದಾರರು ಒಮ್ಮೆಲೇ ಮುದುಕರಂತೆ ಕಾಣತೊಡಗಿದರು. ಗಂಡು ಮಗುವಿಗಾಗಿ ಮತ್ತೊಂದು ಲಗ್ನ ಮಾಡಿಕೊಳ್ಳಬೇಕೆನ್ನುವಷ್ಟರಲ್ಲಿ ಕಾಂಗ್ರೆಸ್ ಸರಕಾರವು ಏಕಪತ್ನೀ ವ್ರತದ ಆಜ್ಞೆಯನ್ನು ಹೊರಡಿಸಿಬಿಟ್ಟಿತು. ಇನಾಮದಾ-ರರ ಇನಾಮ ರದ್ದತಿಯೂ ಆಯಿತು. ಇನಾಮದಾರರು ಜೀವನದಲ್ಲಿ ಯಾವ ಆಸೆಯನ್ನು ಇರಿಸಿಕೊಳ್ಳದೆ ಮಗಳು ಪ್ರಮೀಲಾ ಕುಮಾರಿಯನ್ನೇ ನೋಡುತ್ತ ದಿನಗಳೆಯುತ್ತಿದ್ದರು.

"ಪ್ರಮೀಲೆಯು ಹದಿನಾರು ವರುಷದ ತರುಣಿಯಾದಳು. ಅಂದರೆ ವಯಸ್ಸಿನಿಂದ ಮಾತ್ರ ತರುಣಿಯಾಗಿದ್ದಳು. ಇನಾಮದಾರರಂಥ ಸೌ-ಖ್ಯದ ಮನೆಯಲ್ಲಿ ಹನ್ನೊಂದು ವರ್ಷಕ್ಕೇ ಮೈನೆರೆಯ ಬೇಕಾದ ಪ್ರಮೀಲೆಯು ಹದಿನಾರು ವರ್ಷದವಳಾದರೂ ಮೈನೆರೆದಿರಲಿಲ್ಲ. ಅವಳ ಎದೆ ಉಬ್ಬುವ ಬದಲು ಎದೆಯ ಮೇಲೆ ಚಿಕ್ಕ ಚಿಕ್ಕ ಕೂದಲು ಕಾಣಿಸತೊಡಗಿದವು. ಇದರಿಂದ ಇನಾಮದಾರರ ಚಿಂತೆ ಮತ್ತಿಷ್ಟು ಹೆಚ್ಚತೊಡಗಿತು.

"ಇದ್ದಕ್ಕಿದ್ದಂತೆ ಒಂದು ದಿನ, ಪ್ರಮೀಲೆಯು ಗುಪ್ತ ರೋಗವೊಂದರಿಂದ ಬಳಲುತ್ತಿದ್ದಾಳೆಂದು ಇನಾಮದಾರರಿಗೆ ಗೊತ್ತಾಯಿತು. ಕೂಡಲೇ ಸ್ಥಳೀಯ ಡಾ. ಸುಗ್ರೀವ ಇವರನ್ನು ಕರೆಯಿಸಿದರು. ಅವರೇನೋ ಉಪಾಯ ಕೈಕೊಂಡರು. ಏನೂ ಪ್ರಯೋಜನವಾಗಲಿಲ್ಲ. ಪ್ರಮೀಲೆಯ ಹೊಟ್ಟೆ ಉಬ್ಬತೊಡಗಿತು. ನಾಲ್ಕು ದಿನಗಳಿಂದ ಅವಳ ಮೂತ್ರವಿಸರ್ಜನೆಯೇ ಬಂದಾಗಿತ್ತು.

"ಡಾ. ಸುಗ್ರೀವ ಇವರ ಸಲಹೆಯಂತೆ ಪ್ರಮೀಲೆಯನ್ನು ಮಿರಜಿಯ ವಾನಲೆಸ್ ಮಿಶನ್ ಹಾಸ್ಪಿಟಲಿಗೆ ಒಯ್ಯಲಾಯಿತು. ಅಲ್ಲಿಯ ಡಾಕ್ಟರರು ಪ್ರಮೀಲೆಯ ಅಂಗತಪಾಸಣೆ ನಡೆಸಿದರು. ಬಹು ಹೊತ್ತಿನ ವರೆಗೆ ತಪಾಸಣೆ

ಯಾದ ನಂತರ ಪ್ರಮೀಲೆಯನ್ನು ಎಕ್ಸ್‌ರೇ ರೂಮಿಗೆ ಕರೆದೊಯ್ಯಲಾಯಿತು.

"ಇನಾಮದಾರರು ತೀರಾ ದಿಕ್ಕೆಟ್ಟವರಾಗಿದ್ದರು. ಆ ಭವ್ಯ ಹಾಸ್ಪಿಟಲಿನಲ್ಲಿ ಅವರು ತೀರ ಚಿಕ್ಕವರಾದಂತೆಯೂ ಅನಾಥರಾದಂತೆಯೂ ಅನಿಸತೊಡಗಿತು.

"ಎಕ್ಸ್‌ರೇ ರೂಮಿನಿಂದ ಬಂದ ಡಾಕ್ಟರರು 'ಇದೇನೋ ಹೊಸ ಕೇಸು ಕಾಣುತ್ತದೆ. ಆಪರೇಶನ್ ಮಾಡಬೇಕು' ಅಂದರು.

" ನಾಮದಾರರ ಎರಡೂ ಕಣ್ಣುಗಳಿಂದ ಪಳಕ್ಕನೇ ಹನಿಯುದುರಿದವು. 'ಹೂ' ಎಂದು ಡಾಕ್ಟರರ ಎದುರಿಗೆ ಕೈಗಳನ್ನು ಜೋಡಿಸಿ ನಿಂತರು.

"ಮರುದಿವಸದ ವರ್ತಮಾನ ಪತ್ರಗಳು ದಪ್ಪಕ್ಷರಗಳಲ್ಲಿ ಸುದ್ದಿಯೊಂದನ್ನು ಪ್ರಕಟಿಸಿದವು:

"'ಹೆಣ್ಣು ಗಂಡಾಯ್ತು.

"'ಮಿರಜ, ತಾ. ೧೫ - ಇಲ್ಲಿಯ ವಾನಲೆಸ್ ಮಿಶನ್ ಹಾಸ್ಪಿಟಲಿನಲ್ಲಿ ಡಾ. — ಇವರು ಒಬ್ಬ ಹುಡಿಗೆಯ ಮೇಲೆ ಶಸ್ತ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಯಿಸಿ ಹುಡುಗನನ್ನಾಗಿಸಿದರು. ಮೂತ್ರ ರೋಗದಿಂದ ಬಳಲುತ್ತಿದ್ದ ಹದಿನಾರು ವರ್ಷದ ಕುಮಾರಿ ಪ್ರಮೀಲಾ. . ."

"ಎರಡು ತಿಂಗಳ ನಂತರ ಇನಾಮದಾರರು ತಮ್ಮ ಮಗನನ್ನು (ಪ್ರಮೀಲೆಯನ್ನು) ಹಾಸ್ಪಿಟಲಿನಿಂದ ಮನೆಗೆ ಕರೆದುಕೊಂಡು ಬಂದರು.

"ಸಿದ್ಧಗಿರಿ ಗುರುಗಳು ಹೋಗಿದ್ದರು. ಆದ ತಪ್ಪು ಸರಿಪಡಿಸುವಂತಿರಲಿಲ್ಲ.

"ಸಿದ್ಧಗಿರಿ ಗುರುಗಳು ವಾಸಿಸುತ್ತಿದ್ದ ಮಠವೇ ಈಗ ಇನಾಮದಾರರ ಉದಾರ ಆಶ್ರಯದಲ್ಲಿ 'ಶ್ರೀ. ಸಿದ್ಧಗಿರಿ ಸಾರ್ವಜನಿಕ ವಾಚನಾಲಯ' ವಾಗಿ ನಡೆಯುತ್ತಿದೆ." *

ಜಾತಿಭೇದ !


ರಷ್ಯದ ಪ್ರಧಾನ ಮಂತ್ರಿ ಕ್ರುಶ್ಚೇವರು ಕಳೆದಬಾರಿ ಇಂಗ್ಲೆಂಡನ್ನು ಸಂದರ್ಶಿಸಿದಾಗ ಅಲ್ಲಿಯ ಬೃಹತ್ ವಿಮಾನ ನಿಲ್ದಾಣವೊಂದರಲ್ಲಿ ಸ್ವಲ್ಪ ಸಮಯ ತಂಗಿದ್ದರು. ಸಾವಿರಾರು ಜನರು ಕೆಲಸ ಮಾಡುತ್ತಿರುವ ಅತೀ ದೊಡ್ಡ ನಿಲ್ದಾಣವದು. ನಿಲ್ದಾಣದ ಅಧಿಕಾರಿಗಳೊಡನೆ ಹೀಗೆಯೇ ಕುಶಲ ಪ್ರಶ್ನೆಗಳಾದ ತರುವಾಯ ಅವರ ಕೈಕೆಳಗಿನ ನೌಕರ ಜನರೆಷ್ಟೆಂದೂ ಅವರು ವಾರದಲ್ಲಿ ಪೂರೈಸುವ ಕೆಲಸವೆಷ್ಟೆಂದೂ ಕ್ರುಶ್ಚೇವರು ಕೇಳಿದರು.

ಸುಮಾರು ನಾಲ್ಕು ಸಾವಿರ ಕಾರ್ಮಿಕರಿರುವ ಈ ನಿಲ್ದಾಣದಲ್ಲಿ ಪ್ರತಿಯೊಬ್ಬನೂ ವಾರದಲ್ಲಿ ೩೪ ತಾಸು ದುಡಿಯುವನೆಂದು ಅಧಿಕಾರಿಗಳೆಂದರು.

"ಇಷ್ಟೇನೆ? ಬಹಳ ಅತೃಪ್ತಿಕರ ಪರಿಸ್ಥಿತಿ! ಮೊಸ್ಕೊ ನಗರದಲ್ಲಾದರೆ ಪ್ರತಿಯೊಬ್ಬನೂ ೬೪ ತಾಸು ಕೆಲಸ ಮಾಡುತ್ತಾನೆ. ನಿಮ್ಮಲ್ಲಿ ಕೂಡ ಇದನ್ನು ಜಾರಿಗೆ ತರಲಾಗದೇ?" ಎಂದು ಕ್ರುಶ್ಚೇವರು ಪ್ರಶ್ನಿಸಿದಾಗ ಅಧಿಕಾರಿಗಳು ಇಳಿಮುಖ ಮಾಡಿಕೊಂಡು ಹೀಗಂದರು:

"ಅಬ್ಬಾ! ಜಾರಿಗೆ ತರುವುದಂತಿರಲಿ, ಆ ಕುರಿತು ಏನಾದರೂ ಪ್ರಸ್ತಾಪ ಬಂತೆಂದರೆ ಸರಿ, ನಾಲ್ಕು ಸಾವಿರ ಜನರೂ ಮರುದಿನದಿಂದ ಮುಷ್ಕರ ಹೂಡುವುದು ಖಂಡಿತ. ನಮ್ಮ ಕೆಲಸಗಾರರ ಪೈಕಿ ಹೆಚ್ಚಿನವರು ಕಮ್ಯೂನಿಷ್ಟರೇ!"

— ಶಾಂತಾಕುಮಾರಿ, ಬೆಂಗಳೂರು.



ಅದಕ್ಕೆ ಬರಿ ೩,೫೦೦ ವರ್ಷ ವಯಸ್ಸಾಯಿತಂತೆ!

ಶುಕ್ರಗ್ರಹ ಹೇಗೆ ಹುಟ್ಟಿತು?

ಪಾವೆಂ

ರಶಿಯನ್ನರು ಶುಕ್ರಗ್ರಹದತ್ತ ತಮ್ಮೊಂದು ಆಕಾಶಬಾಣ ಹೊಡೆದಿದ್ದಾರೆ. ಮೇ ಉತ್ತರಾರ್ಧದಲ್ಲಿ ಅದು ಮೂರು ಕೋಟಿ ಮೈಲು ದೂರದಲ್ಲಿರುವ ಆ ಬಿಳಿಯ ಗ್ರಹಕ್ಕೆ ಮುಟ್ಟಬಹುದು. ಅಲ್ಲಿಂದ ಅದು ರೇಡಿಯೋ ತರಂಗಗಳ ಮೂಲಕ ಇಲ್ಲಿಗೆ ಸಂದೇಶಗಳನ್ನು ಕಳಿಸಬಹುದು. ಆಗ ನಮಗೆ ಶುಕ್ರ ಗ್ರಹದ ಬಗ್ಗೆ ಹೆಚ್ಚು ತಿಳಿವಳಿಕೆ ಸಿಗಬಹುದು.

—ತಿಳಿವಳಿಕೆ ಅತಿ ಅಗತ್ಯವಾಗಿದೆ. ಶುಕ್ರ ನಮಗೆ ಅತಿ ಹತ್ತಿರದ ಗ್ರಹ. ತೀರ ಹತ್ತಿರ ಬಂದಾಗ ಅದಕ್ಕೂ ನಮಗೂ ಕೇವಲ ಎರಡೂವರೆ ಕೋಟಿ ಮೈಲು ದೂರವಿರುತ್ತದಷ್ಟೇ. ಅದು ಗಾತ್ರದಲ್ಲಿ ಸುಮ - ಸುಮಾರು ನಮ್ಮ ಭೂಮಿಯಷ್ಟೇ ಇದೆ. ಆದರೆ ಶುಕ್ರ ಗ್ರಹವನ್ನು ಕುರಿತು ಇದಕ್ಕಿಂತ ಹೆಚ್ಚೇನೂ ನಮಗೆ ಗೊತ್ತಿಲ್ಲ. ಅಲ್ಲಿ ನಮ್ಮಂತೆ ಮನುಷ್ಯರಿರಬಹುದೆ? ಅಥವಾ ಜೀವಿಗಳಾದರೂ ಇರಬಹುದೆ?

ಇಂಥ ಬಲು ಸ್ವಾರಸ್ಯವಾದ ಪ್ರಶ್ನೆಗಳಿಗಂತಿರಲಿ, ಅಲ್ಲಿ ನೀರಿದೆಯೆ? ಜೀವಿಗಳಿಗೆ ಅಗತ್ಯವಾದ ಆಮ್ಲಜನಕ (ಪ್ರಾಣವಾಯು) ಇದೆಯೆ? ಇಂಥ ಸ್ಥೂಲ ಪ್ರಶ್ನೆಗಳಿಗೂ ಸರಿಯಾದ ಉತ್ತರ ವಿಜ್ಞಾನಿಗಳಿಗೆ ಗೊತ್ತಿಲ್ಲ. ಅಷ್ಟೇಕೆ, ಅದು ತನ್ನ ಅಚ್ಚಿನ ಸುತ್ತ ಒಂದು ಸುತ್ತು ಬರಲು ಎಷ್ಟು ಕಾಲ ತೆಗೆದುಕೊಳ್ಳುತ್ತದೆ? ಅಂದರೆ ಶುಕ್ರ ದಿನ

ಎಷ್ಟು ದೀರ್ಘವಾಗಿದೆ? ಎಂಬ ಸಾಮಾನ್ಯ ವಿಷಯದಲ್ಲಿ ಕೂಡ ವಿಜ್ಞಾನಿಗಳಲ್ಲಿ ಒಮ್ಮತವಿಲ್ಲ.

ಡಾ. ಇಮ್ಯಾನ್ಯುವೆಲ್ ವೆಲಿಕೋವಸ್ಕಿಯವರನ್ನು ಕೇಳಿದರೆ ಶುಕ್ರ ಗ್ರಹದಲ್ಲಿ ಮನುಷ್ಯರಂತಿರಲಿ, ಯಾವ ಜೀವಜಂತುವೂ ಉದ್ಭವಿಸಿರಲಿಕ್ಕೇ ಶಕ್ಯವಿಲ್ಲ. ಭೂಮಿ ಹುಟ್ಟಿ ಎಷ್ಟೋ ಕೋಟಿ ವರ್ಷಗಳ ನಂತರ ಇಲ್ಲಿ ಪ್ರಥಮ ಜೀವಿ—ಏಕ ಕಣ ಸೂಕ್ಷ್ಮ ಜೀವಿ — ಹುಟ್ಟಿತೆಂದು ನಮಗೆ ಗೊತ್ತಿದೆ. ಆದರೆ ಶುಕ್ರ ಗ್ರಹ ಹುಟ್ಟಿದ್ದೇ, ಡಾ. ವೆಲಿಕೋವಸ್ಕಿಯವರ ಅಭಿಪ್ರಾಯದಲ್ಲಿ, ಮೊನ್ನೆ ಮೊನ್ನೆ - ಕೇವಲ ಮೂರೂವರೆ ಸಾವಿರ ವರ್ಷಗಳ ಪೂರ್ವದಲ್ಲಿ.

ರಶಿಯದಲ್ಲಿ ಹುಟ್ಟಿ ಅಮೇರಿಕದಲ್ಲಿ ನೆಲಸಿದ, ಹಲವು ವಿಶ್ವವಿದ್ಯಾಲಯಗಳ ಪದವೀಧರರಾದ ಡಾ. ವೆಲಿಕೋವಸ್ಕಿಯವರು ೧೯೫೦ರಲ್ಲಿ ಪ್ರಕಟಿಸಿದ " ಜಗತ್ತುಗಳ ಘರ್ಷಣೆ " (Worlds in Collision) ಎಂಬ ಗ್ರಂಥದಲ್ಲಿ ಈ ವಿಸ್ಮಯಕರ ಸಿದ್ಧಾಂತ ಪ್ರತಿಪಾದಿಸಲ್ಪಟ್ಟಿದೆ. ಅನೇಕ ವಿಜ್ಞಾನ ಶಾಖೆಗಳಿಂದಲೂ ಪುರಾತನ ದಾಖಲೆಗಳಿಂದಲೂ ದಂತಕಥೆಗಳಿಂದಲೂ ಪ್ರಮಾಣಗಳನ್ನಾರಿಸಿ, ಹೊಂದಿಸಿ ಅವರು ಮಂಡಿಸಿದ ಈ ಸಿದ್ಧಾಂತವು ವಿಚಾರಾರ್ಹವೆಂದು ಕೆಲ ಪ್ರಮುಖ ಪಂಡಿತರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ವರ್ಷ ಸುಮಾರು ಕ್ರಿ. ಪೂ. ೧೫೦೦. ಭಾರೀ ಗಾತ್ರದ ಧೂಮಕೇತುವೊಂದು ಭೂಮಿಯ ಸಮೀಪದಲ್ಲಿ ಅಮಿತ ವೇಗದಿಂದ ಹಾದು ಹೋಯಿತು. ೫೨ ವರ್ಷಗಳ ನಂತರ ಅದೇ ಧೂಮಕೇತು ಮತ್ತೆ ಭೂಮಿಯನ್ನು ಮುತ್ತಿಡಲು ಬಂದಿತ್ತು. ಎರಡೂ ಬಾರಿ ಅಂತರಿಕ್ಷದಲ್ಲಿ ಆಶ್ಚರ್ಯಕರ, ಭೀಕರ ದೃಶ್ಯಗಳು ಗೋಚರಿಸಿದವು. ಭೂಮಿಯಲ್ಲಿ ಕಂಡು ಕೇಳಿರದ ಉತ್ಪಾತಗಳಾದವು. ಏಳೆಂಟು ನೂರು ವರ್ಷಗಳ ನಂತರ ಅದೇ ಧೂಮಕೇತು ಮಂಗಳನನ್ನು ಸಮೀಪಿಸಿ ಅಲ್ಲಿ ಮಹೋತ್ಪಾತಗಳನ್ನೂ ಭೂಮಿಯಲ್ಲಿ ಕೂಡ ಕೋಲಾಹಲವನ್ನೂ ಎಬ್ಬಿಸಿತು. ಎಂಟು ಶತಮಾನಗಳ ಈ ಅತಂತ್ರ ಧಾವಂತದ ನಂತರ ಆ ಧೂಮಕೇತು ಸೂರ್ಯನ ಸುತ್ತ ತನ್ನ ಪಥವನ್ನು ಕಂಡುಕೊಂಡಿತು. ಅದೇ ನಮ್ಮ ಇಂದಿನ ಶುಕ್ರ ಗ್ರಹ.

ಈ ಧೂಮಕೇತು ಭೂಮಿಯನ್ನು ಸಮೀಪಿಸಿದಾಗ್ಗೆ ಇಲ್ಲಿ ಘಟಿಸಿದ ಘಟನೆಗಳು ನಿಜವಾಗಿ ಅಘಟಿತ ಘಟನೆಗಳೇ ಆಗಿದ್ದವು. ಪ್ರಚಂಡ ಬಿರುಗಾಳಿಗಳು ಬೀಸಿದವು, ಗಗನದಿಂದ ಕಲ್ಲುಗಳ ಸುರಿಮಳೆಯಾಯಿತು, ಭೂಕಂಪಗಳಿಂದ ನೆಲ ಬಿರಿಯಿತು, ಗಗನದಲ್ಲಿ ಭಾರೀ ಬೆಂಕಿ ಕಾಣಿಸಿತು, ಸಾಗರ ಸಮುದ್ರಗಳ ನೀರು ಇಬ್ಭಾಗವಾಯಿತು ಮತ್ತು ಎಲ್ಲಕ್ಕೂ ಭಯಂಕರವಾಗಿ ಎಂದರೆ ಸೂರ್ಯ ಚಂದ್ರರು ನಿಂತಲ್ಲಿಯೇ ಬಹು ಕಾಲ ನಿಂತಿದ್ದರು !

ಕಲ್ಪನಾ ವಿಲಾಸ? ಮೇಲಿನ ವರ್ಣನೆಯನ್ನು ಡಾ. ವೆಲಿಕೋವಸ್ಕಿಯರು ಸ್ವಂತ ಊಹೆಯಿಂದ ಮಾಡಿರದೆ ಬೈಬಲ್ಲಿನ (ಹಳೇ ಒಡಂಬಡಿಕೆ) ದಾಖಲೆಗಳಿಂದ ಸಂಗ್ರಹಿಸಿದ್ದಾರೆ. ಅಲ್ಲಿ ಎರಡು ಸಲ ಈ ಪವಾಡ ಘಟನೆಗಳ ವರ್ಣನೆ ಬರುತ್ತದೆ. ಮೊದಲನೆಯದು (ಕ್ರಿ. ಪೂ. ೧೫೦೦) ಯಹೂದ್ಯರು ಇಜಿಪ್ಟಿನಲ್ಲಿ ಅಲ್ಲಿನ ಚಕ್ರವರ್ತಿಯ ಗುಲಾಮರಾಗಿ ನವೆಯುತ್ತಿದ್ದಾಗ್ಗೆ. ಗುಲಾಮಗಿರಿಯ ದಬ್ಬಾಳಿಕೆ ಸಹಿಸಲಾರದೆ ಅಲ್ಲಿಂದ ಬಿಡುಗಡೆಯನ್ನು ಅವರು ಬಯಸಿದಾಗ ಚಕ್ರವರ್ತಿ ನಿರಾಕರಿಸುತ್ತಾನೆ. ಆಗ ದೇವರು ಕುಪಿತನಾಗಿ ಮಿಡಿತೆಗಳ ಪಿಡುಗನ್ನೂ ರಕ್ತದ ಮಳೆಯನ್ನೂ ಹಗಲೇ ಇಲ್ಲವೆಂಬಂಥ ಕತ್ತಲೆಯನ್ನೂ ಕಳಿಸುತ್ತಾನೆ. ಚಕ್ರವರ್ತಿ ಅಂಜಿ ಯಹೂದ್ಯರನ್ನು ಬಿಡುಗಡೆ ಮಾಡುತ್ತಾನೆ.

ಈ ವರ್ಣನೆಗಳು ಯಹೂದ್ಯ ಪುರಾಣವಾದ ಬೈಬಲ್ಲಿನಲ್ಲಿ ಮಾತ್ರ ಇದ್ದರೆ ಕಟ್ಟುಕಥೆಯೆಂದು ತುಚ್ಛೀಕರಿಸಿ ಬಿಡಬಹುದಾಗಿತ್ತು. ಆದರೆ ಜಗತ್ತಿನ ಸುತ್ತೆಲ್ಲ ಅದರ ದಾಖಲೆಗಳಿವೆ. ಸ್ವತಃ

ಇಜಿಪ್ತಿನಲ್ಲಿ ಇವುವರನು ಬರೆದಿಟ್ಟ ದಾಖಲೆಗಳು ನೆತ್ತರ ಹೊಳೆಯ ಸುದ್ದಿ ಹೇಳುತ್ತವೆ. ಹಾಗೆಯೆ ಇಂದಿನ ಅಮೇರಿಕದಲ್ಲಿನ ಮೂಲ ನಿವಾಸಿಗಳಾದ ಮಾಯಾ ಜನರ ದಾಖಲೆಗಳಲ್ಲಿಯೂ ಪುರಾತನದಲ್ಲಾದ ರಕ್ತದ ಮಳೆಯ ವರ್ಣನೆ ಬಂದಿದೆ.

ಇದರಲ್ಲಿ ನಂಬಲಾರದ್ದೂ ಇಲ್ಲ. ಆಗ ಆ ಧೂಮಕೇತುವಿನ ಬಾಲ ಭೂಮಿಯ ಹತ್ತಿರ ಬಂದಿರಬೇಕು. ಧೂಮಕೇತುಗಳ ಬಾಲ ಧೂಳಿ ಕಣಗಳಿಂದ ತುಂಬಿರುತ್ತದೆ. ಸಹಜವಾಗಿಯೆ ಆಗ ಆ ಧೂಳಿ ಭೂಮಿಯಿಂದ ಆಕರ್ಷಿಸಲ್ಪಟ್ಟು ಧೂಳಿಯ ಮಳೆಯಾಗಿ ನದಿಗಳು ಕೆಂಪೇರಿರಬೇಕು. ಬೈಬಲ್ಲು ಹೇಳುವ ಕಲ್ಲಿನ ಮಳೆಯಾದರೂ ಸಮೀಪಿಸುತ್ತಿದ್ದ ಧೂಮಕೇತುವಿನಿಂದ ಭೂಮಿಯ ಆಕರ್ಷಣೆಯ ದೆಸೆಯಿಂದ ಕಿತ್ತು ಬಂದು ಪುಡಿಪುಡಿಯಾದ ಪದಾರ್ಥ ಭೂಮಿಯ ಮೇಲೆ ಸುರಿದದ್ದೇ ಆಗಿತ್ತು.

ಧೂಮಕೇತುವಿನ ತಲೆ ಭೂಮಿಗೆ ಹತ್ತಿರವಾಗಿ ಬಂದಲ್ಲಿ— ಅದು ಹೆಚ್ಚು ಕಡಿಮೆ ಭೂಮಿಯಷ್ಟೇ ದೊಡ್ಡದಿದ್ದುದರಿಂದ— ಭೂಮಿಯ ಅಕ್ಷದ ಸುತ್ತಲ ಚಲನೆಯ ಮೇಲೆ ಪ್ರಭಾವವಾಗಿ ಅದು ತಡೆದು ನಿಲ್ಲಲೇಬೇಕೆಂದು ವಿಜ್ಞಾನ ಒಪ್ಪುತ್ತದೆ. ಭೂಮಿ ತಡೆದು ನಿಂತಾಗ ಸೂರ್ಯ ಚಂದ್ರರು ಇದ್ದಲ್ಲೆ ನಿಲ್ಲುವುದು ಅನಿವಾರ್ಯ. ಅದನ್ನೇ ಬೈಬಲ್ ಹೇಳಿದೆ. ಭೂಮಿ ತಡೆದು ನಿಂತಾಗ ಮತ್ತು ಹೊರಗಿನ ಆಕಾಶಕಾಯದ ಪ್ರಬಲ ಆಕರ್ಷಣೆಯಿದ್ದಾಗ ಅದ್ಭುತ ಬಿರುಗಾಳಿಗಳು ಬೀಸುವುದೂ ತಪ್ಪಿದ್ದಲ್ಲ. ಇಂಥ ಅಗಾಧ ಬಿರುಗಾಳಿಗಳ ವರ್ಣನೆ ಭಾರತದಿಂದ ಅಮೇರಿಕದ ವರೆಗೆ ಸಕಲ ದೇಶಗಳ ಪುರಾಣ, ಜಾನಪದ ಕಥೆಗಳಲ್ಲೂ ಕಾಣಿಸುತ್ತದೆ.

ಇಷ್ಟೊಂದು ಗುರುತ್ವಾಕರ್ಷಣೆಯುಳ್ಳ ಒಂದು ಧೂಮಕೇತು ಇಷ್ಟು ಹತ್ತಿರ ಬಂದಿರುವಾಗ ಸಾಗರ ಸಮುದ್ರಗಳ ನೀರು ಅಪ್ರತಿಮ ಪ್ರಮಾಣದಲ್ಲಿ ಉಬ್ಬುವುದು ಸ್ವಾಭಾವಿಕ. ಚಂದ್ರನಿಂದಾಗುವ ಭರತಗಳೇ ೫೦ ಅಡಿ ಏರಬಹುದಾದರೆ ಅದಕ್ಕಿಂತ ನೂರಾರು ಮಡಿ ಗುರುತರವಾದ ಆಕಾಶಕಾಯ ಸಮೀಪಿಸಿದಾಗ ಮೈಲುಗಟ್ಟಳೆ ನೀರೇರಿರಬೇಕು.

—ಮತ್ತು ಏರಿತ್ತು. ಇಜಿಪ್ತಿನಿಂದ ಪಲಾಯನ ಮಾಡುತ್ತಿದ್ದ ಯಹೂದ್ಯರು ಕೆಂಪು ಸಮುದ್ರದ ದಡವನ್ನು ಸೇರಿದ್ದರಾಗ. ಇಜಿಪ್ತಿನ ದಂಡು ಅವರ ಬೆನ್ನಟ್ಟಿತ್ತು. ಆಗ ನಡೆದ ಪವಾಡದ ಚಿತ್ರವತ್ತಾದ ವರ್ಣನೆ ಬೈಬಲ್ಲಿನಲ್ಲಿದೆ. ಆಕಾಶದಲ್ಲಿ ಹಗಲಲ್ಲಿ ಪ್ರಚಂಡ ಮೋಡದ ಸ್ತಂಭವೊಂದು ಚಲಿಸುತ್ತಿತ್ತು (ಇದು ಆ ಧೂಮಕೇತುವೇ). ರಾತ್ರಿಯಲ್ಲಿ ಅದೇ ಘೋರ ಪ್ರಕಾಶದ ಸ್ತಂಭವಾಗುತ್ತಿತ್ತು (ಇದು ಸೂರ್ಯನ ಪ್ರಕಾಶದ ಪ್ರತಿಫಲನದಿಂದ). ಈ ಅಮೋಘ ಸಂಕೇತವನ್ನು ಅನುಸರಿಸಿ ಸಾಗುತ್ತಿದ್ದ ಯಹೂದ್ಯರು ಶತ್ರುಗಳಿಂದ ಅಟ್ಟಲ್ಪಟ್ಟು ಕೆಂಪು ಸಮುದ್ರದ ತೀರಕ್ಕೆ ಬಂದಾಗ ದೇವರ ಮಹಿಮೆಯಿಂದ ಸಮುದ್ರ ಇಬ್ಭಾಗವಾಗಿ ಅವರಿಗೆ ದಾರಿ ಬಿಟ್ಟುಕೊಟ್ಟಿತು. ಸಮುದ್ರ ಮಧ್ಯದಲ್ಲಾದ ಈ ಒಣ ಭೂಮಿಯ ಮೂಲಕ ಯಹೂದ್ಯರು ಪಾರಾಗಿ ಆ ದಡ ಸೇರಿದರು. ಶತ್ರುಗಳು ಅದೇ ಮಾರ್ಗವಾಗಿ ಅವರನ್ನು ಹಿಂಬಾಲಿಸಿದಾಗ ಒಮ್ಮೆಲೆ ಅತ್ತಿತ್ತಲ ನೀರು ನುಗ್ಗಿ ಬಂದು ಹೇಳಹೆಸರಿಲ್ಲದೆ ಅವರನ್ನು ನಾಶ ಮಾಡಿಬಿಟ್ಟಿತು ಎಂದು ಬೈಬಲ್ ಹೇಳುತ್ತದೆ.

ಧೂಮಕೇತುವಿನ ಆಕರ್ಷಣೆಯಿಂದ ನೀರು ಒಂದೆಡೆ ಗುಡ್ಡೆಯಾದಾಗ ಇನ್ನೊಂದೆಡೆ ತಳವು ನಿರ್ಜಲವಾಗುವುದು ಸಹಜವೇ ಆಗಿತ್ತು. ಯಹೂದ್ಯರಿಗೆ ಅದು ಸಹಾಯವಾಯಿತು. ಅಷ್ಟರಲ್ಲಿ ಧೂಮಕೇತು ಸರಿದು ಹೋಗಿದ್ದುದರಿಂದ ನೀರು ಮತ್ತೆ ಯಥಾಸ್ಥಿತಿಗೆ ಬಂತು— ಇಜಿಪ್ಯನ್ನರನ್ನು ಮುಳುಗಿಸಿತು.

ಯಹೂದ್ಯರೇನೋ ಇದು ದೇವರು ತಮಗಾಗಿ

ರಚಿಸಿದ ಪವಾಡವೆಂದುಕೊಂಡಿದ್ದರು. ಆದರೆ ನಿಜವಾಗಿ ಅದು ಇಡೀ ಭೂಮಿಯಲ್ಲಿ ಎಲ್ಲರಿಗೂ ಅನುಭವಕ್ಕೆ ಬಂದಿತ್ತು. ಇದೇ ಕಾಲದಲ್ಲಿ ಚೀನದಲ್ಲಿ ಯುಹಾವು ಆಳುತ್ತಿದ್ದ. ಅವನ ಕಾಲದ ದಾಖಲೆಗಳು ಅನೇಕ ದಿನ ಸೂರ್ಯ ಮುಳುಗಲೇ ಇಲ್ಲ, ದಾವಾನಲಗಳೆದ್ದವು, ಗಗನ ಮುಟ್ಟುವ ಭಾರಿ ತೆರೆಗಳೆದ್ದವು, ಎಂದು ಹೇಳಿವೆ. ಅಮೇರಿಕದ ಅಜಟೆಕ್ ನಾಗರಿಕತೆಯ ದಾಖಲೆಗಳು ಪುರಾತನ ಕಾಲದಲ್ಲಿ ಒಮ್ಮೆ ಅನೇಕ ದಿನಗಳ ವರೆಗೆ ಹಗಲೇ ಆಗಲಿಲ್ಲ ಎನ್ನುತವೆ. ಇಲ್ಲಿ ಸೂರ್ಯ ಮುಳುಗದಿದ್ದರೆ ಅಲ್ಲಿ ಹೇಗೆ ಉದಯಿಸಿಯಾನು ?

ಈ ಘಟನೆಗಳ ಫಲವಾಗಿ ಭೂಮಿಯ ಸ್ವರೂಪವೇ ಬದಲಾಗಿ ಹೋಯಿತೆಂದು ಡಾ. ವೆಲಿಕೋವಸ್ಕಿ ಹೇಳಿದ್ದಾರೆ. ಆಗ ಭೂಮಿ ದಿಕ್ಕು ಬದಲಿಸಿ ವಿರುದ್ಧ ದಿಶೆಗೆ ತಿರುಗಲಾರಂಭಿಸಿತು. ಇಜಿಪ್ಟಿನ ಪ್ರಾಚೀನ ಚಿತ್ರಗಳಲ್ಲಿ ತೋರಿಸಿರುವ ಆಕಾಶದಲ್ಲಿ ನಕ್ಷತ್ರಗಳ ವರಸೆಯು ಈಗಿನ ವರಸೆಗಿಂತ ವಿಪರೀತವಾಗಿದ್ದುದನ್ನು ಅವರು ಬೊಟ್ಟಿಟ್ಟು ತೋರಿಸಿದ್ದಾರೆ. ಗ್ರೀಕ್ ಜ್ಞಾನಿ ಪ್ಲೇಟೋ ಕೂಡ ಹಿಂದಿನ ಕಾಲದಲ್ಲಿ ಭೂಮಿ ಈಗಿನ ವಿಪರೀತ ದಿಕ್ಕಿನಲ್ಲಿ ತಿರುಗುತ್ತಿತ್ತು ಎಂದು ಹೇಳಿದ್ದಾನೆ.

ಭೂಮಿಯ ಅಯಸ್ಕಾಂತ ಧ್ರುವಗಳು ವಿಜ್ಞಾನಿಗಳನ್ನು ಮಂಕುಗೊಳಿಸಿವೆ. ಒಂದಾನೊಂದು ಕಾಲದಲ್ಲಿ ಈಗ ಭೂಮಿಯ ಅಯಸ್ಕಾಂತ ದಕ್ಷಿಣ ಧ್ರುವವಿದ್ದಲ್ಲಿ ಉತ್ತರ ಧ್ರುವವೂ ಉತ್ತರ ಧ್ರುವವಿದ್ದಲ್ಲಿ ದಕ್ಷಿಣ ಧ್ರುವವೂ ಇತ್ತೆಂದು ಸಂಶೋಧನೆಗಳು ತೋರಿಸಿಕೊಟ್ಟಿವೆ. ಈ ಬದಲಾವಣೆ ಹೇಗಾಯಿತು? ಎಂದು ಯಾರಿಗೂ ಅರ್ಥವಾಗಿಲ್ಲ. ಆ ಧೂಮಕೇತು ಭೂಮಿಗೆ ತೀರ ಹತ್ತಿರ ಬಂದಾಗ ಎರಡರ ನಡುವೆ ಆದ ವಿದ್ಯುತ್ "ಶಾರ್ಟ್ ಸರ್ಕಿಟ್" ನಿಂದಲೇ ಈ ಧ್ರುವಾಂತರವಾಯಿತೆಂದು ವೆಲಿಕೋವಸ್ಕಿ ಸಾಧಿಸುತ್ತಾರೆ. ಸೂಜಿಗಲ್ಲಿಗೆ ವಿದ್ಯುದಾಘಾತವಾದರೆ ಅದರ ಧ್ರುವಗಳು ವಿಪರ್ಯಾಸಗೊಳ್ಳುತ್ತವೆಂದು ವಿಜ್ಞಾನಕ್ಕೆ ಗೊತ್ತಿದೆ ತಾನೆ ?

ಈ ಘಟನೆಗಳಾಗಿ ಏಳೆಂಟು ನೂರು ವರ್ಷಗಳ ನಂತರ ಇದೇ ಧೂಮಕೇತು ತನ್ನ ಆಕಾಶಗಮನದಲ್ಲಿ ಮಂಗಳ ಗ್ರಹದ ಸಮೀಪಕ್ಕೆ ಬಂತು. ಆಗ ಮಂಗಳ ಗ್ರಹವು ಪಥದಿಂದ ಚ್ಯುತವಾಗಿ ಬಿಟ್ಟಿತು. ಈ ಸಂಘರ್ಷದ ಫಲವಾಗಿ ಭೂಮಿ

"ತಾರಾನಾಥ" ರವರ

ಅಶ್ವಗಂಧಾವಲೇಹ್ಯ

ನರಗಳ ನಿತ್ರಾಣ, ಸೊರಗುವಿಕೆ, ಅತಿದಣಿವು, ನಿದ್ರಾನಾಶ ನಿರುತ್ಸಾಹ ಮೈ-ಕೈನೋವು ಜೀವನದಲ್ಲಿ ಜಿಗುಪ್ಸೆ, ರಕ್ತಬಲ ಕಡಿಮೆ—ಇತ್ಯಾದಿ ತೊಂದರೆ ದೂರ ಮಾಡಿ, ಸಂಸಾರದಲ್ಲಿ ಆನಂದ, ಉತ್ಸಾಹವಿತ್ತು ಪ್ರಕೃತಿಯನ್ನು ಸುದೃಢಗೊಳಿಸಲು ಶ್ರೇಷ್ಠ ಪೌಷ್ಟಿಕ

ತಯಾರಿಸುವವರು :

ತಾರಾನಾಥ ರಸೌಷಧಿ ವರ್ಕ್ಸ್, ಚಿಕ್ಕಮಗಳೂರು.

ಕೇತು ಸೂರ್ಯನ ಸುತ್ತ ಈಗಿರುವ ಪಥದಲ್ಲಿ ತಿರುಗಲಾರಂಭಿಸಿತು. ಆಗಲೂ ಭೂಮಿಯಲ್ಲಿ ಉತ್ಪಾತಗಳಾದ ದಾಖಲೆಗಳು ಸಿಗುತ್ತವೆ.

ಈ ಧೂಮಕೇತುವೇ ಶುಕ್ರಗ್ರಹ. ಅದು ನಿಜವಾಗಿ ಇತರ ಧೂಮಕೇತುಗಳ ಹಾಗೆ ದೂರಾಕಾಶದಿಂದ ಬಂದು ಮಾಯವಾಗುವ ಚಿಕ್ಕಪುಟ್ಟ ಧೂಮಕೇತುಗಳಂತಿರಲಿಲ್ಲ. ವಾಸ್ತವಿಕವಾಗಿ ಅದು ಗುರುಗ್ರಹದ ಕುದಿಯುತ್ತಿರುವ ಮೈಯಿಂದ ಸಿಡಿದು ದೂರ ಒಗೆಯಲ್ಪಟ್ಟ ತುಣುಕೆಂದು ವೆಲಿಕೋವಸ್ಕಿಯವರು ಊಹಿಸಿದ್ದಾರೆ. ಭೂಮಿಯಿಂದ ಚಂದ್ರ ಸಿಡಿದು ಹೋದಂತೆ ಗುರುವಿನಿಂದ ಶುಕ್ರ ಸಿಡಿದು ಬಂದವನೆಂದು ಅವರ ಅಭಿಪ್ರಾಯ.

ಶುಕ್ರ ಕೇವಲ ೩,೫೦೦ ವರ್ಷ ಹಿಂದೆ ಹುಟ್ಟಿದ್ದರೆ ಅದಕ್ಕಿಂತ ಹಿಂದಿನ ವರದಿಗಳಲ್ಲಿ ಅವನ ಹೆಸರೇ ಇರುತ್ತಿರಲಿಲ್ಲವಷ್ಟೆ. ಅದನ್ನೂ ವೆಲಿಕೋವಸ್ಕಿ ಶೋಧಿಸಿದ್ದಾರೆ. ಕ್ರಿ. ಪೂ. ೩೦೦೦ರ ಸುಮಾರಿಗೆ ತಯಾರಿಸಿದ ಭಾರತೀಯ ಜ್ಯೋತಿಷಿಕ ದಾಖಲೆಯಲ್ಲಿ ನಾಲ್ಕೇ ದೃಶ್ಯ ಗ್ರಹಗಳ ಉಲ್ಲೇಖವಿದ್ದು ಶುಕ್ರನ ಹೆಸರಿಲ್ಲ. ಬೆಬಿಲೋನಿಯನ್ನರೂ ಶುಕ್ರ ಹೊಸದಾಗಿ ಬಂದ ನಕ್ಷತ್ರ ಎಂಬರ್ಥ ಬರುವಂತೆ ಬಣ್ಣಿಸಿದ್ದಾರೆ. ಶುಕ್ರನ ಜನ್ಮ ಮತ್ತು ಮಂಗಳ ಶುಕ್ರರ ಪ್ರಣಯ-ಪ್ರಕರಣ ಕಥೆಗಳೂ ಅನೇಕ ಕಡೆ ಇವೆ.

ಶುಕ್ರ ಜನ್ಮ ಕಾಲದಲ್ಲಿ ಭೂಮ್ಯಾಕಾಶಗಳಲ್ಲಿ ಉತ್ಪಾತಗಳೊದಗಿದ್ದವಷ್ಟೆ ಅಲ್ಲ, ಭೂಮಿಯ ಗತಿಯಲ್ಲೂ ಬದಲಾವಣೆಯಾಯಿತು. ಅತಿ ಪ್ರಾಚೀನ ಯಹೂದ್ಯ, ಇಜಿಪ್ಶನ್, ಚೀನಿ, ಮಾಯಾ ಕಾಲಗಣನೆಯಲ್ಲಿ ವರ್ಷಕ್ಕೆ ೩೬೦ ದಿನಗಳೇ ಇದ್ದವು, ೩೬೫ ದಿನಗಳ ವರ್ಷ ಪ್ರಚಲಿತವಾದದ್ದು ಈಚೆಗೆ. ಇದು ಆ ಕಾಲದ ಜ್ಯೋತಿಷಿಗಳ ಅಜ್ಞಾನದ ಫಲವಲ್ಲ, ಭೂಮಿಯ ಗತಿಯಲ್ಲಿ ಶುಕ್ರಜನ್ಮದ ಗಲಾಟೆಯಿಂದ ಆದ ಸ್ಥಿತ್ಯಂತರಗಳೇ ಕಾರಣವಾಗಿ ಭೂವರ್ಷ ಐದು ದಿನಗಳಷ್ಟು ಉದ್ದವಾಯಿತು ಎಂದು ಡಾ. ವೆಲಿಕೋವಸ್ಕಿ ನಂಬಿದ್ದಾರೆ. *




ಚಾತುರ್ಯ

ಕಿಮ್ (kim) ಎಂಬ ಚಿತ್ರದಲ್ಲಿ ನಟಿಸಲು ದಿ. ಎರಾಲ್ ಫ್ಲೈನ್ ಭಾರತಕ್ಕೆ ಬಂದಿದ್ದ. ವಿಮಾನ ನಿಲ್ದಾಣದಲ್ಲಿ ಒಬ್ಬ ಅಧಿಕಾರಿ ಅವನಲ್ಲಿ "ನೀವೇನಾ ಎರಾಲ್ ಫ್ಲೈನ್? ಎಲ್ಲಿ ನಿಮ್ಮ ಸಹಿ ಹಾಕಿ ಈ ಕಾಗದದಲ್ಲಿ" ಎಂದರು.

ಮತ್ತೆ ಸಹಿಮಾಡಿದ ಕಾಗದವನ್ನು ಮಡಿಸಿಟ್ಟುಕೊಂಡ ಆ ಅಧಿಕಾರಿ, "ಕ್ಷಮಿಸಬೇಕು ನೀವು. ನೀವೇ ಅನ್ನುವುದನ್ನು ನಾನು ಬಲ್ಲೆ. ನೀವು ಅಷ್ಟು ಸುಲಭವಾಗಿ ಹಸ್ತಾಕ್ಷರ ನೀಡುವುದಿಲ್ಲ ಎಂದು ಕೇಳಿದ್ದೆ. ಅದಕ್ಕೆ ಈ ಯುಕ್ತಿಯನ್ನು ಮಾಡಿದೆ" ಎಂದರು!

—ಬಿ. ಆರ್. ಶಂಕರ್


ಅಶ್ವತ್ಥ ಮರದ ನೆರಳಲ್ಲಿ....
ಪ್ರತಿ ದಿನದ ಕೆಲಸ ಮುಗಿದ ಮೇಲೆ, ಭಾರತದ ಹಳ್ಳಿಗರು ಹೆಚ್ಚಾಗಿ
ಹಳ್ಳಿಯ ಒಂದು ಅಶ್ವತ್ಥದ ಮರದಡಿಯಲ್ಲಿ ಎಲ್ಲರೂ ಒಟ್ಟು ಕೂಡಿ ಹರಟೆ
ಹೊಡೆಯುವುದು ಅವರ ಸಂಪ್ರದಾಯವಾಗಿರುವುದು. ಇಂದು ಅವರ
ನಡುವೆ ಡ್ರೈಸೆಲ್ ಬ್ಯಾಟರಿಯಿಂದ ಚಲಿಸುವ ರೇಡಿಯೋಗಳನ್ನು ಕಾಣುತ್ತೇವೆ.
ಇಂತಹ ರೇಡಿಯೋಗಳಿಂದ ಅವರು ವರ್ತಮಾನಗಳನ್ನೂ
ಮತ್ತು ಸುಮಧುರ ಸಂಗೀತಗಳನ್ನು ಪಡೆದು ಆನಂದಿಸುವುದು ಒಂದು
ಸಾಮಾನ್ಯ ದೃಶ್ಯವಾಗಿ ಇಂದು ಪರಿಗಣಿಸಲ್ಪಟ್ಟಿರುತ್ತದೆ.
ಇಂದು ಭಾರತೀಯ ಹಳ್ಳಿಗನು ಸಂಗೀತದ ಬಗ್ಗೆ ಮತ್ತು ಅದನ್ನು
ಒದಗಿಸುವ ಸಾಧನಗಳ ಬಗ್ಗೆ ಅಧಿಕ ಗಮನವನ್ನೀಯುತ್ತಿದ್ದಾನೆ.
ಇದರ ಪರಿಣಾಮವಾಗಿ ಆತನ ರೇಡಿಯೋ ಉತ್ತಮವಾಗಿ ಚಲಿಸಲು
ಎಸ್ಟ್ರೆಲಾ ರೇಡಿಯೋ ಬ್ಯಾಟರಿಗಳನ್ನೇ ಉಪಯೋಗಿಸುತ್ತಿದ್ದಾನೆ
ದೀರ್ಘಕಾಲ ಬಾಳುವಂತೆ ತಯಾರಿಸಲ್ಪಟ್ಟ ಈ ಬ್ಯಾಟರಿ, ಡ್ರೈಸೆಲ್
ಬ್ಯಾಟರಿಯ ತಯಾರಿಕೆಯಲ್ಲಿ 20 ವರ್ಷಗಳ ಅಗಾಧ ಅನುಭವದ ಉತ್ಪಾದನೆ-
ಯಾಗಿರುತ್ತದೆ. ಎಸ್ಟ್ರೆಲಾ ಬ್ಯಾಟರಿಗಳು ಪ್ರಖ್ಯಾತವಾದ ಅಂತರರಾಷ್ಟ್ರೀಯ
ಪ್ರಮಾಣಕ್ಕೆ ತಕ್ಕಂತೆ ತಯಾರಿಸಲ್ಪಟ್ಟು ಪರೀಕ್ಷಿಸಿ ಸಿದ್ಧಗೊಳಿಸಲ್ಪಟ್ಟಿವೆ.
ಇಂದೇ ನಿಮ್ಮ ರೇಡಿಯೋಗೆ ಎಸ್ಟ್ರೆಲಾ ಬ್ಯಾಟರಿಯನ್ನು ಜೋಡಿಸಿ.
ನೀವು ಬಯಸುವ ಎಲ್ಲಾ ಗುಣಗಳು ಇವಲ್ಲಿ ಕೂಡಿವೆ.
ಎಸ್ಟ್ರೆಲಾ
ರೇಡಿಯೋ ಬ್ಯಾಟರಿ
ನಿಮ್ಮ ರೇಡಿಯೋ ವ್ಯಾಪಾರಿಯಲ್ಲೀಗ ದೊರೆಯುತ್ತದೆ
ESTRELA
ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್.
ಬೊಂಬಾಯಿ · ಮದ್ರಾಸ್ · ದಿಲ್ಲಿ · ಕಲ್ಕತ್ತ · ಕಾನ್‌ಪೂರ್

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥಗಳನ್ನು ವಿವರಿಸಿದೆ.

೧. ಪ್ರಾತ್ಯಕ್ಷಿಕೆ

(ಅ) ಬೆಳಗಿನ ಪ್ರಾರ್ಥನೆ (ಆ) ವಿರೋಧ (ಇ) ಎದುರಿಗೆ ಮಾಡಿತೋರಿಸುವಿಕೆ (ಈ) ನಿರೀಕ್ಷಿಸುವಿಕೆ

೨. ಈತಿ

(ಅ) ಗಾಯ (ಆ) ಚೂಪಾದ ಆಯುಧ (ಇ) ಪಿಡುಗು (ಈ) ತ್ಯಾಗ

೩. ಈಲು

(ಅ) ಗೋಳು (ಆ) ಪಳಗುವಿಕೆ (ಇ) ಪೂಜೆ (ಈ) ಕರಗು

೪. ಆಯತನ

(ಅ) ಮಾರ್ಗ (ಆ) ಲಾಭ (ಇ) ಹೆಕ್ಕುವಿಕೆ (ಈ) ಮನೆ

೫. ಅನತಿ

(ಅ) ಅಪ್ಪಣೆ (ಆ) ನಮಸ್ಕಾರ (ಇ) ಸ್ವಲ್ಪ (ಈ) ಅಪಮಾನ

೬. ಗೋಪನೀಯ

(ಅ) ಗುಟ್ಟು (ಆ) ಸಿಟ್ಟಿನ (ಇ) ಹಾಲು (ಈ) ಗೌಳಿಗ

೭. ಅಪದೇಶ

(ಅ) ಚಾಡಿ (ಆ) ಕೆಟ್ಟ ಸುದ್ದಿ (ಇ) ಬರಗಾಲ (ಈ) ನೆವ

೮. ಅಪಚಯ

(ಅ) ಗುಂಪು (ಆ) ಸೋಲು (ಇ) ಬಿಸಿಲು (ಈ) ನಿದ್ದೆ

೯. ಪ್ರಕರ್ಷ

(ಅ) ಸೆಳೆಯುವುದು (ಆ) ಮುರಿಯುವಿಕೆ (ಇ) ಚದುರುವಿಕೆ (ಈ) ಶ್ರೇಷ್ಠತೆ

೧೦. ವಿತಾನ

(ಅ) ಬಂಜೆತನ (ಆ) ಚಪ್ಪರ (ಇ) ಅಪಸ್ವರ (ಈ) ಕ್ರಮ

೧೧. ಪ್ರವರ

(ಅ) ಹಿರಿಯ (ಆ) ಗಂಡ (ಇ) ಅಡಚಣೆ (ಈ) ಬೆಳವಣಿಗೆ

೧೨. ಪುಂಸ್ತ್ವ

(ಅ) ಪುಂಡತನ (ಆ) ಪೂರ್ಣ (ಇ) ಸಂಗ್ರಹ (ಈ) ಗಂಡಸುತನ

‘ಶಬ್ದಭಾಂಡಾರ’ದ ಸರಿಯಾದ ಅರ್ಥಗಳು

೧. **ಪ್ರಾತ್ಯಕ್ಷಿಕೆ** (ಇ) ಎದುರಿಗೆ ಮಾಡಿ ತೋರಿಸುವಿಕೆ; ಯಾವುದಾದರೊಂದು ವಿಷಯವನ್ನು ವಿವರಿಸಲು ಪ್ರತ್ಯಕ್ಷ ಪ್ರಯೋಗ; ಪ್ರಯೋಗ. ಉದಾ— ಮಲೇರಿಯದ ಹಬ್ಬುವಿಕೆಯ ಕ್ರಮವನ್ನು ಪ್ರಾತ್ಯಕ್ಷಿಕೆಗಳಿಂದ ವಿವರಿಸಿದರು. [ಸಂ. ಪ್ರತ್ಯಕ್ಷ— ದಿಂದ]

೨. **ಈತಿ** (ಇ) ಪಿಡುಗು; ಪೀಡೆ; ಸಾಮೂಹಿಕತ್ರಾಸ; ಹಾವಳಿ. **ಷಡೀತಿ** = ಆರು ವಿಧದ ವಿಪತ್ತುಗಳು: ೧. ಮಿತಿಮೀರಿದ ಮಳೆ, ೨. ಮಳೆಯಿಲ್ಲದಿರುವುದು ೩. ಮಿಡಿತೆ ಹಾವಳಿ, ೪. ಗಿಳಿಗಳಿಂದ ಬೆಳೆ ನಾಶ, ೫. ಇಲಿಗಳ ಹಾವಳಿ ಮತ್ತು ೬. ಪರ ರಾಜರ ಆಕ್ರಮಣ [ಸಂ.]

೩. **ಈಲು** (ಅ) ಪಳಗುವಿಕೆ, ಪ್ರಾಣಿಗಳು ಮನುಷ್ಯನನ್ನು ಪ್ರೀತಿಸುವುದು. ಉದಾ: ಹುಲಿಗಳನ್ನು ಕೂಡ ಈಲು ಮಾಡುವ ಸಾತ್ವಿಕನಾತ [ಕನ್ನಡ]

೪. **ಆಯತನ** (ಈ) ಮನೆ; ಆಶ್ರಯ; ಸ್ಥಾನ; ಯಜ್ಞ ಶಾಲೆ; ದೇವತೆಗಳ ಪೂಜಾ ಸ್ಥಾನ. [ಸಂ.]

೫. **ಅನತಿ** (ಇ) ಸ್ವಲ್ಪ, ಹೆಚ್ಚಲ್ಲದ, ಮಿತವಾದ. ಉದಾ— **ಅನತಿ ದೂರ** ಅಂದರೆ ಹತ್ತಿರ; **ಅನತಿವಿಲಂಬಿತ** ಅಂದರೆ ವಿಶೇಷ ತಡಮಾಡದೆ. [ಸಂ. ಅನ್ = ಇಲ್ಲ, ಅತಿ = ಹೆಚ್ಚು]

೬. **ಗೋಪನೀಯ** (ಅ) ಗುಟ್ಟು, ಮುಚ್ಚಿಡತಕ್ಕದು; ರಕ್ಷಿಸಬೇಕಾದ್ದು. [ಸಂ. ಗುಪ್ = ಬಚ್ಚಿಡು]

೭. **ಅಪದೇಶ** (ಈ) ನೆವ, ವ್ಯಾಜ, ನಟನೆ; ಯುಕ್ತಿ; ಗುರಿ; ಲಕ್ಷ್ಯ; ಮೋಸ; ಕಾರಣ ತೋರಿಸುವಿಕೆ. ಉದಾ— ತಲೆನೋವಿನ ಅಪದೇಶದಿಂದ ಆತ ಸಭೆಗೆ ಬರಲಿಲ್ಲ. [ಸಂ. ಅಪ = ವಿರುದ್ಧವಾಗಿ, ದಿಶ್ = ತೋರಿಸು]

೮. **ಅಪಚಯ** (ಅ) ಗುಂಪು; ಕೂಡಿಸುವಿಕೆ, ಸಂಗ್ರಹ (ಉದಾ— ಪುಷ್ಪಾಪಚಯ); ಕಡಿಮೆಯಾಗುವುದು; ಸೊರಗುವುದು; ಪತನ; ಹಾನಿ. [ಸಂ.]

೯. **ಪ್ರಕರ್ಷ** (ಈ) ಶ್ರೇಷ್ಠತೆ; ಹಿರಿಮೆ; ಉಚ್ಛ್ರಾಯ; ಏಳಿಗೆ; ವೈಶಿಷ್ಟ್ಯ; ಹೆಚ್ಚಾಗುವಿಕೆ. [ಸಂ. ಪ್ರ = ಬಹಳವಾಗಿ, ಕೃಷ್ = ಸೆಳೆ]

೧೦. **ವಿತಾನ** (ಅ) ಚಪ್ಪರ; ಮೇಲ್ಗಟ್ಟು (ಉದಾ— ಲತಾವಿತಾನ ಅಂದರೆ ಬಳ್ಳಿ ಚಪ್ಪರ); ವಿಸ್ತಾರ; ಸಮೂಹ; ಖಾಲಿಯಾಗಿರುವುದು; ಪಾಲು; ಯಜ್ಞವೇದಿಕೆ. [ಸಂ.]

೧೧. **ಪ್ರವರ** (ಅ) ಹಿರಿಯ, ಮುಖ್ಯ, ಶ್ರೇಷ್ಠ, ಉತ್ತಮ; ಸಂತಾನ, ಗೋತ್ರ; ಕುಲದ ಮೂಲಪುರುಷ. [ಸಂ. ಪ್ರ = ಹೆಚ್ಚಿನ, ವರ = ಮೇಲಿರುವ]

೧೨. **ಪುಂಸ್ತ್ವ** (ಈ) ಗಂಡಸುತನ, ಅದನ್ನು ವ್ಯಕ್ತಪಡಿಸುವ ಗುಣ ಅಥವಾ ಲಕ್ಷಣ; ಪೌರುಷ; ವೀರ್ಯ. [ಸಂ. ಪುಂಸ್ = ಗಂಡು, ತ್ವ = ತನ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	....	ಸಾಧಾರಣ
೯—೧೦ "	....	ಉತ್ತಮ
೧೧—೧೨ "	....	ಅತ್ಯುತ್ತಮ

ಅಲ್ಲಿ ಅತಿಸುಧಾರಣೆಯಿಂದಲಿ
ಸಮಸ್ಯೆ ಒದಗಿದೆ

ಸ್ವೀಡನ್ನಿನಲ್ಲಿ ಲೈಂಗಿಕ ಶಿಕ್ಷಣ



ಗಂಗಾಧರ

ಮಕ್ಕಳಿಗೆ ಕಾಮಶಾಸ್ತ್ರದ ಶಿಕ್ಷಣ ಕೊಡಬೇಕೆ ? ಕೊಡಬೇಕಾದರೆ ಯಾರು, ಎಲ್ಲಿ, ಹೇಗೆ ಕೊಡಬೇಕು? ಎಲ್ಲ ಪ್ರಗತಿಪರ ರಾಷ್ಟ್ರಗಳ ಶಿಕ್ಷಣವೇತ್ತರ ತಲೆಯಲ್ಲಿ ಈ ಪ್ರಶ್ನೆ ಸುಳಿದಿದೆ. ನಮ್ಮ ದೇಶದಲ್ಲೂ ಅನೇಕರು ಪ್ರಶ್ನೆ ಕೇಳಿದ್ದಾರೆ.

ಉತ್ತರಗಳೂ ಬೇರೆಬೇರೆಯಾಗಿವೆ. ಕೆಲವರು ಈ ಪ್ರಶ್ನೆಯನ್ನು ಕೇಳುವುದೇ ಅಬ್ರಹ್ಮಣ್ಯವೆಂದು ಭಾವಿಸುತ್ತಾರೆ. ಕಾಮವು ಬಚ್ಚಿಡತಕ್ಕ ಸಂಗತಿ— ಯಾರೂ ಹೇಳದೆನೇ ಸಕಾಲದಲ್ಲಿ ತರುಣ ತರುಣಿಯರು ಅದರಲ್ಲಿ "ಅಶಿಕ್ಷಿತ ಪಟುತ್ವ"ವನ್ನು ಸಂಪಾದಿಸಿಯೆ ತೀರುತ್ತಾರೆ. ಅವರಿಗೆ ಅದನ್ನು ಕಲಿಸಹೋಗುವುದೆಂದರೆ ಅವರಲ್ಲಿ ಅಕಾಲದಲ್ಲಿ ಪಾಪಬುದ್ಧಿಯನ್ನು ಪ್ರಚೋದಿಸಿದಂತೆ ಎಂದು ಇವರ ಹೇಳಿಕೆ.

ಅದರ ವಿರುದ್ಧವಾಗಿ ಕಾಮಶಾಸ್ತ್ರವನ್ನು ಅರಿಯದ್ದರಿಂದಲೇ ಮಕ್ಕಳು ಅನೇಕ ದುರಭ್ಯಾಸಗಳಿಗೆ ಬಲಿಯಾಗುತ್ತಾರೆಂದೂ ಸರಿಯಾದ ತಿಳಿವಳಿಕೆ ಕೊಟ್ಟರೆ ಅವರು ಕಾಮದ ವಿಷಯದಲ್ಲಿ ಹಿತವಾದ ವಿಚಾರಗಳನ್ನು ರೂಪಿಸಿಕೊಂಡು ಸುಖಜೀವನ ಮಾಡಬಲ್ಲರೆಂದೂ ವಾದಿಸುವವರಿದ್ದಾರೆ. ಅವರಲ್ಲಿ ಕೆಲವರು ಮಕ್ಕಳಿಗೆ ವಯೋನುಗುಣವಾಗಿ ತಂದೆ ತಾಯಿಗಳೇ "ಸಾಧಾರಣ" ಮಾತುಗಳಲ್ಲಿ ಲೈಂಗಿಕ ತಿಳಿವಳಿಕೆ ಕೊಡಬೇಕೆಂದು ವಾದಿಸಿದರೆ ಕೆಲವರು ನೇರವಾಗಿ, ಇದ್ದಕ್ಕಿದ್ದಂತೆ, ಏನೂ ಮರೆಮಾಚದೆ, ಬೇರಾವ ಶಾಸ್ತ್ರವನ್ನು ಕಲಿಸುವಂತೆ ಇದನ್ನೂ ಹೇಳಿಕೊಡಬೇಕೆನ್ನುತ್ತಾರೆ.

ಸ್ವೀಡನ್ನು ಈ ಎರಡನೇ ದಾರಿ ಹಿಡಿದ ದೇಶ. ಅದು ಪ್ರಗತಿಯಲ್ಲಿ ಅವಿಚ್ಛಿನ್ನವಾದ ವಿಶ್ವಾಸವಿಟ್ಟ ನಾಡು. ಜಗತ್ತಿನಲ್ಲಿ ಬಡತನದ ಹೆಸರೇ ಇಲ್ಲದ ಸ್ಥಳವೊಂದು ಬೇಕಾಗಿದ್ದರೆ ಸ್ವೀಡನ್ನಿಗೆ ಹೋಗಬೇಕು. ಅಲ್ಲಿ ಸಮಾಜವಾದಿ ಮತ್ತು "ಪ್ರಗತಿ"ಪರ ವಿಚಾರಗಳು ಇಡೀ ದೇಶದ

ಪ್ರತಿಯೊಬ್ಬನಿಗೂ ಒಂದು ಆರ್ಥಿಕ ಸ್ವರ್ಗವನ್ನು ನಿರ್ಮಿಸಿವೆ.*

ನೀವು ಎಷ್ಟೇ ಪ್ರಗತಿಪರ ವಿಚಾರದ ಭಾರತೀಯರಾಗಿದ್ದರೂ ಸ್ವೀಡನ್ನಿನ ಯಾವುದಾದರೂ ಶಾಲೆಗೆ ಹೋದರೆ ಬೆಚ್ಚಿಬೀಳುವುದು ಖಂಡಿತ. ಏಕೆಂದರೆ ಅಲ್ಲಿ ಏಳನೇ ವಯಸ್ಸಿನಲ್ಲೇ ಮೆಲ್ಲಗೆ ಮಕ್ಕಳಿಗೆ ಕಾಮಶಾಸ್ತ್ರವನ್ನು— ಲೈಂಗಿಕ ಶಿಕ್ಷಣವನ್ನು — ಕಡ್ಡಾಯವಾಗಿ ಕೊಡುತ್ತಾರೆ. ಮತ್ತು ಆ ಶಿಕ್ಷಣ ಹುಡುಗ ಹುಡುಗಿಯರು ಒಟ್ಟೊಟ್ಟಿಗೆ ಕುಳಿತ ಮಿಶ್ರ ವರ್ಗಗಳಲ್ಲೇ ಕೊಡಲ್ಪಡುತ್ತದೆ.

ಕೆಲವೆ ದಶಮಾನಗಳ ಹಿಂದೆ ಇತರ ದೇಶಗಳಂತೆ ಕಾಮ ವಿಷಯದಲ್ಲಿ ಮುಚ್ಚುಮರೆಯನ್ನು ಪಾಲಿಸುತ್ತಿದ್ದ ಸ್ವೀಡನ್ನಿನಲ್ಲಿ ಈ ಕ್ರಾಂತಿಕಾರಿ ಬದಲಾವಣೆಯನ್ನು ಪ್ರೇರಿಸಿದವರು ಈಗ ಎಪ್ಪತ್ತರ ಗಡಿದಾಟಿರುವ ಡಾ. ಎಲಿಸ್ ಒಟ್ಟೊಸೆನ್ ಜೆನ್‌ಸೆನ್ ಎಂಬ ಮಹಿಳೆ. ಅವಳು ಕಾಮಶಾಸ್ತ್ರ ಶಿಕ್ಷಣದ ರಾಷ್ಟ್ರೀಯ ಸಮಿತಿಯೊಂದನ್ನು ಸ್ಥಾಪಿಸಿ ಹೂಡಿದ ಚಳವಳಿಯ ಫಲವಾಗಿ ಪಾರ್ಲಿಮೆಂಟಿನಲ್ಲಿ ಕಡ್ಡಾಯದ ಲೈಂಗಿಕ ಶಿಕ್ಷಣದ ಕಾಯದೆ ಪಾಸಾಯಿತು. ಕಾಮ-ಪ್ರೇಮಗಳ ಬಗ್ಗೆ ಅಜ್ಞಾನಜನ್ಯವಾದ ಭಯ ಹೇಸಿಕೆ ಭ್ರಮೆಗಳನ್ನು ಹೊಡೆದೋಡಿಸಿ "ವಿವೇಕಯುಕ್ತ"ದೃಷ್ಟಿಕೋಣವನ್ನುಂಟುಮಾಡಿ ಜನಹಿತ ಮಾಡುವುದು ಅದರ ಉದ್ದೇಶವಾಗಿತ್ತು.

ಇಂದು ಸ್ವೀಡನ್ನಿನಲ್ಲಿ ಲೈಂಗಿಕ ಪರಿಜ್ಞಾನವಿಲ್ಲದ ಹುಡುಗ ಹುಡುಗಿಯರು ಹುಡುಕಿದರೂ ಸಿಗಲಾರರು. ಹದಿನಾರರಲ್ಲಿ ಕಾಲಿಡುವ ಹುಡುಗ ಹುಡುಗಿಯರು ವರ್ಗದಲ್ಲಿ ಒತ್ತೊತ್ತಾಗಿ ಕುಳಿತಿರುವಾಗ ರಾಜಧಾನಿ ಸ್ಟಾಕ್‌ಹೋಂನಲ್ಲಿ ಸ್ವತಃ ಡಾ. ಜೆನ್‌ಸೆನ್ನರೇ ಲೈಂಗಿಕ ಪಾಠ ಹೇಳುವುದನ್ನು ಎಷ್ಟೋ ವೇಳೆ ನೋಡಬಹುದು. ಅವರು ನೇರವಾಗಿ ಯಾವ ಮುಚ್ಚುಮರೆ ಸುತ್ತು ಬಳಸುಗಳಿಲ್ಲದೆ ಕರಿ ಹಲಗೆಯ ಮೇಲೆ ಚಿತ್ರಗಳನ್ನು ಬರೆದು ಗಂಡು ಹೆಣ್ಣುಗಳ ಶರೀರ ರಚನೆ, ಗರ್ಭಾಧಾನ ಕ್ರಿಯೆಯ ಸ್ವರೂಪ ಇವೆಲ್ಲವನ್ನು ವಿವರಿಸುತ್ತಾರೆ. ಶಿಶು ಜನನ ಹೇಗಾಗುತ್ತದೆ, ಲೈಂಗಿಕ ರೋಗಗಳೆಂದರೇನು, ಸಂತತಿ ನಿರೋಧಕ ಸಲಕರಣೆಗಳನ್ನು ಹೇಗೆ ಉಪಯೋಗಿಸಬೇಕು— ಇವೂ ಪಾಠಗಳಲ್ಲಿ ಬಂದುಹೋಗುತ್ತವೆ. ಯಾವುದನ್ನೂ ಊಹಾಶಕ್ತಿಗೆ ಬಿಡುವುದಿಲ್ಲ.

ಇದರ ಪರಿಣಾಮವೇನಾಗಿದೆ? ಈಚೆಗೆ ಸ್ವೀಡನ್ನಿಗೆ ಹೋಗಿ ಅಭ್ಯಸಿಸಿ ಬಂದ ಸಿಲ್ವಿಯಾ ಲೇಮಂಡ್ ಎಂಬ ಬ್ರಿಟಿಶ್ ಮಹಿಳೆ ತನ್ನ ಪ್ರತ್ಯಕ್ಷದರ್ಶನದ ಅನುಭವವನ್ನೇ ಬರೆದಿದ್ದಾಳೆ. ಪಾಠ ನಡೆಯುತ್ತಿದ್ದಾಗ, ಈ ಅಂತರಂಗದ ವಿಷಯವನ್ನು ವೈಜ್ಞಾನಿಕ ಸ್ಪಷ್ಟತೆಯೊಡನೆ ವಿವರಿಸುತ್ತಿದ್ದಾಗ, ಹುಡುಗಿಯರು ಹಠಾತ್ತಾಗಿ ಕೆಂಪೇರಿ ಹತ್ತಿರವಿರುವ ಹುಡುಗರಿಂದ ದೂರ ಸರಿದು ಕೂಡ್ರುತ್ತಿದ್ದರಂತೆ. ಡಾ. ಜೆನ್‌ಸೆನ್ ಎಷ್ಟು ನಿರ್ವಿಕಾರವಾಗಿ ಪಾಠ ಹೇಳುತ್ತಿದ್ದರೋ ಅಷ್ಟು ನಿರ್ವಿಕಾರವಾಗಿ ಹುಡುಗಿಯರು ಅದನ್ನು ಕೇಳುತ್ತಿರಲಿಲ್ಲ!

ನೀವು ಸ್ವೀಡನ್ನಿನ ಲೈಂಗಿಕ ಶಿಕ್ಷಣ ವಾದಿಗಳನ್ನು ಕೇಳಿದರೆ ಅವರು ಈ ವಾಸ್ತವಿಕ ತಿಳಿವಳಿಕೆಯ ಫಲವಾಗಿ ಜನರಲ್ಲಿ ಕಾಮದ ಬಗ್ಗೆ ಇದ್ದ ಅಶ್ಲೀಲ ಕುತೂಹಲ ಅಳಿದು ಹೋಗಿದೆಯೆಂದೂ ಅದಕ್ಕೆ ಸಾಕ್ಷಿಯಾಗಿ ಸಾರ್ವಜನಿಕ ಪಾಯಖಾನೆಗಳ ಗೋಡೆಗಳಲ್ಲಿ ಎಲ್ಲ ದೇಶಗಳಲ್ಲಿ ಕಾಣಬರುವ ಅಶ್ಲೀಲ ಬರಹ ಮತ್ತು ಚಿತ್ರಗಳು ಸ್ವೀಡನ್ನಿನಲ್ಲಿ ಅದೃಶ್ಯವಾಗಿವೆಯೆಂದೂ ಹೇಳುತ್ತಾರೆ.

ಇದು ನಿಜವೇ. ಆದರೆ ಇತರ ಅಷ್ಟು ಹಿತವಲ್ಲದ ಸಂಗತಿಗಳೂ ಜರುಗಿವೆ. ಸಂಜೆಯಾಯಿತೊ

* 'ಕಸ್ತೂರಿ' ಮಾರ್ಚ್ ೧೯೬೦ ಸಂಚಿಕೆ ನೋಡಿರಿ.

ಸ್ಟಾಕ್‌ಹೋಂನ ನೃತ್ಯಮಂದಿರಗಳು ಬೆಳಗುತ್ತವೆ. ತರುಣ ತರುಣಿಯರು ಯಥೇಷ್ಟ ನೃತ್ಯ ಮಾಡುತ್ತಿರುತ್ತಾರೆ. ರಸ್ತೆಯಲ್ಲಿ ಅಮೇರಿಕನ್ ಹಳೆಯ ಕಾರುಗಳಲ್ಲಿ ಕುಳಿತು ತರುಣ ತರುಣಿಯರು ವಿಹಾರಕ್ಕೆ ಹೊರಡುತ್ತಾರೆ. ಮನೆಗಳಿಗೆ ಹೋಗಿರಿ, ಇಪ್ಪತ್ತು ವರ್ಷದ ಹುಡುಗರು ತಮ್ಮ ವಯಸ್ಸಿನ ಹುಡುಗಿಯರನ್ನು ಮನೆಗೇ ಕರೆತರುತ್ತಾರೆ. ಅವರೊಂದಿಗೆ ರಾತ್ರಿ ಸಿನೆಮಾಕ್ಕೆಹೋಗುತ್ತಾರೆ. ಮರಳಿ ರಾತ್ರಿಯನ್ನು ಆ ಹುಡುಗಿಯರೊಂದಿಗೆ ಮನೆಯಲ್ಲೆ ಕಳೆಯುತ್ತಾರೆ. ಹಿರಿಯರೂ ಹೆಚ್ಚಾಗಿ ಇದಕ್ಕೆ ಆಕ್ಷೇಪವೆತ್ತುವುದಿಲ್ಲ.

ಮದುವೆಗೆ ಮೊದಲೇ ಲೈಂಗಿಕ ಸಂಬಂಧ ಮಾಡುವುದನ್ನು ಕಾಮಶಾಸ್ತ್ರದ ಶಿಕ್ಷಕರು ಪ್ರೋತ್ಸಾಹಿಸುವುದಿಲ್ಲವೆಂಬುದು ನಿಜ. ಅದರಲ್ಲಿರುವ ಅಪಾಯುಗಳನ್ನು ಅವರು ಶಾಸ್ತ್ರಶುದ್ಧವಾಗಿ ವಿವರಿಸುತ್ತಾರೆ. ಹಾಗೆಯೆ ಸಂತತಿ ನಿರೋಧದ ಪಾಠ ಹೇಳುವಾಗಲೂ, ಎಷ್ಟೇ ಎಚ್ಚರಿಕೆ ವಹಿಸಿದರೂ ಗರ್ಭಧಾರಣೆಯಾಗುವ ಭಯವುಂಟೆಂದು ತಿಳಿಹೇಳುತ್ತಾರೆ. ಆದರೂ ಮದುವೆಗಿಂತ ಮೊದಲೇ ಪುರುಷ ಸಂಬಂಧವಾಗದಿರುವ ಹುಡುಗಿಯರ ಸಂಖ್ಯೆ ಅಲ್ಲಿ ಇಂದು ವಿರಳವಾಗಿದೆ. ನೂರಕ್ಕೆ ಎರಡೋ ಮೂರೊ ಇರಬಹುದಷ್ಟೇ. ತರುಣರಂತೂ ನೂರಕ್ಕೆ ನೂರು ಜನವೂ ಅನುಭವವುಳ್ಳವರೇ.

ವಾಸ್ತವಿಕ ಸಂಗತಿಯೆಂದರೆ ಗಂಡು-ಹೆಣ್ಣಿನ ಸಂಬಂಧದ ಪಾವಿತ್ರ್ಯ ಸ್ವೀಡನ್ನಿನಲ್ಲಿ ಉಳಿದೇ ಇಲ್ಲ. ಪಾವಿತ್ರ್ಯ ಹೋಗಲಿ, ಸ್ವಾರಸ್ಯವಾದರೂ ಉಳಿದಿದೆಯೆ? ಸ್ವೀಡನ್ನಿನಲ್ಲಿಂದು ನೀವು ಲಜ್ಜೆಯಿಂದ ಅವನತಮುಖಿಯರಾದ ತರುಣಿಯರನ್ನು ಕಾಣಲಾರಿರಿ. ಓರೆ ನೋಟದಿಂದ, ಬಳುಕು ಮೈಯಿಂದ ತರುಣರನ್ನು ಮೋಹಿಸಿ ಅವರನ್ನು ಆಸೆ ನಿರಾಶೆಗಳ ನಡುವೆ ತೊಳಲಾಡಿಸಿ ಪ್ರೇಮಾರಾಧಕರಾಗಿ ಮಾಡುವ ಯುವತಿಯರನ್ನೂ ನೋಡಲಾರಿರಿ. ತರುಣರು ಇಂಥ ವಿಲಾಸಗಳಿಂದ ಉತ್ತೇಜಿತರಾಗುವುದೇ ಇಲ್ಲ—ಎಂಬುದೇ ಇದಕ್ಕೆ ಕಾರಣ.

ಇದಕ್ಕೆ ಕಾರಣ ಹುಡುಕಲು ದೂರ ಹೋಗಬೇಕಿಲ್ಲ. ಹುಡುಗ ಹುಡುಗಿಯರು ಒಟ್ಟೊಟ್ಟಾಗಿ ಕುಳಿತು ಕಾಮಶಾಸ್ತ್ರವನ್ನು ಅಭ್ಯಸಿಸುವ್ರದರಿಂದ ಸ್ತ್ರೀ-ಪುರುಷ ಸಂಬಂಧದಲ್ಲಿರುವ ರಹಸ್ಯಮಯತೆ ಮಾಯವಾಗಿ ಹೋಗಿದೆ. ಪ್ರೇಮದಲ್ಲಿ "ಬೀಳುವುದು", ನಿರೀಕ್ಷೆ, ಉತ್ಕಂಠೆ, ಕೇಳಲು ಬಾಯಿ ಬಾರದಿರುವುದು, ಹೇಳಲು ನಾಚಿಕೆ ಬಿಡದಿರುವುದು, ವಿರಹ, ಪರಿತಾಪ ಇಂಥವುಗಳಿಂದಲೇ ಸ್ತ್ರೀ-ಪುರುಷರ ಸಂಪರ್ಕಕ್ಕೊಂದು ಭಾವನಾಮಯ, ಹಾರ್ದಿಕ ಗುಣ ಉಂಟಾಗಿ ಸವಿಸೆನಪುಗಳು ಅದರೊಡನೆ ನಿಗಡಿತವಾಗುತ್ತವೆ. ಇದೇ ಶೃಂಗಾರ ರಸ. ಆದರೆ ಸ್ವೀಡನ್ನಿನಲ್ಲಿ ಯಾವ ರಹಸ್ಯವೂ ಉಳಿಯದಿರುವುದರಿಂದ ಅದೊಂದು ಹಸಿವಾದಾಗ ಉಣ್ಣುವ, ನೀರಡಿಸಿದಾಗ ಕುಡಿಯುವ ವ್ಯಾಪಾರದಂತೆ ನೀರಸವಾಗಿದೆ. ಹೆಣ್ಣಿನ ಶರೀರವು ಕೇಳಿದೊಡನೆ ಸಿಗುವ ವಸ್ತುವಾಗಿ ಹೋಗಿದೆ. ವಿಲಾಸ ವಿಭ್ರಮಗಳನ್ನು ತೋರಿಸುವ ಹುಡುಗಿ ಸುಮ್ಮನೆ ತಮ್ಮ ವೇಳೆಯನ್ನು ಹಾಳು ಮಾಡುತ್ತಾಳೆಂದು ತರುಣರು ಭಾವಿಸುತ್ತಾರೆ!

ತರುಣಿಯರು ಇದರ ಬಗ್ಗೆ ಏನು ಭಾವಿಸುತ್ತಾರೆ? ಸ್ವೀಡನ್ನಿನ ತರುಣಿಯರು ಸಂತುಷ್ಟರಾಗಿದ್ದಾರೆಂದು ಸರ್ವಥಾ ಹೇಳಲು ಬಾರದು. ಅವರಲ್ಲಿ ಸ್ತ್ರೀಸಹಜ ಅಪೇಕ್ಷೆ ಇದೆ; ಪುರುಷರು ತಮ್ಮನ್ನು ಪಡೆಯುವ ಮೊದಲು ಓಲೈಸಬೇಕು, ಮೆಚ್ಚಿಸಬೇಕು ಎಂದು ಎಲ್ಲ ದೇಶದ ನಾರಿಯರಂತೆ ಅವರೂ ಬಯಸುತ್ತಾರೆ. ತಮ್ಮ ಪುರುಷರಲ್ಲಿ ರಸಿಕತೆ ಏನೂ ಇಲ್ಲದ್ದರಿಂದ ಅವರು ಅಸಂತೋಷಗೊಂಡಿದ್ದಾರೆ. ಆದರೆ ಉಪಾಯವಿಲ್ಲ. ತಮ್ಮೊಡನೆ ಸ್ನೇಹ ಬೆಳಸಬಂದ ಹುಡುಗನ ಬೇಡಿಕೆಗಳನ್ನು ತಕ್ಷಣ ಪೂರೈಸದಿದ್ದರೆ ತಮಗೆ ಪುರುಷ ಸ್ನೇಹವೇ ಅಲಭ್ಯವಾದೀತೆಂದು ಅಂಜಿ ಅವರು

ಒಪ್ಪಿಕೊಳ್ಳಬೇಕಾಗುತ್ತದೆ. ಹೀಗಾಗಿ ವಿದೇಶಗಳಿಂದ ಬಂದ ಹೆಚ್ಚು ರಸಿಕರಾದ ಗಂಡಸರನ್ನು ಕಂಡು ಅವರು ಬಾಯ್ಬಿಡುವಂತಾಗುತ್ತದೆ. ವಿದೇಶಗಳಲ್ಲಿ ಇನ್ನೂ ರಸಿಕತೆ ಉಳಿದಿದೆ, ತಮ್ಮಲ್ಲೇ ಇಲ್ಲ ಎಂದವರು ಕೊರಗುತ್ತಾರೆ.

ವಿವಾಹಪೂರ್ವ "ಪ್ರಸಂಗ"ಗಳ ಒಂದು ಫಲವಾಗಿ ಸ್ವೀಡನ್ನಿನಲ್ಲಿ ಗರ್ಭಸ್ರಾವ ಮಾಡಿಸಿಕೊಳ್ಳುವ ಚಟ ಬಲವಾಗಿದೆ. ಕಾಯದೆಗಳೂ ಸಡಿಲಾಗಿವೆ. ಆರೋಗ್ಯದ ಕಾರಣಗಳಿಗಾಗಿ ಮಾತ್ರವಲ್ಲದೆ "ಸಾಮಾಜಿಕ" ಕಾರಣಗಳಿಗಾಗಿಯೂ ಡಾಕ್ಟರರಿಗೆ ಗರ್ಭಸ್ರಾವ ಮಾಡಿಸಲು ಅಲ್ಲಿ ಅನುಮತಿ ಇರುವುದರಿಂದ ದಾರಿತಪ್ಪಿದವರಿಗೆ ತಪ್ಪಿನ ಫಲದಿಂದ ಪಾರಾಗಲು ಸುಲಭವಾಗಿದೆ.

ಲೈಂಗಿಕ ವಿಚಾರದಲ್ಲಿ ತೀರ "ಬಿಚ್ಚುಮೊಗ್ಗ" ಮನೋವೃತ್ತಿಯ ಇನ್ನೊಂದು ಫಲವೆಂದರೆ ವಿವಾಹ ವಿಚ್ಛೇದಗಳು. ಬಡತನ, ರೋಗ ಮೊದಲಾಗಿ ಗಂಡ ಹೆಂಡಿರ ಮನವನ್ನು ಕಹಿಗೊಳಿಸಬಹುದಾದ ಅಂಶಗಳು ಅಲ್ಲಿ ತೀರ ವಿರಳವಾಗಿದ್ದರೂ ಪ್ರತಿ ಆರರಲ್ಲಿ ಒಂದು ಮದುವೆ ವಿಚ್ಛೇದದಲ್ಲಿ ಪರ್ಯವಸಾನ ಹೊಂದುತ್ತದೆ. ರಾಜಧಾನಿಯಲ್ಲಂತೂ ನೂರಕ್ಕಿಪ್ಪತ್ತೈದು ಮದುವೆಗಳು ವಿಚ್ಛೇದ ಹೊಂದುತ್ತವೆ. ಇದಕ್ಕನುಕೂಲವಾಗುವಂತೆ ಅಲ್ಲಿ ವಿಚ್ಛೇದ ದೊರಕಿಸುವುದು ಸುಲಭವೂ ಇದೆ. ಗಂಡಹೆಂಡಿರಿಬ್ಬರೂ ಒಪ್ಪಿದರೆ ತೀರಿತು, ವಿಚ್ಛೇದ ದೊರೆಯುತ್ತದೆ. ಸದ್ಯ ಮದುವೆಯಾಗೋಣ, ಸರಿ ಹೊಂದದಿದ್ದರೆ ವಿಚ್ಛೇದ ಇದ್ದೇ ಇದೆಯಲ್ಲ ಎಂದು ತರುಣ ತರುಣಿಯರು ಅವಸರವಲ್ಲಿ ಮದುವೆಯಾಗಿ ಅವಸರವಲ್ಲಿ ಬೇರಾಗುತ್ತಾರೆ!

ಸ್ವೀಡನ್ನಿನ ಲೈಂಗಿಕ ಶಿಕ್ಷಣದ ಪ್ರಯೋಗವು ಕೇವಲ ಅಜ್ಞಾನದ ನಿವಾರಣೆ ಮತ್ತು ವೈಜ್ಞಾನಿಕ ಮನೋವೃತ್ತಿಯ ಬೆಳವಣಿಗೆ ಇವು ಮನುಷ್ಯನ ಜೀವನವನ್ನು ಸುಖಮಯವಾಗಿ ಮಾಡಲು ಸಾಲವೆಂದು ತೋರಿಸಿಕೊಟ್ಟಿದೆ. ಸ್ತ್ರೀ ಪುರುಷ ಸಂಬಂಧವನ್ನು ಭ್ರಮರಹಿತವಾಗಿ ಮಾಡಲು ಹೋಗಿ ಅಲ್ಲಿ ಹೊಸ ಸಮಸ್ಯೆಗಳು ಹುಟ್ಟಿವೆ. ಆದರೆ ಅಲ್ಲಿನ ಸುಧಾರಕರು ತಾವು ಹಿಡಿದ ದಾರಿಯಿಂದ ಪರಾವೃತ್ತರಾಗಲು ಸಿದ್ಧರಿಲ್ಲ. ಸಮಸ್ಯೆಗಳೇನೇ ಇದ್ದರೂ ಹೆಚ್ಚು ಹೆಚ್ಚು ಜ್ಞಾನ ಪ್ರಸಾರವಾದರೆ ಅವು ಪರಿಹಾರ ಹೊಂದಲೇಬೇಕು ಎಂದವರ ದೃಢ ವಿಶ್ವಾಸ. *

THE
SADVAIDYASALA
(PRIVATE) LTD
NANJANGUD

Mysore Mallik
KERCHIEF PERFUME

ಪುಸ್ತಕ ವಿಭಾಗ

ಇರವಿನ್



ಸ್ಯಾಮ್ಯುವೆಲ್ ಬಟ್ಲರ್

ಇ ರ ವ ನ್

ನನಗಾಗ ೨೨ ವರ್ಷ ವಯಸ್ಸು; ಸಾಹಸ ಕೃತ್ಯಗಳಿಂದ ವಿಪರೀತವಾಗಿ ಹಣ ಗಳಿಸಬೇಕೆಂಬ ಆಶೆ ನನ್ನಲ್ಲಿ ಬಹಳವಾಗಿ ಇತ್ತು. ನಾನು ಸೇರಿದ ಭೂಖಂಡ ನಮ್ಮ ಜನರಿಗೆ ಹೊಸದು. ಜನರು ಬಂದು ವಾಸಿಸತೊಡಗಿ ಬರೇ ೮-೧೦ ವರ್ಷಗಳು ಕಳೆದಿದ್ದುವಷ್ಟೇ. ಮರಗಿಡಗಳಿಂದಲೂ ಅದರ ಮೇಲೆ ಕಲರವಗೈಯುವ ಹಕ್ಕಿಗಳ ನಿನಾದದಿಂದಲೂ ಬೆಟ್ಟಗುಡ್ಡಗಳಿಂದಲೂ ಅದರ ನಡುನಡುವೆ ಹರಿಯುವ ಝರಿಗಳಿಂದಲೂ ಕೂಡಿ ಪ್ರದೇಶವು ಬಹು ರಮಣೀಯವಾದುದಾಗಿತ್ತು. ಹಡಗಿನಿಂದ ಇಳಿದ ಕೂಡಲೇ ತಟ್ಟನೆ ಕಣ್ಮನಗಳನ್ನು ಸೆಳೆಯುತ್ತಿದ್ದುದೆಂದರೆ ಹಿಮಾಚ್ಛಾದಿತವಾದ ಎರಡು ಪರ್ವತ ಶ್ರೇಣಿಗಳು. ಮೊದಲನೆಯ ಶ್ರೇಣಿಗೂ ತೀರಕ್ಕೂ ಮಧ್ಯೆ ಇರುವ ೩೫-೪೦ ಮೈಲಿನ ಪ್ರದೇಶವನ್ನೆಲ್ಲ ದನಕುರಿಗಳಿಗಾಗಿ ರೂಢಿಸಿಕೊಂಡಾಗಿತ್ತು. ಎರಡನೆಯ ಶ್ರೇಣಿಯು ಮೊದಲನೆಯದಕ್ಕಿಂತ ಉನ್ನತ ಶಿಖರಗಳಿಂದ ಕೂಡಿತ್ತು. ಮೊದಲನೆಯ ಶ್ರೇಣಿಯ ಆಚೆಗೂ ಸ್ವಲ್ಪ ಸ್ಥಳಗಳನ್ನು ಆಗ ತಾನೇ ರೂಢಿಸಿಕೊಳ್ಳಲು ಹೊರಟಿದ್ದರು. ಅಲ್ಲಿ ಅದೇ ತಾನೆ ತೆರೆದ ಸ್ಟೇಶನ್ನಿನಲ್ಲಿ ಕುರಿಕಾಯುವವನಾಗಿ ನಾನು ಸೇರಿದೆ.

ನಮ್ಮ ಸ್ಟೇಶನ್ನಿನ ಹತ್ತಿರ ಒಂದು ನದಿ ಹರಿಯುತ್ತಿತ್ತು. ನದಿಯು ಮಾಡಿದ ಕಣಿವೆಯ ಮೂಲಕ ಪರ್ವತ ಪ್ರದೇಶವನ್ನು ಸೇರಿ ಮತ್ತೆ ಆ ಕಡೆ ದಾಟಿದರೆ ಅಲ್ಲಿ ಫಲವತ್ತಾದ ಹುಲ್ಲುಗಾವಲಿನ ಪ್ರದೇಶವಿರಬಹುದೆಂದು ಆಲೋಚಿಸಿದೆ. ಅಲ್ಲಿಗೆ ಹೋಗಬೇಕೆಂಬ ಲವಲವಿಕೆ ದಿನೇ ದಿನೇ ಬಲವಾಯಿತು. ಕುರಿಯ ಕೂದಲನ್ನು ಕತ್ತರಿಸುವ ಕೆಲಸವಾದೊಡನೆ ನಮಗೆ ಸ್ವಲ್ಪ ಬಿಡುವು ಸಿಕ್ಕಿತು. ಅದೇ ಬಿಡುವಿನಲ್ಲಿ ಪರ್ವತಾವಳಿಗಳ ಸಮೀಪ ಸ್ವಲ್ಪ ದಿನಗಳ ಕಾಲ ತಿರುಗಾಡಿ ಬರಬೇಕೆಂದು ನಿಶ್ಚಯಿಸಿದೆ. ಹೆಂಡದ ರುಚಿ ತೋರಿಸಿದ ಮೇಲೆ, ರಾಶಿ ರಾಶಿ ಚಿನ್ನದ ಗಟ್ಟಿಗಳು ಸಿಕ್ಕುವ ಸಂಭವವಿದೆಯೆಂಬ ಆಶೆ ಬೀರಿದ ಮೇಲೆ, ಚೌಬಕ್ ಎಂಬುವನೊಬ್ಬನು ನನ್ನೊಡನೆ ಬರಲೊಪ್ಪಿದ. ಟೀ, ಸಕ್ಕರೆ, ಬಿಸ್ಕತ್ತು, ಬ್ರ್ಯಾಂಡಿ, ಹೊಗೆಸೊಪ್ಪು, ಮಾಂಸ, ಡೇರೆ ಹಾಕಲು ಬೇಕಾದ ಸಾಮಾನುಗಳು— ಇವನ್ನೆಲ್ಲ ಎರಡು ಕುದುರೆಗಳ ಮೇಲೆ ಹೇರಿ ನಾವು ನಮ್ಮ ಪ್ರವಾಸವನ್ನು ಪ್ರಾರಂಭಿಸಿದೆವು.

ಮೊದಲ ದಿನಗಳಲ್ಲಿ ನಮ್ಮ ಪ್ರಯಾಣ ಸುಖವಾಗಿಯೇ ಸಾಗಿತು. ನಾವು ನದಿಯ ತೀರದಲ್ಲೇ ಮುಂದುವರಿಯುತ್ತಿದ್ದೆವು. ಸಾಯಂಕಾಲದಲ್ಲಿ ಸಾಧಾರಣ ಸಮತಲ ಸ್ಥಳದಲ್ಲಿ ಡೇರೆ ಹೊಡೆಯುತ್ತಿದ್ದೆವು; ಬೆಂಕಿ ಮಾಡಿ ಟೀ ಕಾಸುತ್ತಿದ್ದೆವು. ದಿನದಲ್ಲಿ ಹಿಡಿದ ಕಾಡು ಕೋಳಿಗಳನ್ನು ಬೇಯಿಸಿ ತಿನ್ನುತ್ತಿದ್ದೆವು. ಮೇಲೆ ನಕ್ಷತ್ರಗಳು; ಬದಿಯಲ್ಲಿ ಹರಿಯುವ ನದಿ. ಪ್ರಶಾಂತವಾದ ನಿಶ್ಶಬ್ದವಾದ ವಾತಾವರಣದಲ್ಲಿ ನನ್ನ ಮೈಮನಗಳು ಲೀನವಾಗುತ್ತಿದ್ದುವು. ಅದರ ಆನಂದವೇ ಆನಂದ.

ಹೀಗೆ ಮೂರು ವಾರಗಳು ಕಳೆದವು. ದಾರಿಯು ಕಡಿದಾಗಿ ದುರ್ಗಮವಾಗುತ್ತ ಬರುತ್ತಿತ್ತು. ರಾತ್ರಿ ಚಳಿಯು ವಿಪರೀತವಿತ್ತು. ಅಂತೂ ದೊಡ್ಡ ಪರ್ವತಾವಳಿಗಳ ಬಹು ಸಮೀಪಕ್ಕೆ ಬಂದುಬಿಟ್ಟೆವು. ಆಗಲೇ ಚೌಬಕ್ಕನು ನನಗೆ ತಿಳಿಸದೆ ಹಿಂದಕ್ಕೆ ಓಡಿಯೇಬಿಟ್ಟ. ಇನ್ನೇನು ಗತಿಯಿಲ್ಲವೆಂದಾಗುವವರೆಗೂ ಮುಂದು

ವರಿದೇ ತೀರುವೆನೆಂದು ಹಟತೊಟ್ಟು ನಡೆದೆನು. ಒಂದು ಸಣ್ಣ ಬೆಟ್ಟದಲ್ಲಿ ಹತ್ತಿ ನಿಂತಾಗ ಆಚೆ ಬಹು ದೂರದಲ್ಲಿ ಸೂರ್ಯರಶ್ಮಿಗಳಲ್ಲಿ ಸ್ನಾನಮಾಡು ತ್ತಿದ್ದ ಹುಲ್ಲುಗಾವಲನ್ನು ಕಂಡು ನನ್ನ ಉತ್ಸಾಹ ಇಮ್ಮಡಿಸಿತು. ಏರಿ-ಇಳಿಯುತ್ತ, ಸಣ್ಣ-ಪುಟ್ಟ ತೊರೆಗಳನ್ನು ದಾಟುತ್ತ, ಅಲ್ಲಲ್ಲಿ ಎಡವುತ್ತ, ಈಗೊಮ್ಮೆ-ಆಗೊಮ್ಮೆ ಬಟ್ಟೆಗಳನ್ನು ತೋಯಿಸಿ ಕೊಳ್ಳುತ್ತ ಎರಡು ದಿನಗಳನ್ನು ಕಳೆದೆನು. ಮುಂದಿನ ಹುಲ್ಲುಗಾವಲಿಗೂ ನನಗೂ ಬರೇ ಒಂದು ಬೆಟ್ಟ ಅಡ್ಡವಿರುವಂತೆ ಕಂಡಿತು. ನಾನು ಸಂಭ್ರಮದಿಂದ ಬೆಟ್ಟವನ್ನೇರುತ್ತಿದ್ದೆ. ಅದರ ಮೈ ಯೆಲ್ಲ ಆಳೆತ್ತರದ ಹುಲ್ಲು ಬೆಳೆದಿತ್ತು. ಸ್ವಲ್ಪ ದೂರ ದಲ್ಲಿ ನಾನು ಆಡುಗಳ ಹೆಜ್ಜೆಯ ಗುರುತನ್ನು ಸಹ ಕಂಡೆ. ಎರಡು ಹೆಜ್ಜೆ ಮುಂದುವರಿದಿರಬಹುದು- ನಾನು ಕಂಡದ್ದೇನು! ವರ್ತುಲಾಕಾರದಲ್ಲಿ ನಿಂತ ಅಮಾನುಷವಾದ ಭಯಂಕರಾಕೃತಿಗಳು! ನಾನು ಅಲ್ಲೇ ಕುಸಿದುಬಿದ್ದೆ. ಸ್ವಲ್ಪ ಹೊತ್ತು ನಾನು ಮೂರ್ಛೆ ಹೋಗಿರಬೇಕು. ಕತ್ತಲೆ ಹೆಚ್ಚುತ್ತಿತ್ತು. ಅವುಗಳು ಪ್ರತಿಮೆಗಳಾಗಿರಬಾರದೇಕೆ? ಆಶೆಯ ಕಿರಣವೊಂದು ಅಂಕುರಿಸಿತು. ಒಂದು, ಎರಡು... ಐವತ್ತು ಪುನಃ ಒಂದು, ಎರಡು,... ಐವತ್ತರ ವರೆಗೆ ಎಣಿಸಿದೆ. ಯಾವುದೂ ಚಲಿಸಲಿಲ್ಲ. ಧೈರ್ಯವಾಯಿತು; ಮುಂದಡಿಯಿಟ್ಟೆ. ಹತ್ತು ಪ್ರತಿಮೆಗಳಿದ್ದವು. ಪ್ರತಿಯೊಂದರ ಮುಖವೂ ತೆರೆದ ಬಾಯಿಯಿಂದ ಕೂಡಿದ್ದು ಕ್ರೂರತೆಯನ್ನು ಕಾರುತ್ತಿತ್ತು. ಅವುಗಳ ತಲೆಯ ಹಿಂಭಾಗವು ಟೊಳ್ಳು. ಗಾಳಿ ಬೀಸುವಾಗ ಅದರಿಂದ ಒಂದು ವಿಧದ ಸ್ವರ ಹೊರಡುತ್ತಿತ್ತು. ಆ ಸ್ವರದಲ್ಲಿ ಅತಿಮಾನವೀಯ ಕರ್ಕಶತೆ ಇತ್ತು. ನಾನು ಅದನ್ನು ಸಹಿಸಲಾರದೆ ಓಡಿಯೇಬಿಟ್ಟೆ. ಹಿಂದಿರು ಗದೆ ಓಡಿದೆ. ನಾನು ಆಚೆಗಿನ ಪ್ರದೇಶದಲ್ಲಿ ಒಂದು ಮರದ ಕೆಳಗೆ ಕುಳಿತೆ. ಆ ಪ್ರತಿಮೆ ಗಳಿಗೆ ನಾನು ಆಹುತಿಯಾಗಬೇಕಾದರೆ! ಅಬ್ಬಾ! ಸಾಹಸಕೃತ್ಯಕ್ಕೆ ಹೊರಡುವ ಮೊದಲು ಉತ್ಸಾಹ. ಕೃತ್ಯ ಪೂರಯಿಸಿದ ಮೇಲೆ ಆನಂದ. ಆದರೆ ಆ ಸ್ಥಿತಿಯಲ್ಲಿ ಭಯಾನಕವೇ. 'ಅನು ಭವವು ಸವಿಯಲ್ಲ; ಅದರ ನೆನಪೇ ಸವಿಯು' ಅಲ್ಲವೇ? ನನಗೆ ಆಯಾಸದಿಂದ ಬೇಗ ನಿದ್ರೆ ಬಂದು ಬಿಟ್ಟಿತು.

ಆಡುಗಳ ಕುತ್ತಿಗೆಗೆ ಕಟ್ಟಿದ ಗಂಟೆಮಣಿಗಳ ಸ್ವರದೊಡನೆ ನನ್ನ ನಿದ್ದೆ ಹರಿಯಿತು. ಹರಟುತ್ತ ನಗುತ್ತ ಸಮೀಪಕ್ಕೆ ಬರುತ್ತಿದ್ದ ಸುಂದರ ಬಾಲಿಕೆಯರಿಬ್ಬರು ಗೋಚರಿಸಿದರು. ಅವರು ನನ್ನನ್ನು ಕಂಡರು, ಗಕ್ಕನೆ ನಿಂತರು; ಪರಸ್ಪರ ನೋಡಿಕೊಂಡರು; ಇನ್ನೊಂದು ಕ್ಷಣದಲ್ಲಿ ಬೊಬ್ಬೆಹಾಕಿ ಓಡಿಹೋದರು. ಸುಮಾರು ಒಂದು ಗಂಟೆಯ ನಂತರ ಆ ಹುಡುಗಿಯರು ಆರೇಳು ಗಂಡಸರನ್ನು ಕರಕೊಂಡು ಬರುತ್ತಿದ್ದರು. ಪ್ರತಿ ಯೊಬ್ಬನ ಕೈಯಲ್ಲೂ ಬಿಲ್ಲು-ಬಾಣ-ಭರ್ಚಿಗಳಿ ದ್ದುವು. ಎಲ್ಲರೂ ದೃಢಕಾಯರಾಗಿದ್ದರು. ಅವರ ಸೌಂದರ್ಯ ನನ್ನನ್ನು ಆಕರ್ಷಿಸಿತು. ವಿರೋ ಧಿಸಿ ಪ್ರಯೋಜನವಿಲ್ಲವೆಂದು ನಾನು ಕುಳಿ ತಲ್ಲೇ ಕುಳಿತೆ. ಅವರು ಅತೀ ಸಮೀಪಸ್ಥರಾದ ಮೇಲೆ ಎದ್ದು ನಿಂತೆ. 'ಬಹಳ ಕಷ್ಟಗಳನ್ನೆದುರಿಸಿ ಇಲ್ಲಿಗೆ ಬಂದಿರುತ್ತೇನೆ. ಇಲ್ಲಿನ ಸ್ಥಿತಿಗತಿ ನನಗೆ ತಿಳಿಯದು' ಎಂದು ನಮ್ರವಾಗಿ ಇಂಗ್ಲೀಷಿನಲ್ಲಿ ಹೇಳಿದೆ. ಅವರಿಗೆ ಅರ್ಥವಾಗಲಿಲ್ಲ. ಪ್ರತಿಮೆ ಗಳನ್ನು ದಾಟಿ ಬಂದ ನನ್ನ ಧೈರ್ಯವನ್ನೂ ಅದ ಕ್ಕಿಂತ ಹೆಚ್ಚಾಗಿ ನನ್ನ ಬಿಳಿಯ ಮೈಬಣ್ಣವನ್ನೂ ನೀಲವಾದ ಕಣ್ಣುಗಳು ಹಾಗೂ ಕೋಮಲ ವಾದ ಕೇಶರಾಶಿಯನ್ನೂ ಅವರು ಮೆಚ್ಚಿದರೆಂದು ಆಮೇಲೆ ನನಗೆ ತಿಳಿಯಿತು. ಅವರಲ್ಲೊಬ್ಬನು ಮುಂದೆ ಬಂದು ತಮ್ಮನ್ನು ಹಿಂಬಾಲಿಸಬೇಕೆಂದು ನಗುತ್ತ ಸೂಚಿಸಿದನು. ನನ್ನನ್ನು ಒಂದು ಮನೆಗೆ ಕರೆದೊಯ್ದರು. ಆ ದಿನ ಹಾಲು ಮಾಂಸ ಕೊಟ್ಟು ಉಪಚರಿಸಿದರು. ರಾತ್ರಿ ಒಳ್ಳೆಯ ಹಾಸಿಗೆ ಹಾಸಿಕೊಟ್ಟರು. ರಾತ್ರಿ ಸುಖವಾಗಿ ಕಳೆಯಿತು.

ಬೆಳಿಗ್ಗೆ ನಾನು ಮೈ-ಕೈ ತೊಳೆದು ತಲೆಬಾಚಿ ಆದಷ್ಟು ಶುಭ್ರವಾದ ಬಟ್ಟೆಬರೆಗಳನ್ನು ಧರಿಸಿದೆ. ಆಗ ಆ ಜನರಿಗೆ ನನ್ನ ಮೇಲೆ ಗೌರವವು ಹೆಚ್ಚಿದಂತೆ ಭಾಸವಾಯಿತು. ನಾನು ಅವರೊಡನೆ ಮುಂದಿನ ಪ್ರದೇಶಗಳಿಗೆ ಬರಬೇಕೆಂತಲೂ ನನ್ನ ಪ್ರಾಣಕ್ಕೇನೂ ಅಪಾಯವಿಲ್ಲವೆಂತಲೂ ಕೆಲವರು ವಿನಯದಿಂದ ಸೂಚಿಸಿದರು. ನಾನು ಒಪ್ಪಿದೆ; ಒಪ್ಪದಿದ್ದರೆ ಬಲಾತ್ಕರಿಸುತ್ತಿದ್ದರೋ ಏನೋ. ಕೆಲವು ಹಳ್ಳಿಗಳನ್ನು ದಾಟಿ ಒಂದು ಪಟ್ಟಣವನ್ನು ಸೇರಿದೆವು. ಅಲ್ಲಿನ ಮೆಜಿಸ್ಟ್ರೇಟನೆದುರಿಗೆ ನಿಲ್ಲಿಸಿದರು. ನಾನು ಹೇಳಿದುದು ಅವನಿಗೆ ತಿಳಿಯಲಿಲ್ಲ, ಅವನು ಹೇಳಿದುದು ನನಗೆ ತಿಳಿಯಲಿಲ್ಲ. ಆದರೂ ಅವನು ಸೌಜನ್ಯದಿಂದ ವರ್ತಿಸುತ್ತಿರುವಂತೆಯೇ ತೋರಿತು. ಒಂದು ಕೋಣೆಯಲ್ಲಿ ಬೇರೆ ಇಬ್ಬರು ಅವನೆದುರಿಗೆ ನನ್ನ ಬಟ್ಟೆಬರೆಗಳನ್ನು ಶೋಧಿಸಿದರು. ಬಾಯಿ ಕಿವಿ ಕಣ್ಣು ಮೂಗು ಎಲ್ಲವನ್ನೂ ನೋಡಿ ಸಮಾಧಾನಪಟ್ಟಂತೆ ತೋರಿತು. ಆದರೆ ನನ್ನ ವಾಚನ್ನು ನೋಡಿದೊಡನೆಯೇ ಅವರ ಈ ಭಾವನೆಯು ಕಳೆದು ಹೋಗಿ ತಿರಸ್ಕಾರದ ಭಾವನೆ ಬಲಿಯಿತು. ನನ್ನನ್ನು ಒಂದು ದೊಡ್ಡ ಕೋಣೆಯ ಮಧ್ಯಕ್ಕೆ ಕರೆದೊಯ್ದರು. ಉಗಿ ಎಂಜಿನು, ಮೋಟಾರು, ಸಿಲಿಂಡರು ಇತ್ಯಾದಿ ಎಷ್ಟೋ ಯಂತ್ರ, ವಿಶೇಷಗಳ ಭಗ್ನಾವಶೇಷಗಳು ಎಡಬಲಗಳಲ್ಲಿ ಸಾಲಾಗಿ ಇಡಲ್ಪಟ್ಟಿದ್ದವು. ಒಂದೆಡೆ ವಿಧವಿಧದ ಗಡಿಯಾರಗಳ ಸಮೂಹವಿತ್ತು. ಮೆಜಿಸ್ಟ್ರೇಟನು ನನ್ನ ವಾಚಿಗೂ ಅಲ್ಲಿದ್ದುದಕ್ಕೂ ಸಂಬಂಧ ತೋರಿಸಿ ಬೇಸರದಿಂದ ಏನೇನೋ ಹೇಳಿದನು. ನಾನೆಂದೆ 'ವಾಚಿಟ್ಟುಕೊಳ್ಳುವುದು ಅಪರಾಧವಾದರೆ ಇಗೋ ತೆಗೆದುಕೊಳ್ಳಿ'. ನನ್ನ ಭಾವನೆಯ ಹೊಲಬಾಗಿರಬೇಕು ಆತನಿಗೆ. ನನ್ನ ವಾಚನ್ನು ತೆಗೆದು ಅಲ್ಲಿ ಇರಿಸಲಾಯಿತು. ಅನಂತರ ನನ್ನನ್ನು ಒಂದು ಬಂಗಲೆಗೆ-ಕಾರಾಗೃಹಕ್ಕೆ-ಕರೆದೊಯ್ದರು. ಉಳಿದ ಕೈದಿಗಳಿಗಿಂತ ಬೇರೆಯಾಗಿ ನನಗೊಂದು ಪ್ರತ್ಯೇಕ ಕೋಣೆಯನ್ನು ಕಾದಿರಿಸಲಾಯಿತು. ಮೇಜು, ಖುರ್ಚಿ, ಹಾಸಿಗೆ, ಬೆಂಕಿ ಒಲೆಗಳ ಸೌಕರ್ಯವಿತ್ತು. ಮುಂದೆ ಒಂದು ತೋಟವಿತ್ತು.

ನನಗೆ ಕಾಲಕಾಲಕ್ಕೆ ರುಚಿಕರವಾದ ಆಹಾರಗಳನ್ನು ಕೊಡುತ್ತಿದ್ದರು. ಜೇಲರ್ ಮತ್ತು ಅವನ ಮಗಳು ಯರಾಂ ನನ್ನನ್ನು ಆಗಾಗ ಭೇಟಿ ಮಾಡುತ್ತಿದ್ದರು. ಯರಾಂ ನನ್ನ ಮೇಲೆ ಪ್ರೀತಿ ತೋರಿಸಿ ಉಪಚರಿಸದಿರುತ್ತಿದ್ದರೆ ಕೈದಿಯೆಂಬ ಕಹಿಭಾವನೆಯಿಂದ ಕೂಡಿದ್ದ ನನ್ನ ಏಕಾಂಗಿ ಜೀವನವು ಅಸಹ್ಯವಾಗಿಬಿಡುತ್ತಿತ್ತು. ಅವರ ರೀತಿ ನೀತಿಗಳು ನನಗೊಂದು ಸಮಸ್ಯೆಯಾಯಿತು. ಮನೆಗಳಲ್ಲಿ ಸಾಮಾನು ಸರಂಜಾಮುಗಳನ್ನಿಡುವ ರೀತಿ, ಅಡುಗೆ ಮಾಡುವ ಕ್ರಮ, ಆಹಾರ ಪದಾರ್ಥಗಳು, ದಾರಿಯಲ್ಲಿನ ಹಳ್ಳಿಗಳು, ಹಳ್ಳಿಗಳ ಹುಲ್ಲುಗಾವಲುಗಳು, ಹುಲ್ಲುಗಾವಲಿನಲ್ಲಿ ಮೇಯುವ ದನಗಳು, ಆಡುಗಳು-ಹೀಗೆ ಎಷ್ಟೋ ವಿಷಯಗಳಲ್ಲಿ ಅವರು ನಮ್ಮ ಯುರೋಪಿನವರಂತೆಯೇ ಕಂಡುಬಂದರು. ಆದರೂ ಏನೋ ಸ್ವಲ್ಪ ವ್ಯತ್ಯಾಸವಿಲ್ಲದಿರಲಿಲ್ಲ. ಬಹುಶಃ ನಮಗಿಂತ ೫-೬ ಶತಮಾನಗಳಷ್ಟು ಹಿಂದುಳಿದ ಜನಾಂಗವೇ! ಆ ಯಂತ್ರಗಳ ಭಗ್ನಾವಶೇಷಗಳು, ನಮ್ಮಲ್ಲಿ ಈಗೀಗ ಬಳಕೆಗೆ ಬರುತ್ತಿರುವ ಯಂತ್ರಗಳು ಅಲ್ಲಿ ೪೦೦-೫೦೦ ವರ್ಷಗಳಷ್ಟು ಹಳೆಯವೆಂದು ಸಾರುತ್ತಿದ್ದುವು. ಅವರಿಗೆ ನನ್ನ ವಾಚು ಅರ್ಥವಾದಂತೆ ತೋರಿತು. ಜನರೆಲ್ಲರೂ ಅತ್ಯಂತ ಸೌಂದರ್ಯವಂತರು; ಕಣ್ಣಿಗೆ ಹಬ್ಬವನ್ನುಂಟುಮಾಡುವ ಆರೋಗ್ಯವಂತರು. ಯಾರಲ್ಲೂ ಕ್ರೌರ್ಯದ ದೌರ್ಜನ್ಯದ ಚಿನ್ಹೆಯಿರಲಿಲ್ಲ. ನನ್ನ ಬಗ್ಗೆ ಕುತೂಹಲವೇನೋ ಇತ್ತು ಅಷ್ಟೆ. ದಾರಿಯಲ್ಲಿ ಕೆಲವು ಸುಂದರವಾದ ಪ್ರತಿಮೆಗಳನ್ನು ಕಂಡಿದ್ದೆನು. ಅವುಗಳಿಗೆ ಜನರು ಬಹು ಗೌರವವನ್ನು ತೋರಿಸುತ್ತಿದ್ದರು. ಹೀಗೆ ಆಲೋಚಿಸುತ್ತಿರುವಾಗ ಒಂದು ವ್ಯಕ್ತಿ ಪೆನ್ನು-ಪೇಪರನ್ನು

ಹಿಡಿದು ಒಳಗೆ ಪ್ರವೇಶಿಸಿತು. ಅವರ ಭಾಷೆ ಕಲಿಯುವುದು ಅಂದೇ ಶುರುವಾಯಿತು. ಅವನ ಸಹಾಯದಿಂದಲೂ ಅದಕ್ಕಿಂತಲೂ ಹೆಚ್ಚು ಯರಾಂಸ ಮಾತುಕತೆಗಳಿಂದಲೂ ಮೂರು ತಿಂಗಳುಗಳಲ್ಲಿ ಅವರ ಭಾಷೆಯನ್ನು ಅರ್ಥ ಮಾಡಲು ಕಲಿತೆನು.

ಒಮ್ಮೆ ನನಗೆ ಶೀತ ಬಾಧೆಯುಂಟಾಯಿತು. ನಾನು ಯರಾಮ್ಮೆಗೆ ತಿಳಿಸಿದೆನು. ನನ್ನ ಮೇಲಿನ ಕನಿಕರ ಜಾಸ್ತಿಯಾಗಬಹುದೆಂದು ಭಾವಿಸಿದ್ದರೆ, ಅವಳು ರೇಗಿ ಬಿದ್ದಳು! "ಶೀತವಾಗಿದೆಯೆಂದು ಹೇಳಲು ಎಂತಹ ಕೆಚ್ಚು ಬೇಡ ನಿನಗೆ? ತಂದೆಯೊಡನೆ ಹೇಳಿ ಕಠಿಣ ಶಿಕ್ಷೆಗೆ ಒಳಪಡಿಸಬಹುದು. ಗೊತ್ತೇ?" ಅರ್ಥವಾಗದೆ ಪೆಚ್ಚು ಪೆಚ್ಚಾದೆ. ಅವಳೂ ನನ್ನನ್ನು ತಿಳಿದುಕೊಂಡಳೆಂದು ಕಾಣುತ್ತದೆ. ವಿವರಿಸಿದಳು. ಇರವನ್ನಿನಲ್ಲಿ ಕಾಹಿಲೆ ಬೀಳುವುದು ಅಪರಾಧ. ಶೀತವಾದವನೂ ಕಾನೂನು ರೀತ್ಯಾ ಕಾರಾಗ್ರಹ ವಾಸವನ್ನನುಭವಿಸಬೇಕು. ನನಗಾದ ಆಶ್ಚರ್ಯ ಹೇಳಬೇಕಾಗಿಲ್ಲ. ಗೋಡೆಯ ಆಚೆಯಿಂದ ಕೇಳಿಬರುತ್ತಿದ್ದ ಕೆಮ್ಮಲು ನರಳುವಿಕೆಯ ಅರ್ಥ ನನಗಾಗ ಹೊಳೆಯಿತು.

ಮೂರು ತಿಂಗಳ ನಂತರ ಒಂದು ದಿನ ನನಗೆ ಕಲಿಸುವವನು ಹೇಳಿದನು: "ಸೆರೆಮನೆಯಲ್ಲಿ ಸರಿಯಾಗಿ ವರ್ತಿಸಿದ್ದೀಯಾ ಹಾಗೂ ನಿನ್ನ ಆರೋಗ್ಯದಲ್ಲಿ ಏನೂ ಕುಂದಿಲ್ಲವೆಂದು ಕಂಡುಬಂದರೆ ರಾಜ-ರಾಣಿಯರು ನಿನ್ನನ್ನು ಕಾಣಲಿಚ್ಛಿಸುತ್ತಾರೆಂದು 'ನಗರ'ದಿಂದ ಸುದ್ದಿ ಬಂದಿದೆ." "ಅಲ್ಲಿ ನಾನೇನು ಮಾಡಬೇಕು?" "ನಿನಗೆ ಅಲ್ಲಿ ಸ್ವಾತಂತ್ರ್ಯ ಕೊಡಲಾಗುವುದು; ಅಲ್ಲದೆ ಅಲ್ಲಿನ ಒಬ್ಬ ದೊಡ್ಡ ವ್ಯಕ್ತಿ ನಿನ್ನನ್ನು ತನ್ನ ಅತಿಥಿಯಾಗಿ ಮಾಡಬೇಕೆಂದಿರುವನು. ನೀನಲ್ಲಿ ಇಷ್ಟಬಂದಷ್ಟು ದಿನವಿರಬಹುದಂತೆ." ಅವನೆಂತಹ ಮನುಷ್ಯನೆಂದು ನಾನು ಕೇಳಿದೆ. "ಅವನು ಸಿನೋಜನಾಸ್‌ನಿಬಾರನು. ಒಂದು ಮುದುಕಿಯ ಬಹು ದೊಡ್ಡ ಮೊತ್ತವನ್ನು ಅಪಹರಿಸಿದ್ದವನು ಇತ್ತೀಚೆಗೆ, ಪಾಪ, ಚೇತರಿಸಿಕೊಂಡಿದ್ದಾನೆ." ನಾನು ಅವನೊಡನೆ "ಅವನ ಸ್ಥಾನವೇನು ಸಮಾಜದಲ್ಲಿ?" ಎಂದು ಪ್ರಶ್ನಿಸಿದೆ. "ಅವನು ಅತ್ಯಂತ ಪ್ರತಿಷ್ಠಿತ ವ್ಯಕ್ತಿ. ೫ ಲಕ್ಷ 'ಅಶ್ವಶಕ್ತಿ'ಯಿರುವ ಧನಿಕ. ಅವನ ಇಬ್ಬರು ಹುಡುಗಿಯರು ಇರವನ್ನಿನ ಅತ್ಯಂತ ಸುಂದರಿಯರು." ಅವನೊಡನಿರುವುದು ನನಗೆ ಸರಿಯಿಲ್ಲವೆಂದು ತೋರ್ಪಡಿಸಿದೆನು. "ನೀನೊಬ್ಬ ಕಡುಮೂರ್ಖನೇ ಸರಿ. ಕಾಮಾಲೆ ಅಥವಾ ಸನ್ನಿ ರೋಗದಿಂದ ನರಳುವವನಿಗೆ ಹೆದರುವಂತೆ ಹೆದರುತ್ತಿದ್ದೀ. ಆದರೆ ಕಾಹಿಲೆ ಅಂಟುವ ಹೆದರಿಕೆಯಿಲ್ಲ" "ಅಂಟುವುದರ ಅಂಜಿಕೆಯಿಂದಲ್ಲ; ನನಗೂ 'ನಡತೆ'ಯೆಂಬುದರ ಮೇಲೆ ಸ್ವಲ್ಪವಾದರೂ ಗಮನವಿದೆ, ನೋಡಿ. ಹಣ ಅಪಹರಿಸುವವನ ಸಹವಾಸ ಹೇಗೆ ಆದೀತು? ಅದಕ್ಕಿಂತ ರೋಗಿ ಅಥವಾ ಬಡವ...." "ರೋಗಿ ಅಥವಾ ಬಡವ!" ಎಂದು ಹೌಹಾರಿ ಮತ್ತೆ ಆತ ಹೇಳಿದನು. "ಅಂದರೆ ನೀನು ಕಾನೂನು ಮುರಿಯುವ ಅತಿ ಅಧಮರೊಡನೆಯಾದರೂ ಇರುವೆ; ಬರೆ ಹಣ ಅಪಹರಿಸಿದವನೊಡನೆ ಇರಲಾರೆಯಲ್ಲವೆ?" "ನಾನೂ ಸಹ ಬಡವನೆ" ಎಂದೆ. "ಅದಕ್ಕೆ ನಿನಗೆ ಕಠಿಣ ಶಿಕ್ಷೆ ಕೊಡಬೇಕು. ತಿಳಿಯಿತೋ, ನಿನ್ನ ನೀಲ ಕಣ್ಣುಗಳು, ಕೋಮಲವಾದ ಕೂದಲು ಹಾಗು ಸುಂದರವಾದ ವರ್ಣಕ್ಕಾಗಿ ನಿನಗೆ ರಿಯಾಯಿತಿ ತೋರಿಸಿದ್ದಾರೆ, ಅಲ್ಲದೆ ದಿನಕ್ಕೊಂದು ಪೌಂಡಿನಷ್ಟು ಪೆನ್ಶನನ್ನೂ ಕೊಡುವ ಏರ್ಪಾಡಾಗಿದೆ. ನೀನೆಂದುದೆಲ್ಲ ಅವರಿಗೆ ತಿಳಿಯಿತೆಂದರೆ ಮುಗಿಯಿತು."

ಈಗ ಅಲ್ಲಿನ ಜನರ ಸ್ಥಿತಿ ಅರ್ಥವಾಯಿತು. ಒಪ್ಪಿದೆ. ಕುದುರೆಯ ಸಾರೋಟಿನಲ್ಲಿ ನಗರಕ್ಕೆ ಪ್ರಯಾಣಿಸಿದೆ. ಹೋಗುವ ಮುನ್ನ ಯರಾಮ್ಮೆಗೆ ನನ್ನ ಎರಡು ಗುಂಡಿಗಳನ್ನೂ ಒಂದು ಮುಷ್ಟಿ

ಕೂದಲನ್ನೂ ಕೊಟ್ಟೆನು. ನನಗೆ ದಾರಿ ತಿಳಿಯಬಾರದೆಂದು ನನ್ನ ಕಣ್ಣುಗಳನ್ನು ಹಗಲೆಲ್ಲ ಕಟ್ಟಿರುತ್ತಿದ್ದರು. ರಾತ್ರಿ ಛತ್ರಗಳಲ್ಲಿ ತಂಗುತ್ತಿದ್ದೆವು. ಜನರ ಹಾಗೂ ಪ್ರೆಸ್ಸಿನವರ ಗದ್ದಲವನ್ನು ತಪ್ಪಿಸಲು ನಾವು ಬಳಸು ದಾರಿಯನ್ನು ಹಿಡಿಯುತ್ತಿದ್ದೆವು. ಛತ್ರಗಳಲ್ಲಿ ಜನರು ಬಹಳ ಸಂತಸದಿಂದ ಉಪಚರಿಸುತ್ತಿದ್ದರು. ಅವರು "ನಿನ್ನ ಸ್ವಭಾವ ಹೇಗಿದೆ?" ಎಂದು ಕೇಳುತ್ತಿದ್ದರೇ ವಿನಾ "ನಿನಗೆ ಆಯಾಸವಾಯಿತೋ? ಆರೋಗ್ಯ ಹೇಗಿದೆ?" ಎಂದು ಕೇಳುತ್ತಲೇ ಇರಲಿಲ್ಲ. "ಇವತ್ತು ನಿಮ್ಮೆಲ್ಲರ ಮೇಲೂ ಅಸಮಾಧಾನವಾಗುತ್ತಿದೆ; ಸಿಟ್ಟು ಬರುತ್ತಿದೆ" ಯೆಂದು ಒಮ್ಮೆ ನುಡಿದೇ ಬಿಟ್ಟೆ. ಕೂಡಲೆ ಜನರು ವ್ಯಥೆ ಸೂಚಿಸಿದರು. ಆಘ್ರಾಣಿಸಲು ಪರಿಮಳದ ಹಾಗೂ ತಿನ್ನಲು ರುಚಿರುಚಿಯ ವಸ್ತುಗಳನ್ನು ಕೊಡಹತ್ತಿದರು. ಬೆಳಿಗ್ಗೆ ಕೆಲವರು ಬಂದು ಸ್ವಭಾವ ಉತ್ತಮಗೊಂಡಿದೆಯೇ ಎಂದು ವಿಚಾರಿಸಿಕೊಂಡರು. ನನ್ನ ಭೇಟಿಗಾಗಿ ಬರುತ್ತಿದ್ದ ಪದವೀಧರರು, ಬ್ಯಾಂಕಿನ ಕ್ಲಾರ್ಕುಗಳು, ಪುರೋಹಿತರು ಇತ್ಯಾದಿ ಉದ್ಯೋಗಸ್ಥರಿಂದ ಎಷ್ಟೋ ವಿಷಯಗಳನ್ನು ಪ್ರಶ್ನಿಸಿ ತಿಳಿದುಕೊಂಡೆನು.

ಒಂದು ತಿಂಗಳ ಪ್ರಯಾಣದ ನಂತರ ನಗರವನ್ನು ತಲಪಿದೆವು. ದೂರದಿಂದಲೇ ಮೇಯರ್, ನಗರ ಸಭೆಯ ಸದಸ್ಯರು ಮತ್ತಿತರರು ನನ್ನನ್ನು ಎದುರುಗೊಂಡರು. ನಾಸ್‌ನಿಬಾರನ ಪರಿಚಯವಾಯಿತು. ಅವನಿಗೆ ನಮಸ್ಕರಿಸಿ ಅವನ ಉದಾರತೆಯನ್ನು ಹೊಗಳಿದೆ. ನಂತರ ಅವನ ಗಾಡಿಯಲ್ಲಿ ಕುಳಿತು ಅವನ ಮನೆ ಸೇರಿದೆವು. ಅದು ನಗರದ ಹೊರವಲಯದಲ್ಲಿದ್ದು ಸುತ್ತಲೂ ಸುಂದರವಾದ ತೋಟವಿತ್ತು. ಪಕ್ಕದಲ್ಲಿ ರೈಲ್ವೇ ನಿಲ್ದಾಣದ ಭಗ್ನಾವಶೇಷವಿತ್ತು. ಮನೆಯು ಬಹಳ ಸುಂದರವೂ ದೊಡ್ಡದೂ ಆಗಿತ್ತು. ಒಂದು ಸಣ್ಣ ಅರಮನೆಯೇ ಎಂದು ಹೇಳಬಹುದು. ಶ್ರೀಮತಿ ನಾಸ್‌ನಿಬಾರ್ ಮತ್ತು ಅವರ ಎರಡು ಮಕ್ಕಳು ನನಗೆ ಹಾರ್ದಿಕ ಸ್ವಾಗತವನ್ನು ಬಯಸಿದರು. ನನಗೆ ಒಳ್ಳೆಯ ಭೋಜನವಾಯಿತು. ಕಿರಿಯಳಾದ ಅರೋವೀನಾಳೇ ನನ್ನನ್ನು ಹೆಚ್ಚಾಗಿ ಒಲಿಸಿದವಳು.

ಇನ್ನು ಅವರ ರೀತಿನೀತಿಗಳ ಮೇಲೆ ಒಂದೆರಡು ಮಾತು ಅನಿವಾರ್ಯ. ಈ ದೇಶದಲ್ಲಿ ೭೦ ವರ್ಷದ ಒಳಗಿನ ಯಾರಾದರೂ ಸರಿ. ಆರೋಗ್ಯವನ್ನು ಕಳಕೊಂಡದ್ದೇ ಆದರೆ ಅವನನ್ನು ಜ್ಯೂರಿಗಳೆದುರು ಕೋರ್ಟುಗಳಲ್ಲಿ ವಿಚಾರಣೆಗೊಳಪಡಿಸಿ ಅವರವರ ಕಾಹಿಲೆಗಳಿಗನುಸಾರವಾಗಿ ಶಿಕ್ಷೆ ವಿಧಿಸಲಾಗುವುದು. ೬೫ ವರ್ಷದ ಮೇಲೆ ನೇತ್ರ ಶಕ್ತಿ ಕುಂದುವುದು ಇತ್ಯಾದಿ ಸಣ್ಣ ಅಪರಾಧಗಳನ್ನು ಬರೇ ದಂಡದಿಂದ, ತಪ್ಪಿದರೆ ಸೆರೆಮನೆವಾಸದಿಂದ ಶಿಕ್ಷಿಸಲಾಗುವುದು. ಒಬ್ಬನು ದರೋಡೆ ಮಾಡಿದರೆ, ಕದ್ದರೆ, ಮನೆಗೆ ಬೆಂಕಿ ಹಾಕಿದರೆ ಅಥವಾ ಇನ್ನಾವುದಾದರೂ ಅಂತಹ ಕೆಲಸಗಳನ್ನು ಮಾಡಿದ್ದೇ ಆದರೆ, ಅವನನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆಗೆ ಒಳಪಡಿಸಲಾಗುವುದು. ಅಂತಹವನು ಅನುಕೂಲಸ್ಥನಾದರೆ ಅವನ ಮನೆಗೇ ಒಬ್ಬ ಚಿಕಿತ್ಸಕನು ಬಂದು ಗುಣಪಡಿಸಲೆತ್ನಿಸುವನು. ಮಾನಸಿಕ ಅಂಕುಡೊಂಕುಗಳನ್ನು ನೇರಾಗಿಸುವ ಶಾಸ್ತ್ರದಲ್ಲಿ ಪಳಗಿದವರಿರುತ್ತಾರೆ. ಅವರನ್ನು 'ನೇರಕಾರರೆಂದು' ಅನುವಾದಿಸಬಹುದು. ಅವರೆದುರು ಜನರು ತಮ್ಮ ಎಲ್ಲ ಮಾನಸಿಕ ವಿಷಮ್ಯೆಷಮ್ಯಗಳನ್ನು ಬಿಚ್ಚುತ್ತಾರೆ; ಕೊಡಲಾಗುವ ಎಂತಹ ದುಃಖದಾಯಕ ಚಿಕಿತ್ಸೆಯನ್ನಾದರೂ ಅನುಭವಿಸುತ್ತಾರೆ. ನೇರಕಾರರು 'ಮನೋರೋಗ' ಗಳನ್ನು ವಿಭಜಿಸಿ ಪ್ರತಿಯೊಂದು ರೋಗವನ್ನೂ ಹೆಸರಿಸಿರುತ್ತಾರೆ. ಕೆಲವರಂತೂ 'ಕುಡುಕತನ' 'ಕಳ್ಳತನ' 'ತಿನಪಾಂಡಿತನ' ಇತ್ಯಾದಿ ರೋಗವಿಶೇಷಗಳನ್ನು ತಾವೇ ಅನುಭವಿಸಿ ಅಭ್ಯಸಿಸಿ ಪಾಂಡಿತ್ಯ

ಸಂಪಾದಿಸುತ್ತಾರೆ. ಈ ವ್ರತಗಳನ್ನು ಆಚರಿಸು-ವಾಗ ಸಾಯುವುದೂ ಉಂಟು.

ನಾಸ್‌ನಿಬಾರನು ಮೊದಮೊದಲು ಪುಟ್ಟ ಪುಟ್ಟ ಕಳ್ಳತನ ಮಾಡಿದನು. ಅವನದನ್ನು ಲಕ್ಷಿಸ ಲಿಲ್ಲವಾದ್ದರಿಂದ ರೋಗವು ಬಲಿಯುತ್ತ ಬಂದು ಕಡೆಗೆ ಒಬ್ಬ ಬಡ ಮುದುಕಿಯ ಸರ್ವಸ್ವವನ್ನು ಅಪಹರಿಸಿದನು. ಪ್ರಸಿದ್ಧನಾದ ನೇರಕಾರನನ್ನು ಬರಮಾಡಿಸಿದನು. ಅವನು ಅಪಹರಿಸಿದ ಹಣದ ಇಮ್ಮಡಿಯಷು ದಂಡವನ್ನು ರಾಜ್ಯಕ್ಕೆ ಕೊಡ ಬೇಕು; ಬರೇ ರೊಟ್ಟಿ ಹಾಲುಗಳಲ್ಲಿ ಆರು ತಿಂಗಳ ವರೆಗೆ ಜೀವಿಸಬೇಕು; ತಿಂಗಳಿಗೊಂದು ಸರ್ತಿ ಯಾಗಿ ೧೨ ಸಲ ಬಲವಾದ ಪೆಟ್ಟು ತಿನ್ನಬೇಕು ಎಂದು ವಿಧಿಸಿದರು. ನಾನು ಅವರ ಮನೆಗೆ ಹೋದ ದಿನ ನಾಸ್‌ನಿಬಾರನು ೧೧ ನೆಯ ಸಲದ ಪೆಟ್ಟು ತಿಂದಿದ್ದನು. ಅವನ ಕೂಗಾಟ ಕಂಡು ಪಾಪ! ಎನ್ನಿಸಿತು. ಈಗಾಗಲೆ ಅವನು ರೋಗ ಮುಕ್ತನಾದರೂ ಇನ್ನೊಮ್ಮೆ ಪೆಟ್ಟು ತಿನ್ನುವುದು ಮುಂಜಾಗ್ರತೆಯ ದೃಷ್ಟಿಯಿಂದ ಒಳ್ಳೆಯದು ಎಂದು ಅವನ ಅಭಿಪ್ರಾಯವಿದ್ದಿತು. ಅವನೀಗ ವ್ಯಾಪಾರದಲ್ಲಿ ಬಹು ಮುಂದುವರಿದು ಮೊದಲಿನ ಹತ್ತರಷ್ಟು ಧನ ಗಳಿಸುತ್ತಿದ್ದಾನೆ.

ಇನ್ನೊಂದು ವಿಚಿತ್ರ. ಆ ಮುದುಕಿಯ ಗತಿ ಯೇನು ಗೊತ್ತೇ? ಅವಳ ಹಣ ಅವಳಿಗೆ ಕೊಡುವ ಮಾತಂತಿರಲಿ, ಅವಳು ಕೂಡಲೇ ಸಾಯದೆ ಬದುಕುಳಿದಿದ್ದರೆ ಅವಳ ದುರದೃಷ್ಟ ಕ್ಕಾಗಿ ಅವಳನ್ನು ಶಿಕ್ಷಿಸುತ್ತಿದ್ದರು. ವ್ಯಕ್ತಿ ದುರದೃಷ್ಟವಂತನಾಗಿ ತನ್ನ ಪಾಲಕನನ್ನು ಕಳ ಕೊಂಡರೆ ಕಠಿಣವಾದ ಶಿಕ್ಷೆಯನ್ನು ಅನುಭವಿ ಸಲೇ ಬೇಕಾಗಿತ್ತು.

೫೦೦ ವರ್ಷಗಳ ಹಿಂದೆ ಇರವನ್ ಯಂತ್ರೋ ದ್ಯಮದಲ್ಲಿ ಬಹು ಮುಂದುವರಿದಿತ್ತು. ಆಗ ಒಂದು ದೊಡ್ಡ ಕ್ರಾಂತಿಯುಂಟಾಗಿ ಬಳಕೆಯ ಲ್ಲಿದ್ದ ಯಂತ್ರಗಳೆಲ್ಲವನ್ನು ನಾಶಮಾಡಲಾಯಿ ತೆಂದೂ ಆಮೇಲೆ ಯಂತ್ರನಿರ್ಮಾಣ ಶಿಕ್ಷಾರ್ಹ ವಾಯಿತೆಂದೂ ತಿಳಿಯಿತು.


ದೇಹದ ಕುಂದುಕೊರತೆಗಳನ್ನು ಮರೆಮಾಚಿ ಕೊಳ್ಳುವುದರಲ್ಲಿ ಇರವನಿಗರು ನಿಸ್ಸೀಮರು. ಹೊಟ್ಟೆನೋವು, ತಲೆನೋವು ಇತ್ಯಾದಿ ಇದ್ದ ವರು ಅದು ತಮ್ಮ ಅತೀವ ಕುಡುಕುತನದ ಪರಿ ಣಾಮವೆಂದು ನಟಿಸಿ ಅದನ್ನು ಮನೋರೋಗದ ಸಾಲಿಗೆ ಸೇರಿಸಿ ಶಿಕ್ಷೆಯಿಂದ ಬಚಾವಾಗುತ್ತಿ ದ್ದರು. ಇದು ನಟನೆಯೆಂದು ಸಾಧಾರಣ ಗೊತ್ತಾಗುತ್ತಿತ್ತು. ದೈಹಿಕ ರೋಗಗಳನ್ನು ಗುಟ್ಟಾಗಿ ಗುಣಪಡಿಸಲೆತ್ನಿಸುವ ವೈದ್ಯರೂ ಇದ್ದಾ ರೆಂದು ತಿಳಿದೆ. ಅವರ ಕೃತ್ಯ ಗೊತ್ತಾಯಿತೆಂದರೆ ಅವರಿಗೆ ಕಠಿಣದಂಡನೆ ನಿಶ್ಚಿತ. ಸಾಮಾನ್ಯವಾಗಿ ಜನರ ಆರೋಗ್ಯ ಉತ್ತಮವಾಗಿಯೇ ಇದೆ. ಎಂತಹ ಧಾಂಡಿಗನಿಗಾದರೂ ಒಮ್ಮೊಮ್ಮೆ ಅಸೌ ಖ್ಯವಾಗದಿರುತ್ತದೆಯೆ? ಔಷಧಿಯ ಪೆಟ್ಟಿಗೆ ಯೊಂದನ್ನು ಮನೆಯ ಮೂಲೆಯಲ್ಲೆಲ್ಲಾದರೂ ಇಟ್ಟಿರದವರು ಬಹು ವಿರಳ.


ನಾನವರ ಕೋರ್ಟಿಗೂ ಒಂದು ದಿನ ಹೋಗಿ ಕೆಲವು ವಿಚಾರಣೆಗಳನ್ನು ಕೇಳಿದೆ. ನ್ಯಾಯಾ-ಧೀಶ, ವಾದಿ-ಪ್ರತಿವಾದಿ, ಅವರ ವಕೀಲರು, ಜ್ಯೂರಿಗಳು - ಎಲ್ಲ ನಮ್ಮೂರಿನಂತೆಯೇ ಕ್ರಮ ಗಳು. ಹೆಂಡತಿಯನ್ನು ಕಳಕೊಂಡವನೊಬ್ಬ ನನ್ನು ತಂದು ನಿಲ್ಲಿಸಿದರು. ಅವನು ಹೆಂಡತಿ ಯನ್ನು ಪ್ರೀತಿಸಲೇ ಇಲ್ಲವೆಂದು ವಾದಿಸಲಾ ಯಿತು. ಅವರಿಬ್ಬರಲ್ಲಿ ಪ್ರೇಮವಿತ್ತು ಎಂದು ಅನೇಕ ಸಾಕ್ಷಿಗಳಿದ್ದವು. ಹೆಂಡತಿಯ ಸುದ್ದಿ ಅವನ ಕಣ್ಣಿಂದ ನೀರು ಇಳಿಸುತ್ತಿತ್ತು. ಜ್ಯೂರಿ ಗಳು ಅವನು ಅಪರಾಧಿಯೆಂದರು. ನ್ಯಾಯಾಧೀ ಶರೆಂದರು: "ಪ್ರಕೃತಿಯೇ ಇಂತಹ ಅಪರಾಧ ಗಳಿಗೆ ಶಿಕ್ಷೆ ಕೊಡುತ್ತದೆ. ಮಾನವರ ಕಾಯ್ದೆ-ಕಾನೂನು ಈ ಪ್ರಕೃತಿಯ ನಿಯಮವನ್ನು ಸಮರ್ಥಿಸತಕ್ಕದ್ದು. ನಿನಗೆ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸುತ್ತಿದ್ದೆ. ಹೆಂಡತಿಯ ಜೀವ ವಿಮೆಯಾದ್ದರಿಂದ ನಿನಗೆ ಹಣ ಸಿಗುವುದು. ಅದು

ಸುಖಮಯ
ಸ್ತ್ರೀ ಜೀವನ
ವೆಂದರೇನೇ

ಯುಟೋನ್

ಸ್ತ್ರೀಯರಿಗಾಗಿ
ಆದರ್ಶ
ಆರೋಗ್ಯದಾಯಕ
ಟಾನಿಕ್





ಯುಟೋನದಲ್ಲಿ, ಸ್ತ್ರೀಯರ ಆರೋಗ್ಯ, ಸಧೃಡತೆ, ಉತ್ಸಾಹ ಹಾಗೂ ಶಕ್ತಿ ಒದಗಿಸುವ ಆಶೋಕ, ಅಶ್ವಗಂಧಾ, ಶತಾವರಿ, ಸಾರಿವಾ ಮುಂತಾದ ಹೆಸರಾದ ಆಯುರ್ವೇದೀಯ ಔಷಧಗಳು ಸಮಾವೇಶವಾಗಿವೆ.

ಆಯುರ್ವೇದೀಯ ಅರ್ಕಶಾಲಾ ಲಿಮಿಟೆಡ್,
ಸಾತಾರೆ.

ಕರ್ನಾಟಕ ವಿತರಣ ಕೇಂದ್ರ : ಬೋರವಣಕರ-ಚಾಳ, ಸ್ಟೇಶನ್ ರೋಡ, ಹುಬ್ಬಳ್ಳಿ.

ಎಲ್ಲೆಲ್ಲಿಯೂ ಸಿಗುತ್ತದೆ. ಸ್ಥಳೀಯ ಔಷಧವ್ಯಾಪಾರಿಗಳಲ್ಲಿ ವಿಚಾರಿಸಿರಿ.

ನಿನ್ನ ಅದೃಷ್ಟವೇ. ಆದ್ದರಿಂದ ನಿನಗೆ ಮೂರು ತಿಂಗಳಿನ ಶಿಕ್ಷೆ ಇಲ್ಲವೆ ವಿಮಾಹಣದ ಕಾಲು ಭಾಗದಷ್ಟು ದಂಡ.

ಇನ್ನೊಬ್ಬ ಯುವಕ ಕ್ಷಯ ರೋಗಿಯನ್ನು ಕರೆತರಲಾಯಿತು. ವಿಮಾ ಕಂಪೆನಿಯನ್ನು ಮೋಸಗೊಳಿಸಲು ಕ್ಷಯ ರೋಗಿಯಂತೆ ನಟಿಸಿದನೆಂತಲೂ ಆದ್ದರಿಂದ ಅವನನ್ನು ಆಸ್ಪತ್ರೆಗೆ ಕಳಿಸುವುದು ಯೋಗ್ಯವೆಂತಲೂ ಅವನ ಕಡೆಯ ವಕೀಲರು ವಾದಿಸಿದರು. ಆಗಾಗ ಕೆಮ್ಮುತ್ತಿದ್ದ ಅವನು ಮರಣಾಸನ್ನನಾಗಿರುವನೆಂಬುದು ಸ್ಪಷ್ಟವಾಯಿತು. ನ್ಯಾಯಾಧೀಶರ ತೀರ್ಪು ಇದು:— "ಯುವಕ ಕೈದಿಯೇ, ನೀನು ಅಪರಾಧಿಯೆಂಬುದು ವಿದಿತವಾಗಿದೆಯಷ್ಟೆ. ವಿಧಿಸುವ ಶಿಕ್ಷೆ ಎಂತಹದಿರಬೇಕೆಂದು ನಿರ್ಣಯಿಸುವುದೀಗ ನನ್ನ ಗುರಿ. ನಿನ್ನ ೨೩ ವರ್ಷಗಳ ಜೀವನದಲ್ಲಿ ೧೦-೧೨ ಸಲ ಬಂಧಿಸಲ್ಪಟ್ಟ ಪರಮನೀಚ ನೀನಿರುವಿ. ಕೆಲವೆಡೆ ಕಾನೂನಿನ ಪ್ರಕಾರ ವರ್ತಿಸುವಾಗ ಹೃದಯವನ್ನು ಕಲ್ಲು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಹಾಗಿಲ್ಲ. ನಿನಗೆ ದಯೆ ತೋರಿಸುವ ಪ್ರಶ್ನೆಯೇ ಬಾರದು. 'ನನ್ನ ಕಾಹಿಲೆಗೆ ನಾನು ಜವಾಬ್ದಾರನಲ್ಲ; ನನ್ನ ಶೈಶವದಲ್ಲಿ ಸರಿಯಾದ ಆರೈಕೆಯಾಗಲಿಲ್ಲ' ಎಂದೆಲ್ಲ ನೀನು ಸಮರ್ಥಿಸಿಕೊಳ್ಳಬಹುದು. ಆದರೆ ಇದು ಬರೀ ಹಾಸ್ಯಾಸ್ಪದವೆಂಬುದು ಸ್ಪಷ್ಟ. ನಿನ್ನ ತಪ್ಪಿದೆಯೋ ಇಲ್ಲವೆಂಬ ಪ್ರಶ್ನೆಯಿಲ್ಲ; ನಿನ್ನಲ್ಲಿ ತಪ್ಪಿದೆ. ಅಪರಾಧಿಯಾಗುವುದು ನಿನ್ನ ದುರದೃಷ್ಟವೆಂದು ನೀನು ಹೇಳಿದರೆ ದುರದೃಷ್ಟವಿರುವುದೇ ನಿನ್ನ ಅಪರಾಧವೆಂದು ನಾನು ಹೇಳುವೆನು. ನೀನು ಸಮಾಜಕ್ಕೆ ಕಂಟಕನಾಗಿರುವಿ. ನಿನ್ನನ್ನು ಮರಣದಂಡನೆಗೆ ಗುರಿಪಡಿಸಿದರೂ ಚಿಂತೆಯಿಲ್ಲ. ಇತ್ತೀಚೆಗೆ ಅದನ್ನು ತೆಗೆದು ಹಾಕಿದುದರಿಂದ ಪರಮಾವಧಿ ಶಿಕ್ಷೆಯಾದ ಜೀವಾವಧಿ ಕಠಿಣ ಕಾರಾಗೃಹವಾಸವನ್ನು ವಿಧಿಸುವೆನು. ನೀನು ನಿನ್ನನ್ನು ಸುಧಾರಿಸಿಕೊಳ್ಳುವ ಸ್ಥಿತಿಯನ್ನು


ಮೀರಿದರೂ ಕಾನೂನಿನ ಕರುಣೆ ನೋಡು. ಪ್ರತಿ ದಿನವೂ ಎರಡು ಚಮಚೆ ಹರಳೆಣ್ಣೆ ನಿನಗೆ ಕೊಡಲಾಗುವುದು. ಮುಂದಿನ ಸಂಗತಿ ಆಮೇಲೆ ತಿಳಿಸಲಾಗುವುದು."

ಇರವನ್ನಿನಲ್ಲೂ ನಮ್ಮಲ್ಲಿಯಂತೆ ಜನರಲ್ಲಿ ಹೊಟ್ಟೆಕಿಚ್ಚು, ಮೇಲು-ಕೀಳು, ಘನತೆ ಗೌರವಗಳ ಭಾವನೆಯಿದೆ. ಇರವನಿಗರು ದೇಶದ ಕಾನೂನು-ಕಾಯ್ದೆಗಳನ್ನು ಬಹಳವಾಗಿ ಗೌರವಿಸುತ್ತಾರೆ. ಅದನ್ನು ಮುರಿಯುವ ಗೋಜಿಗೇ ಅವರು ಹೋಗರು. ಅಲ್ಲಿಯೂ ಕ್ರಾಂತಿಕಾರಕ ವಿಚಾರವಾದಿಗಳಿದ್ದಾರೆ. ಅವರನ್ನು ಚರಿತ್ರಹೀನರೆಂದು ಇತರರು ತೆಗಳುವರು. ಅವರ ಅಭಿಪ್ರಾಯವಿಷ್ಟೆ:—- ರೋಗಿಗಳು ತಮ್ಮ ಸ್ಥಿತಿಗೆ ತಾವು ಕಾರಣರಲ್ಲದಿದ್ದರೂ ಸಮಾಜ ಕಂಟಕರಾಗಿರುವುದರಿಂದ ಕೊಳೆತ ಹಣ್ಣಿನಂತೆ ತ್ಯಾಜ್ಯರು. ಅವರನ್ನು ಸೆರೆಯಲ್ಲಿ ಉಪವಾಸ ಹಾಕಿ ಹಿಂಸಿಸಿ ಕೊಲ್ಲುವುದು ಸರಿಯಲ್ಲ. ಅಲ್ಲಿನ ಕಷ್ಟಕ್ಕೆ ಹೆದರಿಯೇ ಜನರು ತಮ್ಮ ಅನಾರೋಗ್ಯವನ್ನು ಅಡಗಿಸುತ್ತ ಇರವನ್ನಿನ ಉನ್ನತ ಮಟ್ಟವನ್ನು ಕೆಳಗಿಳಿಸುತ್ತಿರುವರು. ಕೈದಿಗಳಿಗೆ ತಮ್ಮ ಉದ್ಯೋಗವನ್ನು ಮುಂದುವರಿಸುವ ಅವಕಾಶವಿರಬೇಕು. ಅವರ ಆಹಾರದ ಖರ್ಚನ್ನು ಕಳೆದು ಉಳಿದುದನ್ನು ಸಮಾಜವು ಉಪಯೋಗಿಸುವಂತಿರಬೇಕು. ಆಗ ಮನೆಗೆ ಕನ್ನ ಹಾಕಿದವನು ಹೇಗೆ ನೇರಕಾರನಲ್ಲಿಗೆ ಹೋಗುವನೋ ಹಾಗೆ ಸಿಡುಬಾದವನೂ ಪೋಲೀಸರಲ್ಲಿಗೆ ಹೋದಾನು. ಇದರಿಂದ ಸಮಾಜಕ್ಕೆ ಆರ್ಥಿಕ ಹಾಗು ನೈತಿಕ ಲಾಭವಿದೆ.

ಇರವನಿಗರು ರೋಗರುಜಿನಗಳಿಗೆ ಹೆದರುವಷ್ಟು ಸಾವಿಗೆ ಹೆದರುವಂತೆ ತೋರಲಿಲ್ಲ. ಸತ್ತವರನ್ನು ಅವರು ಸುಡುತ್ತಾರೆ. ೩೦೦-೪೦೦ ವರ್ಷಗಳ ಹಿಂದೆ ಜನರು ತಾವು ಬದುಕಿದ್ದಾಗಲೇ ತಮ್ಮ ಪ್ರತಿಮೆಗಳನ್ನು ಕೆತ್ತಿಸಿ ಇರಿಸುವ ಪದ್ಧತಿ ಇತ್ತು. ನಗರದಲ್ಲಿ ಮೂರು ಪ್ರತಿಮೆಗಳಿಗಿಂತ ಹೆಚ್ಚು ನಾನು ಕಾಣಲಿಲ್ಲ. ಕಾರಣವಿಷ್ಟೆ:—ಹಣಗಾರರೆಲ್ಲರು ಪ್ರತಿಮೆಗಳನ್ನು ಮಾಡಿಸಹೋದರು; ಶಿಲ್ಪಕಲೆಯು ವ್ಯಾಪಾರದಂತಾಗಿ ಬಹಳ ಅವನತಿ ಹೊಂದಿತು. ಅಲ್ಲದೆ ಎಲ್ಲೆಲ್ಲೂ ಪ್ರತಿಮೆಗಳು ತುಂಬಿ ಬಹಳ ಅನಾನುಕೂಲವಾಯಿತು. ಕಡೆಗೊಮ್ಮೆ ಜನ ರೇಗಿ ಇದ್ದವುಗಳನ್ನೆಲ್ಲ ನಾಶ ಮಾಡಿದರು. ೧೦೦ ವರ್ಷಗಳ ನಂತರ ಶಿಲ್ಪಕಲೆಯು ಹೊಸದಾಗಿ ಮೈದೋರಿತು. ಯಾವ ವ್ಯಕ್ತಿಯ ಪ್ರತಿಮೆಯಾದರೂ ೫೦ ವರ್ಷಗಳಿಂದ ಹೆಚ್ಚಿಗೆ ಉಳಿಯಬಾರದು. ವಿಶೇಷ ಸಂದರ್ಭಗಳಲ್ಲಿ ೨೪ ಜನರ ಜ್ಯೂರಿಯಲ್ಲಿ ೧೮ ಜನರು ಅದನ್ನುಳಿಸಲಿಚ್ಛಿಸಿದರೆ ಅದು ಮತ್ತೂ ೫೦ ವರ್ಷ ಉಳಿಯಬಹುದು ಎಂಬ ಕಾನೂನು ಜಾರಿಯಲ್ಲಿದೆ.

ವ್ಯಕ್ತಿಯ 'ಬಂಧುಬಳಗದವರಿಗೆ' ಅವರ ಮಿತ್ರರು ಕೃತಕ ಕಣ್ಣೀರಿನ ಬಿಂದುಗಳನ್ನೊಳಗೊಂಡ ಒಂದು ಪೆಟ್ಟಿಗೆಯನ್ನು ಕಳುಹಿಸುವರು. ಅದರ ಮೇಲೆ ಕಳುಹಿಸುವವರ ಹೆಸರು ಅಂದವಾಗಿ ಬರೆದಿರುತ್ತದೆ. ಕಳಿಸುವವನ ಸ್ನೇಹ ಸಂಬಂಧಗಳಿಗನುಸಾರವಾಗಿ ಅದರಲ್ಲಿ ೨ ರಿಂದ ೧೬ ರ ವರೆಗೂ ಬಿಂದುಗಳಿರಬಹುದು.

ಮಗು ಹುಟ್ಟುವುದರ ಮೊದಲು ಹೆಂಗಸಿನ ಸ್ಥಿತಿಯನ್ನು ಬಹಳವಾಗಿ ಬಚ್ಚಿಡುತ್ತಾರೆ. ಜನನದ ನಂತರ ' ಜನನಸೂತ್ರ ' ವೆಂಬ ಉತ್ಸವವಾಗುವ ವರೆಗೆ ಮಗುವನ್ನು ಬಚ್ಚಿಡುವರು. ದಾದಿಗಳು ಮಗುವನ್ನು ಚೆನ್ನಾಗಿ ಸಾಕಿಯೇ ಸಾಕುವರು. ತಾಯಿಯು ಬಹಳವಾದ ವೇದನೆಯನ್ನು ಅನುಭವಿಸಿದಳು ಎಂದು ತಿಳಿದುಬಂದರೆ ಸಮಾಜದಲ್ಲಿ ಅವಳಿಗೆ ಮೊದಲಿನ ಸ್ಥಾನ ಸಿಕ್ಕಲಾರದು. ಮಗುವಿನ ಮರಣವು ಕುಟುಂಬದ ಘನತೆಗೆ ದೊಡ್ಡ ಕುಂದು. ಅದೇನಾದರೂ ಸತ್ತರೆ ಅದಕ್ಕೆ ೭೫ ವರ್ಷಗಳು ಕಳೆದು ಪ್ರಾಕೃತಿಕ ಬಲಹೀನತೆಯಿಂದ ಸತ್ತಿತು ಎಂದು ವಿವರಣೆಯನ್ನು ಕೊಡಲಾಗುವದು.



ಜನನದಿಂದ ತಾಯ್ತಂದೆಗಳಿಗೆ ಹಾನಿಯುಂಟಾಗದಂತೆ ಮಾಡುವ 'ಜನನ ಸೂತ್ರ' ಉತ್ಸವಕ್ಕೆ ಅವರ ಪುರಾಣದ ಬೆಂಬಲವಿದೆ. ಅದರ ಪ್ರಕಾರ ಇರವನಿಗರು ಜನನ ಪೂರ್ವದ ಪ್ರಪಂಚವನ್ನು ನಂಬುತ್ತಾರೆ. ಅಲ್ಲಿನವರು ದೇಹಧಾರಿಗಳಾಗಿರದೆ ಭೂತದಂತೆ ಅನಿಲರೂಪದಲ್ಲಿರುತ್ತಾರೆ. ಅಲ್ಲಿಯೂ ನಗರಗಳಿವೆ. ಮೆಜಿಸ್ಟ್ರೇಟರಿದ್ದಾರೆ. ಅವರು ಜನಮನವನ್ನು ಓದಬಲ್ಲವರು. ಅಲ್ಲಿ ಅವರು ಸಂತಸದಲ್ಲಿರುತ್ತಾರೆ. ಮರಣವೆಂಬುದಿಲ್ಲ. ಕೆಲವು ಘಟಿಂಗರು ತಮ್ಮ ಅನಂಗ ಸ್ಥಿತಿಗೆ ಬೇಸರಿಸಿ ಲೋಕದಲ್ಲಿ ಜನಿಸಲು ಇಚ್ಛಿಸುತ್ತಾರೆ. ಮಾನವನ ಕಷ್ಟಗಳನ್ನು ಪರಿಪರಿಯಾಗಿ ವರ್ಣಿಸಿ ಅವನಿಗಿಲ್ಲದ ಇಚ್ಛಾ ಸ್ವಾತಂತ್ರ್ಯ ತಮಗಿದೆಯೆಂದು ತೋರಿಸಿ, ತಮಗಿಷ್ಟವಿಲ್ಲದವರೊಡನೆ ಬಾಳುವ ಹಾಗು ರೋಗದಿಂದ ನರಳುವ ಸಂದರ್ಭವನ್ನು ವರ್ಣಿಸಿ 'ಹೋಗಬೇಡ' ಎಂದು ಅವರನ್ನು ಇತರರು ತಡೆಯಲೆತ್ನಿಸುವರು. ಹುಟ್ಟಿದವನು ಮತ್ತೂ ತನ್ನ ಹಟವನ್ನು ಬಿಡದಿರಲು ಅವನಿಗೆ ಮೆಜಿಸ್ಟ್ರೇಟನೆದುರು ಒಂದು ಮದ್ದನ್ನು ಕೊಡುವರು. ಆಗ ಅವನ ಜ್ಞಾಪಕಶಕ್ತಿಯೂ ಅನಿಲಸ್ವರೂಪದ ವ್ಯಕ್ತಿತ್ವವೂ ನಶಿಸಿ ಬರೇ ಒಂದು ಚೈತನ್ಯರೂಪನಾಗಿ ಬಿಡುವನು. ಅವನ ಪಾಲಿಗೆ ಬಂದ ಎರಡು ವ್ಯಕ್ತಿಗಳನ್ನು ಬಹಳವಾಗಿ ಪೀಡಿಸುವನು. ಪೀಡನೆಯನ್ನು ತಡೆಯಲಾರದೆ ಅವರು ಇವನನ್ನು ತಮ್ಮಲ್ಲಿ ತೆಗೆದುಕೊಳ್ಳಲು ಸಮ್ಮತಿಸುವರು.

ಇರವನ್ನಿನಲ್ಲಿ ಜನನದ ೩ ಯಾ ೪ ನೇ ದಿನದಲ್ಲಿ ಜನನ ಸೂತ್ರದ ಹಬ್ಬವನ್ನು ಆಚರಿಸಲಾಗುವುದು. ಲಾಯರುಗಳಿಂದ ಒಂದು ಪರಿಪತ್ರ ಬರೆಯಿಸಲಾಗುವುದು. ಒಕ್ಕಣೆಯ ಶಬ್ದಗಳಲ್ಲಿ ಪತ್ರದಿಂದ ಪತ್ರಕ್ಕೆ ವ್ಯತ್ಯಾಸವಿದ್ದರೂ ಅವುಗಳ ಮುಖ್ಯ ಸಂಗತಿ ಮಾತ್ರ ಒಂದೇ ತೆರ. 'ಹುಟ್ಟದವರ ರಾಜ್ಯದ ಸದಸ್ಯನಾಗಿದ್ದು ಅಲ್ಲಿ ಅತೃಪ್ತಿಗೆ ಕಾರಣವಿಲ್ಲದಿದ್ದಾಗ್ಯೂ ನನ್ನಲ್ಲಿ

ಹುಟ್ಟಬೇಕೆಂಬ ಆಶೆ ಬಹುವಾಗಿ ಬೆಳೆಯಿತು. ಆ ರಾಜ್ಯದ ಕಾನೂನಿನ ಪ್ರಕಾರ ಎರಡು ನಿರ್ಭಾಗ್ಯ ಜನರನ್ನು ಅತಿಯಾಗಿ ಪೀಡಿಸಲಾರಂಭಿಸಿದೆನು.' ಎಂದು ಪ್ರಾರಂಭಿಸಿ ಅವರಿಗೆ ಉಂಟಾದ ಎಲ್ಲಾ ಮಾನಸಿಕ ಹಾಗೂ ದೈಹಿಕ ಬಾಧೆಗಳಿಗೆ ತಾನೇ ಸಂಪೂರ್ಣ ಜವಾಬ್ದಾರನೆಂದೂ ತಾನು ಹುಟ್ಟಿದೊಡನೆ ತನ್ನನ್ನು ಕೊಲ್ಲಲು ಅವರಿಗೆ ಸಂಪೂರ್ಣ ಅಧಿಕಾರವುಂಟೆಂದೂ ಆದರೂ ಅವರ ಅತೀವ ಸೌಜನ್ಯದಿಂದಾಗಿ ತನಗೆ ಜೀವಿಸುವ ಆಶೆಯಿದೆಯೆಂದೂ ಹಾಗಾದಲ್ಲಿ ತಾನು ಯಾವಜ್ಜೀವವೂ ಅವರಿಗೆ ವಿಧೇಯನಾಗಿರುವನೆಂದೂ ತಿಳಿಸುವನು.

ಕುಲದ ನೇರಕಾರ ಮತ್ತು ಮಿತ್ರರು ಸೇರಿದಲ್ಲಿಗೆ ಮಗುವನ್ನು ತರುವರು. ಅವರ ಎದುರು ಮೇಲಿನದನ್ನು ಓದುವರು. ಅದು ಅಳುವುದಲ್ಲವೇ. ತನ್ನ ತಪ್ಪಿನ ಅರಿವು ಅದಕಾಗಿದೆಯೆಂಬುದೇ ಅದರ ಅರ್ಥ. ಮಗುವಿನ ಪರವಾಗಿ ಯಾರಾದರೊಬ್ಬನು ಅದರ ಸಹಿಯನ್ನು ಮೇಲಿನ ಲೇಖಕ್ಕೆ ಹಾಕುವನು. ಮಗುವು ೧೪ ವರ್ಷದವನಾಗುವ ಕಾಲಕ್ಕೆ ಅವನಿಂದಲೇ ಸಹಿ ಹಾಕಿಸುವರು. ತನಗೆ ಅರ್ಥವಾಗದಿರುವ ವಿಷಯಗಳು ತನಗೆ ಗೊತ್ತೆಂದು ನಟಿಸಿ ಸಹಿ ಹಾಕಿಸುವುದರಿಂದ ಹುಡುಗನು ಸತ್ಯಕ್ಕೆ ಕೊಡುವ ಬೆಲೆ ಕಡಿಮೆಯಾಗದೇ ? ಎಂದು ಪ್ರೊಫೆಸರರೊಬ್ಬರನ್ನು ಕೇಳಿದೆನು. "ತನಗೆ ಗೊತ್ತುಂಟು ಎಂದು ಹೇಳಿದುದನ್ನೆಲ್ಲ ಹುಡುಗನು ತಿಳಿದಿದ್ದಾನೆ ಅಥವಾ ತಿಳಿಯಬಲ್ಲ ಎಂದು ಯಾರೂ ಊಹಿಸಲಾರರು. ಮನುಷ್ಯನ ಭಾವನೆಗಳನ್ನೆಲ್ಲ ಭಾಷೆಯಲ್ಲಿ ಅನುವಾದಿಸಲು ಸಾಧ್ಯವೇ ಇಲ್ಲ. ಜೀವನದಲ್ಲಿ ಇಂತಹ ಎಡರುತೊಡರುಗಳನ್ನು ಸುಧಾರಿಸಿಕೊಂಡು ಹೋಗಬೇಕಾಗುತ್ತದೆ" ಎಂದರವರು.

ಯಾವ ವಿಚಾರಗಳು ತಮ್ಮ ಎಷ್ಟೋ ಪದ್ಧತಿಗಳ ಭದ್ರವಾದ ತಳಹದಿಯೆಂದು ತಿಳಿಯಲಾಗುತ್ತೋ ಅವುಗಳಲ್ಲೇ ಇರವನಿಗರು ಸಂಪೂರ್ಣ ವಿಶ್ವಾಸವನ್ನಿಡುವಂತೆ ಕಂಡುಬರಲಿಲ್ಲ. ಗೀತ ಬ್ಯಾಂಕುಗಳ ಒಂದು ಉದಾಹರಣೆಯನ್ನು ಕೊಡುವೆನು.

ಗೀತಬ್ಯಾಂಕುಗಳೆಂದರೇನೆಂದು ಸರಿಯಾಗಿ ತಿಳಿದುಕೊಳ್ಳಲು ನನಗೆ ಆಗಲೇ ಇಲ್ಲ. ನಗರದಲ್ಲಿನ ಗೀತಬ್ಯಾಂಕಿಗೆ ನಾಸ್‌ನಿಬಾರನ ಪರಿವಾರದವರು ಆಗಾಗ ಹೋಗುತ್ತಿರುತ್ತಿದ್ದರು. ಒಮ್ಮೆ ನಾನೂ ಅಲ್ಲಿಗೆ ಹೋಗಿದ್ದೆ. ಕಟ್ಟಡವು ದೊಡ್ಡದಾಗಿದ್ದು ಇರವನ್ನಿನ ಸುಂದರತೆಯ ಸೂಚಕವಾಗಿತ್ತು. ಮಧ್ಯದ ಕೋಣೆಯಲ್ಲಿ ಕೆಲವರು ಒಂದು ವಾದ್ಯ ಬಾರಿಸುತ್ತಿದ್ದರು. ಅಲ್ಲಿನವರು ಅದಕೆ ತಲೆದೂಗುತ್ತಿದ್ದರು. ನನಗದು ಕರ್ಣಕಠೋರವಾಗಿತ್ತು. ಜನರ ವಿಶೇಷವಾದ ಗದ್ದಲವಿಲ್ಲದಿದ್ದರೂ ಕ್ಯಾಶಿಯರುಗಳು, ಮೇನೇಜರುಗಳು ಎಲ್ಲರೂ ಕಾರ್ಯನಿರತರಾಗಿದ್ದರು ಅವರು ಕೊಡುತ್ತಿರುವ ನಾಣ್ಯಗಳೇ ಬೇರೆ, ವ್ಯಾಪಾರ ವ್ಯವಹಾರಗಳಲ್ಲಿ ಕ್ರಯವಿಕ್ರಯಗಳಲ್ಲಿ ಬಳಸಲಾಗುವ ನಾಣ್ಯಗಳೇ ಬೇರೆ. ಗೀತನಾಣ್ಯಗಳಲ್ಲಿ ಸುಂದರವಾದ ಪ್ರತಿಮೆಗಳನ್ನು ಕೆತ್ತಿರುತ್ತದೆ. ನಾನು ಕಿಟಕಿಯ ಮೂಲಕ ಖಜಾನೆಯನ್ನು ಇಣಿಕಿ ನೋಡಿದಾಗ ಕ್ಯಾಶಿಯರನು ಗದರಿಸುವಂತೆ ತೋರಿತು. ಕೂಡಲೇ ಕೆಲವು ಗೀತ ನಾಣ್ಯಗಳನ್ನು ಕೊಟ್ಟನು. ಅವನ ಅಸಮಾಧಾನ ಹೆಚ್ಚಿತು. ಬೇರೆ ನಾಣ್ಯಗಳನ್ನಿತ್ತು ಅವನ ಕೈ ಬಿಸಿ ಮಾಡಿದಾಗ ಅವನ ಮುಖದಲ್ಲಿ ಗೆಲುವು ತೋರಿತು. ಗೀತನಾಣ್ಯಗಳ ಅವಶ್ಯಕತೆಯೇನೆಂದು ನನಗೆ ತೋಚಲಿಲ್ಲ. ಪ್ರತಿಷ್ಠಿತ ವ್ಯಕ್ತಿಗಳು ಗೀತಬ್ಯಾಂಕಿನ ಸದಸ್ಯರಾಗುವುದೊಂದು ಘನವಂತಿಕೆಯ ಲಕ್ಷಣವೆಂದು ತಿಳಿಯುವರು. ಬ್ಯಾಂಕಿನ ಕೆಲಸಗಾರರೆಲ್ಲರೂ ಅದನ್ನು ಬಹಳವಾಗಿ ಹೊಗಳುವರು. ಅವರಿಗೆ ಗೀತ ನಾಣ್ಯಗಳ ಮೇಲೆ ನಿಜವಾದ ಮಮತೆಯಿಲ್ಲವೆಂಬುದರಲ್ಲಿ ಸಂಶಯವಿಲ್ಲ. ಹಣಕ್ಕೆಂದು ಮಾತ್ರ ಉದ್ಯೋಗ ಮಾಡುತ್ತಿರುವಂತೆ ನನಗೆ ತೋರಿತು. ಇರಲಿ.

ದಿನ ನಿತ್ಯದ ಸೇವನೆಯಲ್ಲಿ ದಿನವಿಡೀ ಉಲ್ಲಾಸ ಕೊಡುವ

ಮಂಗಳೂರು ಪಿ. ವಿ. ಎಸ್. ಬೀಡಿಗಳನ್ನೇ ಸೇದಿ

ಆನಂದ ಪಡೆಯಿರಿ



Manufacturers: **P. V. S. BEEDIES PRIVATE LTD.**

Post Box No. 7, Kodiyalbail MANGALORE – 3

Telegrams: "PUTHUBIDIS" PHONE: 83, 83 A RESIDENCE: 593

ಇತ್ತಲಾಗಿ ನಾನೂ ಅರೋವೀನಾ ಪರಸ್ಪರ ಆಕರ್ಷಿಸಲ್ಪಡುತ್ತಿದ್ದೆವು. ಅರೋವೀನಾ ಎಲ್ಲಾ ಇರವನಿಗರಂತೆ ಮೂರ್ತಿಪೂಜಕಳು. ನೀರಿನ, ಗಾಳಿಯ, ಸಮಯದ, ಅಂತರಿಕ್ಷದ ದೇವತೆಗಳೆಂದು ಅನೇಕ ಮೂರ್ತಿಗಳಿರುವವು. ಈ ದೇವತೆಗಳ ಕೆಲವು ನಿಯಮಗಳಿವೆ. ಉದಾಹರಣೆಗಾಗಿ ಒಬ್ಬನು ಶ್ವಾಸಕೋಶದಲ್ಲಿ ಗಾಳಿ ತುಂಬಿಸಿಕೊಳ್ಳದೆ ನೀರಿಗೆ ಧುಮುಕಿದ್ದಾದರೆ ವಾಯುದೇವತೆಯು ಸಿಟ್ಟುಗೊಂಡು ಅವನನ್ನು ಕೊಲ್ಲದಿರದು. ಆಸೆ, ಭಯ, ಪ್ರೇಮ ಇತ್ಯಾದಿ ಭಾವನೆಗಳನ್ನು ದೈವೀಕರಿಸಿ ಅವುಗಳ ಪ್ರತಿಮೆಗಳನ್ನು ಕೆತ್ತಿಸಿ ದೇವಸ್ಥಾನಗಳಲ್ಲಿ ಇರಿಸಿ ಪೂಜಿಸುವರು. ಇವುಗಳ ಮೇಲೆ ಹೆಚ್ಚುತ್ತಿರುವ ಜನರ ನಿರ್ಲಕ್ಷ್ಯತೆಯ ಕಡೆಗೆ ಅಲ್ಲಿನ ಪೂಜಾರಿಗಳು ನನ್ನ ಗಮನವನ್ನು ಸೆಳೆದಿದ್ದರು. ಇರವನಿಗರೆಲ್ಲರೂ ಯುಡ್‌ಗ್ರಿನ್ ಎಂಬುದರ ಭಕ್ತರು. ತಾವು ಅವರ ಭಕ್ತರು ಎಂದು ಹೇಳಿಕೊಳ್ಳುವುದು ಅಭಿಮಾನಕ್ಕೆ ಕಡಿಮೆಯೆಂದು ಅವರ ಮತ. ಅವಳು ದೇವತೆಗಳ ವಿರೋಧಿಯಂತೆ. ಅವಳ ಪೂಜೆಗೆ ಯಾವುದೇ ಆಡಂಬರವಿಲ್ಲ. ಅವಳಿಗೆ ಹೊಗಳಿಸಿಕೊಳ್ಳುವ ಇಷ್ಟವೂ ಇಲ್ಲವಂತೆ. ಹೆದರಿ ವಿಧೇಯರಾಗಿದ್ದರೇ ಸಾಕು. ಅವಳಿಗೆ ಬಲವಾದ ಕಾರಣವಿದ್ದಾಗ ಮಾತ್ರ ಜನರು ಅವಳ ಕಾನೂನಿನ ವಿರುದ್ಧ ಹೋಗುತ್ತಾರೆ. ಉಳಿದವರಂತೆ ಅದು ಆಗ ರೇಗಿಬಿದ್ದು ಹಿಂಸಿಸದು. ಅದು ಬಹು ಹೇಡಿಯಂತೆ- ಇತ್ಯಾದಿ ಇತ್ಯಾದಿ.

ಇರವನ್ನಿನಲ್ಲಿ ವರನಿಗೆ ಇರಬೇಕಾದ ಯೋಗ್ಯತೆಯೆಂದರೆ ದೈಹಿಕ ಆರೋಗ್ಯ ಹಾಗೂ ಸೌಂದರ್ಯ. ನಾನು ನಾಸ್‌ನಿಬಾರನ ಕುಲದಿಂದ ವಿವಾಹವಾಗುವುದರಲ್ಲಿ ಅಭ್ಯಂತರವೇನೂ ಇರಲಿಲ್ಲ. ವರನು ಯಾರೇ ಆಗಲಿ, ಕುಟುಂಬದ ಕನ್ನೆಯರಲ್ಲಿ ಹಿರಿಯವಳನ್ನು ಮಾತ್ರ ಮದುವೆಯಾಗತಕ್ಕದ್ದು ಎಂಬ ಬಲವಾದ ನಿಯಮವಿದೆ. ಅರೋವೀನಾಳ ಅಕ್ಕ ಜುಲೋರಾಳನ್ನು ನಾನು ಪ್ರೇಮಿಸಲೆಂದು ನಾಸ್‌ನಿಬಾರನ ಅಭಿಪ್ರಾಯವಿತ್ತು. ಅರೋವೀನಾಳ ಮನಸ್ಸು ನನ್ನಲ್ಲೇ ನೆಟ್ಟಿತ್ತು. ಜುಲೋರಾಳು ಬೇರೆಯವನನ್ನು ಕೈಹಿಡಿಯುವ ವರೆಗೆ ಕಾಯುವುದು ಇಲ್ಲವೇ ಅರೋವೀನಾಳೊಂದಿಗೆ ಪರಾರಿಯಾಗುವುದು ಎರಡೇ ದಾರಿಗಳಿದ್ದುವು. ಅರೋವೀನಾಳು ನನ್ನೊಡನೆ ಎಂತಹ ಕಷ್ಟಗಳನ್ನೆದುರಿಸಲೂ ಸಾಯಲೂ ಸಿದ್ಧಳೆಂದು ತಿಳಿಸಿದಳು. ನಾನಾಗಲೇ ನಾಸ್‌ನಿಬಾರನಲ್ಲಿರತೊಡಗಿ ೫-೬ ತಿಂಗಳಾಗಿತ್ತು. ನಾನೀಗ ನಗರದಲ್ಲಿ ಒಂದು ಕೋಣೆಯನ್ನು ಗೊತ್ತುಮಾಡಿಕೊಂಡು ಇರತೊಡಗಿದೆ.

ನನ್ನ ವೇದನೆಯನ್ನಡಗಿಸಿ ಮೊದಲಿನಂತೆ ಉಲ್ಲಾಸದಿಂದಿರಲು ನನ್ನಿಂದಾಗಲಿಲ್ಲ. ಆಗಾಗ ರಾಜ-ರಾಣಿಯರ ಸಭೆಗೆ ಹೋಗುತ್ತಿದ್ದೆ. ಈಗ ರಾಜನ ಪ್ರೀತಿಯೂ ಕಡಿಮೆಯಾಗತೊಡಗಿತು. ನನ್ನ ಕೂದಲಿನ ಕೋಮಲತೆಯೂ ಮೈಬಣ್ಣವೂ ನನ್ನ ದೇಶದಲ್ಲಿ ಸರ್ವಸಾಮಾನ್ಯವಾಗಿರಬಹುದಾದ್ದರಿಂದ ಅವು ನನ್ನ ವಿಶೇಷ ಯೋಗ್ಯತೆಗಳೆಂದು ಪರಿಗಣಿಸಲ್ಪಡಬಾರದೆಂದೂ ಆದ್ದರಿಂದ ನನಗೆ ಕೊಡುತ್ತಿರುವ ದೈನಿಕ ಪೆನ್ಶನ್ ಅಷ್ಟು ನ್ಯಾಯವಲ್ಲವೆಂದೂ ಒಂದು ಪತ್ರಿಕೆಯು ಒಂದು ಲೇಖನವನ್ನು ಪ್ರಕಟಿಸಿತು. ನಾನು ಅರೋವೀನಾಳ ಭೇಟಿಗಾಗಿ ಗೀತ ಬ್ಯಾಂಕಿಗೆ ಆಗಾಗ ಹೋಗುತ್ತಿದ್ದೆ. ಅಲ್ಲಿ ಥಿಮ್ಸ್ನಾ ಎಂಬವನ ಪರಿಚಯವಾಯಿತು. ಅವನು ನನ್ನ ಅನಾರೋಗ್ಯವನ್ನು ಗಮನಿಸಿರಬೇಕು. ಹವಾಬದಲಾವಣೆಗೆಂದು ಕಾಲೇಜುಗಳಿರುವ ಸ್ಥಳಕ್ಕೆ ಹೋಗೋಣವೇ ಎಂದು ಕೇಳಿದನು. ನಾನು ಹೂಂ ಎಂದೆನು. ೩ ದಿನಗಳ ಪ್ರಯಾಣದನಂತರ ನಾವು ಕಾಲೇಜುಗಳ ಪಟ್ಟಣವನ್ನು ತಲಪಿದೆವು. ಒಂದು ಹೋಟೇಲಿನಲ್ಲಿ ಉಳಕೊಂಡೆವು. ರಸ್ತೆಗಳು, ಅವುಗಳ ಇಕ್ಕಡೆಗಳಲ್ಲಿ ನಿಂತ ಕಟ್ಟಡಗಳು, ಕಟ್ಟಡಗಳ ಒಳಗೆ-ಹೊರಗೆ ಓಡಾಡುತ್ತಿರುವ ಜನರು ಎಲ್ಲದರಲ್ಲೂ ಎದ್ದು



ಕಾಣುತ್ತಿರುವ ಒಂದು ಗುಣವೆಂದರೆ ಸೌಂದರ್ಯ. ಅದು ನನ್ನನ್ನೂ ಅರೋವೀನಾಳನ್ನೂ ನಾನು ಮರೆಯುವಂತೆ ಮಾಡಿತು.

ಇರವನ್ನಿನ ಪ್ರಾಚೀನಕಾಲದ ಭಾಷೆಯ ವ್ಯಾಸಂಗಕ್ಕೆ ಎಲ್ಲಾ ಕಾಲೇಜುಗಳಲ್ಲೂ ಬಹಳ ಪ್ರಾಮುಖ್ಯ ಇದೆ. ಅಲ್ಲಿ ತಮ್ಮ ಬಳಕೆಯಲ್ಲಿನ ಭಾಷೆಯ ಸುಂದರ ಪದ್ಯಗಳನ್ನು ಪ್ರಾಚೀನ ಭಾಷೆಗೆ ಅನುವಾದಿಸುತ್ತ ರಾತ್ರಿ ಬೆಳಗು ಮಾಡುವ ಕ್ರಮವಿದೆ. ಯಶಸ್ವಿ ಅನುವಾದಕನಿಗೆ ಬಹಳ ಗೌರವವಿದೆ. ಆ ಭಾಷೆಯ ಪಂಡಿತರಿಗೆ ಜೀವನಾಂಶ ಕೊಡುವ ಪರಿಪಾಠವೂ ಇದೆ. ವಿದ್ಯಾರ್ಥಿಗಳಿಗೆ ಇದೇನೂ ಐಚ್ಛಿಕ ವಿಷಯವಾಗಿಲ್ಲ. ಅದನ್ನು ಅವರ ಮೇಲೆ ಹೇರಲಾಗುವುದು. ೧೪ ವರ್ಷಗಳಿಂದ ಇದನ್ನು ಕಲಿಯುತ್ತಿರುವವನೊಬ್ಬನು ನನ್ನೊಡನೆ ಹೇಳಿದನು, "ಡಿಗ್ರಿ ಪಡೆದ ಮೇಲೆ ಆ ಭಾಷೆಯ ಒಂದು ಶಬ್ದವನ್ನಾದರೂ ಓದೆನು." ೧೪ ವರ್ಷಗಳು ನಷ್ಟವಾಗಲಿಲ್ಲವೇ ಎನಿಸಿತು.

ಮಕ್ಕಳಲ್ಲಿ ಚಿಂತನೆಯ ಅಭ್ಯಾಸವನ್ನು ತಡೆಯಲೂ ಮೌಲಿಕತೆಯ ಪ್ರಭೆಯನ್ನು ಕುಂದಿಸಲೂ 'ಅಸಮಂಜಸತೆ'ಯ ಹಾಗೂ 'ಕಪಟ'ದ ವಿಭಾಗಗಳು ಶ್ರಮಿಸುತ್ತವೆ. ತರ್ಕಕ್ಕೆ ಪ್ರಾಮುಖ್ಯವಿಲ್ಲ. ಅತರ್ಕಕ್ಕೆ ವಿಶೇಷ ಗಮನ ಕೊಡಲಾಗುವುದು. ತಾರ್ಕಿಕ 'ಅತಿ'ಗಿಂತ ಅತಾರ್ಕಿಕ ಮಧ್ಯಮವೇ ಉತ್ತಮ. ಎಂತಹ ಅಪರಾಧವನ್ನೂ ಸಹ ತರ್ಕದಿಂದ ಸಮರ್ಥಿಸಿಕೊಳ್ಳಬರುವುದರಿಂದ ತರ್ಕ ಅಪಾಯಕಾರಿಯೂ ಹೌದು. ಅಲ್ಲದೆ ತರ್ಕಸ್ವಭಾವವು ಹುಟ್ಟುಗುಣವಾಗಿದ್ದು ಅದಕ್ಕೆ ಪ್ರೋತ್ಸಾಹ ಕೊಡಬೇಕಾಗಿಲ್ಲ. ಅತರ್ಕಕ್ಕೇ ಪ್ರೋತ್ಸಾಹ ಕೊಡತಕ್ಕದ್ದು. ಅತರ್ಕವು ತರ್ಕದ ಅವಿಭಾಜ್ಯ ಅಂಗ. ಅತರ್ಕದ ಉಪಾಧ್ಯಾಯರು ತರ್ಕ ವಿರೋಧಿಗಳೇನಲ್ಲ. ಮನುಷ್ಯ ಸಹಜ ತಾರ್ಕಿಕ

ದೃಷ್ಟಿಯಿಂದ ಗೀತ ನಾಣ್ಯಗಳ ಚಲಾವಣೆ ಅನಗತ್ಯವೆಂದು ಅವರಿಗೆ ತಿಳಿದಿದೆ. ಆದರೆ ತರ್ಕವೊಂದರಲ್ಲೇ ನಮ್ಮ ನಡೆವಳಿಕೆಗಳನ್ನು ಆಧರಿಸುವುದು ಅತೀವ ಸಂಕುಚಿತ ಮನೋಭಾವನೆ...."

ಸ್ಪರ್ಧಾಭಾವನೆಯನ್ನು ಜಾಗ್ರತಗೊಳಿಸುವ ಯಾವ ಕ್ರಮವೂ ಅವರಲ್ಲಿಲ್ಲ. ಕೆಲವು ನಿರ್ದಿಷ್ಟ ವಿಷಯಗಳ ಮೇಲೆ ಬರೆಯಿಸಲ್ಪಡುವ ಪ್ರಬಂಧಗಳ ಯೋಗ್ಯತಾನುಸಾರ ಪದವಿಯನ್ನು ಕೊಡಲಾಗುವುದು. 'ವ್ಯಾವಹಾರಿಕ ಬುದ್ಧಿ'ಯ ಪ್ರೊಫೆಸರರು ಶಿಸ್ತು ಶಿಕ್ಷಣಗಳಲ್ಲಿ ಬಹು ಬಿಗಿ. ಅಂರ ಹರೆಯದವರಾದರೂ ತುಂಬ ಚಟುವಟಿಕೆಯುಳ್ಳವರು. 'ನಿಷ್ಪ್ರಯೋಜಕ ಜ್ಞಾನದ ಮನಃಸಂಸ್ಥೆ'ಯ ಅಧ್ಯಕ್ಷರ ಒಂದು ಪ್ರಬಂಧದಲ್ಲಿ ಅಸ್ಪಷ್ಟತೆಯ ಅಭಾವವಿದ್ದುದರಿಂದ, ಇನ್ನೊಂದು ವೈಜ್ಞಾನಿಕ ಪ್ರಬಂಧದಲ್ಲಿ 'ಜಾಗ್ರತೆಯಿಂದ' 'ಸಾವಧಾನವಾಗಿ' ಎಂಬ ಪದಗಳು ಸಾಕಷ್ಟು ಬಳಸಲ್ಪಡದ್ದರಿಂದ - ಮತ್ತೊಂದರಲ್ಲಿ ಯಾವಾಗಲೂ ಸರಿಯೆಂದು ಕಂಡುಬಂದವುಗಳ ಪ್ರತಿಪಾದನೆ ಮಾತ್ರವಿದ್ದುದರಿಂದ ಆಯಾ ಪ್ರಬಂಧಕಾರರಿಗೆ ಪದವಿಯನ್ನು ನಿರಾಕರಿಸಿದ ಉದಾಹರಣೆಗಳಿವೆ.

"ನೆರೆಯುವನಿಗಿಂತ ತಾನು ಉತ್ತಮ ಸ್ಥಿತಿಯಲ್ಲಿರಬೇಕೆಂಬ ಅಭಿಪ್ರಾಯ ತಾಳುವುದು ಸರಿಯಲ್ಲ. ಅವನಿಗಿಂತ ತಾನು ಕೀಳಾಗಿರದಿದ್ದರೆ ಅದೇ ಶ್ರೇಷ್ಠವೆಂದೆಣಿಸಿದರೆ ಸಾಕಲ್ಲವೇ ?" ಎಂದು ಅವರು ಒಂದು ಸಂದರ್ಭದಲ್ಲಿ ಹೇಳಿದರು. "ಸ್ಪರ್ಧೆಯಿಲ್ಲದೆ ಪ್ರಗತಿಯೆಂತು ಸಾಧ್ಯ ?" ಎಂದು ಕೇಳಿದೆ. "ಸಾಧ್ಯವಿಲ್ಲ ; ಆದ್ದರಿಂದಲೇ ನಾವು ಪ್ರಗತಿವಿರೋಧಿಗಳು" ಎಂದರು ಅವರು. "ಪ್ರಗತಿ ಕೆಡುಕೆಂದೇನಲ್ಲ. ಅತಿ ಪ್ರಾಚೀನವಾದ ಭಾವನೆಗಳುಳ್ಳವನು ಸಮಾಜಕ್ಕೆ ಕೆಡುಕು. ಹಾಗೆಯೇ ಜನರನ್ನು ಜೊತೆಗೆ ತೆಗೆದುಕೊಂಡು ಹೋಗದ ಪ್ರಗತಿವಾದಿಯೂ ಸಹ" ಎಂದರು ಇನ್ನೊಬ್ಬರು.

ಕಲಾಶಾಲೆಯಲ್ಲಿನ ವ್ಯಾಸಂಗವು ಇಬ್ಬಗೆಯಾಗಿರುವುದು-- ಪ್ರಾಯೋಗಿಕ ಹಾಗೂ ವ್ಯಾವಹಾರಿಕ ಎಂಥಾ ದೊಡ್ಡ ಚಿತ್ರಕಾರನಾದರೂ ಚಿತ್ರಗಳ ಬೆಲೆಯಲ್ಲಿ ಉಂಟಾಗುವ ಏರಿಳಿತಗಳ ಬಗ್ಗೆ ಹಾಗೂ ತನ್ನ ಚಿತ್ರಗಳ ಮೂಲ್ಯದ ಬಗ್ಗೆ ತಿಳಿದಿರಲೇಬೇಕು. ಇಲ್ಲದಿದ್ದರೆ ಅವನ ವ್ಯಾಸಂಗವನ್ನು ನಿಲ್ಲಿಸಲಾಗುವುದು. ಈ ಪದ್ಧತಿ ನನಗೆ ಬಹಳ ಹಿಡಿಸಿತು.

ತಿನ್ನುವುದು ಕುಡಿಯುವುದು, ಗಾಳಿ-ಮಳೆ, ಪ್ರಯಾಣ ಇತ್ಯಾದಿ ವಿಷಯಗಳ ಮೇಲೆ ಮಾತ್ರ ಇರವನಿಗ ವಿದ್ವಾಂಸರು ನಿರ್ಧಾರದಿಂದ ನುಡಿಯುವರೇ ವಿನಾ ತಾತ್ವಿಕ ವಿಷಯಗಳಲ್ಲಿ ಸ್ಪಷ್ಟವಾದಿಗಳಾಗಿರುತ್ತಿರಲಿಲ್ಲ. '. . . ವಿಷಯದಲ್ಲಿ ತಮ್ಮ ಅಭಿಪ್ರಾಯವೇನು ?' ಎಂದು ಬಲವಂತದಿಂದ ಪ್ರಶ್ನಿಸಿದೆನಾದರೆ ಅವರು ಆ ವಿಷಯದ ಮೇಲಿನ ಒಂದು ಪುಸ್ತಕವನ್ನು ನಿರ್ದೇಶಿಸಿ ಅದರಲ್ಲಿ ಕೊಟ್ಟಿರುವ ಅಭಿಪ್ರಾಯದಲ್ಲಿ ಸತ್ಯದ ಅಂಶವಿರುವುದೆಂದು ಖಂಡಿತವಾಗಿ ಒಪ್ಪುವುದಾದರೂ ತಾವೊಪ್ಪದ ಎಷ್ಟೋ ವಿಷಯಗಳು ಅಡಗಿವೆ ಎಂದು ಬಿಡುತ್ತಾರೆ. ಆ 'ತಾವೊಪ್ಪದವು' ಯಾವುದೆಂದು ನನಗೆ ತಿಳಿದುಕೊಳ್ಳಲು ಒಮ್ಮೆಯೂ ಸಾಧ್ಯವಾಗಲಿಲ್ಲ. ಹೀಗೆ ಯಾವುದೇ ಒಂದು ಅಭಿಪ್ರಾಯಕ್ಕೆ ಕಟ್ಟುಬೀಳದಿರುವ ರೀತಿ ಬಹು ಸೋಜಿಗವೆನಿಸಿದೆ.

'ಯಾಂತ್ರಿಕ ಕ್ರಾಂತಿ' ಯ ಕುರಿತಾದ ವಿಷಯಗಳನ್ನು ಅಭ್ಯಸಿಸಿದ್ದು ಇಲ್ಲೇ. ಈ ವಿಷಯದ ಪಂಡಿತರೊಬ್ಬರು ಕ್ರಾಂತಿಗೆ ಕಾರಣವಾದ 'ಯಾಂತ್ರಿಕ ಪುಸ್ತಕ' ವನ್ನು ದಯಪಾಲಿಸಿದರು. ಸಾಧ್ಯವಾದಷ್ಟರ ಮಟ್ಟಿಗೆ ನಾನು ಅದನ್ನು ಅನುವಾದಿಸಿರುತ್ತೇನೆ. ಕೆಲವು ಭಾಗ ಸಮುದ್ರದಲ್ಲಿ ಕಳೆದೂ ಹೋಯಿತು. ಅಂತೂ ಅದರ ಸಾರಾಂಶವನ್ನು ಹೇಳುವೆನು :

ತನ್ನತನದ ಅರಿವು ಸಸ್ಯಗಳಲ್ಲೂ ಪ್ರಾಣಿಗಳಲ್ಲೂ ಮನುಷರಲ್ಲೂ ಸಾಮಾನ್ಯವಾಗಿದ್ದರೂ


ಮಾಲತಿಗೆ ತಿಳಿದಿರಲಿಲ್ಲ...
ಅಮ್ಮಾ, ರಾಜುವಿನ ತಾಯಿ ಅದ್ಭುತವಾದ ದೋಸೆಗಳನ್ನು ನಮಗೆ ಕೊಟ್ಟಳು. ನೀನು ಅಂಥಹ ದೋಸೆಗಳನ್ನು ಏಕೆ ಮಾಡಬಾರದು.
ನಮ್ಮ ಹುಡುಗರು ನಾನು ಮಾಡುವ ಅಡಿಗೆಯನ್ನು ಸಹಿಸುವುದಿಲ್ಲ. ಅಡಿಗೆ ವಿಷಯದಲ್ಲಿ ನಾನು ಸೋತಂತೆ ಸರಿ.
ಅಡಿಗೆಯ ವಿಧಾನದಲ್ಲಿ ಲೋಪವಿರಲಾರದು, ಆದರೆ ಅದು ನೀವು ಉಪಯೋಗಿಸುವ ಎಣ್ಣೆಯಲ್ಲಿ ದೋಷವಿರಬೇಕು. ಮುಂದಿನ ಸಲ ತುಷಾರ್ ವನಸ್ಪತಿಯನ್ನು ಅಡಿಗೆಯಲ್ಲಿ ಉಪಯೋಗಿಸು.
ಮಾಲತಿ ತನ್ನ ಸ್ನೇಹಿತಳ ಸಲಹೆ ತೆಗೆದುಕೊಳ್ಳುತ್ತಾಳೆ.
ಈಗ ತಿಳಿಯಿತು ಮಾಲತಿಗೆ ರುಚಿಕರವಾದ ಅಡಿಗೆಯ ಗುಟ್ಟು. ಅದೇ ಆರೋಗ್ಯಕರವಾದ ಮತ್ತು ರುಚಿಕರವಾದ ತುಷಾರ್ ವನಸ್ಪತಿ.
ನಾನು ತಿಂದಿರುವ ದೋಸೆಗಳಲ್ಲಿ ಇವು ತುಂಬಾ ರುಚಿಕರವಾಗಿವೆ. ಅಮ್ಮಾ, ನೀನು ಅಡಿಗೆ ವಿಷಯದಲ್ಲಿ ಶ್ರೇಷ್ಠಳೆ ಸರಿ.
ತುಷಾರ್
ವಿಟಮಿನ್‌ಗಳನ್ನೊಳಗೊಂಡ ವನಸ್ಪತಿ
(ವಿಟಮಿನ್ A ಮತ್ತು D ಒಳಗೊಂಡಿದೆ)
ಮತ್ತು
ಶುದ್ಧೀಕರಿಸಿದ ತುಷಾರ್ ಎಣ್ಣೆ
ತುಂಗಭದ್ರಾ ಇಂಡಸ್ಟ್ರೀಸ್ ಲಿಮಿಟೆಡ್, ಕರ್ನೂಲ್.

ASP/TI/5

ಅದು ಹೇಗೆ ವ್ಯತ್ಯಸ್ತವಾಗಿರುವುದೆಂದು ವಿವರಿಸುತ್ತಾ ಸಸ್ಯಗಳ ಮೇಲೆ ಪ್ರಾಣಿಗಳೂ ಪ್ರಾಣಿಗಳ ಮೇಲೆ ಮನುಷ್ಯರೂ ಅಧಿಕಾರ ಚಲಾಯಿಸುತ್ತಾರೆಂದ ಮೇಲೆ ಮನುಷ್ಯರ ಮೇಲೆ ಅಧಿಕಾರ ಚಲಾಯಿಸುವ ಜೀವಿಗಳು ಉಂಟಾಗುವುದರಲ್ಲಿ ಆಶ್ಚರ್ಯವೇನಿಲ್ಲವೆಂದು ತಿಳಿಸಿದ್ದಾನೆ. ಸದ್ಯದ ಸ್ಥಿತಿಯಲ್ಲಿ ಮಾನವನು ಯಂತ್ರಗಳ ದಾಸನಾಗದಿದ್ದರೂ ಮುಂದೆ ಆಗಿಯೇ ಆಗುವನೆಂಬುದರಲ್ಲಿ ಸಂಶಯವಿಲ್ಲವೆಂದು ಉದಾಹರಣೆಗಳಿಂದ ಸಮರ್ಥಿಸಿಕೊಳ್ಳುತ್ತಾ, ಮನುಷ್ಯರಿಗಿಂತ ವೇಗವಾಗಿ ಓಡುವ ರೈಲು ಬಂಡಿಗಳನ್ನೂ ಆ ಬಂಡಿಗಳು ನೇಮಿಸಿಕೊಳ್ಳುವ ಮಾನವ ಕೆಲಸಗಾರ-ರನ್ನೂ ನಡೆದುಕೊಳ್ಳುವ ಕ್ರಮದಲ್ಲಿ ಲೇಶಮಾತ್ರವಾದರೂ ತಪ್ಪಿದಲ್ಲಿ ಅವುಗಳು ಹೆದರಿಸುವ ರೀತಿಯನ್ನೂ ನಿರ್ದೇಶಿಸಿ ಅವುಗಳು ತಮ್ಮ ಹಿಡಿತದಲ್ಲಿರುವಾಗಲೇ ಅವುಗಳನ್ನು ನಾಶಪಡಿಸಿಕೊಳ್ಳುವುದು ಕಲ್ಯಾಣಕರವೆಂದು ಪ್ರತಿಪಾದಿಸಿದ್ದಾನೆ. "ಲಕ್ಷಾಂತರ ವರ್ಷಗಳ ಹಿಂದಿನ ನಮ್ಮ ಪೂರ್ವಜರು ನಮ್ಮಂತೆ ಮಾನವರಲ್ಲದೆ ಬೇರೆ ಏನೋ ಕಾಡು ಕಪಿಗಳು ಆಗಿದ್ದರೆಂದು ಊಹಿಸಿದ ಮಾತ್ರಕ್ಕೇ ನಾನು ನನ್ನ 'ಅಹಂ' ಎಲ್ಲವನ್ನು ಕಳಕೊಂಡು ಜೀವಚ್ಛವವಾಗಿ ಬಿಡುತ್ತಿದ್ದೆನು. ಹಾಗೆಯೇ ಮುಂದಿನ ಪೀಳಿಗೆಯವ-ರನ್ನು ಯಂತ್ರದಾಸರನ್ನಾಗಿ ಊಹಿಸಿದಾಗಲೂ. ಹೆಚ್ಚು ಹೇಳುವುದೇನು? ಕನಿಷ್ಠ ಪಕ್ಷಕ್ಕೆ ೩೦೦ ವರ್ಷದ ಈಚೆಗಿನ ಎಲ್ಲಾ ಯಂತ್ರಗಳನ್ನು ನಾಶಪಡಿಸಬೇಕು. ಇನ್ನು ಮುಂದೆ ಯಂತ್ರ ನಿರ್ಮಾಪಕನಿಗೆ ಕ್ಷಯ, ಸನ್ನಿಪಾತ ರೋಗಿಗಳಿಗೆ ಕೊಡುವಂತಹ ಮರಣದಂಡನೆಯನ್ನು ವಿಧಿಸಬೇಕು" ಎಂದು ಕೊನೆಗಾಣಿಸಿದ್ದಾನೆ. ಕತ್ತಿ-ಗುದ್ದಲಿ ದುರ್ಬೀನು ಇತ್ಯಾದಿಗಳು ಕೈಕಾಲು ಕಣ್ಣು-ಮೂಗಿನ ವಿಸ್ತೃತ ರೂಪವಾಗಿದ್ದು ಅವುಗಳಂತೆಯೇ ಮನುಷ್ಯನಿಗೆ ಸಹಾಯ ಮಾಡುತ್ತವೆ ಎಂದೊಬ್ಬರ ವಾದವಿತ್ತು. ಅದಕ್ಕೆ ಉತ್ತರ ಹೀಗೆ: ಯಂತ್ರಾಧಿಕ್ಯದಿಂದ ಮಾನವನ ದೇಹವು ಕ್ಷೀಣಿಸುವುದು, ಅವನು ಬರೀ ಆತ್ಮದ ಮತ್ತು ಯಂತ್ರದ ಭಾವನಾವಿಹೀನ ಮಿಶ್ರಣವಾಗಿ ಬಿಡುವನು. ಜ್ಞಾಪಕ ಶಕ್ತಿ ಜೇಬಿನ ಪುಸ್ತಕದಲ್ಲಿ ಹೋಗುತ್ತದೆ. ಅರ್ಧಾಂಧನ ಕಣ್ಣಿನ ಮೇಲೆ ಕನ್ನಡಕದ ಎಂಜಿನ್ನು. ಮುಂದೆ ಬಹುಶಃ ಕೃತ್ರಿಮ ಹಲ್ಲು ಕೂದಲುಗಳೂ ಬರಬಹುದು. ಕಾಲಿಲ್ಲದವನಿಗೆ ಈಗಾಗಲೇ ಸಾರೋಟ ಬಂದಿದೆ. ಎಂತಹ ಅವಮಾನಕರ!

೫೦೦ ವರ್ಷಗಳ ಹಿಂದೆ ಯಂತ್ರ ಪ್ರೇಮಿಗಳಿಗೂ ಯಂತ್ರವಿರೋಧಿಗಳಿಗೂ ಘೋರವಾದ ಯುದ್ಧವು ಸಂಭವಿಸಿತು. ದೇಶದ ಅರ್ಧಾಂಶ ಜನ ಸತ್ತರು. ಯಂತ್ರವಿರೋಧಿಗಳು 'ಅಸಮಂಜಸತೆ' ಮತ್ತು 'ಕಪಟ'ದ ಪ್ರೊಫೆಸರರ ನೇತೃತ್ವದಲ್ಲಿ ವಿಧವಿಧದ ಯಂತ್ರಗಳನ್ನು ಮುರಿದು ಯಂತ್ರ ಪ್ರೇಮಿಗಳನ್ನು ಬಗ್ಗು ಬಡಿದರು. ಯಂತ್ರ ಪ್ರೇಮದ ಸೊಲ್ಲೇ ಅಡಗಿಹೋಯಿತು. ಬಹು ತರ್ಕ-ವಿತರ್ಕ-ಅತರ್ಕಗಳ ನಂತರ ೨೭೧ ವರ್ಷಗಳ ಈಚೆಗಿನ ನಿರ್ಮಾಣಗಳನ್ನೆಲ್ಲ ನಾಶಮಾಡುವುದು ಎಂದು ನಿಶ್ಚಯಿಸಲಾಯಿತು.

ಭಾವನೆಗಳೆಲ್ಲ ತಣಿದು ೫೦-೬೦ ವರ್ಷಗಳು ಕಳೆದಮೇಲೆ ಯಂತ್ರಗಳ ಭಗ್ನಾವಶೇಷಗಳನ್ನೆಲ್ಲ ಹುಡುಕಿ ತೆಗೆದು ಮ್ಯೂಸಿಯಮ್ಮುಗಳಲ್ಲಿ ಪ್ರದರ್ಶನಕ್ಕಿರಿಸಿದರು. ಯಂತ್ರ ನಿರ್ಮಾಣದ ಕಲ್ಪನೆಯನ್ನು ಕನಸಿನಲ್ಲೂ ಕಾಣದಂತಹ ಪರಿಸ್ಥಿತಿ ಅದಾಗಿತ್ತಾದ್ದರಿಂದ ವಿದ್ಯಾರ್ಥಿಗಳು ಆ ಅವಶೇಷಗಳನ್ನು ನಿರೀಕ್ಷಿಸಿ ಅದರ ರಚನೆ ಉಪಯೋಗ ಇತ್ಯಾದಿಗಳನ್ನು ಕಂಡುಹಿಡಿದು ಬರೆದಿಡಲು ಪ್ರಾರಂಭಿಸಿದರು.

ಇರವನಿಗರು ಯುಕ್ತಿವಾದ ದೇವಾಲಯದೆದುರು ತಮ್ಮ ಸಾಮಾನ್ಯಜ್ಞಾನವನ್ನು ಎಷ್ಟು ಸುಲಭವಾಗಿ ಬಲಿಕೊಡುತ್ತಾರೆ! ಅಲ್ಲಿ ಆಗಿ ಹೋದ ಇಬ್ಬರು ತತ್ತ್ವಜ್ಞಾನಿಗಳೆಬ್ಬಿಸಿದ

ಕ್ರಾಂತಿಯ ವಿಚಾರವನ್ನು ಕೇಳಿರಿ.

೨೫೦೦ ವರ್ಷಗಳ ಹಿಂದೆ ಇರವನ್ನಿನಲ್ಲಿ ಶಾಲೆಗಳಿದ್ದಿಲ್ಲ. ಯಾವುದೇ ರೀತಿಯ ದಾರ್ಶನಿಕ ಪದ್ಧತಿಗಳು ಜನ್ಮತಾಳಿರದ ಕಾಲವದು. ಆಗ ಒಬ್ಬ ಮುದುಕನು ಪ್ರಾಣಿಗಳ ಹಕ್ಕು ಬಾಧ್ಯತೆಗಳ ಬಗ್ಗೆ ಚರ್ಚಿಸಿದನು. ಆತನಿಗೆ ಒಂದು ಅದೃಶ್ಯ ಶಕ್ತಿಯ ಸಂಪರ್ಕವಿದೆಯೆಂದು ಜನರಲ್ಲಿ ನಂಬಿಕೆಯಿತ್ತು. ಆತ ತನ್ನ ವಾದವನ್ನು ಮಂಡಿಸಿದ ಬಗೆ ಇದು: ನಮ್ಮ ಪೂರ್ವಜರು ನರಭಕ್ಷಕರಾದರೂ ನಾವು ಅದರ ಹೆಸರೆತ್ತಿದೊಡನೆ ಹೌಹಾರಿ ಬೀಳುತ್ತೇವೆ. ಇದು ನಾಗರಿಕತೆಯ ಲಕ್ಷಣವೆಂದು ಆ ಶಕ್ತಿ ನನಗೆ ಹೇಳಿದೆ. ಪ್ರಾಣಿವಧೆಯೂ ಪಾಪಕರವೆಂದು ಅದು ನನಗೆ ಹೇಳಿದೆ. ಪ್ರಾಣಿಗಳು ನಮ್ಮನ್ನು ಹಿಂಸಿಸುತ್ತವೆಯಲ್ಲಾ ಎಂದರೆ ಅವು ಕೀಳ್ಮಟ್ಟದವು ಮತ್ತು ಮನುಷ್ಯನನ್ನು ನುಂಗಿದ ಹುಲಿಯನ್ನು ಕೊಲ್ಲುವುದಾದರೆ ನಾವು ಹುಲಿಯ ಸ್ಥಾನಕ್ಕೇ ಇಳಿದಂತಾಯಿತು. ಉತ್ತಮವಾದ ಧ್ಯೇಯ ಭಾವನೆಗಳನ್ನಿಟ್ಟುಕೊಳ್ಳಿ. ಸತ್ತ ಪ್ರಾಣಿಗಳನ್ನೂ ಆತ್ಮಹತ್ಯ ಮಾಡಿಕೊಂಡವುಗಳನ್ನೂ ನಿಮಗೆ ತೊಂದರೆ ಕೊಡದ ಸಸ್ಯಗಳೆಲ್ಲವನ್ನೂ ತಿನ್ನಬಹುದು ಎಂಬ ಸಂದೇಶವನ್ನು ಅದು ಕೊಡುತ್ತಿದೆ.

ಅವನ ವಾದವು ಎಲ್ಲರನ್ನೂ ಮರುಳುಗೊಳಿಸಿತು. ನಂತರದ ಕೆಲವರು ಹಾಲು ಮೊಟ್ಟೆಗಳನ್ನು ನಿಷೇಧಿಸಿದರು. ಪ್ರಾಣಿಗಳು ಆತ್ಮಹತ್ಯೆ ಮಾಡಿಕೊಳ್ಳುವುದು ಜೋರಾಯಿತು. ಕೊಲ್ಲುವುದು ನಾಯಿಗಳ ಸ್ವಭಾವವಾದ್ದರಿಂದ ನಾಯಿಯಿಂದ ಕೊಲ್ಲಲ್ಪಟ್ಟ ಪ್ರಾಣಿಗಳು ಆಹಾರವಾಗಬಹುದೆಂತಲೂ ಆತ್ಮರಕ್ಷಣೆಗಾಗಿ ಪ್ರಾಣಿಗಳನ್ನು ಕೊಲ್ಲಬಹುದೆಂತಲೂ ಸಾರಲಾಯಿತು.

Estd 1943 Tel:-"Sunandafac"

ಸುಗಂಧ ಸುಮಧುರವಾದ ಸುಗಂಧ ದ್ರವ್ಯಗಳಿಗೆ ನಾಡಿನಾದ್ಯಂತ
ಪ್ರಖ್ಯಾತವಾದ

* ಸುನಂದರಾಜ ಅಗರಬತ್ತಿ
* ಸುನಂದ ರೋಸ್ ಬತ್ತಿ
* ಪೂಜಾರಿಣಿ ಬತ್ತಿ
* ಗುಲಾಬ್-ಕೆ-ಫೂಲ್ ಅಗರಬತ್ತಿ

ಸುನಂದ ಅಂಬರ್ ಬತ್ತಿ, ಅಲ್ಲದೆ ಸುನಂದ ಡೀಲಕ್ಸ ಪರ್‌ಫ್ಯೂಮ್ಡ ಬ್ಯಾಗ್,
ಮತ್ತು ಪರಿಮಳಯುಕ್ತವಾದ ದ್ರವ್ಯಗಳನ್ನೇ ಯಾವಾಗಲೂ ಉಪಯೋಗಿಸಿರಿ.

ತಯಾರಕರು:— ಕೆ. ರಾಮಕೃಷ್ಣಪ್ಪ

ಮಾಲೀಕರು:— ಸುನಂದ ಅಗರಬತ್ತಿ ಫ್ಯಾಕ್ಟರಿ

1820, ಅಕ್ಬರ್ ರಸ್ತೆ, ಮೈಸೂರು.

ನಾಯಿಗಳು ಪ್ರಾಣಿಗಳನ್ನು ಕೊಲ್ಲುವುದೂ ಅತಿ ಸಾಧು ಪ್ರಾಣಿಗಳು ತಮ್ಮ ಸ್ವಾಮಿಗಳನ್ನು ಕೊಲ್ಲ ಹೊರಡುವುದೂ ಬಹು ಜೋರಾಯಿತು! ಕಡೆ ಗೊಮ್ಮೆ ಯಾವುದೇ ವಿಧದ ಮಾಂಸವೂ ನಿಷಿದ್ಧ ವೆಂದು ಕಾನೂನು ಪಾಸಾಯಿತು! ಕಡ್ಡಾಯ ವಾಗಿ ಹೇರಿಸಲ್ಪಟ್ಟ ಈ ನಿಯಮವನ್ನು ಜನರು ಮನಸ್ಸಿನಲ್ಲೇ ವಿರೋಧಿಸುತ್ತಿದ್ದರು; ಗುಪ್ತವಾಗಿ ಮುರಿಯುತ್ತಿದ್ದರು.

ಹೀಗೆ ೬೦೦-೭೦೦ ವರ್ಷಗಳು ಸಂದವು. ಆಗ ಸಸ್ಯಶಾಸ್ತ್ರವೇತ್ತನೊಬ್ಬನು ಉದಯಿಸಿದನು. ಅವನ ಕಾಲದಲ್ಲಿ ಸೂಕ್ಷ್ಮದರ್ಶಕ ಯಂತ್ರದ ನಿರ್ಮಾಣವಾಯಿತೆಂದು ತೋರುತ್ತದೆ. ಹಿಂದಿನ ತತ್ವಜ್ಞಾನಿಯು ಪ್ರಾಣಿಕ್ಷೇತ್ರಕ್ಕೆ ವಿಸ್ತರಿಸಿದ ಸೋದರತೆಯ ಭಾವನೆಯನ್ನು ಇವನು ಸಸ್ಯ ಕ್ಷೇತ್ರಕ್ಕೂ ವಿಸ್ತರಿಸಿದನು. ಮಾಂಸಾಹಾರ ನಿಷಿದ್ಧವೆಂಬ ನಿಯಮವನ್ನು ಹಾಸ್ಯಾಸ್ಪದವಾದ ಸ್ಥಿತಿಗಿಳಿಸಬೇಕೆಂಬುದೇ ಅವನ ಉದ್ದೇಶವೆಂದು ಹೇಳಲಾಗುತ್ತದೆ. (ಗುಟ್ಟಿನಲ್ಲಿ ಅವನು ಮಾಂಸಾ ಹಾರಿಯಾಗಿದ್ದನಂತೆ!) ಪ್ರಯೋಗಗಳಿಂದಲೂ ತರ್ಕದಿಂದಲೂ ಮುಂದೆ ದೊಡ್ಡ ಮರವಾಗುವ ಬೀಜಕ್ಕೂ ಮನುಷ್ಯ ಆನೆ ಇತ್ಯಾದಿ ಪ್ರಾಣಿಗ ಳಾಗಿ ಬೆಳೆಯುವ ಪಿಂಡಕ್ಕೂ ಕಣ್ಣಿಗೆ ಕಾಣುವ ಇಲ್ಲವೆ ಯಾವುದೇ ವಿಧದ ಪರೀಕ್ಷೆಯಿಂದ ಸಾಧಿಸಲಾಗುವ ವ್ಯತ್ಯಾಸವೇನೂ ಇಲ್ಲವೆಂತಲೂ ತಿಳಿಯಪಡಿಸಿದನು. ಅವುಗಳಲ್ಲೂ ಆನುವಂಶಿ ಕತೆಯಿದೆ; ಅವುಗಳಿಗೂ ತಾವೇನು ಮಾಡು ತ್ತಿರುವುದರೆಂಬುದರ ಅರಿವು ಇದೆಯೆಂದು ವಾದಿ ಸಿದನು. ಆದ್ದರಿಂದ ಉದುರಿ ಬಿದ್ದ ಹಣ್ಣುಗಳನ್ನು ಮತ್ತು ತರಗೆಲೆಗಳನ್ನು ಮಾತ್ರ ತಿನ್ನುವುದು ಯೋಗ್ಯವೆಂದೂ ಧಾನ್ಯಗಳನ್ನು ತಿನ್ನುವುದೂ ಕುರಿ-ಆಡುಗಳನ್ನು ತಿನ್ನುವುದೂ ಒಂದೇ ಎಂದು ತಿಳಿಸಿದನು. ಈ ವಾದವು ಜನರಲ್ಲಿ ನಾಟಿತು.

ಜನರು ಕಿಂಕರ್ತವ್ಯ ಮೂಢರಾದರು. ಎಲ್ಲರೂ ನಂಬಿಕೆಯನ್ನಿಟ್ಟಿರುವ 'ಭೂತ'ವನ್ನು ಪ್ರಶ್ನಿಸಬೇಕೆಂಬ ಸಲಹೆಯನ್ನಿತ್ತನು. (ಆ ಭೂತ ನಿಲ್ಲುವ ಪೂಜಾರಿಯು ಅವನ ಸಮೀಪದ ಬಂಧು ವಾಗಿದ್ದನೆಂಬ ವದಂತಿ) ಭೂತ ಆಗಿನ ಪರಿಸ್ಥಿತಿ ಯನ್ನು ಲಕ್ಷಿಸುತ್ತಾ ಈ ರೀತಿ ನುಡಿಯಿತು: "ಹೊಡಿ ಇಲ್ಲವೆ ಹೊಡಿಸಿಕೋ; ತಿನ್ನು ಇಲ್ಲವೆ ಆಹಾರವಾಗು!; ಕೊಲ್ಲು ಇಲ್ಲವೆ ಸಾಯಿ; ಇಷ್ಟ ವಿದ್ದಂತೆ ಮಾಡು." ಹೇಳುವ ಅಗತ್ಯವಿಲ್ಲ, ಜನರು ಸಸ್ಯಗಳನ್ನು ನಿರ್ಭಯವಾಗಿ ಸೇವಿಸ ಹತ್ತಿದರು. ಸಸ್ಯಗಳಿಗೂ ಪ್ರಾಣಿಗಳಿಗೂ ಭೇದ ವಿಲ್ಲವೆಂದು ನಿರ್ದೇಶಿಸಲಾಗಿದ್ದರಿಂದ ಮಾಂಸಾ-ಹಾರವೂ ಶಾಸ್ತ್ರಸಮ್ಮತವಾಯಿತು.

ಸ್ವಭಾವಕ್ಕೆ ಹೊಂದಿಕೊಳ್ಳದ ತರ್ಕವು ತರ್ಕದಿಂದ ಪರಿಮಾರ್ಜಿತವಾಗದ ಸಹಜ ಬುದ್ಧಿಯಷ್ಟೇ ಹಾನಿಕರವೆಂದು ತಿಳಿದುಕೊಳ್ಳ ಲಾಗದ್ದರಿಂದ ಇರವನಿಗರು ೭೦೦-೮೦೦ ವರ್ಷ ಗಳಷ್ಟು ಕಾಲ ತಾತ್ವಿಕರ ವಾದಕ್ಕೆ ಸಿಲುಕಿ ಬಳಲಬೇಕಾಯಿತು.

ನಗರಕ್ಕೆ ಹಿಂದಿರುಗಿದಾಗ ನನಗಾಗಿ ಬಿಸಿಬಿಸಿ ಸುದ್ದಿ ಕಾದಿತ್ತು. ಶೀಘ್ರದಲ್ಲೇ ನನ್ನನ್ನು "ಗಣ ಜಿಲ" ಕ್ಕಾಗಿ ವಿಚಾರಣೆಗೆ ಗುರಿಪಡಿಸಿ ಶಿಕ್ಷಿಸು ವರೆಂಬುದೇ ಅದು. ನಿಜವಾದ ಕಾರಣ ನನ್ನ ಗಡಿಯಾರ ಎಂದು ನನಗೆ ಗುಟ್ಟಾಗಿ ತಿಳಿಯಿತು. ಅರೋವೀನಾಳೊಂದಿಗೆ ಪಲಾಯನ ಮಾಡಬೇ-ಕೆಂದು ಯೋಚಿಸಿದೆನು.

ರಾಜ-ರಾಣಿಯರಿಗೆ ನಾನು ಬೆಲೂನಿನ ವಿಷಯ ಹೇಳಿದ್ದೆನು. ಬೆಲೂನು ಒಂದನ್ನು ರಚಿಸಲು ಅನುಮತಿ ಕೇಳಿದೆನು. ಆಗ ನಗರದಲ್ಲಿ ಬಿಸಿಗಾಳಿ ಬೀಸುತ್ತಿದ್ದ ಸಮಯವದು. ನಾನು ಮೇಲೇರಿ ವಾಯು ದೇವತೆಯೊಡನೆ ಮಾತುಕತೆ ನಡೆಸುವೆ ನೆಂದು ಹೇಳಿದೆ. ಮೇಲೇರದಿದ್ದರೆ ಕಠಿಣವಾದ ಶಿಕ್ಷೆ ಕೊಡುವೆನೆಂದು ರಾಜನು ಬೆದರಿಸಿದನು; ನಾನು ಜಗ್ಗಲಿಲ್ಲ. ಒಂದು ದೊಡ್ಡ ಗಾಡಿಯೂ

ಅದಕ್ಕೆ ಸರಿಯಾದ ದೊಡ್ಡ ಬೆಲೂನೂ ಸಿದ್ಧವಾದುವು.

ಮಧ್ಯೆ ಅರೋವೀನಾಳನ್ನು ಗುಪ್ತವಾಗಿ ಭೇಟಿಯಾಗಿ ಅವಳ ಒಪ್ಪಿಗೆಯನ್ನು ಪಡೆದಿದ್ದೆ. ರಾಣಿಯ ಆಳುಗಳ ಕೈಬೆಚ್ಚಗೆ ಮಾಡಿದುದರ ಪರಿಣಾಮವಾಗಿ ಗಾಡಿಯಲ್ಲಿ ಸಾಕಷ್ಟು ಆಹಾರ-ಮದ್ಯಗಳನ್ನು ಬಚ್ಚಿರಿಸಲಾಯಿತು. ಅರೋವೀನಾಳನ್ನು ಗಾಡಿಯ ಅಡಿಯಲ್ಲಿ ಮರೆಯಾಗಿ ಮಲಗಿಸಿರಲೂ ಸಾಧ್ಯವಾಯಿತು. ಅದು ಬೆಳಗಿನ ಹೊತ್ತು. ನಾಸ್‌ನಿಬಾರರನ ಮನೆಯವರು ಗೀತ ಬ್ಯಾಂಕಿಗೆ ನಡೆದಿದ್ದರು. ಅವರು ಬೆಳಗ್ಗಿನ ಉಪಾಹಾರಕ್ಕಾಗಿ ಮನೆಗೆ ಹಿಂದಿರುಗುವುದರೊಳಗೆ ಬೆಲೂನು ಆಕಾಶಕ್ಕೇರಬೇಕಾಗಿತ್ತು; ಇಲ್ಲದಿದ್ದರೆ ನನ್ನ ಗತಿ ಸೇರಕಾರನ ನರಳುವ ಸೆರೆಯಲ್ಲಿ ಸಾಯುವುದೇ ಆಗಗಿತ್ತು. ಬೆಲೂನಿಗೆ ಅನಿಲ ತುಂಬಿಸಿಯಾಯಿತು. ಅದನ್ನು ಬಿಗಿದ ಹಗ್ಗಗಳನ್ನು ಕೆಲವರು ಹಿಡಿದು ನಿಂತಿದ್ದರು. ನಾವು ರಾಜ-ರಾಣಿಯರ ಬರವನ್ನು ನಿರೀಕ್ಷಿಸುತ್ತಿದ್ದೆವು. ನಾನು ಬಹಳ ಆತುರನಾಗಿದ್ದೆ. ಆಗ ನಾಸ್‌ನಿಬಾರನ ಮನೆಯ ಕಡೆಯಿಂದ ಕೆಲವು ಜನರು ಬೊಬ್ಬೆ ಹೊಡೆಯುತ್ತಾ ಅರಮನೆಯ ಕಡೆಗೆ ಧಾವಿಸುವುದು ಕಂಡುಬಂತು. ಅವರು ಅರೋವೀನಾಳನ್ನು ಕಾಣದೆ ಗಾಬರಿಯಾಗಿದ್ದಿರಬೇಕು. ನನ್ನ ಎದೆ ಧಸ್ಸ್ ಎಂದಿತು. ತಡ ಮಾಡಿದರೆ ಅಪಾಯವುಂಟೆಂದೂ ಕೂಡಲೇ ಹಗ್ಗಗಳನ್ನು ಬಿಟ್ಟುಬಿಡಿರೆಂದೂ ಕಿರುಚಿಬಿಟ್ಟೆ. ಬಹು ಮಂದಿ ಹಗ್ಗಗಳನ್ನು ಬಿಟ್ಟುಬಿಟ್ಟರು. ಉಳಿದ ಒಬ್ಬಿಬ್ಬರು ಬೆಲೂನನ್ನು ತಡೆಹಿಡಿಯಲು ಶಕ್ತರಾಗಲಿಲ್ಲ. ಬೆಲೂನು ಮೇಲೇರಿತು; ಅಲ್ಲ; ಭೂಮಿ ಕೆಳಗೆ ಕುಸಿದಂತೆ ತೋರಿತು ನನಗೆ.

ಬೆಲೂನು ಬಹು ಮೇಲೆ ಏರಿತು. ಸಾಧಾರಣವಾಗಿ ಗಾಳಿಯೂ ಬೀಸುತ್ತಿದ್ದು ನಮ್ಮ ಪ್ರಯಾಣಕ್ಕೆ ಅನುಕೂಲವಾಯಿತು. ಒಂದು ರಾತ್ರಿ ಒಂದು ಹಗಲು ಉರುಳಿತು. ನಾವೀಗ ಸಮುದ್ರದ ಮೇಲೆ ಹಾರುತ್ತಿದ್ದೆವು. ಈಗ ಬೆಲೂನು ಕೆಳಕೆಳಗೆ ಬರಲು ಪ್ರಾರಂಭಿಸಿತು. ಎಲ್ಲಿಯೂ ಹಡಗುಗಳಾಗಲಿ ಡೋಣಿಗಳಾಗಲಿ ಕಾಣದೆ ಬಹು ಗಾಬರಿಯಾದೆ. ನಾವಿಬ್ಬರೂ ಸಾಯಲು ಸಿದ್ಧರಾಗಿಯೇ ಇದ್ದೆವು. ಯಂತ್ರ ಪುಸ್ತಕದ ಮೂಲಪ್ರತಿಗಳನ್ನೂ ಇನ್ನಿತರ ಕೆಲವು ಸಾಮಾನುಗಳನ್ನೂ ಒಗೆದದ್ದಾಯಿತು. ಹೆಚ್ಚಿನ ಪ್ರಯೋಜನವಾಗಲಿಲ್ಲ. ಕತ್ತಲೆಯ ಹೊತ್ತಿಗೆ ನಮ್ಮ ಗಾಡಿಯು ನೀರನ್ನು ಮುಟ್ಟಿಯೇ ಮುಟ್ಟಿತು. ೨-೩ ಗಂಟೆಗಳು ಹೀಗೆ ಕಳೆದಿರಬಹುದು. ಆಗ ದೂರದಲ್ಲಿ ಇಟಾಲಿಯನ್ನರ ಹಡಗೊಂದು ಕಾಣಸಿಕ್ಕಿತು. 'ಸಹಾಯ'ವೆಂದು ಕಿರುಚಿದೆವು. ೧೦ ಮಿನಿಟುಗಳಲ್ಲಿ ನಾವು ಹಡಗಿನ ಕೋಣೆಯೊಂದರಲ್ಲಿ ಸುಧಾರಿಸಿಕೊಳ್ಳುತ್ತಿದ್ದೆವು. ಯಾರಿಗೂ ನನ್ನ ನಿಜಕಥೆಯನ್ನು ಹೇಳುವ ಸಾಹಸಕ್ಕೆ ನಾನು ಹೋಗಲಿಲ್ಲ. ಅರೋವೀನಾಳು ಪೇರೂ ದೇಶದವಳೆಂದೂ ನಾವು ಬಲೂನಿನಲ್ಲಿ ಹಾರಾಡುವಾಗ ದುರಂತಕ್ಕೆ ಸಿಕ್ಕಿದೆವೆಂದೂ ಅವರನ್ನೆಲ್ಲ ನಂಬಿಸಿಯಾಯಿತು. ಕೊನೆಗೆ ೩ ತಿಂಗಳ ಪ್ರಯಾಣದ ನಂತರ-ಸ್ವದೇಶಕ್ಕೆ ಮರಳಿದೆನು.

ನನ್ನ ಹಣಕಾಸಿನ ಸ್ಥಿತಿ ಮೊದಲಿನಂತೆಯೇ ಇದೆ. ಈ ನನ್ನ ಸಾಹಸದ ಕಥೆಯಿಂದಲಾದರೂ ಹಣ ಬಂದೀತೇ ಎಂಬ ಆಶೆಯುಳ್ಳವನಾಗಿರುವೆನು. *

ಕನ್ನಡದಲ್ಲಿ ತೀರ ಹೊಸಬಗೆಯ ಗ್ರಂಥ !

ಸಂಗೀತ ವಿದುಷಿ ಕುಮಾರಿ ಗಾಯತ್ರಿ ರಾಜಾಪೂರ ಇವರು

ಗಾಯನ ಕಲೆಯಲ್ಲಿ ಪ್ರವೀಣತೆಯನ್ನು ಗಳಿಸಿ ಸ್ವಾನುಭವದಿಂದ ಬರೆದ ಗ್ರಂಥ !!

ಭಾರತೀಯ ಸಂಗೀತ ದರ್ಶನ

ಡೆಮ್ಮಿ ಅಷ್ಟಪತ್ರ ೭೦೦ ಕ್ಕೂ ಮಿಕ್ಕಿ ಪುಟಗಳು

ಬೆಲೆ : **೫ ರೂಪಾಯಿ** ಮಾತ್ರ

ಅಂಚೆ ವೆಚ್ಚ ಬೇರೆ. ವಿ. ಪಿ. ಯಿಂದ ಕಳಿಸಲಾಗುವದಿಲ್ಲ.

ಲೋಕ ಶಿಕ್ಷಣ ಟ್ರಸ್ಟಿನ ಪ್ರಕಾಶನ

ದೊರೆಯುವ ಸ್ಥಳ : **ಸಂಯುಕ್ತ ಕರ್ನಾಟಕ,** ಕೊಪ್ಪೀಕರರೋಡ, **ಹುಬ್ಬಳ್ಳಿ**

ಸಂಯುಕ್ತ ಕರ್ನಾಟಕ, ೨ ರೆಸಿಡೆನ್ಸಿ ರೋಡ, **ಬೆಂಗಳೂರು-೧.**

ಹೊಸದರಲ್ಲಿ ಹೊಸತರ . . . . .

ಜೀವನದ ವಿವಿಧರಂಗಗಳಲ್ಲಿ
ನಿತ್ಯೋಪಯೋಗಿ

ಓದುವದು ಬರಿ ರಂಜನೆಗಾಗಿರದೆ
ಜ್ಞಾನಾರ್ಜನೆಗಾಗಿ ಎನ್ನುವುದನ್ನು
ಸಾರಿಹೇಳುವ ಏಕೈಕ ಮಾಸಪತ್ರಿಕೆ

ಕಾಮಧೇನು

ವಾ. ಚಂದಾ ೫ ರೂ. ಬಿ. ಸಂ. ೫೦ ನ. ಪೈ.

ಹುಬ್ಬಳ್ಳಿ — ಬೆಂಗಳೂರ ೧

This Magazine owned by The Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.

ೀ ದಿವಾಕರ
ಂಗರಾಯರ

ಕರ್ಮಯೋಗ

೨ ನೇ ಆವೃತ್ತಿ

ಪುಟ: ೧೨೦   ಬೆಲೆ: ರೂ. ೧-೫೦ (ಅ. ವೆ. ಪ್ರತ್ಯೇಕ)

ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ ಹಾಗೂ ೨, ರೆಸಿಡೆನ್ಸಿ ರೋಡ್, ಬೆಂಗಳೂರು-೧




ತಯಾರಕರು :

ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್

ತುಮಕೂರು. H. O. ಮಂಗಳೂರು.

Regd. No. B



KASTU

A KANNAD
MONTHLY DI

Circulates thro
the Mysore
and outside wh
Kannada is sp

Command
the highest nu
of reader

Caters to all

75nP.

A Loka Shiks
Trust Public